ವರದಿ ಮಾಡಬಹುದಾಗಿದೆ

ಭಾರತ ಸರ್ವೋಚ್ಚ ನ್ಯಾಯಾಲಯ

ಕ್ರಿಮಿನಲ್ ಅಪೀಲು ಅಧಿಕಾರವ್ಯಾಪ್ತಿ

ಕ್ರಿಮಿನಲ್ ಅಪೀಲು ಸಂಖ್ಯೆ: 248–250/2015

ಮನೋಜ್ ಮತ್ತು ಇತರರು ...ಅಪೀಲುದಾರ(ರು)

ವಿರುದ್ಧ

ಮಧ್ಯಪ್ರದೇಶ ರಾಜ್ಯ ...ಪ್ರತಿವಾದಿ(ಗಳು)

ತೀರ್ಪು

ನ್ಯಾಯಮೂರ್ತಿ ಎಸ್. ರವೀಂದ್ರ ಭಟ್:

1. ಪ್ರಸ್ತುತ ತೀರ್ಪು, ಮೂವರು ಆರೋಪಿಗಳು ಸಲ್ಲಿಸಿರುವ ಮೂರು *ಮೇಲ್ಮನವಿಗಳನ್ನು*[1] ವಿಲೇವಾರಿ ಮಾಡುತ್ತದೆ. ಮೊದಲ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು, *ಇಂದೋರ್*[2], ಹೊರಡಿಸಿದ ತೀರ್ಪು ಮತ್ತು ಆದೇಶದ ಮೂಲಕ ಅವರನ್ನು ಭಾರತ ದಂಡ ಸಂಹಿತೆಯ (ಐ.ಪಿ.ಸಿ) (3 ಆಪಾದನಾಂಶ) 302ನೇ ಪ್ರಕರಣದ ಅಡಿಯಲ್ಲಿ ತಪ್ಪಿತಸ್ಥರೆಂದು ನಿರ್ಣಯಿಸಿ ಮರಣದಂಡನೆಯನ್ನು ವಿಧಿಸಲಾಗಿರುತ್ತದೆ. ಇಂದೋರ್‌ನಲ್ಲಿರುವ ಮಧ್ಯಪ್ರದೇಶ ಉಚ್ಚ ನ್ಯಾಯಾಲಯದ ವಿಭಾಗೀಯ *ಪೀಠವು*[3] ಇದನ್ನು ಸ್ಥಿರೀಕರಿಸಿದೆ.

1. ಕ್ರಿಮಿನಲ್ ಅಪೀಲು ಸಂಖ್ಯೆ: 248–250/2015
2. ಸತ್ರ ಮೊಕದ್ದಮೆ ಸಂಖ್ಯೆ. 536/2011 ರಲ್ಲಿ ದಿನಾಂಕ 13.12.2013 ರಂದು ಹೊರಡಿಸಿರುವುದು.
3. ಕ್ರಿಮಿನಲ್ ಅಪೀಲು ಸಂಖ್ಯೆ. 3/2014, 266/2014 ಮತ್ತು ಕ್ರಿಮಿನಲ್ ರೆಫರೆನ್ಸ್ ಸಂಖ್ಯೆ. 04/2013 ರಲ್ಲಿ ದಿನಾಂಕ 29.09.2014 ರಂದು ಹೊರಡಿಸಿರುವುದು.

2. ಅಪೀಲುದಾರರನ್ನು (ಮನೋಜ್, ರಾಹುಲ್ @ ಗೋವಿಂದ್ ಮತ್ತು ನೇಹಾ ವರ್ಮ, ಇನ್ನು ಮುಂದೆ ಅವರ ಹೆಸರುಗಳಿಂದ ಉಲ್ಲೇಖಿಸಲಾಗುವುದು), ದರೋಡೆ ಮಾಡುವ ಸಂದರ್ಭದಲ್ಲಿ, ಮೇಘಾ ದೇಶಪಾಂಡೆ, ಆಶ್ಲೇಷ ದೇಶಪಾಂಡೆ ಮತ್ತು ಶ್ರೀಮತಿ. ರೋಹಿಣಿ ಪಡ್ಕೆಯವರುಗಳನ್ನು ದಿನಾಂಕ 19.06.2011 ರಂದು ಕೊಲೆ ಮಾಡಿದ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಅಡಿಯಲ್ಲಿ ಅಪರಾಧಿಗಳೆಂದು ನಿರ್ಣಯಿಸಿರುತ್ತದೆ. ಎಲ್ಲಾ ಮೂವರು ಅಪೀಲುದಾರರಿಗೆ ಪ್ರತಿ ಆಪಾದನಾಂಶಕ್ಕೆ ತಲಾ ರೂ.1,000/– ದಂಡದೊಂದಿಗೆ ಮರಣ ದಂಡನೆಯನ್ನು ವಿಧಿಸಲಾಗಿದ್ದು, ದಂಡವನ್ನು ಪಾವತಿಸಲು ವಿಫಲವಾದಲ್ಲಿ, ಎಲ್ಲಾ ಅಪೀಲುದಾರರು ಪ್ರತೀ ಆಪಾದನಾಂಶಕ್ಕೆ ತಲಾ ಆರು ತಿಂಗಳ ಹೆಚ್ಚುವರಿ ಕಠಿಣ ಸೆರೆವಾಸವನ್ನು ಅನುಭವಿಸಬೇಕಿರುತ್ತದೆ. ಭಾರತ ದಂಡ ಸಂಹಿತೆಯ 397 ನೇ ಪ್ರಕರಣದ ಅಡಿಯಲ್ಲಿ, ಅವರಿಗೆ ರೂ.1,000/– ದಂಡದೊಂದಿಗೆ 10 ವರ್ಷಗಳ ಕಾಲ ಕಠಿಣ ಸೆರೆವಾಸವನ್ನು ವಿಧಿಸಿದ್ದು, ದಂಡವನ್ನು ಪಾವತಿಸಲು ವಿಫಲವಾದಲ್ಲಿ, ತಲಾ ಆರು ತಿಂಗಳ ಹೆಚ್ಚುವರಿ ಕಠಿಣ ಸೆರೆವಾಸವನ್ನು ಅನುಭವಿಸಬೇಕಿರುತ್ತದೆ. ಭಾರತ ದಂಡ ಸಂಹಿತೆಯ 449 ನೇ ಪ್ರಕರಣದ ಅಡಿಯಲ್ಲಿ ಅವರಿಗೆ ರೂ.1,000/– ದಂಡದೊಂದಿಗೆ 10 ವರ್ಷಗಳ ಕಾಲ ಕಠಿಣ ಸೆರೆವಾಸವನ್ನು ವಿಧಿಸಿದ್ದು, ದಂಡವನ್ನು ಪಾವತಿಸಲು ವಿಫಲವಾದಲ್ಲಿ, ತಲಾ ಆರು ತಿಂಗಳ ಹೆಚ್ಚುವರಿ ಕಠಿಣ ಸೆರೆವಾಸವನ್ನು ಅನುಭವಿಸಬೇಕಿರುತ್ತದೆ. ಶಸ್ತ್ರಾಸ್ತ್ರ ಕಾಯಿದೆಯ 25(1–ಬಿ) (ಬಿ) ಪ್ರಕರಣದ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿಯೂ ಸಹ ಮನೋಜ್ ಮತ್ತು ರಾಹುಲ್ @ ಗೋವಿಂದ್ ಅವರನ್ನು ಅಪರಾಧಿಗಳೆಂದು ನಿರ್ಣಯಿಸಲಾಗಿದ್ದು, ರೂ.1,000/– ದಂಡದೊಂದಿಗೆ 1 ವರ್ಷ ಕಠಿಣ ಸೆರೆವಾಸವನ್ನು ಅನುಭವಿಸತಕ್ಕದ್ದು ಮತ್ತು ದಂಡವನ್ನು ಪಾವತಿಸಲು ವಿಫಲವಾದಲ್ಲಿ, ಆರು ತಿಂಗಳುಗಳ ಹೆಚ್ಚುವರಿ ಕಠಿಣ ಸೆರೆವಾಸವನ್ನು ಅನುಭವಿಸಬೇಕಿರುತ್ತದೆ. ಶಸ್ತ್ರಾಸ್ತ್ರ ಕಾಯಿದೆಯ 27 ನೇ ಪ್ರಕರಣದ ಅಡಿಯಲ್ಲಿ ರಾಹುಲ್‌ರವರನ್ನು ಅಪರಾಧಿಯೆಂದು ನಿರ್ಣಯಿಸಲಾಗಿದ್ದು; ರೂ.3,000/– ದಂಡದೊಂದಿಗೆ 3 ವರ್ಷಗಳ ಕಠಿಣ ಸೆರೆವಾಸದ ಶಿಕ್ಷೆಯನ್ನು

ಅನುಭವಿಸತಕ್ಕದ್ದು ಮತ್ತು ದಂಡವನ್ನು ಪಾವತಿಸಲು ವಿಫಲವಾದಲ್ಲಿ, ಆರು ತಿಂಗಳುಗಳ ಹೆಚ್ಚುವರಿ ಕಠಿಣ ಸೆರೆವಾಸವನ್ನು ಅನುಭವಿಸಬೇಕಿರುತ್ತದೆ.

ವಾಸ್ತವಾಂಶಗಳು:

3. ವಾಸ್ತವಾಂಶವೇನೆಂದರೆ, ಘಟನೆ ನಡೆದ ದಿನಾಂಕದ ಕೆಲವು ದಿನಗಳ ಮೊದಲು ಅಂದರೆ ದಿನಾಂಕ 19.06.2011 ರ ಮೊದಲು ಶ್ರೀನಗರ ಮುಖ್ಯ ರಸ್ತೆಯಲ್ಲಿರುವ ಮನೆ ಸಂಖ್ಯೆ.24ರ ಮಾಲೀಕರಾದ ಪ್ರಾ.ಸಾ.5–ವಿಶಾಲ್ ಪಾಂಡೆಯವರಿಂದ ಆ ಮನೆಯ ಒಂದು ಭಾಗವನ್ನು ಪ್ರಾ.ಸಾ.1–ನಿರಂಜನ್ ದೇಶಪಾಂಡೆಯವರು ಬಾಡಿಗೆಗೆ ಪಡೆದುಕೊಂಡಿರುತ್ತಾರೆ. ನಿರಂಜನ್‌ರವರ ಪತ್ನಿ ಮೇಘಾ, ಮಗಳು ಆಶ್ಲೇಷ ಮತ್ತು ಅತ್ತೆ ಶ್ರೀಮತಿ. ರೋಹಿಣಿ ಪಡ್ಕೆಯವರು ಅಲ್ಲಿ ವಾಸವಾಗಿದ್ದರು. ಆ ದಿನ ಸಂಜೆ, ಅದೇ ಮಹಡಿಯಲ್ಲಿ ವಾಸಿಸುತ್ತಿದ್ದ ಮತ್ತೊಬ್ಬ ಬಾಡಿಗೆದಾರ ಪ್ರಾ.ಸಾ.2–ದೀಪ್ತಿ ಕಪಿಲ್‌ರವರು, ಪ್ರಾ.ಸಾ.5–ವಿಶಾಲ್ ಪಾಂಡೆರವರಿಗೆ ನಿರಂಜನ್ ಅವರ ಫ್ಲಾಟ್‌ನ್ನು ಹೊರಗಿನಿಂದ ಚಿಲಕ ಹಾಕಲಾಗಿದೆ ಮತ್ತು ಬಾಗಿಲಿನ ಮೇಲೆ ರಕ್ತದ ಕಲೆಗಳನ್ನು ನೋಡಿರುವುದಾಗಿ ತಿಳಿಸಿದರು. ಈ ಮಾಹಿತಿಯನ್ನು ಪಡೆದ ನಂತರ ಮಾಲೀಕರು ಪರಿಶೀಲಿಸಲು ತೆರಳಿದರು. ಯಾರೂ ಬಾಗಿಲು ತೆರೆಯದೇ ಇದ್ದಾಗ, ಅವರು ತೆರೆದ ಕಿಟಕಿಯ ಮೂಲಕ ನೋಡಲಾಗಿ, ಮಲಗುವ ಕೋಣೆಯ ಬಾಗಿಲಿನ ಬಳಿ ಮೃತ ವ್ಯಕ್ತಿಗಳ ಶವಗಳು ಬಿದ್ದಿರುವುದನ್ನು ಮತ್ತು ನೆಲದ ಮೇಲೆ ರಕ್ತ ಬಿದ್ದಿರುವುದನ್ನು ನೋಡಿರುತ್ತಾರೆ. ಅವರು ಪ್ರಾ.ಸಾ.1–ನಿರಂಜನ್ ದೇಶ್‌ಪಾಂಡೆ ಅವರಿಗೆ ತಕ್ಷಣ ಅಲ್ಲಿಗೆ ತಲುಪಲು ದೂರವಾಣಿ ಕರೆ ಮಾಡುವ ಮೊದಲು ತಮ್ಮ ನೆರೆಯವರಾದ ಪ್ರಾ.ಸಾ.9–ಮಹೇಶ್ ಪಾರ್ಮರ್ ಮತ್ತು ಮುಖೇಶ್ ಅವರನ್ನು ಸ್ಥಳಕ್ಕೆ ಕರೆದಿರುತ್ತಾರೆ. ಪ್ರಾ.ಸಾ.5–ವಿಶಾಲ್ ಪಾಂಡೆಯವರು *ಇಂದೋರ್‌ನ ಎಮ್.ಐ.ಜಿ ಕಾಲೋನಿ ಪೋಲಿಸ್ ಠಾಣೆಯಲ್ಲಿ*[4] ಪ್ರಥಮ ವರ್ತಮಾನ ವರದಿಯನ್ನು (ಎಫ್.ಐ.ಆರ್) ಸಹ ನೀಡಿರುತ್ತಾರೆ ಮತ್ತು ಇದನ್ನು ಪೊಲೀಸ್ ನಿರೀಕ್ಷಕರಾದ ಪ್ರಾ.ಸಾ.31–ಮೋಹನ್ ಸಿಂಗ್ ಯಾದವ್ (ತನಿಖಾಧಿಕಾರಿ "ಐ.ಓ") ಅವರು ದಾಖಲಿಸಿದ್ದಾರೆ.

4. ಎಫ್.ಐ.ಆರ್ ಸಂಖ್ಯೆ.401/2011 ದಿನಾಂಕ 19.06.2011.

ಕೆಲವು ಅಪರಿಚಿತ ವ್ಯಕ್ತಿಗಳು ಮೂವರು ಮೃತ ಮಹಿಳೆಯರನ್ನು ಹರಿತವಾದ ಆಯುಧಗಳಿಂದ ಕೊಲೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದಾರೆಂದು ಆರೋಪಿಸಿ ಭಾರತ ದಂಡ ಸಂಹಿತೆಯ 302 ನೇ ಪ್ರಕರಣ ಮತ್ತು ಶಸ್ತ್ರಾಸ್ತ್ರ ಕಾಯಿದೆಯ 25 ನೇ ಪ್ರಕರಣದ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಎಫ್.ಐ.ಆರ್ ದಾಖಲಿಸಲಾಗಿರುತ್ತದೆ.

4. ಪೊಲೀಸರು ಸ್ಥಳವನ್ನು ತಲುಪಿದರು ಮತ್ತು ಅಪರಾಧ ಸ್ಥಳದ ನಕ್ಷೆಯನ್ನು ತಯಾರಿಸಿದರು. ಸ್ಥಳದಲ್ಲಿ ದೊರೆತ ಕೆಲವೊಂದು ವಸ್ತುಗಳನ್ನು ಜಪ್ತಿಮಾಡಿಕೊಳ್ಳಲಾಯಿತು. ನಂತರ (ಮರುದಿನ) ಮೇಘನಾರವರ ಬಂಗಾರದ ಬಳೆಗಳು ಮತ್ತು ಮಂಗಳಸೂತ್ರ, ರೋಹಿಣಿ ಪಡ್ಕೆಯವರ ಎರಡು ಬಂಗಾರದ ಬಳೆಗಳು ಮತ್ತು ಆಶ್ಲೇಷರವರ ಮೊಬೈಲ್ ಫೋನ್, ಕ್ಯಾಮೆರಾ ಮತ್ತು ಎ.ಟಿ.ಎಂ ಕಾರ್ಡ್‌ಗಳು ನಾಪತ್ತೆಯಾಗಿದ್ದವು ಎಂದು ವರದಿಮಾಡಲಾಯಿತು. ದಿನಾಂಕ 22.06.2011 ರ ಮುಂಜಾನೆ 6.00 ಘಂಟೆಗೆ ತನಿಖೆಯು ಪ್ರಾರಂಭವಾಯಿತು ಮತ್ತು ಪ್ರಾ.ಸಾ.28–ವಿಜಯ್ ಚೌಹಾಣ್ ರವರು ಗಸ್ತು ಕರ್ತವ್ಯದಲ್ಲಿದ್ದಾಗ ಎಲ್.ಐ.ಜಿ ಬಳಿಯ ಎ.ಟಿ.ಎಂ.ನ ಹೊರಗಡೆ ಅನುಮಾನಾಸ್ಪದ ಸಂದರ್ಭದಲ್ಲಿ ನೇಹಾ ವರ್ಮಾ ಅವರನ್ನು ಗುರುತಿಸಿದರು. ಈ ಮಾಹಿತಿಯನ್ನು ಪಡೆದ ನಂತರ, ಐ.ಓ ರವರು (ಪ್ರಾ.ಸಾ.31) ಪ್ರಾ.ಸಾ.4 –ಬನ್ನೋ ಸೋಲಂಕಿ ಮತ್ತು ಇತರರೊಂದಿಗೆ ಸ್ಥಳವನ್ನು ತಲುಪಿದರು. ನೇಹಾ ವರ್ಮಾ ಅವರನ್ನು ಹುಡುಕಲಾಯಿತು. ಇದರಿಂದ ಮೃತ ಆಶ್ಲೇಷಣೆಗೆ ಸೇರಿದ ಎ.ಟಿ.ಎಂ ಕಾರ್ಡ್ ಪತ್ತೆಯಾಗಿರುತ್ತದೆ. ನೇಹಾರನ್ನು ವಿಚಾರಣೆಗೆ ಕರೆದೊಯ್ಯಲಾಯಿತು ಮತ್ತು ಆಕೆಯು ನೀಡಿದ ವಿವರಣಾ ಹೇಳಿಕೆಗಳು ಆಕೆಯ ತರುವಾಯದ ಬಂಧನಕ್ಕೆ ಕಾರಣವಾಗಿರುತ್ತದೆ. ಆಕೆಯು ನೀಡಿದ ಮಾಹಿತಿಯ ಆಧಾರದ ಮೇಲೆ ಪೊಲೀಸರು ಆಕೆಯ ಮನೆಯಿಂದ ಕೆಲವು ದರೋಡೆ ಮಾಡಿದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

5. ನೇಹಾ ಅವರ ವಿವರಣಾ ಹೇಳಿಕೆಯ ನಂತರ, ಇತರ ಆರೋಪಿಗಳಾದ ರಾಹುಲ್ @ ಗೋವಿಂದ್ ಮತ್ತು ಮನೋಜ್ ಅವರನ್ನು ಬಂಧಿಸಲಾಯಿತು ಮತ್ತು ಅವರ ವಶದಿಂದ ದರೋಡೆ ಮಾಡಿದ ಆಭರಣಗಳು, ಚಾಕು ಮತ್ತು ಒಂದು ಪಿಸ್ತೂಲನ್ನು ಜಪ್ತಿ

ಮಾಡಿಕೊಳ್ಳಲಾಯಿತು. ಘಟನೆಯ ಸಂದರ್ಭದಲ್ಲಿ ರಾಹುಲ್ @ ಗೋವಿಂದ್ ಅಚಾತುರ್ಯದಿಂದ ತಮ್ಮ ಕಾಲಿಗೆ ತಾವೇ ಗುಂಡು ಹಾರಿಸಿಕೊಂಡಿದ್ದಾರೆ ಮತ್ತು ಅಪರಿಚಿತ ವ್ಯಕ್ತಿಗಳ ವಿರುದ್ಧ ದಿನಾಂಕ *19.06.2011*[5] ರಂದು ಅನ್ನಪೂರ್ಣ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿಯ ಮೂಲಕ ಈ ಬಗ್ಗೆ ಸುಳ್ಳು ಎಫ್.ಐ.ಆರ್ ದಾಖಲಿಸಿದ್ದಾರೆ ಎಂದು ತನಿಖೆಯಿಂದ ಬಹಿರಂಗಗೊಂಡಿರುತ್ತದೆ. ಅದರಂತೆ, ಭಾರತ ದಂಡ ಸಂಹಿತೆಯ 294, 307 ಮತ್ತು 34 ನೇ ಪ್ರಕರಣದ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ಪ್ರಾ.ಸಾ.30–ಆರ್. ಎಸ್. ಮಕ್ವಾನ್, ಎ.ಎಸ್.ಐ ರವರು *ಎಫ್.ಐ.ಆರ್*[6] ದಾಖಲಿಸಿದ್ದಾರೆ. ಘಟನೆಯಲ್ಲಿ ಮನೋಜ್‌ರವರು ಕೂಡ ಗಾಯಗೊಂಡಿದ್ದು, ಪ್ರಾ.ಸಾ.8–ಡಾ.ಅಚ್ಯುತ್‌ಮಲ್ ತೇಜ್ವಾನಿ ಅವರಿಂದ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಆರೋಪಿಗಳು ಧರಿಸಿದ್ದ ಬಟ್ಟೆ ಮತ್ತು ಬೂಟುಗಳನ್ನು ಜಪ್ತಿಪಡಿಸಿಕೊಳ್ಳಲಾಯಿತು ಮತ್ತು ಅವರ ವಿವರಣಾ ಹೇಳಿಕೆಗಳ ಪ್ರಕಾರ ಮುರಿದ ಮತ್ತು ಬಿಸಾಡಲಾದ ಮೊಬೈಲ್ ಫೋನ್ ಮತ್ತು ಕ್ಯಾಮರಾದ ಭಾಗಗಳನ್ನು ಸಹ ಜಪ್ತಿಪಡಿಸಿಕೊಳ್ಳಲಾಯಿತು. ಅಪೀಲುದಾರರನ್ನು ಗುರುತು ಹಚ್ಚುವ ಕವಾಯಿತಿಗೆ ಒಳಪಡಿಸಲಾಯಿತು. ಅವರ ಬೆರಳೊತ್ತುಗಳನ್ನು ಪರೀಕ್ಷಿಸಿ, ಜಪ್ತಿಪಡಿಸಿಕೊಂಡ ವಸ್ತುಗಳನ್ನು ರಾಸಾಯನಿಕ ಮತ್ತು ಡಿ.ಎನ್.ಎ ಪರೀಕ್ಷೆಗೆ ಕಳುಹಿಸಲಾಯಿತು ಮತ್ತು ಅಭಿಯೋಜನೆಗೆ ಅನುಮತಿಯನ್ನು ಪಡೆದುಕೊಳ್ಳಲಾಯಿತು.

6. ತನಿಖೆ ಮುಕ್ತಾಯವಾದ ನಂತರ ಪೊಲೀಸರು, ಅಪೀಲುದಾರರು ಭಾರತ ದಂಡ ಸಂಹಿತೆಯ 302, 397 ಮತ್ತು 449 ನೇ ಪ್ರಕರಣದ ಅಡಿಯಲ್ಲಿ ಮತ್ತು ಶಸ್ತ್ರಾಸ್ತ್ರ ಕಾಯಿದೆಯ 25, 27 ನೇ ಪ್ರಕರಣದ ಅಡಿಯಲ್ಲಿ ಅಪರಾಧವೆಸಗಿದ್ದಾರೆ ಎಂದು ಆರೋಪಿಸಿ ಅಂತಿಮ ವರದಿಯನ್ನು ಸಲ್ಲಿಸಿದರು. ಅಧಿವಿಚಾರಣಾ ನ್ಯಾಯಾಲಯವು, ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆಯ 302/34 ಮತ್ತು 449 ನೇ ಪ್ರಕರಣಕ್ಕೆ ಪರ್ಯಾಯವಾಗಿ 397/34 ನೇ ಪ್ರಕರಣದ ಅಡಿಯಲ್ಲಿ ಅಪಾದನೆಯನ್ನು ರೂಪಿಸಿರುತ್ತದೆ ಮತ್ತು ಈ ಆಪಾದನೆಗಳನ್ನು

5. ನಿ.ಪಿ.103–ಸಿ
6. ನಿ.ಪಿ.107

ಹೊರತುಪಡಿಸಿ, ಶಸ್ತ್ರಾಸ್ತ್ರ ಕಾಯಿದೆ–1959ರ 25(1–ಬಿ) (ಬಿ) ಯ ಪ್ರಕರಣದ ಅಡಿಯಲ್ಲಿ ಮನೋಜ್‌ರವರ ವಿರುದ್ಧ ಆಪಾದನೆಗಳನ್ನು ಮತ್ತು ಶಸ್ತ್ರಾಸ್ತ್ರ ಕಾಯಿದೆ–1959ರ 25(1–ಬಿ) (ಬಿ) ಮತ್ತು 27 ನೇ ಪ್ರಕರಣದ ಅಡಿಯಲ್ಲಿ ರಾಹುಲ್ @ ಗೋವಿಂದ್ ವಿರುದ್ಧ ಅಪಾದನೆಯನ್ನು ರೂಪಿಸಿರುತ್ತದೆ. ಎಲ್ಲಾ ಅಪೀಲುದಾರರು ತಮ್ಮ ಅಪರಾಧವನ್ನು ನಿರಾಕರಿಸಿದ್ದು, ಅಧಿವಿಚಾರಣೆಗೆ ಕೋರಿರುತ್ತಾರೆ. ಅಭಿಯೋಜನೆಯು 36 ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು, ಅವರ ವಾದಕ್ಕೆ ಪೂರಕವಾಗಿ ಕೆಲವು ದಾಖಲಾತಿಗಳನ್ನು (ನಿ.ಪಿ.1–ಪಿ.129) ಹಾಜರುಪಡಿಸಿದೆ. ಅಭಿಯೋಜನೆಯ ಪರ ಸಾಕ್ಷ್ಯಾಧಾರಗಳನ್ನು ದಾಖಲಿಸಿದ ನಂತರ, ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಅಪೀಲುದಾರರ ಹೇಳಿಕೆಗಳನ್ನು ದಾಖಲಿಸಲಾಗಿದೆ. ಅಪೀಲುದಾರರು ಒಟ್ಟಾರೆಯಾಗಿ 6 ಪ್ರತಿರಕ್ಷಾ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು, ಅವರ ವಾದಕ್ಕೆ ಪೂರಕವಾದ ಕೆಲವು ದಾಖಲಾತಿಗಳನ್ನು (ನಿ.ಡಿ.1–ಡಿ.50) ಹಾಜರುಪಡಿಸಿರುತ್ತಾರೆ.

ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳು:

7. ಇಡೀ ಮೊಕದ್ದಮೆಯು ಸಾಂದರ್ಭಿಕ ಸಾಕ್ಷ್ಯದ ಮೇಲೆ ಅವಲಂಬಿತವಾಗಿರುವುದರಿಂದ, ಅಭಿಯೋಜನೆಯು ಒದಗಿಸಿದ ಮುಖ್ಯ ಸಾಕ್ಷ್ಯದ ಗುಣಾವಗುಣಗಳನ್ನು ವಿವೇಚಿಸಿದ ನಂತರ, ಆರೋಪಿಗಳು ದಿನಾಂಕ 19.06.2011 ರಂದು ಸಾಯಂಕಾಲ ಸುಮಾರು 5.00–5.15 ಗಂಟೆಗೆ ಘಟನೆ ಸಂಭವಿಸಿದ ಸ್ಥಳದಲ್ಲಿ ಹಾಜರಿದ್ದರು ಎಂದು ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಿಸಿರುತ್ತದೆ ಮತ್ತು ಪ್ರಾ.ಸಾ.1, ಪ್ರಾ.ಸಾ.2, ಪ್ರಾ.ಸಾ.5, ಪ್ರಾ.ಸಾ.9 ಮತ್ತು ಪ್ರಾ.ಸಾ.31 ರ ಸಾಕ್ಷ್ಯಗಳೊಂದಿಗೆ ಆರೋಪಿಗಳ ಬೆರಳೂತ್ತುಗಳನ್ನು (ಮನೆಯಿಂದ) ಸಂಗ್ರಹಿಸಿದ ತಜ್ಞರ ಸಾಕ್ಷ್ಯವು, ಅವರು ಮನೆಯೊಳಗೆ ಪ್ರವೇಶಿಸಿದರು ಎಂಬುದನ್ನು ಸಾಬೀತುಪಡಿಸುತ್ತದೆ. ಸಾವಿಗೆ ಕಾರಣವಾದ ಚಾಕು ಮತ್ತು ಬಂದೂಕನ್ನು ವಶಪಡಿಸಿಕೊಂಡ ನಂತರ; ರಾಸಾಯನಿಕ, ಡಿ.ಎನ್.ಎ ಮತ್ತು ಬ್ಯಾಲಿಸ್ಟಿಕ್ (ಗುಂಡು ಹಾರಿಸುವ ಆಯುಧಗಳ ಕ್ಷಮತೆ ಗುಣಲಕ್ಷಣದ ಪರೀಕ್ಷೆ) ಪರೀಕ್ಷೆಯ ಮೂಲಕ ಈ ವಸ್ತುಗಳನ್ನು ಬಳಸಲಾಗಿದೆ ಮತ್ತು ಘಟನೆಯು

ಸಂಭವಿಸಿದ ಸಂದರ್ಭದಲ್ಲಿ ಮೃತಪಟ್ಟ ವ್ಯಕ್ತಿಗಳ ರಕ್ತವು ಆರೋಪಿಗಳ ಬಟ್ಟೆಗಳ ಮೇಲೆ ಕಂಡುಬಂದಿರುತ್ತದೆ ಎಂಬುದನ್ನು ಸಾಬೀತುಪಡಿಸುತ್ತದೆ. ಅಪರಾಧ ನಡೆದ ಸ್ಥಳದಲ್ಲಿನ ಹೆಜ್ಜೆ ಗುರುತಗಳು ಆರೋಪಿಗಳಿಂದ ವಶಪಡಿಸಿಕೊಂಡ ಬೂಟುಗಳಿಂದ ಆಗಿರುವಂತೆಯೇ ಇರುತ್ತವೆ ಮತ್ತು ರಾಹುಲ್ @ ಗೋವಿಂದ್ ಅವರ ಪಾದಕ್ಕೆ ತಗುಲಿದ ಗುಂಡು ಮತ್ತು ಅದರಿಂದ ಆದ ಗಾಯ ಮತ್ತು ಮೃತರ ದೇಹಕ್ಕೆ ಹೊಡೆದ ಗುಂಡು ಒಂದೇ ಆಯುಧದಿಂದ ಹಾರಿಸಲಾಗಿದೆ ಎಂದು ಅಧಿವಿಚಾರಣಾ ನ್ಯಾಯಾಲಯವು ಮುಂದುವರೆದು ತೀರ್ಮಾನಿಸಿದ್ದು, ಆ ಆಯುಧವನ್ನು ಆತನಿಂದ ವಶಪಡಿಸಿಕೊಳ್ಳಲಾಗಿರುತ್ತದೆ. ಇದು ರಾಹುಲ್ ಮತ್ತು ಮನೋಜ್‌ರವರ ಅಪರಾಧವನ್ನು ಸಾಬೀತುಪಡಿಸುವಲ್ಲಿ ಯಾವುದೇ ಸಂದೇಹವಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತದೆ ಮತ್ತು ಇಡೀ ಘಟನೆಯ ಸಂದರ್ಭದಲ್ಲಿ, ನೇಹಾ ಅವರ ಉಪಸ್ಥಿತಿಯನ್ನೂ ಸಹ ಸಾಕ್ಷ್ಯವು ಸಾಬೀತುಪಡಿಸುತ್ತದೆ. ಈ ಅಂಶವು ಆರೋಪಿಗಳೊಂದಿಗೆ ಅಪರಾಧದಲ್ಲಿ ಆಕೆಯ ಪಾಲ್ಗೊಳ್ಳುವಿಕೆಯನ್ನು ಸಾಬೀತುಪಡಿಸುತ್ತದೆ ಎಂದು ಅಧಿವಿಚಾರಣಾ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ ಮತ್ತು ಆರೋಪಿಗಳು ನಿರಪರಾಧಿ ಎಂಬಂತಹ ಪ್ರತಿಯೊಂದು ಪರಿಕಲ್ಪನೆಯನ್ನು ತಳ್ಳಿಹಾಕಲಾಗಿರುತ್ತದೆ.

8. ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಿಗಣಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ಅಪೀಲುದಾರರ ಮೇಲೆ ಆರೋಪಿಸಲಾದ ಅಪರಾಧಗಳನ್ನು ಅವರು ಮಾಡಿದ್ದಾರೆ ಎಂದು ತೀರ್ಮಾನಿಸಿ ಶಿಕ್ಷೆಯನ್ನು ವಿಧಿಸಿರುತ್ತದೆ. ಶಿಕ್ಷೆಯನ್ನು ವಿಧಿಸುವ ಹಂತದಲ್ಲಿ ಅಧಿವಿಚಾರಣಾ ನ್ಯಾಯಾಲಯವು, ಅಪರಾಧಗಳನ್ನು ಮಾಡಿದ ಪ್ರಮಾಣ ಮತ್ತು ಪೈಶಾಚಿಕ ವಿಧಾನವನ್ನು ಗಮನಿಸಿದಾಗ, ಪ್ರಸ್ತುತ ಮೊಕದ್ದಮೆಯು ವಿರಳ ಮೊಕದ್ದಮೆಗಳಲ್ಲಿ ಅತ್ಯಂತ ವಿರಳವಾದ ವಿಭಾಗಕ್ಕೆ ಸೇರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ ಮತ್ತು ಮರಣದಂಡನೆಯನ್ನು ವಿಧಿಸಿರುತ್ತದೆ.

ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಸ್ಥಿರೀಕರಿಸುತ್ತಾ, ಉಚ್ಚ ನ್ಯಾಯಾಲಯದ ನಿರ್ಣಯಗಳು:

9. *ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು*[7], ಅಪೀಲುದಾರರಿಗೆ ವಿಧಿಸಲಾದ ಶಿಕ್ಷೆಯನ್ನು ಸ್ಥಿರೀಕರಿಸುತ್ತದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ಮಾಡಿದ ಉಲ್ಲೇಖಕ್ಕೆ ಸಕಾರಾತ್ಮಕವಾಗಿ ಉತ್ತರಿಸಿರುತ್ತದೆ. ವಿಧಿವಿಜ್ಞಾನ ತಜ್ಞರು ಹಾಗೂ ನೆರೆಹೊರೆಯವರು ಮತ್ತು ತನಿಖಾಧಿಕಾರಿಗಳು ರಕ್ತಸಿಕ್ತ ನೆಲ, ಗೋಡೆ ಮತ್ತು ಹೊದಿಕೆಗಳನ್ನು ನೋಡಿರುತ್ತಾರೆ ಮತ್ತು ಅವರಿಗೆ ಸಂಬಂಧಿಸಿದಂತೆ ಒದಗಿಸಿದ ದಾಖಲೆಯಲ್ಲಿನ ಸಾಕ್ಷ್ಯವು ಮೊಕದ್ದಮೆಯಲ್ಲಿ ಯಾವುದೇ ಪ್ರಮುಖ ದೋಷಕ್ಕೆ ಎಡೆಮಾಡಿಕೊಡುವುದಿಲ್ಲ; ಮುಂದುವರಿದು, ಮನೆಯಲ್ಲಿ ಆರೋಪಿಗಳ ಉಪಸ್ಥಿತಿಯು, ಅಂತಹ ಘೋರ ಅಪರಾಧವನ್ನು ಮಾಡುವ ಅವರ ಉದ್ದೇಶ ಮತ್ತು ಆರೋಪಿಗಳು ಅವರನ್ನು ಸಾಯಿಸಿದ ರೀತಿಯನ್ನು ಸರಿಯಾಗಿ ಸಾಬೀತುಪಡಿಸುತ್ತದೆ ಎಂದು ಉಚ್ಚ ನ್ಯಾಯಾಲಯವು ತೀರ್ಮಾನಿಸಿರುತ್ತದೆ.

10. ಉಚ್ಚ ನ್ಯಾಯಾಲಯವು, ಸ್ಥಳಕ್ಕೆ ಭೇಟಿಕೊಟ್ಟ ಮತ್ತು ಅಪೀಲುದಾರರ ಬೆರಳೊತ್ತುಗಳಿಗೆ ಹೊಂದಿಕೆಯಾದಂತಹ ಆಕಸ್ಮಿಕ ಬೆರಳೊತ್ತುಗಳನ್ನು ಸಂಗ್ರಹಿಸಿದ ಬೆರಳೊತ್ತು ತಜ್ಞ ಪ್ರಾ.ಸಾ.24–ಕೆ.ಕೆ. ದ್ವಿವೇದಿಯವರ ಹೇಳಿಕೆಯ ಮೇಲೆ ಮತ್ತು ಅಪೀಲುದಾರರಿಂದ ವಶಪಡಿಸಿಕೊಂಡ ಆಭರಣಗಳನ್ನು ಪ್ರಾ.ಸಾ.1 ಮತ್ತು ಪ್ರಾ.ಸಾ.3 ರವರು ಗುರುತಿಸಿ ಅವುಗಳು ಮೃತರಿಗೆ ಸೇರಿದ್ದು ಎಂದು ನೀಡಿದ ಹೇಳಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಅಪರಾಧ ಕೃತ್ಯಕ್ಕೆ ಉಪಯೋಗಿಸಿದ ಆಯುಧಗಳನ್ನು (ಚಾಕು, ಮತ್ತು ಕಾಡು ಪಿಸ್ತೂಲ್) ಅಪರಾಧಿಗಳಿಂದ ವಶಪಡಿಸಿಕೊಳ್ಳಲಾಯಿತು ಮತ್ತು ಅದನ್ನು ಸಾಬೀತುಗೊಳಿಸಲಾಯಿತು. ಸಾಕ್ಷಿಗಳು ತಮ್ಮ ಹೇಳಿಕೆಗಳಿಗೆ ಅನುಗುಣವಾಗಿ, ಆರೋಪಿಗಳನ್ನು ಮುಕ್ತ ನ್ಯಾಯಾಲಯದಲ್ಲಿ ಕ್ರಮಬದ್ಧವಾಗಿ ಗುರುತುಹಿಡಿದಿರುತ್ತಾರೆ.

7. ಮಧ್ಯಪ್ರದೇಶ ಉಚ್ಚ ನ್ಯಾಯಾಲಯ, ಇಂದೋರ್, ಪೀಠವು, ಕ್ರಿಮಿನಲ್ ಅಪೀಲು ಸಂಖ್ಯೆ. 3/2014, ಕ್ರಿಮಿನಲ್ ರೆಫರೆನ್ಸ್ ಸಂಖ್ಯೆ. 4/2013, ಮತ್ತು ಕ್ರಿಮಿನಲ್ ಅಪೀಲು ಸಂಖ್ಯೆ. 266/2014 ರಲ್ಲಿ ದಿನಾಂಕ 29.09.2014 ರ ಆದೇಶದ ಮೂಲಕ.

11. ಆರೋಪಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಗೊಳಪಡಿಸಿದಾಗ, ತಮ್ಮ ವರ್ತನೆಯ ಕುರಿತು ವಿವರಿಸಲು ವಿಫಲರಾಗಿದ್ದಾರೆ ಮತ್ತು ತಪ್ಪಾದ ಮತ್ತು ಸುಳ್ಳು ಉತ್ತರಗಳನ್ನು ನೀಡಿರುತ್ತಾರೆ ಎಂದು ಉಚ್ಚ ನ್ಯಾಯಾಲಯವು ಮುಂದುವರಿದು ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯದ ತೀರ್ಮಾನ ಮತ್ತು ನಿರ್ಣಯವನ್ನು ದೃಢೀಕರಿಸುತ್ತದೆ.

12. ಅಪೀಲುದಾರರಿಗೆ ವಿಧಿಸಲಾದ ಮರಣದಂಡನೆಯನ್ನು ಸಮರ್ಥಿಸಲು, ಈ ಮೊಕದ್ದಮೆಯು ''ವಿರಳ ಮೊಕದ್ದಮೆಗಳಲ್ಲಿ ಅತ್ಯಂತ ವಿರಳವಾದ'' ವಿಭಾಗಕ್ಕೆ ಸೇರುತ್ತದೆಯೇ ಎಂದು ಪರಿಶೀಲಿಸಿದಾಗ, ಈ ಘಟನೆಯು ಸಮುದಾಯದ ಸಾಮೂಹಿಕ ಆತ್ಮಸಾಕ್ಷಿಯನ್ನು ಕದಲಿಸಿರುವುದರಿಂದ ಮತ್ತು ಆರೋಪಿಗಳು ಎಸಗಿರುವ ಕೊಲೆ ಕೃತ್ಯಗಳು ತುಂಬಾ ಭೀಕರ, ನಿರ್ದಯ ಮತ್ತು ಕ್ರೂರವಾಗಿರುವುದರಿಂದ, ಉಲ್ಬಣಗೊಂಡ ಸನ್ನಿವೇಶವು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಮೀರಿಸಿದ್ದು, ಈ ಕಾರಣದಿಂದ ಈ ಮೊಕದ್ದಮೆಯು ವಿರಳ ಮೊಕದ್ದಮೆಗಳಲ್ಲಿ ಅತ್ಯಂತ ವಿರಳ ವಿಭಾಗಕ್ಕೆ ಸೇರುತ್ತದೆ ಮತ್ತು ಇಂತಹ ಅಪರಾಧದ ಬಗ್ಗೆ ಸಮಾಜವು ಜಿಗುಪ್ಸೆಯನ್ನು ವ್ಯಕ್ತಪಡಿಸುತ್ತದೆ ಎಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.

ಅಪೀಲುದಾರರ ಪರವಾಗಿ ಮಂಡಿಸಿದ ವಾದಗಳು:

13. ರಾಹುಲ್ ಮತ್ತು ಮನೋಜ್ ರವರ ಹಿತಕ್ಕಾಗಿ ಹಾಜರಾದ ಮಾನ್ಯ ಹಿರಿಯ ವಕೀಲರಾದ ಶ್ರೀಮತಿ ಅಂಜನಾ ಪ್ರಕಾಶ್ ರವರು, ಸಾಕ್ಷಿಗಳ ಸಾಕ್ಷ್ಯಾಧಾರಗಳು ಅಂದರೆ ಪೊಲೀಸ್ ಸಾಕ್ಷಿಗಳು ಮತ್ತು ಖಾಸಗಿ ಸಾಕ್ಷಿಗಳು, ಅಭಿಯೋಜನೆಯು ಪ್ರತಿಪಾದಿಸಿದಂತೆ ನೇಹಾರವರನ್ನು ಆ ಸಮಯದಲ್ಲಿ ಮತ್ತು ಆ ಸ್ಥಳದಲ್ಲಿ ಬಂಧಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ಮತ್ತು ಆಕೆಯ ವಿವರಣಾ ಹೇಳಿಕೆಗಳು ಪ್ರಾಮಾಣಿಕವಾಗಿದೆಯೇ, ವಿವರಣಾ ಹೇಳಿಕೆಗಳನ್ನು ಅಭಿಯೋಜನೆಯು ಹೇಳಿದಂತೆಯೇ ಮಾಡಲಾಗಿದೆಯೇ ಮತ್ತು ಕ್ರಮಬದ್ಧವಾದ ಬಂಧನ

ಮತ್ತು ವಶಪಡಿಸಿಕೊಳ್ಳುವಿಕೆಯು ಅಭಿಯೋಜನೆಯು ಹೇಳಿದಂತ ರೀತಿಯಲ್ಲಿರುವುದೇ ಎಂಬ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ವಾದ ಮಂಡಿಸಿದ್ದಾರೆ.

14. ಪ್ರಾ.ಸಾ.4–ಮಹಿಳಾ ಪೇದೆ ಬನ್ನೋ ಸೋಲಂಕಿಯವರು ಹೇಳಿರುವುದೇನೆಂದರೆ, ಅವರು ಎ.ಟಿ.ಎಂ ಯಂತ್ರದ ಬಳಿ ಹೋಗಿದ್ದು ನೇಹಾರಿಗಾಗಿ ಹುಡುಕಿರುತ್ತಾರೆ ಮತ್ತು ಇದು ಆಶ್ಲೇಷಾರವರ ಎ.ಟಿ.ಎಂ ಕಾರ್ಡ್‌ನ್ನು ಮರಳಿ ಪಡೆಯಲು ಕಾರಣವಾಗಿರುತ್ತದೆ ಎಂಬುದಾಗಿದೆ. ಆದಾಗ್ಯೂ, ಆಕೆಯ ವಿಚಾರಣೆಯ ಸ್ಥಳದ ಬಗ್ಗೆ ಐ.ಓ ಮತ್ತು ಇತರ ಸಾಕ್ಷಿಗಳ ವಿರುದ್ಧವಾಗಿ ಹೇಳಿರುತ್ತಾರೆ. ನೇಹಾರನ್ನು ಪೊಲೀಸ್ ಠಾಣೆಯಲ್ಲಿ ವಿಚಾರಣೆಗೊಳಪಡಿಸಲಾಯಿತು ಮತ್ತು ಅಲ್ಲಿ ಆಕೆಯು ಕೆಲವೊಂದು ಆಭರಣಗಳು ಮತ್ತು ಎ.ಟಿ.ಎಂ ಕಾರ್ಡ್‌ಗಳು ತನ್ನ ಮನೆಯಲ್ಲಿವೆ ಎಂದು ಹೇಳಿದ್ದಾರೆ ಎಂದು ಪ್ರಾ.ಸಾ.4 ರವರು ಹೇಳಿರುತ್ತಾರೆ. ಪ್ರಾ.ಸಾ.6–ತ್ರಿಯಂಬಕ್ @ ಪ್ರಫುಲ್ಲ ಮತ್ತು ಪ್ರಾ.ಸಾ.36–ಮುಲಾಯಮ್ ಸಿಂಗ್ ಯಾದವ್‌ರವರು ಇದನ್ನು ಸ್ಥಿರೀಕರಿಸಿದ್ದಾರೆ. ಆದಾಗ್ಯೂ, ಬಂಧನ ಮೆಮೊ/ತಿಳುವಳಿಕೆ ಮೆಮೊವನ್ನು ಪೊಲೀಸ್ ಠಾಣೆಯಲ್ಲಿ ಯಾವ ಕಾರಣಕ್ಕಾಗಿ ಸಿದ್ಧಪಡಿಸಿಲ್ಲ ಎಂಬುದನ್ನು ಅಭಿಯೋಜನೆಯು ವಿವರಿಸಿರುವುದಿಲ್ಲ. ಬಂಧನಗಳು ಮತ್ತು ವಶಪಡಿಸಿಕೊಳ್ಳುವಿಕೆಯ ಬಗ್ಗೆ ಮತ್ತು ಅಭಿಯೋಜನೆಯು ಕೋರಿದಂತ ಮಾದರಿಯಲ್ಲೂ ಸಹ ಗಂಭೀರವಾದ ವಿವಾದವಿರುವುದರಿಂದ ಇದು ಪ್ರಮುಖವಾಗಿದೆ ಎಂದು ವಾದ ಮಂಡಿಸಿದ್ದಾರೆ. ನೇಹಾರ ವಿಚಾರಣೆಯ ನಂತರ ಆಕೆಯ ಮನೆಯಿಂದ ಕೆಲವು ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು ಎಂಬ ಅಭಿಯೋಜನೆಯ ವಾದವನ್ನು ಮಹಿಳಾ ಆರೋಪಿಯ ಬೆಂಗಾವಲಿನಲ್ಲಿದ್ದ ಪ್ರಾ.ಸಾ.4–ಮಹಿಳಾ ಪೇದೆಯು <u>ಸಮರ್ಥಿಸಿಕೊಂಡಿರುವುದಿಲ್ಲ</u>. ಆಕೆಯು ತನ್ನ ಮುಖ್ಯ–ವಿಚಾರಣೆಯ ಸಂದರ್ಭದಲ್ಲಿ, ನೇಹಾರ ಮನೆಗೆ ಹೋದಂತಹ ಪೊಲೀಸ್ ತಂಡದಲ್ಲಿ ಆಕೆಯು ಭಾಗವಾಗಿದ್ದಳೆ ಎಂಬ ಪ್ರಶ್ನೆಗೆ ಮೌನವಾಗಿದ್ದಳು. ತಮ್ಮ ಪಾಟೀ–ಸವಾಲಿನಲ್ಲಿ, ಆಕೆಯು ನೇಹಾರ ಮನೆಗೆ ಹೋಗುವಾಗ ಅದೇ ವಾಹನದಲ್ಲಿ ಕುಳಿತುಕೊಂಡಿದ್ದರು ಎಂದು ನುಡಿದಿದ್ದಾರೆ. ಪ್ರಾ.ಸಾ.4ರ ಉಪಸ್ಥಿತಿಯು ಶೋಧ ತಂಡದ (ಅಂದರೆ ಪ್ರಾ.ಸಾ.3–ಡಾ. ದೀಪಕ್ ಹರಿ ರಾನಡೆ ಮತ್ತು ಪ್ರಾ.ಸಾ.31–ಐ.ಓ

ಮೊಹನ್ ಸಿಂಗ್) ಸಾಕ್ಷಿಗಳಿಂದ ಮಾತ್ರ ಸ್ಥಿರೀಕರಿಸಲ್ಪಟ್ಟಿರುತ್ತದೆ. ಮುಂದುವರಿದು, ನೇಹಾರವರು ರಾಹುಲ್ ಮತ್ತು ಮನೋಜ್‌ರವರ ಹೆಸರುಗಳನ್ನು ಬಹಿರಂಗಪಡಿಸಿದ್ದಾರೆ ಅಥವಾ ಇಬ್ಬರು ಆರೋಪಿಗಳ ಮನೆಗೆ ಹೋಗುವಾಗ ನೇಹಾರೊಂದಿಗೆ (ಆರೋಪಿ ಮಹಿಳೆಯಾಗಿರುವುದರಿಂದ ಅದನ್ನು ನಿರೀಕ್ಷಿಸಬಹುದು) ಆಕೆ ಇದ್ದರು ಮತ್ತು ಅದರ ನಂತರದ ವಶಪಡಿಸಿಕೊಳ್ಳುವಿಕೆಯ ಬಗೆಗಿನ ಅಭಿಯೋಜನೆಯ ವಾದವನ್ನು ಪ್ರಾ.ಸಾ.4 ಸಮರ್ಥಿಸಿಕೊಂಡಿರುವುದಿಲ್ಲ. ಪೊಲೀಸ್ ತಂಡವು ನೇಹಾರ ಮನೆಯಿಂದ ಖಾಸಗಿ ವಾಹನದಲ್ಲಿ ಪೊಲೀಸ್ ಠಾಣೆಗೆ ಹಿಂತಿರುಗಿದ್ದಾರೆ ಎಂದು ನುಡಿದಿದ್ದಾರೆ. ಬಂಧನ ಮೆಮೋ (ನಿ.ಪಿ.9) ಮತ್ತು ತಿಳುವಳಿಕೆ ಮೆಮೊ (ನಿ.ಪಿ–10) ಆ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸಿದ್ದಪಡಿಸಲಾಯಿತು ಎಂಬುದು ಸುಳ್ಳು ಎಂಬುದನ್ನು ಇದು ಸೂಚಿಸುತ್ತದೆ ಮತ್ತು ಇದರ ಪರಿಣಾಮವಾಗಿ, ನೇಹಾರವರು ಪೊಲೀಸ್ ತಂಡವನ್ನು ರಾಹುಲ್ ಮತ್ತು ಮನೋಜ್ ಮನೆಗಳಿಗೆ ಕರೆದೊಯ್ದರು ಎಂಬ ತರುವಾಯದ ಕಥೆಯೂ ಸಹ ಸುಳ್ಳು ಎಂಬುದನ್ನು ಸೂಚಿಸುತ್ತದೆ.

15. ಪ್ರಾ.ಸಾ.28–ವಿಜಯ್ ಚೌಹಾಣ್‌ರವರು, ಪ್ರಾ.ಸಾ.19–ವೈ.ಆರ್. ಗಾಯಕ್ವಾಡ್ ರವರಿಗೆ ಎ.ಟಿ.ಎಮ್ ಬಳಿ ಒಂದು ಹುಡುಗಿಯು ಅನುಮಾನಸ್ಪದವಾಗಿ ನಿಂತಿರುವುದಾಗಿ ಮಾಹಿತಿ ನೀಡಿರುತ್ತಾರೆ ಮತ್ತು ಪ್ರಾ.ಸಾ.19 ಇದರ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಿ, ನಿಸ್ತಂತು ಮೂಲಕ ಅವರಿಗೆ ಮಾಹಿತಿ ನೀಡಿರುತ್ತಾರೆ ಎಂದು ಪ್ರಾ.ಸಾ.31 ನುಡಿದಿರುತ್ತಾರೆ. ಆದ್ದರಿಂದ, ಪ್ರಾ.ಸಾ.31 ಪೊಲೀಸ್ ಠಾಣಾಗೆ ಹೋಗಿ, ಪ್ರಾ.ಸಾ.4, ಪ್ರಾ.ಸಾ.19, ಪ್ರಾ.ಸಾ.28 ಮತ್ತು ಪ್ರಾ.ಸಾ.36 ರನ್ನು ಒಳಗೊಂಡಂತಹ ಒಂದು ತಂಡವನ್ನು ರಚಿಸಿ ಎ.ಟಿ.ಎಮ್ ಕಡೆಗೆ ಹೊರಟಿರುತ್ತಾರೆ ಮತ್ತು ತದನಂತರ ನೇಹಾರ ಮನೆಗೆ ಹೋಗಿರುತ್ತಾರೆ (ರಾಹುಲ್ ಮತ್ತು ಮನೋಜ್ ಮನೆಗೂ ಸಹ). ಠಾಣಾ ಡೈರಿಯನ್ನು ಹಾಜರುಪಡಸಿರುವುದಾಗಲಿ ಅಥವಾ ಪ್ರಾ.ಸಾ.19, ಪ್ರಾ.ಸಾ.31 ರ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವುದಾಗಲಿ ಮಾಡಿರುವುದಿಲ್ಲ ಎಂದು ಮಂಡಿಸಲಾಗಿದೆ. ಅಂತೆಯೇ, ನೇಹಾರ ಮನೆಗೆ ದಾಳಿ ಮಾಡಲು ಹೋದಂತಹ

ತಂಡದಲ್ಲಿ ಇದ್ದರೋ ಇಲ್ಲವೋ ಎಂಬುದರ ಬಗ್ಗೆ ಪ್ರಾ.ಸಾ.28 ಮತ್ತು ಪ್ರಾ.ಸಾ.31 ರವರು ನೀಡಿರುವ ಹೇಳಿಕೆಯಲ್ಲಿ ವ್ಯತ್ಯಾಸವಿರುತ್ತದೆ.

16. ನೇಹಾ ಅನುಮಾನಾಸ್ಪದವಾಗಿ ಅಡ್ಡಾಡುತ್ತಿರುವ ಬಗ್ಗೆ ತಿಳಿದಾಗ ಪ್ರಾ.ಸಾ.31 ತಮ್ಮೊಂದಿಗೆ ಬೇರೆ ವ್ಯಕ್ತಿಗಳಿದ್ದರು ಎಂದು ನುಡಿದಿದ್ದಾರೆ ಎಂದು ಮಾನ್ಯ ವಕೀಲರು ಮುಂದುವರಿದು ವಾದ ಮಂಡಿಸಿದ್ದಾರೆ. ಆದಾಗ್ಯೂ, ಪ್ರಾ.ಸಾ.28 ರ ಆದೇಶದ ಮೇರೆಗೆ ನೇಹಾ ಅವರ ಚಲನವಲನದ ಬಗ್ಗೆ ಮಾಹಿತಿಯನ್ನು ಪಡೆದಂತಹ ಮತ್ತು ಅದನ್ನು ನೀಡಿದಂತಹ ಪ್ರಾ.ಸಾ.19 ರ ಬಗ್ಗೆ ಹೇಳಿವುದನ್ನು ಕಡೆಗಣಿಸಿರುತ್ತಾರೆ. ಇದು ನೇಹಾರನ್ನು ವಾಸ್ತವವಾಗಿ ಪೊಲೀಸ್ ಠಾಣೆಯಲ್ಲಿಯೇ ವಿಚಾರಣೆಗೆ ಒಳಪಡಿಸಲಾಯಿತು ಎಂಬ ಅಂಶವನ್ನು ಸೂಚಿಸುತ್ತದೆ. ಎ.ಟಿ.ಎಮ್ ಕಾರ್ಡ್‌ನ್ನು ವಶಪಡಿಸಿಕೊಂಡಿದ್ದರೂ ಸಹ, ಆ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಬಂಧನ ಮೆಮೊವನ್ನು ಏಕೆ ಸಿದ್ದಪಡಿಸಲಿಲ್ಲ ಅಥವಾ ವಿವರಣಾ ಹೇಳಿಕೆಯನ್ನು ಏಕೆ ದಾಖಲು ಮಾಡಿಕೊಳ್ಳಲಿಲ್ಲ ಎಂಬುದಕ್ಕೆ ಯಾವುದೇ ಕಾರಣಗಳಿರುವುದಿಲ್ಲ. ಪೊಲೀಸ್ ವಾಹನದಲ್ಲಿ ದಾರಿಯಲ್ಲಿಯೇ ವಿವರಣಾ ಹೇಳಿಕೆಯನ್ನು ಏಕೆ ದಾಖಲು ಮಾಡಲಾಗಲಿಲ್ಲ ಎಂಬುದರ ಬಗ್ಗೆ ಪ್ರಾ.ಸಾ.31 ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಈ ಅಂಶದ ಬಗ್ಗೆ ಮೌನವಾಗಿದ್ದ ಪ್ರಾ.ಸಾ.4ರ ಸಾಕ್ಷ್ಯವನ್ನೂ ಸಹ ಮಾನ್ಯ ವಕೀಲರು ಉಲ್ಲೇಖಿಸಿದ್ದಾರೆ. ಮುಂದುವರಿದು, ಕುಟುಂಬದ ಸದಸ್ಯರು, ವಿಶೇಷವಾಗಿ ನೇಹಾರ ತಂದೆಯು ಲಭ್ಯವಿದ್ದರೂ ಸಹ, ಆಕೆಯ ಬಂಧನದ ಬಗ್ಗೆ ಅವರಿಗೆ ತಿಳಿಸಿರುವುದಿಲ್ಲ ಅಥವಾ ಅವರ ಸಹಿಯನ್ನು ಸಹ ಬಂಧನ ಮೆಮೊ ಮೇಲೆ ಪಡೆದಿರುವುದಿಲ್ಲ ಎಂಬ ಅಂಶವನ್ನು ಮಾನ್ಯ ವಕೀಲರು ಪ್ರಮುಖವಾಗಿ ತೋರಿಸಿರುತ್ತಾರೆ. ವಾಸ್ತವವಾಗಿ ಈ ಎಲ್ಲಾ ಅಂಶಗಳು, ಅಭಿಯೋಜನೆಯ ವಾದದಂತೆ ನೇಹಾರ ಬಂಧನವಾಗಿರುವುದಿಲ್ಲ ಎಂಬ ಪ್ರತಿರಕ್ಷೆಯ ನಿವೇದನೆಯನ್ನು ಸಮರ್ಥಿಸುತ್ತದೆ.

17. ರಾಹುಲ್ ಮತ್ತು ಮನೋಜ್‌ರವರ ಬಂಧನದ ಬಗ್ಗೆ ಗಮನಿಸಿದಾಗ, ಆ ವ್ಯಕ್ತಿಗಳ ಮೇಲೆ ಕಂಡುಬಂದಂತಹ ಗಾಯಗಳ ರೂಪ ಮತ್ತು ಅವರ ವಿವರಣಾ ಹೇಳಿಕೆಗಳ

(ರಾಹುಲ್‌ಗೆ ಸಂಬಂಧಿಸಿದ ನಿ.ಪಿ.12–ಪಿ.13 ಮತ್ತು ಮನೋಜ್‌ಗೆ ಸಂಬಂಧಿಸಿದ ನಿ.ಪಿ.15–ಪಿ.16) ಮೊದಲು ಅವು ಸಂಭವಿಸಿದ ರೀತಿಯನ್ನು ದಾಖಲಿಸಿರುವುದರಲ್ಲಿ ಕೆಲವೊಂದು ವ್ಯತ್ಯಾಸವಿರುತ್ತದೆ ಎಂಬ ಅಂಶವನ್ನು ತೊರಿಸಿರುತ್ತಾರೆ. ವಿವರಣಾ ಹೇಳಿಕೆಯ ಮೊದಲು ಆ ಗಾಯಗಳು ಹೇಗೆ ಸಂಭವಿಸಿದವು ಎಂಬ ಬಗ್ಗೆ ದಾಖಲಿಸಲಾಗಿದೆ. ನೇಹಾರ ಬಂಧನದ ನಂತರ, ರಾಹುಲ್ ಮನೆಯಿಂದ (ನಿ.ಪಿ.14) ಬೆಳಗ್ಗೆ 9.10 ಗಂಟೆಗೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ನಿವೇದಿಸಿಕೊಂಡಿರುತ್ತಾರೆ. ನಿ.ಪಿ.12 ರಲ್ಲಿ ಅಂದರೆ ದಿನಾಂಕ 22.06.2011 ರ ರಾಹುಲ್ @ ಗೋವಿಂದ್‌ರವರ ಬಂಧನ ಮೆಮೊದ ಕಾಲಂ–9 ರಲ್ಲಿ ಅಂದರೆ ಪೊಲೀಸರು ಗಾಯಗಳ ಬಗ್ಗೆ ಉಲ್ಲೇಖಿಸುವ ಜಾಗದಲ್ಲಿ ರಾಹುಲ್‌ನ ಎಡ ಮೊಣಕೈಯಲ್ಲಿ ಹಳೆಯ ಬಂದೂಕಿನ ಗಾಯವನ್ನು ಉಲ್ಲೇಖಿಸಿದ್ದರೂ ಸಹ, ಆತನ ಕಾಲಿನ ಗಾಯದ ಬಗ್ಗೆ ಬಂಧನ ಮೆಮೊದಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ. ರಾಹುಲ್‌ರವರ ಎಡಗಾಲಿಗೆ ಗುಂಡು ತಗುಲಿದ ಗಾಯವಿದೆ ಎಂಬ ಅಭಿಯೋಜನೆಯ ವಾದದ ವಿರುದ್ಧ ಇದು ಹೊಂದಾಣಿಕೆಯಾಗದ ಸಂದರ್ಭವಾಗಿರುತ್ತದೆ ಎಂದು ವಾದಿಸಿದ್ದಾರೆ.

18. ಮನೊಜ್‌ರವರನ್ನು ಬೆಳಿಗ್ಗೆ ಸುಮಾರು 10.05 ಗಂಟೆಗೆ ಅವರ ಮನೆಯಿಂದ (ನಿ.ಪಿ.15) ಬಂಧಿಸಲಾಯಿತು ಎಂದು ನಿವೇದಿಸಿರುತ್ತಾರೆ. ಆತನ ವಿವರಣಾ ಹೇಳಿಕೆಯನ್ನು (ನಿ.ಪಿ.16) ಬೆಳಗ್ಗೆ ಸುಮಾರ 10.15 ಗಂಟೆಗೆ ದಾಖಲಿಸಲಾಯಿತು ಮತ್ತು ವಸ್ತುಗಳನ್ನು ಬೆಳಗ್ಗೆ ಸುಮಾರು 10.35 ಗಂಟೆಗೆ (ನಿ.ಪಿ.17) ವಶಪಡಿಸಿಕೊಳ್ಳಲಾಯಿತು. ಆದಾಗ್ಯೂ, ಮನೋಜ್‌ರವರ ಬಂಧನ ಮೆಮೊದಲ್ಲಿ (ನಿ.ಪಿ.15), ಆರೋಪಿಗಳ ಬಂಧನದ ಸಮಯದಲ್ಲಿ ಆ ಆರೋಪಿಯ ದೇಹದ ಮೇಲೆ ಆದಂತಹ ಗಾಯಗಳನ್ನು ದಾಖಲು ಮಾಡಬೇಕಾದ ಬಂಧನ ಮೆಮೊದ ಕಾಲಂ ಸಂಖ್ಯೆ.9 ರಲ್ಲಿ ಮನೋಜ್‌ರ ಮೂಗಿನ ಮೇಲೆ ಆದಂತಹ ಗಾಯದ ಬಗ್ಗೆ ದಾಖಲಿಸಿದ್ದರೂ ಸಹ ಆತನ ಮೊಣಕೈ ಮೇಲಿನ ಗಾಯವನ್ನು ದಾಖಲಿಸಿರುವುದಿಲ್ಲ. ದಿನಾಂಕ 22.06.2011 ರಂದು ಬೆಳಗ್ಗೆ ಸುಮಾರು 6.00 ಗಂಟೆಯಿಂದ ಸಾಯಂಕಾಲ 4.40 ಗಂಟೆಯವರೆಗೆ ವಿವಿಧ ವಸ್ತುಗಳನ್ನು ಮತ್ತು ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂಬುದು ಅಭಿಯೋಜನೆಯ ವಾದವಾಗಿರುತ್ತದೆ. ಆದಾಗ್ಯೂ,

ಪ್ರ.ಸಾ.3–ಸಂಜಯ್ ರಾಣಾ, ಐ.ಜಿ, ಇಂದೋರ್, ಇವರ ಕಛೇರಿಯಲ್ಲಿ ಮಧ್ಯಾಹ್ನ 12.30 ರಿಂದ 1.00 ಗಂಟೆಯವರೆಗೆ ಪತ್ರಿಕಾಗೋಷ್ಟಿಯನ್ನು ಹಮ್ಮಿಕೊಂಡಿದ್ದರು ಎಂಬುದನ್ನು ತೋರಿಸಲು ಸಾಕ್ಷ್ಯಗಳಿದ್ದು, ಪತ್ರಿಕಾಗೋಷ್ಟಿಗೂ ಮುನ್ನ, ಪ್ರಾ.ಸಾ.31–ಐ.ಓ ರವರು ತನಿಖೆ ನಡೆದು ನೇಹಾರನ್ನು ಬಂಧಿಸಲಾಯಿತು ಮತ್ತು ಆರೋಪಿಯಿಂದ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು ಎಂಬುದನ್ನು ಪ್ರಾ.ಸಾ.3 ರವರಿಗೆ ತಿಳಿಸಿರುತ್ತಾರೆ. ಇದು, ರಾಹುಲ್‌ರವರ ನಿ.ಪಿ.21 (ಪ್ರಾ.ಸಾ.3 ಮತ್ತು ಪ್ರಾ.ಸಾ.5 ರ ಮೇಲೆ ಅವಲಂಬಿತವಾಗಿರುತ್ತದೆ) ನಿದೇರ್ಶನದ ಮೇರೆಗೆ ಬೂಟನ್ನು ವಶಕ್ಕೆ ತೆಗೆದುಕೊಳ್ಳಲಾಯಿತು ಎಂಬ ಕಥೆಯನ್ನು ಸುಳ್ಳಾಗಿಸುತ್ತದೆ.

19. ಪ್ರಾ.ಸಾ.31–ಐ.ಓ ರವರು ಇಬ್ಬರು ಸಾಕ್ಷಿಗಳ ಮುಂದೆ ದಿನಾಂಕ 23.06.2011 ರಂದು ರಾಹುಲ್‌ರವರನ್ನು ವಿಚಾರಣೆಗೆ ಒಳಪಡಿಸಿದರು ಎಂದು ನುಡಿದಿದ್ದಾರೆ ಆದರೆ ಅವರ ಹೆಸರುಗಳನ್ನು ಹೇಳಿರುವುದಿಲ್ಲ ಎಂದು ಶ್ರೀಮತಿ. ಪ್ರಕಾಶ್ ರವರು ವಾದ ಮಂಡಿಸಿದ್ದಾರೆ. ರಾಹುಲ್ ತನ್ನ ಮೊಟಾರ್ ಸೈಕಲ್‌ನ ಬ್ಯಾಗ್‌ನಲ್ಲಿ ತನ್ನ ಬಟ್ಟೆ ಮತ್ತು ಚಾಕುವನ್ನು ಇಟ್ಟಿದ್ದರು ಮತ್ತು ಮನೋಜ್ ಕದ್ದ ಮೊಬೈಲ್ ಮತ್ತು ಕ್ಯಾಮರಾವನ್ನು ಒಡೆದು ಮಾರುತಿ ಶೋ ರೂಂ ಬಳಿ ಎಸೆದಿದ್ದರು ಎಂದು ಬಹಿರಂಗಪಡಿಸಿದ್ದಾರೆ. ನಂತರ ತಿಳುವಳಿಕೆ ಮೊಮೊವನ್ನು (ನಿ.ಪಿ.28) ಬೆಳಗ್ಗೆ ಸುಮಾರು 7.50 ಗಂಟೆಗೆ ಸಿದ್ದಪಡಿಸಿದರು. ಇಬ್ಬರು ಸಾಕ್ಷಿಗಳ (ಅವರ ಹೆಸರನ್ನು ಹೇಳಿರುವುದಿಲ್ಲ) ಸಮ್ಮುಖದಲ್ಲಿ ಮನೋಜ್‌ರವರನ್ನು ಅವರು ವಿಚಾರಣೆಗೊಳಪಡಿಸಿದರು ಮತ್ತು ಆ ಸಮಯದಲ್ಲಿ ಅವರು ತಾವು ಧರಿಸಿದ್ದ ಬಟ್ಟೆ ಮತ್ತು ಬೂಟುಗಳನ್ನು ತಮ್ಮ ತಂದೆಯ ಅಲ್ಮೈರಾದಲ್ಲಿ ಬಚ್ಚಿಟ್ಟಿದ್ದರು ಮತ್ತು ಒಡೆದ ಮೊಬೈಲನ್ನು ರಾವುನಲ್ಲಿರುವ ಮಾರುತಿ ಶೊ ರೂಂ ಬಳಿ ಎಸೆದರು ಎಂದು ತಪ್ಪೊಪ್ಪಿಕೊಂಡರು. ನಂತರ ಅವರು ಬೆಳಗ್ಗೆ 8.50 ಗಂಟೆಗೆ ತಿಳುವಳಿಕೆ ಮೆಮೊವನ್ನು (ನಿ.ಪಿ.31) ಸಿದ್ದಪಡಿಸಿದರು. ಪ್ರಾ.ಸಾ.32 ರವರು ಇಬ್ಬರು ಸಾಕ್ಷಿಗಳ (ಮತ್ತೊಮ್ಮೆ ಅವರ ಹೆಸರನ್ನು ಹೇಳಿರುವುದಿಲ್ಲ) ಸಮ್ಮುಖದಲ್ಲಿ ನೇಹಾರನ್ನೂ ಸಹ ವಿಚಾರಣೆಗೆ ಒಳಪಡಿಸಿದ್ದು, ಆಕೆಯು ತಾನು ಧರಿಸಿದ್ದ ಬಟ್ಟೆ ಮತ್ತು ಚಪ್ಪಲಿಯನ್ನು ತನ್ನ ಸ್ಕೂಟರಿನ ಡಿಕ್ಕಿಯಲ್ಲಿ ಇಟ್ಟುಕೊಂಡಿದ್ದರು ಎಂದು

ಬಹಿರಂಗಪಡಿಸಿದರು. ನಂತರ ಅವರು ಬೆಳಿಗ್ಗೆ 8.15 ಗಂಟೆಗೆ ತಿಳುವಳಿಕೆ ಮೆಮೊವನ್ನು (ನಿ.ಪಿ.34) ಸಿದ್ದಪಡಿಸಿದರು. ಆರೋಪಿಗಳು ತಮ್ಮ ಬಂಧನದ ದಿನಾಂಕದಂದು ತಮ್ಮ ವಿವರಣಾ ಹೇಳಿಕೆಗಳನ್ನು ನೀಡಿರುವುದಿಂದ, ವಸ್ತುಗಳನ್ನು ವಶಪಡಿಸಿಕೊಂದ ಬಗ್ಗೆ ವಿಚಾರಣೆಯ ವಿವಿಧ ಹಂತಗಳಲ್ಲಿ ಶೀಘ್ರವಾಗಿ ದಾಖಲಿಸಿಕೊಂಡ ಹೇಳಿಕೆಗಳು ವಿಚಿತ್ರ ಮತ್ತು ಅಸಹಜವಾಗಿ ತೋರುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ. ಪ್ರಾ.ಸಾ.31–ಐ.ಓ ರವರು ಹೇಳಿಕೆಗಳನ್ನು ದಾಖಲಿಸಿದ ಸಮಯವನ್ನಾಗಲಿ ಅಥವಾ ಸಾಕ್ಷಿದಾರರ ಹೆಸರುಗಳನ್ನಾಗಲಿ ಏಕೆ ಬಹಿರಂಗಪಡಿಸಿರುವುದಿಲ್ಲ ಎಂಬುದಕ್ಕೆ ವಿವರಣೆಯನ್ನು ನೀಡಿರುವುದಿಲ್ಲ ಎಂದು ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ.

20. ದಿನಾಂಕ 23.06.2011 ರಂದು ವಶಪಡಿಸಿಕೊಂಡದರ ಕುರಿತು ಪ್ರತಿಕ್ರಿಯಿಸುತ್ತಾ, ಅಭಿಯೋಜನೆಯಿಂದ ಪ್ರತಿಪಾದಿಸಲ್ಪಟ್ಟಂತೆ ಶೀಘ್ರವಾಗಿ ವಸ್ತುಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ಏಕೆ ವಶಪಡಿಸಿಕೊಳ್ಳಲಾಯಿತು ಎಂಬುದರ ಕುರಿತು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಮುಂದುವರೆದು, ಈ ರೀತಿ ವಸುಗಳನ್ನು ವಶಪಡಿಸಿಕೊಂಡಿದಕ್ಕೆ ಸಾಕ್ಷಿಯಾಗಿದ್ದ ಪ್ರಾ.ಸಾ.7–ಸಂದೀಪ್ ನರುಲ್‌ಕರ್‌ರವರು ರೂಢಿಯ (ಸ್ಟಾಕ್) ಸಾಕ್ಷಿಯಾಗಿ ಕಂಡುಬರುತ್ತಾರೆ ಮತ್ತು ಅವರು ವಿವರಣಾ ಹೇಳಿಕೆಗಳನ್ನು (ನಿ.ಪಿ.28, ಪಿ.31 ಮತ್ತು ಪಿ.34) ದಾಖಲು ಮಾಡಿಕೊಂಡ ನಂತರ ಅಂದರೆ ದಿನಾಂಕ 23.06.2011 ರಂದು ಬೆಳಿಗ್ಗೆ 8.45 ಗಂಟೆಗೆ ಪೊಲೀಸ್ ಠಾಣೆಯನ್ನು ತಲುಪಿದರು ಎಂದು ಹೇಳಿಕೆ ನೀಡಿದ್ದಾರೆ. ರಾಹುಲ್‌ರವರು, ವಶಪಡಿಸಿಕೊಂಡ ಬಟ್ಟೆ, ಚಾಕು ಮತ್ತು ಕ್ಯಾಮರಾ ಲೆನ್ಸ್ ಅನ್ನು ಪಡೆಯಬಹುದು ಎಂದು ತಮ್ಮ ಮುಂದೆ ಬಹಿರಂಗಪಡಿಸಿದ್ದಾರೆ ಎಂದು ತಮ್ಮ ಮುಖ್ಯ–ವಿಚಾರಣೆಯಲ್ಲಿ ನುಡಿದಿದ್ದಾರೆ. ಮನೋಜ್‌ರವರು ತಮ್ಮ ಬಟ್ಟೆಯನ್ನು ತಮ್ಮ ತಂದೆಯ ಮನೆಯಲ್ಲಿ ಇಟ್ಟುಕೊಂಡಿದ್ದನ್ನು ಮತ್ತು ನೇಹಾ ತಮ್ಮ ಬಟ್ಟೆಗಳನ್ನು ಆಸ್ಪತ್ರೆಯ ಹಿಂದೆ ನಿಲ್ಲಿಸಿದ ತಮ್ಮ ವಾಹನದಲ್ಲಿ ಇಟ್ಟುಕೊಂಡಿದ್ದನ್ನು ಬಹಿರಂಗಪಡಿಸಿದ್ದಾರೆ. ನಂತರ ಪೊಲೀಸರು ಕ್ರಮವಾಗಿ ನಿ.ಪಿ.28, ಪಿ.31, ಮತ್ತು ಪಿ.34 ರ ಪ್ರಕಾರ ಮೆಮೊಗಳನ್ನು

ಸಿದ್ದಪಡಿಸಿದರು ಮತ್ತು ವಶಪಡಿಸಿಕೊಂಡ ವಸ್ತುಗಳ ಮೆಮೊವನ್ನು ಕ್ರಮವಾಗಿ ನಿ.ಪಿ.29, ಪಿ.31 ಮತ್ತು ಪಿ.34 ರಂತೆ ಸಿದ್ಧಪಡಿಸಿದರು. ಮಹಿಳಾ ಆರೋಪಿ ನೇಹಾರವರ ಪಾಲ್ಗೊಳ್ಳುವಿಕೆಯಿಂದಾಗಿ ಅಗತ್ಯವಿದ್ದ ಮತ್ತು ತಂಡದಲ್ಲಿದ್ದ ಮಹಿಳಾ ಪೊಲೀಸ್ ಅಧಿಕಾರಿಯ ಬಗ್ಗೆ ಪ್ರಾ.ಸಾ.7 ಏನನ್ನೂ ಹೇಳಿರುವುದಿಲ್ಲ ಎಂಬುದನ್ನು ಗಮನಿಸಲಾಗಿದೆ. ಇತರ ಸಾಕ್ಷಿಯನ್ನು (ಪ್ರಕಾಶ್ ಇಚ್ಕೆ) ವಿಚಾರಣೆಗೆ ಒಳಪಡಿಸದಿರುವುದು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ ಮತ್ತು ಆತನ ವಿಚಾರಣೆಗೆ ಯಾವುದೇ ವಿವರಣೆಯನ್ನು ನೀಡಿದೆ ವಶಪಡಿಸಿಕೊಂಡ ವಸ್ತುಗಳು ವಿಶ್ವಾಸಾರ್ಹ ಎಂದು ಹೇಳಲಾಗುವುದಿಲ್ಲ ಎಂದು ವಾದ ಮಂಡಿಸಿದ್ದಾರೆ.

21. ಪೊಲೀಸರು ದಿನಾಂಕ 22.06.2011 ಮತ್ತು 23.06.2011 ರಂದು ವಶಪಡಿಸಿಕೊಂಡದರ ಬಗ್ಗೆ ವಕೀಲರು ಗಂಭೀರವಾದ ಅನುಮಾನವನ್ನು ವ್ಯಕ್ತಪಡಿಸಿದರು. ಕಪ್ಪು ಮಣಿಗಳನ್ನು ಹೊಂದಿದ ಬ್ರೇಸ್‌ಲೆಟ್‌ನ್ನು ಧರಿಸಿರುವ ರಾಹುಲ್‌ರವರ ಭಾವಚಿತ್ರವು ಅವರ ಮನೆಯಲ್ಲಿ ದೊರೆತಿದ್ದು, ಅದನ್ನು ನಿ.ಪಿ.14 ರಂತೆ ಜಪ್ತಿಪಡಿಸಿಕೊಳ್ಳಲಾಯಿತು ಎಂಬ ಅಂಶದ ಬಗ್ಗೆ ವಿಶೇಷವಾಗಿ ಗಮನಹರಿಸಬೇಕು ಎಂದು ವಾದ ಮಂಡಿಸಿದ್ದಾರೆ. ಯಾವುದೇ ವಿವರಣಾ ಹೇಳಿಕೆಯ ಅನುಸಾರವಾಗಿ ಅದನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ಇತರೆ ವಸ್ತುಗಳನ್ನು ವಶಪಡಿಸಕೊಳ್ಳುವ ಪ್ರಕ್ರಿಯೆಯ ಸಂದರ್ಭದಲ್ಲಿ ಅದನ್ನು ವಶಪಡಿಸಿಕೊಳ್ಳಲಾಯಿತು ಎಂದು ಸ್ಪಷ್ಟವಾಗಿದೆ. ಪ್ರಾ.ಸಾ.31–ಐ.ಓ ರವರ ಪಾಟೀ–ಸವಾಲಿನ ಸಂದರ್ಭದಲ್ಲಿ, ಆರೋಪಿಗೆ ಬಲವಂತವಾಗಿ ಬ್ರೇಸ್‌ಲೆಟ್ಟನ್ನು ಧರಿಸುವಂತೆ ಮಾಡಿ ಈ ಭಾವಚಿತ್ರವನ್ನು ಕ್ಲಿಕ್ ಮಾಡಲಾಗಿದೆ ಎಂಬ ಸಲಹೆಯನ್ನು ನೀಡಲಾಯಿತು ಮತ್ತು ಐ.ಓ ರವರು ಆ ಸಲಹೆಯನ್ನು ನಿರಾಕರಿಸಿದರು. ಅಂತೆಯೇ, ಮನೋಜ್‌ರವರ ಮನೆಯಿಂದ ಅವರು ಸನ್‌ಗ್ಲಾಸ್ ಹಾಕಿರುವ ಭಾವಚಿತ್ರವನ್ನು ಜಪ್ತಿಪಡಿಸಿಕೊಂಡು ಅದನ್ನು ನಿ.ಪಿ.17 ಎಂದು ಗುರುತು ಮಾಡಲಾಯಿತು. ಇದು ಆತನ ವಿವರಣೆಯ ಹೇಳಿಕೆಯ ಸಮಯದಲ್ಲಿ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಣವಾಯಿತು. ಆದಾಗ್ಯೂ, ರಾಹುಲ್‌ಗೆ ಸಂಬಂಧಿಸಿದಂತೆ ಯಾವುದೇ ವಿವರಣಾ ಹೇಳಿಕೆಯು ಇರುವುದಿಲ್ಲ. ಯಾವ ಸ್ಥಳದಿಂದ ಈ ಎಲ್ಲಾ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಯಿತು

ಎಂಬುದನ್ನು ಜಪ್ತಿ ಮೆಮೊದಲ್ಲಿ ನಮೂದಿಸಿರುವುದಿಲ್ಲ. ಮುಂದುವರೆದು, ವಸ್ತುಗಳನ್ನು ವಶಪಡಿಸಿಕೊಂಡವರ ಬಗೆಗಿನ ಸಾಕ್ಷಿಗಳು ಆ ವಶಪಡಿಸಿಕೊಳ್ಳುವಿಕೆಯ ಬಗ್ಗೆ ತಮ್ಮ ಹೇಳಿಕೆಯಲ್ಲಿ ಮಾತನಾಡಿರುವುದಿಲ್ಲ.

22. ಪ್ರಾ.ಸಾ.3 ಅವರಾಗಲಿ ಅಥವಾ ಪ್ರಾ.ಸಾ.6 ಅವರಾಗಲಿ ಜಪ್ತಾದ ವಸ್ತುಗಳನ್ನು (ನಿ.ಪಿ.11, ಪಿ.14 ಮತ್ತು ಪಿ.17) ಅವರ ಸಮ್ಮುಖದಲ್ಲಿ ದಿನಾಂಕ 22.06.2011 ಮತ್ತು 23.06.2011 ರಂದು ಮೊಹರು ಮಾಡಿದ ಬಗ್ಗೆ ಏನನ್ನು ಹೇಳಿರುವುದಿಲ್ಲ ಎಂದು ಮುಂದುವರಿದು ವಾದ ಮಂಡಿಸಿದ್ದಾರೆ. ಅಂತೆಯೇ, ಪ್ರಾ.ಸಾ.7 ರವರು (ದಿನಾಂಕ 23.06.2011 ರಂದು ವಶಪಡಿಸಿಕೊಂಡದರ ಬಗ್ಗೆ) ನಿ.ಪಿ.29, ಪಿ.30, ಪಿ.32, ಪಿ.33 ಮತ್ತು ಪಿ.35 ರಂತೆ ವಶಪಡಿಸಿಕೊಂಡ ವಸ್ತುಗಳ ಮೇಲೆ ಯಾರು ಮೊಹರನ್ನು ಒತ್ತಿದರು ಎಂದು ಹೇಳಿರುವುದಿಲ್ಲ. ಪ್ರಾ.ಸಾ.6 ರವರು ದಿನಾಂಕ 22.06.2011 ರಂದು ವಶಪಡಿಸಿಕೊಂಡ ವಸ್ತುಗಳ ಮೇಲೆ ಯಾರು ಮೊಹರನ್ನು ಒತ್ತಿದರು ಎಂಬುದನ್ನು ನೆನಪಿಸಿಕೊಳ್ಳಲಾಗುವುದಿಲ್ಲ. ಹಾಗೆಯೇ, ನಿ.ಪಿ.35 ರಲ್ಲಿನ ನೇಹಾರವರ ವಿವರಣಾ ಹೇಳಿಕೆಯು ಮತ್ತು ದಿನಾಂಕ 23.06.2011 ರಂದು ವಶಪಡಿಸಿಕೊಂಡ ವಸ್ತುಗಳು, ಆ ವಸ್ತುಗಳ ಮೇಲೆ ಯಾರು ಮೊಹರನ್ನು ಒತ್ತಿದರು ಎಂದು ತಿಳಿಸುವುದಿಲ್ಲ. ಮಾನ್ಯ ವಕೀಲರು ಪಂಚ ಸಾಕ್ಷಿಯ ಹೇಳಿಕೆಯನ್ನು ಪ್ರಾ.ಸಾ.12–ತಹಶೀಲ್ದಾರ್ ಮತ್ತು ಪ್ರಾ.ಸಾ.34–ಮುಲಾಯಮ್ ಸಿಂಗ್ ಯಾದವ್ (ಮುಖ್ಯ ಪೇದೆ, ಎಮ್.ಐ.ಜಿ) ರವರ ಸಾಕ್ಷ್ಯದ ಜೊತೆ ಹೊಂದಾಣಿಕೆ ಮಾಡಿರುತ್ತಾರೆ. ಈ ಸಾಕ್ಷಿಗಳು ಮೊಹರು ಮಾಡಿದ ವಿವರಗಳನ್ನು, ಯಾವ ರೀತಿಯ ಮೊಹರುಗಳನ್ನು ಉಪಯೋಗಿಸಲಾಯಿತು ಅಥವಾ ಯಾರಿಂದ ಸಹಿ ಮಾಡಿಸಲಾಯಿತು, ವಸ್ತುಗಳನ್ನು ವಶಪಡಿಸಿಕೊಂಡದರ ಮತ್ತು ಜಪ್ತಾದ ಪ್ರಕ್ರಿಯೆಗೆ ಯಾರು ಸಾಕ್ಷಿಯಾಗಿದ್ದರು ಎಂಬುದರ ಬಗ್ಗೆ ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ ಎಂದು ನಿವೇದಿಸಿರುತ್ತಾರೆ. ಆದ್ದರಿಂದ, ದಿನಾಂಕ 22.06.2011 ರಂದು ವಶಪಡಿಸಿಕೊಂಡವರ ಮೇಲೆ ಅವಲಂಬಿತವಾಗಲು ಆಗುವುದಿಲ್ಲ ಎಂದು ವಾದ ಮಂಡಿಸಲಾಗಿದೆ. ಈ ಎಲ್ಲಾ ಸಾಧ್ಯತೆಗಳಲ್ಲಿ ಆರೋಪಿಗಳು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಅವಧಿಗೆ ಪೊಲೀಸ್ ವಶದಲ್ಲಿದ್ದರು ಎಂಬುದು ಅವರು ನೀಡಿದ ವಿವರಣಾ ಹೇಳಿಕೆಗಳ ಸತ್ಯತೆ ಮತ್ತು ಸ್ವಯಂಪ್ರೇರಿತತೆಯ ಬಗ್ಗೆ

ಅನುಮಾನಗಳನ್ನು ಹುಟ್ಟುಹಾಕುತ್ತವೆ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ. ಅಂತೆಯೇ, ಮಾರನೆಯ ದಿನ ಅಂದರೆ ದಿನಾಂಕ 23.06.2011 ರಂದು ವಶಪಡಿಸಿಕೊಂಡದರ ಮೇಲೆ ಅವಲಂಬಿತವಾಗಲು ಸಾಧ್ಯವಿಲ್ಲ ಏಕೆಂದರೆ ಅದನ್ನು ಪ್ರಾ.ಸಾ.7 ಮತ್ತು ಪ್ರಕಾಶ್ ಇಚ್ಕೆಯವರ ಸಮ್ಮುಖದಲ್ಲಿ ದಾಖಲಿಸಿರುವುದಿಲ್ಲ ಎಂದೂ ಸಹ ಅವರು ನಿವೇದಿಸಿಕೊಂಡಿರುತ್ತಾರೆ. ಪ್ರಾ.ಸಾ.7 ರವರು ಆ ದಿನ ಬೆಳಗ್ಗೆ ಸುಮಾರು 8.15 ಗಂಟೆಗೆ ಪೊಲೀಸ್ ಠಾಣೆಗೆ ಬಂದಿರುತ್ತಾರೆ ಮತ್ತು ವಿವರಣಾ ಹೇಳಿಕೆಗಳನ್ನು ನಿ.ಪಿ.28, ಪಿ.31 ಮತ್ತು ಪಿ.34ರ ಸಾಕ್ಷ್ಯದ ಪ್ರಕಾರ ಬೆಳಗ್ಗೆ ಸುಮಾರು 7.50 ರಿಂದ 8.15 ಗಂಟೆಯ ಅಂತರದಲ್ಲಿ ದಾಖಲಿಸಲಾಗಿರುತ್ತದೆ. ಸಾಕ್ಷಿಗಳ ಸಹಿಯನ್ನು ಆ ದಾಖಲಾತಿಗಳ ಮೇಲೆ ಪಡೆಯಲಾಯಿತು. ಮೌಖಿಕ ಸಾಕ್ಷ್ಯವು, ಉಲ್ಲೇಖಿಸಲಾದ ದಿನಾಂಕ ಮತ್ತು ಸಮಯದಲ್ಲಿ ದಾಖಲಾತಿಗಳನ್ನು ಸಿದ್ಧಪಡಿಸಲಾಯಿತು ಎಂಬುದನ್ನು ದುರ್ಬಲಗೊಳಿಸುತ್ತದೆ ಮತ್ತು ಸುಳ್ಳಾಗಿಸುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ. ಆದ್ದರಿಂದ, ಅದೇ ದಿನ ವಿವರಣಾ ಹೇಳಿಕೆಯ ಅನುಸಾರವಾಗಿ ವಸ್ತುಗಳನ್ನು ವಶಪಡಿಸಿಕೊಂಡಿರುವುದಾಗಿ ಹೇಳಿರುವುದು ಸಂಶಯಾಸ್ಪದವಾಗಿದ್ದು, ಸಾಕ್ಷಿಗಳು ಪೊಲೀಸ್ ಠಾಣೆಯನ್ನು ತಲುಪುವುದಕ್ಕೆ ಮುನ್ನವೇ ವಶಪಡಿಸಿಕೊಳ್ಳಲಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಆರು ಗಂಟೆಗಳ ಅಂತರದ ನಂತರ ಮಧ್ಯಾಹ್ನ ಸುಮಾರು 2.45 ಗಂಟೆಗೆ ವಶಪಡಿಸಿಕೊಳ್ಳಲಾಗಿದೆ ಎಂಬುದು ಮಾನ್ಯ ವಕೀಲರಿಗೆ ಇರುವ ಮತ್ತೊಂದು ಅನುಮಾನಾಸ್ಪದ ಸಂದರ್ಭವಾಗಿರುತ್ತದೆ. ಈ ನಿಟ್ಟಿನಲ್ಲಿ ನಿ.ಪಿ.29, ಪಿ.30, ಪಿ.32, ಪಿ.33 ಮತ್ತು ಪಿ.35ರ ಸಮಯವನ್ನು ತೋರಿಸಲಾಗಿರುತ್ತದೆ. ವಿವರಣಾ ಹೇಳಿಕೆಗಳನ್ನು ಬೆಳಗ್ಗೆ ಸುಮಾರು 8.15 ಗಂಟೆಗೆ ದಾಖಲು ಮಾಡಿಕೊಂಡಿರುವಾಗ, ಆರು ಗಂಟೆಗಳ ಅಂತರದ ನಂತರ ಮಧ್ಯಾಹ್ನ ಏಕೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು ಎಂಬುದರ ಬಗ್ಗೆ ಪೊಲೀಸರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಎಂದು ವಾದ ಮಂಡಿಸಿದ್ದಾರೆ.

23. ದಿನಾಂಕ 22.06.2011 ಮತ್ತು 23.06.2011 ರ ಎರಡೂ ದಿನಪತ್ರಿಕೆಗಳಲ್ಲಿ ವಶಪಡಿಸಿಕೊಂಡ ವಸ್ತುಗಳ ವಿವರಗಳನ್ನು ಪ್ರಕಟಿಸಿದ್ದರಿಂದ, ಆ ವಶಪಡಿಸಿಕೊಳ್ಳುವಿಕೆಯ ಮೇಲೂ ಶಂಕೆಯಾಗುತ್ತದೆ ಎಂದು ಮುಂದುವರಿದು ನಿವೇದಿಸಿಕೊಂಡಿದ್ದಾರೆ. ಆರೋಪಿಗಳಿಂದ

ಪಿಸ್ತೂಲ್ ಮತ್ತು ಚಾಕುವನ್ನು ವಶಪಡಿಸಿಕೊಳ್ಳಲಾಯಿತು ಎಂದು ದಿನಾಂಕ 22.06.2011 ರಲ್ಲಿ ಪ್ರಕಟಿಸಲಾಗಿದ್ದರ ಮೇಲೆ ಅಂದರೆ ನಿ.ಡಿ.4 ರ ಮೇಲೆ ಮಾನ್ಯ ವಕೀಲರು ಅವಲಂಬಿತರಾಗಿರುತ್ತಾರೆ. ಈ ವಶಪಡಿಸಿಕೊಳ್ಳುವಿಕೆಯು ಆ ದಿನ ಬೆಳಗ್ಗೆ ಸುಮಾರು 9.30 ಮತ್ತು 10.35 ಗಂಟೆಗೆ ಮಾಡಲಾಗಿರುತ್ತದೆ. ಅಭಿಯೋಜನೆಯು ಪ್ರತಿಪಾದಿಸಿದಂತೆ, ದಿನಾಂಕ 22.06.2011 ರಂದು ಅನ್ನಪೂರ್ಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ತೆರೆದ ಸ್ಥಳದಿಂದ ವಶಪಡಿಸಿಕೊಳ್ಳಲಾದ ರಾಹುಲ್‌ರವರಿಗೆ ಸೇರಿದ ಶೂ ಬಗ್ಗೆಯೂ ಅನುಮಾನವಿರುತ್ತದೆ ಏಕೆಂದರೆ ಅದು ಪೊಲೀಸ್ ಅಧಿಕಾರಿಗಳ ವಶದಲ್ಲಿರುವಾಗಲೇ ಅದರ ಬಗ್ಗೆ ದಿನಾಂಕ 23.06.2011ರ ದಿನಪತ್ರಿಕೆಯಲ್ಲಿ ಛಾಯಾಚಿತ್ರದೊಂದಿಗೆ ಪ್ರಕಟವಾಗಿರುತ್ತದೆ ಎಂದು ಮಾನ್ಯ ವಕೀಲರು ಬಹುಮುಖ್ಯವಾಗಿ ವಾದ ಮಂಡಿಸಿದ್ದಾರೆ. ಈ ನಿಟ್ಟಿನಲ್ಲಿ ನಿ.ಡಿ.6 ರ ಮೇಲೆ ಅವಲಂಬಿತವಾಗಿರುತ್ತದೆ.

24. ಆರೋಪಿಗಳನ್ನು ದಿನಾಂಕ 23.06.2011 ರಂದು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು ಎಂಬುದನ್ನು ಮುಂದುವರಿದು ಗಮನಿಸಲಾಗಿದೆ. ದಿನಾಂಕ 22.06.2011ರ ಬೆಳಗ್ಗೆ ಬಂಧನ ಮಾಡಲಾಯಿತು ಎಂದು ದಾಖಲೆಗಳು ಬಹಿರಂಗಪಡಿಸುತ್ತವೆ ಮತ್ತು ಆರೋಪಿಗಳು ನೀಡಿದ ವಿವರಣಾ ಹೇಳಿಕೆಗಳಿಗೆ ಅನುಸಾರವಾಗಿ ವಿವಿಧ ವಸ್ತುಗಳನ್ನು ಜಪ್ತಿಮಾಡಿಕೊಳ್ಳಲಾಯಿತು ಮತ್ತು ಪರಿಣಾಮವಾಗಿ ಅವುಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ದಾಖಲೆಗಳು ಬಹಿರಂಗಪಡಿಸುತ್ತದೆ. ಆದಾಗ್ಯೂ, ಈ ಯಾವ ವಸ್ತುಗಳನ್ನೂ ಮ್ಯಾಜಿಸ್ಟ್ರೇಟ್‌ರವರಿಗೆ ತೋರಿಸುವುದಿಲ್ಲ ಅಥವಾ ದಿನಾಂಕ 23.06.2011 ರಂದು ಆರೋಪಿಗಳನ್ನು ಹಾಜರುಪಡಿಸುವ ಸಂದರ್ಭದಲ್ಲಿ ಮ್ಯಾಜೆಸ್ಟ್ರೇಟ್‌ರ ಮುಂದೆ ಯಾವುದೇ ಮೆಮೊವನ್ನು ಹಾಜರುಪಡಿಸಿರುವುದಿಲ್ಲ. ಪ್ರತಿ ಪೊಲೀಸ್ ಅಧಿಕಾರಿಯು ಜಪ್ತಿ ಮಾಡಿದ ಯಾವುದೇ ವಸ್ತುವಿನ ಬಗ್ಗೆ ತಕ್ಷಣವೇ ನ್ಯಾಯವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟ್‌ಗೆ ವರದಿಯನ್ನು ಸಲ್ಲಿಸಬೇಕು ಎಂದು ಹೇಳುವ ದಂಡ ಪ್ರಕ್ರಿಯಾ ಸಂಹಿತೆಯ 102 (3) ನೇ ಪ್ರಕರಣಕ್ಕೆ ಈ ಪ್ರಕ್ರಿಯಲ್ಲಿನ ಅಕ್ರಮವು ವಿರುದ್ಧವಾಗಿರುತ್ತದೆ ಎಂಬುದನ್ನು ಮಾನ್ಯ ಹಿರಿಯ ವಕೀಲರು ಎತ್ತಿ ತೋರಿಸಿರುತ್ತಾರೆ. ಮಾನ್ಯ ವಕೀಲರು *ಉಮೇಶ್ ತುಕಾರಂ ಪಡವಾಲ್* ಮತ್ತು

ಮತ್ತೊಬ್ಬರು ವಿರುದ್ಧ ಮಹಾರಾಷ್ಟ್ರ ರಾಜ್ಯ[8] ಮೊಕದ್ದಮೆಯ ಮೇಲೆ ಅವಲಂಬಿತವಾಗಿದ್ದು, ಅಭಿಯೋಜನೆಯ ವಾದಕ್ಕೆ ಈ ಅನನುಪಾಲನೆಯು ಮಾರಕವಾಗಿರುತ್ತದೆ ಎಂದು ಹೇಳಿರುತ್ತಾರೆ.

25. ಪ್ರಾ.ಸಾ.10–ದಿಲೀಪ್ ಸೇನ್‌ರವರು ಒಬ್ಬ ಆಕಸ್ಮಿಕ ಸಾಕ್ಷಿಯಾಗಿದ್ದು ಅವರ ಸಾಕ್ಷ್ಯವು ವಿಶ್ವಾಸಾರ್ಹವಲ್ಲ ಏಕೆಂದರೆ ಅದು ವಿರೋಧಾಭಾಸ ಮತ್ತು ಪ್ರಮುಖ ಸುಧಾರಣೆಯನ್ನು ಹೊಂದಿರುತ್ತವೆ ಎಂದೂ ಸಹ ಶ್ರೀಮತಿ. ಪ್ರಕಾಶ್‌ರವರು ವಾದ ಮಂಡಿಸಿದ್ದಾರೆ. ಎಲ್ಲಾ ಮೂವರು ಆರೋಪಿಗಳನ್ನು ನೋಡಿದ ಬಗ್ಗೆ ಪೊಲೀಸರಿಗೆ ವರದಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಪ್ರಮುಖವಾದ ವಿರೋಧಾಭಾಸವನ್ನು ಒಳಗೊಂಡಿದೆ. ಈ ಘಟನೆಯ ಬಗ್ಗೆ ದಿನಪತ್ರಿಕೆಯಲ್ಲಿ ಓದಿದ್ದೇನೆ ಮತ್ತು ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದೇನೆ ಎಂದು ಅವರು ತನ್ನ ಮುಖ್ಯ–ವಿಚಾರಣೆಯಲ್ಲಿ ನುಡಿದಿದ್ದಾರೆ. ಆದರೆ ಪಾಟೀ–ಸವಾಲಿನಲ್ಲಿ, ತಾನು ದಿನಪತ್ರಿಕೆಯನ್ನು ಓದಿರುವುದಿಲ್ಲ ಮತ್ತು ದಿನಪತ್ರಿಕೆಯನ್ನು ಓದದೆ ಪೊಲೀಸ್ ಠಾಣೆಗೆ ಹೋದೆನು ಎಂದು ನುಡಿದಿದ್ದಾರೆ. ಅವರು ಮತ್ತೊಂದು ಕಾರಣಕ್ಕಾಗಿ (ಗುಮಾಸ್ತ ಪರವಾನಗಿ ಪಡೆಯಲು) ಪೊಲೀಸ್ ಠಾಣೆಗೆ ಹೊಗಿದ್ದನ್ನು ಉಲ್ಲೇಖಿಸುತ್ತಾರೆ ಮತ್ತು ಈ ಮೊಕದ್ದಮೆಯ ಬಗ್ಗೆ ಅಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಆಲಿಸಿದ ನಂತರ, ಅವರು ಸ್ವಯಂಪ್ರೇರಿತರಾಗಿ ಮಾಹಿತಿಯನ್ನು ನೀಡಿರುವುದಾಗಿ ಹೇಳಿದ್ದಾರೆ. ಮುಂದುವರಿದು, ಅಪರಾಧದ ದೃಶ್ಯದ ವಿವರಣೆಯನ್ನು ಗಮನಿಸಿದರೆ, ಆರೋಪಿ ಬಟ್ಟೆಗಳಿಗೂ ರಕ್ತದ ಕಲೆಯಾಗಬೇಕಿತ್ತು ಆದ್ದರಿಂದ ಆತನ ಸಾಕ್ಷ್ಯವನ್ನು ನಂಬಲಾಗುವುದಿಲ್ಲ. ಘಟನೆಯ ದಿನ ಆರೋಪಿಗಳು ಧರಿಸಿದ್ದ ಬಟ್ಟೆಗಳು ತಿಳಿ ಬಣ್ಣಗಳದಾಗಿದ್ದು ಅದರ ಮೇಲೆ ರಕ್ತವು ಸುಲಭವಾಗಿ ಗೋಚರಿಸುತ್ತದೆ ಎಂಬುದನ್ನು ಆರೋಪಿಗಳ ಬಟ್ಟೆಗಳನ್ನು ವಶಪಡಿಸಿಕೊಂಡ ಮೆಮೊಗಳು (ನಿ.ಪಿ.29, ಪಿ.32 ಮತ್ತು ಪಿ.35) ತೋರಿಸುತ್ತದೆ. ಇದಲ್ಲದೆ, ಮನೆ ಸಂಖ್ಯೆ.23 ಬಾಡಿಗೆಗೆ ದೊರೆಯುತ್ತದೆಯೇ ಎಂಬುದನ್ನು ವಿಚಾರಿಸುವ ಸಲುವಾಗಿ ಪ್ರಾ.ಸಾ.10 ಘಟನಾ ಸ್ಥಳದಲ್ಲಿ ಉಪಸ್ಥಿತಿಯಿದ್ದರು ಎಂದು ವಿವರಣೆಯನ್ನು ನೀಡಿದರು. ಆದಾಗ್ಯೂ, ಅಭಿಯೋಜನೆಯು ಅವರು ಘಟನಾ ಸ್ಥಳದಲ್ಲಿ ಉಪಸ್ಥಿತಿಯಿದ್ದರು ಎಂಬುದನ್ನು ಸಮರ್ಪಕವಾಗಿ ಸಾಬೀತುಪಡಿಸಿರುವುದಿಲ್ಲ ಏಕೆಂದರೆ ಮನೆ

8. (2019) 8 ಎಸ್‌ಸಿಸಿ 567

ಸಂಖ್ಯೆ.23 ರ ಮಾಲೀಕರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ ಮತ್ತು ಪ್ರಾ.ಸಾ.10 ಘಟನಾ ಸ್ಥಳದಲ್ಲಿ ಉಪಸ್ಥಿತಿಯಿದ್ದರು ಎಂಬುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಇತರ ಸಾಕ್ಷ್ಯವು ಕಾರಣವಾಗಿರುವುದಿಲ್ಲ. ಸ್ಥಳದಲ್ಲಿ ನೇಹಾರವರು ಉಪಸ್ಥಿತಿಯಿದ್ದರು ಎಂಬುದಕ್ಕೆ ಸಂಬಂಧಿಸಿದಂತೆ ಪ್ರಾ.ಸಾ.10 ರವರು ದಂಡ ಪ್ರಕ್ರಿಯಾ ಸಂಹಿತೆಯ 161 ನೇ ಪ್ರಕರಣದ (ನಿ.ಡಿ.7) ಅಡಿಯಲ್ಲಿ ನೀಡಿದ ಹೇಳಿಕೆಯಿಂದ ಸಾಕಷ್ಟು ಸುಧಾರಿಸಿರುತ್ತಾರೆ. ಅಂತೆಯೇ, ಪ್ರಾ.ಸಾ.8–ಅಚ್ಯುತ್‌ಮಾಲ್ ತೇಜ್ವಾನಿ (ಮನೋಜ್‌ರವರಿಗೆ ಚಿಕಿತ್ಸೆ ನೀಡಿದ್ದಾರೆ ಎಂದು ಹೇಳಲು ಅಭಿಯೋಜನೆಯು ಅವರ ಹೇಳಿಕೆಯ ಮೇಲೆ ಅವಲಂಬಿತವಾಗಿರುತ್ತದೆ) ಅವರದ್ದು ವಿಶ್ವಾಸಾರ್ಹವಲ್ಲದ ಸಾಕ್ಷಿ ಎಂದು ಮಾನ್ಯ ವಕೀಲರು ನಿವೇದಿಸಿದ್ದಾರೆ. ಅವರ ವೈದ್ಯಕೀಯ ವೃತ್ತಿಯ ವಿದ್ಯಾರ್ಹತೆಯೇ ವಿಶ್ವಾಸಾರ್ಹವಾಗಿರುವುದಿಲ್ಲ ಮತ್ತು ಮಾನ್ಯ ವಕೀಲರು ಸಾಕ್ಷಿಯ ಪಾಟೀ–ಸವಾಲಿನ ಮೇಲೆ ಅವಲಂಬಿತವಾಗಿದ್ದು, ಈ ಸಾಕ್ಷಿಯು ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದಿರುತ್ತಾರೆ ಮತ್ತು ಎಲ್ಲಾ ಸಂಭವನೀಯತೆಯಲ್ಲಿ ಪೊಲೀಸರಿಗೆ ಬಾಧ್ಯರಾಗಿರುತ್ತಾರೆ ಎಂದು ನಿವೇದಿಸಿಕೊಂಡಿದ್ದಾರೆ.

26. ಗುರುತು ಹಚ್ಚುವ ಕಾವಾಯತ್ತನ್ನು (ಟಿ.ಐ.ಪಿ) ನಡೆಸುವಲ್ಲಿ 25 ದಿನಗಳ ವಿಳಂಬದ ಬಗ್ಗೆ ವಿವರಿಸಲಾಗಿಲ್ಲ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ. ಆರೋಪಿಗಳ ಅನಾವರಣಗೊಂಡ ಭಾವಚಿತ್ರಗಳು ದಿನಾಂಕ 23.06.2011 ರ ದಿನಪತ್ರಿಕೆಯಿಂದ ಪ್ರಕಟಗೊಂಡಿದ್ದರಿಂದ ಈ ವಿಳಂಬವು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ, ಭಾವಚಿತ್ರವನ್ನು ಒಳಗೊಂಡಂತೆ ದಿನಪತ್ರಿಕೆಯ ಲೇಖನಿಗಳಾದ ನಿ.ಡಿ.6, ಡಿ.45 ಮತ್ತು ಡಿ.48 ಮೇಲೆ ಅವಲಂಬಿತವಾಗಿರುತ್ತದೆ. ಮುಂದುವರಿದು, ರಾಹುಲ್ ಮತ್ತು ಮನೋಜ್‌ರವರನ್ನು ಗುರುತು ಹಚ್ಚುವ ಕಾವಾಯತ್ತಿಯಲ್ಲಿ ಒಟ್ಟಿಗೆ ಒಂದೇ ಸಾಲಿನಲ್ಲಿ ನಿಲ್ಲಿಸಿದ್ದರಿಂದ ಗುರುತು ಹಚ್ಚುವ ಕವಾಯತ್ತಿನ ಕರ್ಯವಿಧಾನವು ಪ್ರಶ್ನಾರ್ಹವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ಗುರುತು ಹಚ್ಚುವ ಮೆಮೊದಲ್ಲಿ ಬೇರೆ ಇತರ ವ್ಯಕ್ತಿಗಳ ಹಾಜರಿಯನ್ನು ದಾಖಲಿಸಿರುವುದಿಲ್ಲ. ಶ್ರೀಮತಿ. ಪ್ರಕಾಶ್‌ರವರು ರಾಹುಲ್ ಮತ್ತು ಮನೋಜ್‌ರವರು ನೋಡಲು ಒಂದೇ ತರಹ ಇರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ ಮತ್ತು ತಮ್ಮ ವಾದಕ್ಕೆ ಪೂರಕವಾಗಿ ನಿ.ಪಿ.12

ಮತ್ತು ಪಿ.15–ಬಂಧನ ಮೆಮೊಗಳ ಮೇಲೆ ಅವಲಂಬಿತರಾಗಿರುತ್ತಾರೆ. ಕೆಲವು ವ್ಯಕ್ತಿಗಳು ಎತ್ತರವಾಗಿದ್ದರು, ಇತರರು ಕುಳ್ಳಗಿದ್ದರು, ಕೆಲವು ವ್ಯಕ್ತಿಗಳು ಶ್ವೇತ ವರ್ಣದವರಾಗಿದ್ದರೆ ಕೆಲವು ಕಪ್ಪಗಿದ್ದರು ಎಂದು ಪ್ರಾ.ಸಾ.10 ತಮ್ಮ ಪಾಟೀ–ಸವಾಲಿನಲ್ಲಿ ನುಡಿದಿರುತ್ತಾರೆ. ಆದ್ದರಿಂದ, ಒಟ್ಟಿಗೆ ನಡೆದ ಟಿ.ಐ.ಪಿ.ಯ ಕಾರ್ಯವಿಧಾನವು ದೋಷಪೂರಿತವಾಗಿದೆ ಮತ್ತು ಅದನ್ನು ಅವಲಂಬಿಸಲಾಗುವುದಿಲ್ಲ. ಈ ನಿಟ್ಟಿನಲ್ಲಿ *ಲಾಲ್ ಸಿಂಗ್ ಮತ್ತು ಇತರರು ವಿರುದ್ಧ ಯು.ಪಿ. ರಾಜ್ಯ*[9], *ಮುತ್ತುಸ್ವಾಮಿ ವಿರುದ್ಧ ಮದ್ರಾಸ್ ರಾಜ್ಯ*[10] ಮತ್ತು *ಮೊಹಮದ್ ಅಬ್ದುಲ್ ಹಫೀಜ್ ವಿರುದ್ಧ ಆಂಧ್ರಪ್ರದೇಶ ರಾಜ್ಯ*[11] ಮೊಕದ್ದಮೆಗಳ ಮೇಲೆ ಮಾನ್ಯ ವಕೀಲರು ಅವಲಂಬಿತರಾಗಿದ್ದು, ವೈಯಕ್ತಿಕ ವಿಶಿಷ್ಟ ಲಕ್ಷಣಗಳ ಅನುಪಸ್ಥಿತಿಯಲ್ಲಿ, ಬಹಳ ಸುದೀರ್ಘ ಸಮಯದ ನಂತರ ನಡೆಸಲಾದ ಆರೋಪಿಗಳ ಟಿ.ಐ.ಪಿ.ಯ ಮೇಲೆ ನ್ಯಾಯಾಲಯಗಳು ಅವಲಂಬಿತವಾಗಬಾರದು ಎಂದು ಹೇಳುತ್ತಾರೆ.

27. ನಿ.ಪಿ.12–ಬಂಧನ ಮೆಮೊವನ್ನು ದಿನಾಂಕ 22.06.2011 ರಂದು ತಯಾರಿಸುವವರೆಗೂ ಎಲ್ಲಾ ದಾಖಲಾತಿಗಳಲ್ಲಿ "ಗೋವಿಂದ್" ಎಂದು ಉಲ್ಲೇಖಿಸಲಾದ ರಾಹುಲ್‌ರವರ ಗುರುತಿನ ಬಗ್ಗೆ ಗಂಭೀರವಾದ ಅನುಮಾನವಿದೆ ಎಂದು ಮಾನ್ಯ ಹಿರಿಯ ವಕೀಲರು ನಿವೇದಿಸಿಕೊಂಡಿದ್ದಾರೆ. ಬಂಧನ ಮೆಮೊದಲ್ಲಿ ರಾಹುಲ್ 'ಅಲಿಯಾಸ್' ಎಂದು ಯಾವ ಕಾರಣಕ್ಕೆ ಬಳಸಲಾಯಿತು ಎಂಬುದಕ್ಕೆ ಯಾವುದೇ ಕಾರಣವಿರುವುದಿಲ್ಲ. ಇದು ವ್ಯಕ್ತಿಯ ಗುರುತಿನ ಬಗ್ಗೆ ಅನುಮಾನವನ್ನು ಹುಟ್ಟುಹಾಕುತ್ತದೆ. ಗುಂಡಿನ ಗಾಯಕ್ಕೆ ನೀಡಿದ ವೈದ್ಯಕೀಯ ಚಿಕಿತ್ಸೆಯ ಎಲ್ಲಾ ದಾಖಲಾತಿಗಳಲ್ಲೂ ಮತ್ತು ಮೊಕದ್ದಮೆಯ ಪ್ರಕ್ರಿಯೆಯಲ್ಲೂ (ಪ್ರಾ.ಸಾ.29 ರವರು ಘಟನೆ ನಡೆದ ದಿನಾಂಕದಂದೆ ದಾಖಲಿಸಿದ ಕ್ರಿ.ಸಂಖ್ಯೆ: 377/2011) ಆತನನ್ನು 'ಗೋವಿಂದ್' ಎಂದು ಉಲ್ಲೇಖಿಸಲಾಗಿರುತ್ತದೆ. ಅವುಗಳೆಂದರೆ ನಿ.ಪಿ.103 ಅಂದರೆ

9. 2003 (12) ಎಸ್‌ಸಿಸಿ 554
10. ಎಐಆರ್ 1954 ಎಸ್‌ಸಿ 4
11. (1983) 1 ಎಸ್‌ಸಿಸಿ 143

ದಿನಾಂಕ 19.06.2011 ರಂದು ರಾತ್ರಿ ಸುಮಾರು 10.30 ಗಂಟೆಗೆ ನೀಡಿದ ಪ್ರಥಮ ವರ್ತಮಾನ; ನಿ.ಪಿ.97–ಜಿಲ್ಲಾ ಆಸ್ಪತ್ರೆಗೆ ಪೊಲೀಸರು ಬರೆದ ಪತ್ರ ಮತ್ತು ಆತನನ್ನು ಪರೀಕ್ಷಿಸಿದ ನಂತರ ಆತನನ್ನು ಎಮ್.ವೈ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಇಂದೋರ್‌ನ ಜಿಲ್ಲಾ ಆಸ್ಪತ್ರೆಯು ನೀಡಿದ ವರದಿ; ನಿ.ಪಿ.104–ದಿನಾಂಕ 19.06.2011 ರಂದು ರಾತ್ರಿ ಸುಮಾರು 11.00 ಗಂಟೆಗೆ ದಾಖಲಿಸಲಾದ ಅಪರಾಧದ ವಿವರಗಳು; ನಿ.ಪಿ.105–ದಿನಾಂಕ 20.06.2011 ರಂದು ಮಧ್ಯರಾತ್ರಿ 12.15 ಗಂಟೆಗೆ ಗುಂಡಿನ ದಾಳಿಯ ಘಟನೆಗೆ ಸಂಬಂಧಿಸಿದ ಎಫ್.ಐ.ಆರ್; ನಿ.ಪಿ.101–ದಿನಾಂಕ 29.06.2011 ರಂದು ತಯಾರಿಸಲಾದ ಮೊಕದ್ದಮೆಯ ಮುಕ್ತಾಯ ವರದಿ ಮತ್ತು ನಿ.ಪಿ.113–ದಿನಾಂಕ 20.06.2011 ರಂದು ಪ್ರಾ.ಸಾ.32–ಡಾ. ನಿಲೇಶ್ ಗುರು ಎಮ್.ವೈ ಆಸ್ಪತ್ರೆಯಲ್ಲಿ ಸಹಿ ಮಾಡಿದವು ಆ ದಾಖಲಾತಿಗಳಾಗಿರುತ್ತದೆ.

28. ರಾಹುಲ್‌ಗೆ ಚಿಕಿತ್ಸೆ ನೀಡಿದ ವೈದ್ಯರು (ಪ್ರಾ.ಸಾ.26 ಮತ್ತು ಪ್ರಾ.ಸಾ.32) ಆತನನ್ನು ಗುರುತುಹಿಡಿಯದಿರುವುದು ಅಥವಾ ಪ್ರಾ.ಸಾ.10–ಆರ್.ಎಸ್. ಮಕ್ವಾನಾ ರವರು (ಅನ್ನಪೂರ್ಣ ಪೊಲೀಸ್ ಠಾಣೆಯ) ಟಿ.ಐ.ಪಿ ಅಥವಾ ನ್ಯಾಯಾಲಯದಲ್ಲಿ ಆತನನ್ನು ಗುರುತುಹಿಡಿಯದಿರುವುದು ಒಂದು ಕಡೆಯಾದರೆ, ಪ್ರಾ.ಸಾ.29–ಗೌರಿಶಂಕರ್ ಚಾದರ್‌ರವರು (ಅನ್ನಪೂರ್ಣ ಪೊಲೀಸ್ ಠಾಣೆಯ) ಆತನನ್ನು ನ್ಯಾಯಾಲಯದಲ್ಲಿ ಗೋವಿಂದ್ @ ರಾಹುಲ್ ಎಂದು ಗುರುತುಹಿಡಿದಿರುವುದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ. ರಾಹುಲ್‌ರವರನ್ನು ಎಮ್.ವೈ. ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು, ಆದ್ದರಿಂದ ಆತನಿಗೆ ಚಿಕಿತ್ಸೆ ಕೊಟ್ಟ ವೈದ್ಯರಿಗೆ, ದಾದಿಯರಿಗೆ ಮತ್ತು ಇತರೆ ಆಸ್ಪತ್ರೆಯ ಸಿಬ್ಬಂದಿಗಳಿಗೆ ಆತನನ್ನು ಗುರುತುಹಿಡಿಯಲು ಸಾಕಷ್ಟು ಅವಕಾಶವಿರುತ್ತದೆ. ಆದರೆ ಹಾಗೆ ಮಾಡುವುದನ್ನು ಬಿಟ್ಟಿರುವುದರಿಂದ ಗಂಭೀರ ಅನುಮಾನವನ್ನು ಹುಟ್ಟುಹಾಕುತ್ತದೆ.

29. ಆಸ್ಪತ್ರೆಗೆ ದಾಖಲಾಗಿದ್ದಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ಹತ್ತಿಕ್ಕಲಾಗಿದೆ ಎಂದು ಶ್ರೀಮತಿ. ಪ್ರಕಾಶ್‌ರವರು ವಾದ ಮಂಡಿಸಿದ್ದಾರೆ. ಈ ನಿಟ್ಟಿನಲ್ಲಿ ನಿ.ಪಿ.113 ಆಸ್ಪತ್ರೆಗೆ ದಾಖಲಾದ ದಿನಾಂಕವಾದ 20.06.2011 ನ್ನು ಮಾತ್ರ ಉಲ್ಲೇಖಿಸುತ್ತದೆ ಮತ್ತು ರೋಗಿಯ ಹೆಸರನ್ನು ಗೋವಿಂದ್ ಎಂದು ಉಲ್ಲೇಖಿಸುತ್ತದೆ ಎಂಬುದನ್ನು ಗಮನಿಸಬೇಕಾಗಿರುತ್ತದೆ. ಆತನಿಗೆ ನೀಡಿದ ಚಿಕಿತ್ಸೆಯ ಬಗ್ಗೆ ಅಥವಾ ಆತನನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿದ ಸಮಯದ ಬಗ್ಗೆ ಯಾವುದೇ ಮಾಹಿತಿಯು ದಾಖಲೆಯಲ್ಲಿ ಇರುವುದಿಲ್ಲ. ಚಿಕಿತ್ಸೆ ಪಡೆದ ವ್ಯಕ್ತಿನ ಗುರುತನ್ನು ಸಾಬೀತುಪಡಿಸಲು ಆಸ್ಪತ್ರೆಯ ಯಾರೊಬ್ಬರೂ ಹೇಳಿಕೆ ನೀಡದಿರುವುದು ಹೆಚ್ಚು ಮಹತ್ವದ್ದಾಗಿರುತ್ತದೆ. ಅಂತೆಯೇ, ರಾಹುಲ್‌ನಿಂದ ಹೊರತೆಗೆಯಲಾದ ಬುಲೆಟ್ ಅನ್ನು ವಶಪಡಿಸಿಕೊಂಡ ಸರಣಿಯ ಬಗ್ಗೆಯೂ ಸಾಬೀತಾಗಿರುವುದಿಲ್ಲ. ಈ ನಿಟ್ಟಿನಲ್ಲಿ, ಪ್ರಾ.ಸಾ.32– ಡಾ. ನಿಲೇಶ್ ಗುರು ಅವರು ಬುಲೆಟ್ಟನ್ನು ಹೊರತೆಗೆದು ದಿನಾಂಕ 20.06.2011 ರಂದು ಎಮ್.ವೈ. ಆಸ್ಪತ್ರೆಯ ಮೆಡಿಕೊ–ಲೀಗಲ್ ವಿಭಾಗದಲ್ಲಿ ಇರಿಸಲಾಗಿತ್ತು ಎಂದು ವಾದ ಮಂಡಿಸಿದ್ದಾರೆ. ಆತನು ಬುಲೆಟ್ಟನ್ನು ಮೊಹರು ಮಾಡಿದ ಬಗ್ಗೆ ನುಡಿದಿರುವುದಿಲ್ಲ. ದಿನಾಂಕ 23.06.2011 ರಂದು ಅಪರಿಚಿತ ವೈದ್ಯರಿಂದ ಪ್ರಾ.ಸಾ.30 ರವರು ಎಮ್.ವೈ ಆಸ್ಪತ್ರೆಯಿಂದ ಮೊಹರು ಮಾಡಿದ ಬುಲೆಟ್ಟನ್ನು ಸಂಗ್ರಹಿಸಿರುತ್ತಾರೆ. ಪ್ರಾ.ಸಾ.30 ರ ಸಮ್ಮುಖದಲ್ಲಿ ಬುಲೆಟ್ಟನ್ನು ಮೊಹರು ಮಾಡಿರುವುದಿಲ್ಲ. ಆದುದರಿಂದ, ಯಾರು ಯಾವಾಗ ಬುಲೆಟ್ಟನ್ನು ಮೊಹರು ಮಾಡಿದರು ಎಂಬುದನ್ನು ಸಾಬೀತುಪಡಿಸಲು ದಾಖಲೆಯಲ್ಲಿ ಯಾವುದೇ ಸಾಕ್ಷ್ಯವಿರುವುದಿಲ್ಲ. ಅಪೀಲುದಾರ ಸಂಖ್ಯೆ–2 ರಾಹುಲ್ @ ಗೋವಿಂದ್‌ರವರು ಆಸ್ಪತ್ರೆಗೆ ದಾಖಲಾಗಿದ್ದರಿಂದ ಅವರಿಗೆ ಆದ ಗಾಯಗಳು ಗೋಚರಿಸುತ್ತಿದ್ದವು ಆದರೆ ದಿನಾಂಕ 23.06.2011 ರಂದು ಮ್ಯಾಜಿಸ್ಟ್ರೇಟ್‌ರವರು ಹೊರಡಿಸಿದ ರಿಮಾಂಡ್ ಆದೇಶದಲ್ಲಿ ಯಾವುದೇ ಗಾಯಗಳ ಬಗ್ಗೆ ಉಲ್ಲೇಖಿಸುವುದನ್ನು ಬಿಡಲಾಗಿದೆ ಎಂದು ವಾದ ಮಂಡಿಸಿದ್ದಾರೆ. ಮುಂದುವರೆದು, ಅಧಿವಿಚಾರಣೆಯ ಸಂದರ್ಭದಲ್ಲಿ ಆರೋಪಿಗಳ ಯಾವುದೇ ಎಮ್.ಎಲ್.ಸಿ. ಯನ್ನು ಹಾಜರುಪಡಿಸಿರುವುದಿಲ್ಲ. ಸುಳ್ಳು ಮೊಕದ್ದಮೆಯ ವರದಿ ಮತ್ತು ವೈದ್ಯಕೀಯ ಚಿಕಿತ್ಸೆಯನ್ನು ಪಡೆದುಕೊಂಡಿದ್ದು ಮತ್ತು ರಾಹುಲ್‌ರವರ ಗುಂಡಿನ ಬಗ್ಗೆ ಜಾಗರೂಕತೆಯಿಂದ ಇರುವಂತೆ

ಅನ್ನಪೂರ್ಣ ಪಿ.ಎಸ್.ಗೆ ತಿಳಿಸಿರುವ ಬಗ್ಗೆ ಅಭಿಯೋಜನೆಯ ವರದಿಯು ವಿಶ್ವಾಸಾರ್ಹವಲ್ಲ ಎಂದೂ ಸಹ ವಾದ ಮಂಡಿಸಿದ್ದಾರೆ. ಅದನ್ನು ಅನ್ನಪೂರ್ಣ ಪಿ.ಎಸ್.ನಲ್ಲಿ ತಯಾರಿಸಲಾಯಿತು ಎಂದು ನಿ.ಪಿ.97 ತೋರಿಸುತ್ತದೆ. ಗೋವಿಂದ್‌ರವರನ್ನು 'ರವಾನೆ ಪತ್ರದೊಂದಿಗೆ' ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದು, ಅದರಲ್ಲಿ ಗಾಯವು ಸ್ವತಃ ಉಂಟಾಗಿದೆಯೇ ಎಂಬ ಬಗ್ಗೆ ಅಭಿಪ್ರಾಯವನ್ನು ಕೋರುವ ಟಿಪ್ಪಣಿ ಇದೆ ಎಂಬುದನ್ನು ದಾಖಲೆಯು ತೋರಿಸುತ್ತದೆ. ರಾಹುಲ್ @ ಗೋವಿಂದ್‌ರವರು ಜಿಲ್ಲಾ ಆಸ್ಪತ್ರೆಗೆ ಹೋಗುತ್ತಿರುವುದಾಗಿ ಪೊಲೀಸರನ್ನು ಕೂಗಿ ಎಚ್ಚರಿಸಿದ್ದಾರೆ ಎಂಬ ಪ್ರಾ.ಸಾ.29 ರ ಕಥೆಯನ್ನು ಇದು ನೇರವಾಗಿ ವಿರೋಧಿಸುತ್ತದೆ.

30. ನಿ.ಪಿ.104 ರ ಪ್ರಕಾರ, ದಿನಾಂಕ 19.06.2011 ರಂದು ತಯಾರಿಸಲಾದ ಘಟನಾ ಸ್ಥಳದ ನಕಾಶೆ ಮೇಲೆ ರಾತ್ರಿ ಸುಮಾರು 11.00 ಗಂಟೆಗೆ ರಾಹುಲ್‌ರವರು ಸಹಿ ಮಾಡಿರುತ್ತಾರೆ. ಆದಾಗ್ಯೂ, ರಾಹುಲ್‌ರವರು ಗಾಯಗೊಂಡ ಪಾದಕ್ಕೆ ಚಿಕಿತ್ಸೆ ಪಡೆಯಲು ಹೋಗುತ್ತಿದ್ದರು ಮತ್ತು ಆ ಸಮಯದಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು ಎಂಬುದೂ ಸಹ ಅಭಿಯೋಜನೆಯ ವಾದವಾಗಿರುತ್ತದೆ. ಪೇದೆ ದಿನೇಶರವರು ರಾಹುಲ್‌ರವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದರು ಮತ್ತು ಆನಂತರ ಎಮ್.ವೈ.ಆಸ್ಪತ್ರೆಗೆ ಕರೆದೊಯ್ದರು ಎಂದು ತೋರಿಸಲಾಗಿದೆ. ಆದರೆ ಆ ಪೇದೆಯನ್ನು ವಿಚಾರಣೆಗೊಳಪಡಿಸಿರುವುದಿಲ್ಲ ಮತ್ತು ಆತನನ್ನು ವಿಚಾರಣೆ ಮಾಡದಿರುವುದಕ್ಕೆ ಯಾವುದೇ ಕಾರಣವನ್ನೂ ನೀಡಿರುವುದಿಲ್ಲ. ರಾಹುಲ್‌ರವರು ಗುಂಡೇಟಿನ ಗಾಯದೊಂದಿಗೆ ಹೇಗೆ ಜಿಲ್ಲಾ ಆಸ್ಪತ್ರೆಯಿಂದ ಎಮ್.ವೈ.ಆಸ್ಪತ್ರೆಗೆ ಹೋದರು ಅಥವಾ ಅವರನ್ನು ಜಿಲ್ಲಾ ಆಸ್ಪತ್ರೆಯಿಂದ ಎಮ್.ವೈ.ಆಸ್ಪತ್ರೆಗೆ ಯಾರು ಕರೆದುಕೊಂಡು ಹೋದರು ಮತ್ತು ಯಾರು ಎಕ್ಸ್-ರೇ ಮಾಡಿದರು ಎಂಬುದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ.

31. ಬಲಗಾಲಿನ ಬೂಟಿನ ಜಪ್ತಿ ಮೆಮೊಗೆ ಸಂಬಂಧಿಸಿದಂತೆ, ಅಭಯ್ ತಿವಾರಿಯವರ ಕೋರಿಕೆಯ ಮೇರೆಗೆ ಅನ್ನಪೂರ್ಣ ಪಿ.ಎಸ್.ನಲ್ಲಿ ಆ ಮೆಮೊವನ್ನು (ನಿ.ಪಿ.75)

ತಯಾರಿಸಲಾಯಿತು ಮತ್ತು ಆತನನ್ನೂ ಸಹ ಅಭಿಯೋಜನೆಯು ವಿಚಾರಣೆಗೆ ಒಳಪಡಿಸಿರುವುದಿಲ್ಲ ಎಂದು ಮುಂದುವರಿದು ವಾದ ಮಂಡಿಸಲಾಗಿದೆ. ಇದು ದಾಖಲಾತಿಯಲ್ಲಿನ ವಿಷಯಗಳನ್ನು ಸ್ವೀಕಾರಾರ್ಹವಲ್ಲದಂತೆ ಮಾಡುತ್ತದೆ. ಪ್ರಾ.ಸಾ.20 ಹರ್ಭಜನ್ ಸಿಂಗ್‌ರವರಿಗೆ 'ಶೂ' ಮೇಲಿನ ಲೋಗೋ ನೆನಪಿರುವುದಿಲ್ಲ. ಶೂ ಯಾವ ಪಾದಕ್ಕೆ (ಎಡ ಅಥವಾ ಬಲ ಕಾಲು) ಹೊಂದಿಕೆಯಾಗಿದೆ ಅಥವಾ ಅದರ ಅಳತೆಯೆಷ್ಟು ಎಂಬುದರ ಬಗ್ಗೆಯೂ ಅವರು ನುಡಿದಿರುವುದಿಲ್ಲ. ಅದು ಕ್ರೀಡೆಯ ಅಥವಾ ಚರ್ಮದ ಶೂ ಮತ್ತು ಅದರ ಲೇಸ್‌ಗಳ ಬಗ್ಗೆಯೂ ಅವರು ಏನನ್ನು ಹೇಳಿರುವುದಿಲ್ಲ. ಪ್ರಾ.ಸಾ.20 ರವರು ಅದನ್ನು ಅವರ ಸಮ್ಮುಖದಲ್ಲಿ ಜಪ್ತಿ ಮಾಡಲಾಯಿತು ಎಂದು ನುಡಿದಿದ್ದಾರೆ; ಆದಾಗ್ಯೂ, ಅದನ್ನು ಅವರ ಸಮ್ಮುಖದಲ್ಲಿ ಮೊಹರು ಮಾಡಲಾಯಿತೆ ಎಂಬುದನ್ನು ಉಲ್ಲೇಖಿಸಿರುವುದಿಲ್ಲ. ಅಭಯ್ ತಿವಾರಿಯವರು ಶೂವನ್ನು ಪತ್ತೆಮಾಡಿದ್ದಾರೆ ಎಂದು ಮಾತ್ರ ಪ್ರಾ.ಸಾ.29 ರವರು ವಿವರಿಸಿದ್ದಾರೆ ಮತ್ತು ಅದು ಒಂದು ವದಂತಿಯ ಸಾಕ್ಷ್ಯವೆಂದು ವಾದ ಮಂಡಿಸಿದ್ದಾರೆ. ಮುಖ್ಯವಾಗಿ, ಜಪ್ತಿ ಪಡಿಸಿಕೊಂಡ ಶೂ ರಾಹುಲ್ @ ಗೋವಿಂದರ ಅಳತೆಯದ್ದೆ ಎಂದು ಸಾಬೀತುಪಡಿಸಲು ಅಭಿಯೋಜನೆಯು ಯಾವ ತನಿಖೆಯನ್ನು ಮಾಡಿರುವುದಿಲ್ಲ. ಖೈದಿಗಳ ಗುರುತಿಸುವಿಕೆ ಕಾಯಿದೆ–1920ರ 2(ಅ) ಮತ್ತು 4 ನೇ ಪ್ರಕರಣದ ಅಡಿಯಲ್ಲಿ ಆತನ ಪಾದದ ಅಳತೆಯನ್ನು ಮಾಡಬಹುದಾಗಿದ್ದು, ಅದನ್ನೂ ಸಹ ಮಾಡಿರುವುದಿಲ್ಲ.

32. ದಿನಾಂಕ 09.07.2011 ರಂದು ಪ್ರಾ.ಸಾ.12–ತಹಶೀಲ್ದಾರರಿಂದ ಮಾಡಿಸಲಾದ ಆಭರಣದ ಟಿ.ಐ.ಪಿ.ಯಲ್ಲಿ ತೀವ್ರ ವಿಳಂಬವಿದೆ ಎಂದು ಮುಂದುವರಿದು ವಾದ ಮಂಡಿಸಿದ್ದಾರೆ. ಈ ನಿಟ್ಟಿನಲ್ಲಿ ರೋಹಿಣಿಯವರ ಕೈಯಿಂದ ಎರಡು ಬಳೆಗಳನ್ನು ಮತ್ತು ಆಕೆಯ ದೇಹದಿಂದ ಒಂದು ಓಲೆಯನ್ನು ತೆಗೆದು ಅವರ ಕೈಗೆ ಒಪ್ಪಿಸಲಾಯಿತು ಎಂದು ಪ್ರಾ.ಸಾ.3–ದೀಪಕ್ ರಾನಡೆಯವರು ಹೇಳಿರುವುದನ್ನು ಗಮನಿಸಬೇಕು. ಆಭರಣ ಗುರುತಿಸುವ ಪ್ರಕ್ರಿಯೆಯಲ್ಲಿ ಪ್ರಾ.ಸಾ.1 ಮೇಘಾರವರ ನಾಲ್ಕು (4) ಬಳೆಗಳನ್ನು ಮತ್ತು ರೋಹಿಣಿಯ ಎರಡು (2) ಬಳೆಗಳನ್ನು ಗುರುತಿಸಿರುತ್ತಾರೆ. ಆದರೆ ಪ್ರಾ.ಸಾ.1 ಗುರುತಿಸಿದ ಬಳೆಗಳು ಪ್ರಾ.ಸಾ.3 ಕ್ಕೆ

ಒಪ್ಪಿಸಲಾದ ಬಳೆಗಳೇ ಎಂಬುದು ಸ್ಪಷ್ಟವಾಗಿರುವುದಿಲ್ಲ, ಮುಂದುವರಿದು, ಪ್ರಾ.ಸಾ.1 ಗುರುತಿಸಿದ ಬಳೆಗಳು ಮತ್ತು ಪ್ರಾ.ಸಾ.3 ರವರಿಗೆ ಒಪ್ಪಿಸಲಾದ ಮೃತ ರೋಹಿಣಿಯ ಬಳೆಗಳು ಒಂದೇ ಆಗಿಲ್ಲದಿದ್ದರೆ, ಆರೋಪಿಗಳಿಂದ ವಶಪಡಿಸಿಕೊಂಡ ಬಳೆಗಳು ಪ್ರಾ.ಸಾ.3 ರವರಿಗೆ ಒಪ್ಪಿಸಲಾದ ಬಳೆಗಳೊಂದಿಗೆ ಹೊಂದಾಣಿಕೆಯಾಗುವುದಿಲ್ಲ. ಕಾನೂನಿನಲ್ಲಿ ಅಗತ್ಯವಿರುವಂತೆ, ಆಭರಣಗಳು ಅದೇ ರೀತಿಯ ವಿನ್ಯಾಸ ಹೊಂದಿರುವ ಇತರೆ ವಸ್ತುಗಳೊಂದಿಗೆ ಬೆರಸಲಾಗಿದೆಯೇ ಎಂಬುದು ಅಸ್ಪಷ್ಟವಾಗಿರುತ್ತದೆ. ಅದೇ ರೀತಿಯ ಮುರಿದ ಮಂಗಳಸೂತ್ರದ ತುಂಡನ್ನು ಗುರುತು ಹಚ್ಚುವ ಪ್ರಕ್ರಿಯೆಯ ಸಂದರ್ಭದಲ್ಲಿ ಇರಿಸಿರಬಹುದು. ಮುಂದುವರಿದು, ಎಷ್ಟು ಅದೇ ರೀತಿಯ ಆಭರಣದ ತುಂಡುಗಳನ್ನು ಆಭರಣ ಗುರುತು ಹಚ್ಚುವ ಸಮಯದಲ್ಲಿ ಬೆರೆಸಲಾಗಿದೆ ಎಂದು ಗುರುತು ಹಚ್ಚುವ ಮೆಮೊ (ನಿ.ಪಿ.1) ಸೂಚಿಸಿರುವುದಿಲ್ಲ. ದಿನಾಂಕ 21.06.2011 ರಂದು ಕಳುವಾದ ವಸ್ತುಗಳ ಬಗ್ಗೆ ಪ್ರಶ್ನಿಸಿದಾಗ ಯಾವ ವಸ್ತುಗಳು ಕಳ್ಳತನವಾಗಿದೆ ಎಂದು ಹೇಳಿರುವ ಪ್ರಾ.ಸಾ.1 ಮತ್ತು ಪ್ರಾ.ಸಾ.3 ರ ಸಾಕ್ಷ್ಯದಲ್ಲಿ ವ್ಯತ್ಯಾಸವಿದೆ. ಪ್ರಾ.ಸಾ.3 ರ ಪ್ರಕಾರ ದಿನಾಂಕ 21.06.2011 ರಂದು ಪ್ರಾ.ಸಾ.1 ರೊಂದಿಗೆ ಮೃತರ ಮನೆಗೆ ಹೋದಾಗ, ಪ್ರಾ.ಸಾ.1 ರವರು ಕೇವಲ ಕ್ಯಾಮರಾ ಕಾಣೆಯಾದ ಬಗ್ಗೆ ತಿಳಿಸಿರುತ್ತಾರೆ.

33. ಡಿ.ಎನ್.ಎ ವಿಶ್ಲೇಷಣಾ ವರದಿಯ ಮೇಲೆ ಅವಲಂಬನೆಯನ್ನು ಪ್ರಶ್ನಿಸುತ್ತಾ, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್.ಎಸ್.ಎಲ್) ವಸ್ತುಗಳನ್ನು ಕಳುಹಿಸುವಲ್ಲಿ ಅತಿಯಾದ ವಿಳಂಬವಾಗಿರುತ್ತದೆ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ. ನಿ.ಪಿ.115 ರಲ್ಲಿ ನಮೂದಿಸಿರುವಂತೆ, ದಿನಾಂಕ 23.06.2011 ರಂದು ಜಪ್ತಿ ಮಾಡಿಕೊಂಡ ವಸ್ತುಗಳನ್ನು ದಿನಾಂಕ 13.07.2011 ರಂದು (20 ದಿನಗಳ ನಂತರ) ಎಫ್.ಎಸ್.ಎಲ್ ಗೆ ಪರೀಕ್ಷೆಗೆ ಕಳುಹಿಸಲಾಗಿರುತ್ತದೆ. ಅಭಿಯೋಜನೆಯು ಈ ವಿಳಂಬದ ಬಗ್ಗೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ, ಈ ವೊಕದ್ದಮೆಯಲ್ಲಿ ಪೊಲೀಸರು ದಾಖಲೆಗಳನ್ನು ನಿಯೋಜಿತ ಸ್ಥಳದಲ್ಲಿ ಸಂರಕ್ಷಿಸಿದ್ದು ಮತ್ತು ವಸ್ತುಗಳನ್ನು ಸುರಕ್ಷಿತ ಸ್ಥಿತಿಯಲ್ಲಿಟ್ಟಿದ್ದು ಪ್ರಮುಖವಾದುದು

ಎಂದು ವಾದ ಮಂಡಿಸಿದ್ದಾರೆ. ವೈಜ್ಞಾನಿಕ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿರುವ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯನ್ನೂ ಸಹ ನಡೆಸಲಾಗಿರುವುದಿಲ್ಲ. ವೈಜ್ಞಾನಿಕ ಸಾಕ್ಷ್ಯವಾಗಿ ಡಿ.ಎನ್.ಎ ವರದಿಯನ್ನು ಅಂಗೀಕರಿಸಿದರಿಂದ ಪ್ರಾ.ಸಾ.35–ಡಾ. ಪಂಕಜ್ ಶ್ರೀವಾತ್ಸವ್‌ರವರನ್ನು ಪಾಟೀ ಸವಾಲು ಮಾಡದಿರುವುದು ಅಪ್ರಸ್ತುತ ಎಂದು ವಾದಿಸಲಾಗಿದೆ ಮತ್ತು ವೈಜ್ಞಾನಿಕ ಪ್ರಕ್ರಿಯೆಯಲ್ಲಿ ಈ ಗಂಭೀರ ಅಂತರವನ್ನು ಈ ನ್ಯಾಯಾಲಯವು ಪರಿಗಣಿಸಬೇಕು. ಮೃತರ ರಕ್ತದ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ ಮತ್ತು ಅದನ್ನು ಪರೀಕ್ಷಿಸಿರುವುದಿಲ್ಲ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿರುತ್ತಾರೆ. ಘಟನೆ ಸಂಭವಿಸಿದ ಸ್ಥಳದಲ್ಲಿ ಮೃತ ದೇಹಗಳ ಪಕ್ಕದಲ್ಲಿ ಕಂಡುಬಂದ ರಕ್ತವನ್ನು ಹತ್ತಿಯಿಂದ ಸಂಗ್ರಹಿಸಿ ಅದನ್ನು ಮಾದರಿಯೆಂದು ಉಲ್ಲೇಖಿಸಲು ಉಪಯೋಗಿಸಿರುವುದು ವಿಶ್ವಾಸಾರ್ಹವಲ್ಲ. ಕೊನೆಯದಾಗಿ, ಯಾವುದೇ ಪ್ರಯೋಗಾಲಯದ ದಾಖಲೆಯನ್ನು ಸಲ್ಲಿಸಿರುವುದಿಲ್ಲ ಎಂದು ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ ಮತ್ತು ಅವಲೋಕನಾ ಹಾಳೆಯಲ್ಲಿ ಮಾದರಿಯನ್ನು ಪಡೆದ ಬಗ್ಗೆ ಮತ್ತು ಅದನ್ನು ಪರೀಕ್ಷಿಸಿದ ಬಗ್ಗೆ ಬರೆಯಲಾಗಿದೆ ಎಂದು ಪ್ರಾ.ಸಾ.35 ರವರು ತಿಳಿಸಿರುತ್ತಾರೆ. ಆದರೆ ಪ್ರಯೋಗಾಲಯದ ವರದಿಯೊಂದಿಗೆ ಈ ಹಾಳೆಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ, ಎಲೆಕ್ಟ್ರೋಪೆರೋಗ್ರಾಮ್ಗಳನ್ನು ಸಹ ಪ್ರಯೋಗಾಲಯದ ವರದಿಗಳೊಂದಿಗೆ ಸಲ್ಲಿಸಿರುವುದಿಲ್ಲ.

34. ಬ್ಯಾಲಿಸ್ಟಿಕ್ (ಗುಂಡು ಹಾರಿಸುವ ಆಯುಧಗಳ ಕ್ಷಮತೆ ಗುಣಲಕ್ಷಣ ಅಧ್ಯಾಯನ) ವರದಿಯನ್ನು ಗಮನಿಸಿದಾಗ, ಮತ್ತು ರಾಹುಲ್‌ರವರ ಪಾದದಿಂದ ತೆಗೆಯಲಾದ ಬುಲೆಟ್ ಮತ್ತು ಮೇಘಾರವರ ದೇಹದಿಂದ ವಶಪಡಿಸಿಕೊಂಡ ಬುಲೆಟ್ ಒಂದೇ ಆಯುಧದಿಂದ ಹಾರಿಸಲ್ಪಟ್ಟಿದೆ ಎಂಬ ಅಭಿಯೋಜನೆಯ ವಾದದ ಮೇಲೆ ಗಮನಹರಿಸಿದಾಗ; ರಾಹುಲ್‌ರವರ ಬಂಧನದ ವಿಧಾನಕ್ಕೆ ಸಂಬಂಧಿಸಿದಂತೆ, ಆತನ ಗುರುತಿನ ಬಗ್ಗೆ ಇರುವ ಅನುಮಾನ, ಆತನ ಪಾದದಿಂದ ಬುಲೆಟ್ಟನ್ನು ಜಪ್ತಿ ಮಾಡಿಕೊಂಡ ರೀತಿ, ಅದನ್ನು ಮೊಹರು ಮಾಡಿ ವಶಕ್ಕೆ ತೆಗೆದುಕೊಂಡು ನ್ಯಾಯಾಲಯದಲ್ಲಿ ಹಾಜರುಪಡಿಸಿದಕ್ಕೆ ಸಂಬಂಧಿಸಿದಂತೆ ಯಾವುದೇ ವಿಶ್ವಾಸಾರ್ಹತೆಯಿಲ್ಲದ ಕಾರಣ ಈ ಎಲ್ಲಾ ಸಂದರ್ಭಗಳನ್ನು ಸಾಬೀತುಪಡಿಸಿರುವುದಿಲ್ಲ ಎಂದು

ವಾದ ಮಂಡಿಸಿದ್ದಾರೆ. ದಿನಾಂಕ 14.07.2011 ರಂದು ಬ್ಯಾಲಿಸ್ಟಿಕ್ ತಜ್ಞರು ವಸ್ತುಗಳನ್ನು ಪಡೆದುಕೊಂಡಿದ್ದು, ನಿ.ಪಿ.120–ಬ್ಯಾಲಿಸ್ಟಿಕ್ ವರದಿಯನ್ನು ದಿನಾಂಕ 30.07.2011 ರಂದು ನೀಡಿರುತ್ತಾರೆ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ.

35. ಬಳಸಲಾದ ಕಾರ್ಟ್ರಿಡ್ಜ್ (ಮದ್ದು ತುಂಬಿದ ಕೊಳವೆ) ಒಳಗೊಂಡಂತೆ ಘಟನಾ ಸ್ಥಳದಿಂದ ಜಪ್ತಿ ಮಾಡಿಕೊಂಡ ಇತರ ವಸ್ತುಗಳನ್ನು ಮೊಹರು ಮಾಡಿದ ಬಗ್ಗೆಯೂ ಅನುಮಾನವನ್ನು ವ್ಯಕ್ತಪಡಿಸಲಾಗಿದೆ. ವಕೀಲರ ಪ್ರಕಾರ ಪರೀಕ್ಷಿಸಲು ಸ್ಫೋಟಿಸಿದ ಕಾರ್ಟ್ರಿಡ್ಜ್‌ನೊಂದಿಗೆ ಅವುಗಳ ತಪ್ಪರಿಣಾಮವಾದ ಹೊಂದಾಣಿಕೆಯು ವಿಶ್ವಾಸಾರ್ಹವಲ್ಲ. ಅನ್ನಪೂರ್ಣ ಪಿ.ಎಸ್ ನಲ್ಲಿ ಶೂವನ್ನು ಜಪ್ತಿಮಾಡಿಕೊಂಡಿದ್ದರಿಂದ ಮತ್ತು ಸಾಕ್ಷಿ ಅಭಯ್ ತಿವಾರಿಯವರನ್ನು ವಿಚಾರಣೆಗೊಳಪಡಿಸದೆ ಇದ್ದುದ್ದರಿಂದ, ಶೂನ ರಾಸಾಯನಿಕ ವಿಶ್ಲೇಷಣೆಯ ಸಮಯದಲ್ಲಿ ತಾಮ್ರದ ಇರುವಿಕೆಯು ವಿಶ್ವಾಸಾರ್ಹವಲ್ಲ ಎಂದು ವಾದ ಮಂಡಿಸಿದ್ದಾರೆ. ಮುಂದುವರೆದು, ಶಸ್ತ್ರಾಸ್ತ್ರ ಶಾಖೆಯಿಂದ ಬಂದ ಪ್ರಾ.ಸಾ.16–ಭೀಮ್ ಬಹದೂರ್‌ರವರು ಜೀವಂತ ಕಾರ್ಟ್ರಿಡ್ಜ್ ಅನ್ನು ಪರೀಕ್ಷಿಸುವಾಗ ಅದರ ಪ್ರೈಮರ್ ಕ್ಯಾಪ್ (ಅಪರಾಧ ಸ್ಥಳದಿಂದ ಜಪ್ತಿ ಪಡಿಸಿಕೊಂಡ) ಕೆಳಗೆ ಬಿದ್ದಿರುತ್ತದೆ ಮತ್ತು ಅವರು ಕಾರ್ಟ್ರಿಡ್ಜ್‌ನ್ನು ಮೊಹರು ಮಾಡಿರುತ್ತಾರೆ. ಆದಾಗ್ಯೂ, ಅವರು ಅದನ್ನು ಪುನಃ ತುಂಬಿಸಿದರು ಎಂದು ಹೇಳಿರುವುದಿಲ್ಲ. ಆದಾಗ್ಯೂ, ಬ್ಯಾಲಿಸ್ಟಿಕ್ ಪರೀಕ್ಷೆಯ ಸಮಯದಲ್ಲಿ, ವಸ್ತು ಎ.6 ಒಂದು ಜೀವಂತ 7.65 ಮಿ.ಮಿ. ಕ್ಯಾಲಿಬರ್ ಪಿಸ್ತೂಲ್ ಕಾರ್ಟ್ರಿಡ್ಜ್‌ನ್ನು ಹೊಂದಿದ್ದು ಅದನ್ನು ಎಲ್.ಆರ್.1(ನಿ.ಪಿ.120 ರಲ್ಲಿ) ಎಂದು ಗುರುತುಮಾಡಲಾಗಿರುತ್ತದೆ. ಅದು ಪುನಃ ತುಂಬಿಸಿದ ಕಾರ್ಟ್ರಿಡ್ಜ್ ಎಂದು ಎಲ್.ಆರ್–1 ರ ವಿವರಣೆಯು ಹೇಳುತ್ತದೆ. ದಿನಾಂಕ 13.07.2011 ರಂದು ಎಫ್.ಎಸ್.ಎಲ್.ಗೆ ಕಳುಹಿಸಿದ ಜೀವಂತ ಬುಲೆಟ್‌ನ ಮೇಲಿದ್ದ ಶಸ್ತ್ರಾಸ್ತ್ರ ಶಾಖೆಯ ಮೊಹರು ಸುಸ್ಥಿತಿಯಲ್ಲಿತ್ತು (ನಿ.ಪಿ.115). ವಸ್ತು ಎ.6 ರ (ಜೀವಂತ ಕಾರ್ಟ್ರಿಡ್ಜ್) ಪರಿಸ್ಥಿತಿಯ ಬಗ್ಗೆ ವ್ಯತ್ಯಾಸಗಳಿದ್ದರೂ ಅದನ್ನು ವಶಪಡಿಸಿಕೊಂಡ ಅನುಕ್ರಮದ ಬಗ್ಗೆ ಅನುಮಾನವನ್ನು ಈ ಎಲ್ಲಾ ಅಂಶಗಳು ಹುಟ್ಟುಹಾಕುತ್ತದೆ. ಮುಂದುವರಿದು, ಎಫ್.ಎಸ್.ಎಲ್‌ನಿಂದ ಪರೀಕ್ಷಿಸುವ

ಸಲುವಾಗಿ ಯಾವುದನ್ನು ಬಳಸಲಾಗಿದೆ ಎಂಬುದು ಅಸ್ಪಷ್ಟವಾಗಿದ್ದು; ಜೀವಂತ ಕಾರ್ಟ್ರಿಡ್ಜ್‌ನ್ನು ಬಳಸಿದರೆ, ಪ್ರೈಮರ್ ಕ್ಯಾಪ್ ಬಿದ್ದಿದ್ದ ಕಾರಣ ಅದು ಬಳಸಲಾಗದ ಸ್ಥಿತಿಯಲ್ಲಿರುವುದರಿಂದ ಸಾಧ್ಯವಾಗಿರುವುದಿಲ್ಲ. ಅದನ್ನು ಪರೀಕ್ಷಿಸಲು ಯಾವ ಇತರ ಪರೀಕ್ಷಾ ಮದ್ದುಗುಂಡುಗಳನ್ನು ಬಳಸಲಾಯಿತು ಎಂಬುದನ್ನು ವರದಿಯು (ನಿ.ಪಿ.120) ಉಲ್ಲೇಖಿಸಿರುವುದಿಲ್ಲ ಮತ್ತು ಅದೇ ಮದ್ದುಗುಂಡುಗಳನ್ನು ಬಳಸಲಾಗಿರುತ್ತದೆ ಎಂದು ಖಚಿತಪಡಿಸಿಕೊಳ್ಳಲು ಅದರ ವಿವರಣೆಯನ್ನು ವರದಿಯ ಭಾಗವಾಗಿ ಒದಗಿಸಬೇಕಾಗಿರುತ್ತದೆ. ಅಪರಾಧ ಸ್ಥಳದ ವರದಿ (ನಿ.ಪಿ.77) ಮತ್ತು ಅಪರಾಧ ಸ್ಥಳದ ಛಾಯಾಚಿತ್ರಗಳಿಂದ (ನಿ.ಪಿ.56), ಎಡಭಾಗದಲ್ಲಿ ಮತ್ತು ಮೃತರ ಕಾಲುಗಳ ಬಳಿ ಸ್ಫೋಟಿಸಿದ ಕಾರ್ಟ್ರಿಡ್ಜ್ ಕಂಡುಬಂದಿರುವ ಬಗ್ಗೆ ಛಾಯಾಚಿತ್ರವನ್ನು ತೆಗೆಸಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿದ್ದಾರೆ. ಪ್ರಾ.ಸಾ.9 ರವರು ಅವರ ಕೈಯಲ್ಲಿ ಗುಂಡನ್ನು ನೋಡಿರುವುದಿಲ್ಲ ಮತ್ತು ಅದು ಗಾತ್ರದಲ್ಲಿ ಚಿಕ್ಕದಾಗಿದೆ ಎಂದು ಹೇಳಿದರು. ಅವರು ಬುಲೆಟ್ ಮತ್ತು ಸ್ಫೋಟಿಸಿದ ಕಾರ್ಟ್ರಿಡ್ಜ್‌ನಲ್ಲಿ ಬರೆದಂತಹ ಒಳ ಅಳತೆಯನ್ನು (ಕೆ ಎಫ್.7.65) ಹೇಗೆ ನೆನಪಿಸಿಕೊಂಡರು ಎಂಬುದರ ಬಗ್ಗೆ ಯಾವುದೇ ವಿವರಣೆಯಿರುವುದಿಲ್ಲ.

36. ಬೆರಳೊತ್ತುಗಳನ್ನು ಸಂಗ್ರಹಿಸಿದ ಸಂದರ್ಭಕ್ಕೆ ಸಂಬಂಧಿಸಿದ ಸನ್ನಿವೇಶದ ಬಗ್ಗೆ, ಅದನ್ನು ತಜ್ಞರ ಪರೀಕ್ಷೆಗೆ ಕಳುಹಿಸಿದ ಬಗ್ಗೆ ಮತ್ತು ವರದಿಯ ಬಗ್ಗೆ ಸಂದೇಹಾತೀತವಾಗಿ ಸಾಬೀತುಪಡಿಸಿಲ್ಲ ಎಂದು ಮಾನ್ಯ ಹಿರಿಯ ವಕೀಲರು ನಿವೇದಿಸಿಕೊಂಡಿದ್ದಾರೆ. ಘಟನಾ ಸ್ಥಳದಲ್ಲಿ ಕಂಡುಬಂದ ಆಕಸ್ಮಿಕ ಬೆರಳೊತ್ತುಗಳಿಗೆ ಸಂಬಂಧಿಸಿದಂತೆ, ಪ್ರಾ.ಸಾ.5–ವಿಶಾಲ್ ಪಾಂಡೆರವರು, ಬೆರಳೊತ್ತು ಚೀಟಿಯ ಮೇಲೆ ಸಹಿ ಮಾಡಿರುವುದನ್ನು ಉಲ್ಲೇಖಿಸಿರುವುದಿಲ್ಲ ಎಂದು ವಾದ ಮಂಡಿಸಿದ್ದಾರೆ. ನಿರ್ಮೂಲನಾ (ಎಲಿಮಿನೇಷನ್) ಬೆರಳೊತ್ತುಗಳನ್ನು ಘಟನಾ ಸ್ಥಳದಲ್ಲಿ ಉಪಸ್ಥಿತಿಯಿದ್ದ ಯಾರಿಂದಲೂ ಸಂಗ್ರಹಿಸಿರುವುದಿಲ್ಲ. ಪ್ರಾ.ಸಾ.13–ವಿಜಯ್‌ಸಿಂಗ್ ಚೌಹಾಣ್ (ಪೇದೆ) ಆರೋಪಿಗಳ ಸಹಿಯನ್ನು ಪಡೆದಿರುತ್ತೇನೆ ಎಂದು ಹೇಳಿದುದರ ವಿರುದ್ಧವಾಗಿ, ನಿ.ಪಿ.41, ಪಿ.42 ಅಥವಾ ಪಿ.43 ರ ಮೇಲೆ ಆರೋಪಿಗಳ ಸಹಿಯಾಗಲಿ

ಅಥವಾ ಅವರ ಭಾವಚಿತ್ರಗಳನ್ನಾಗಲಿ ಹಾಕಿರದಿದ್ದರಿಂದ, ಆರೋಪಿಗಳ ಬೆರಳೊತ್ತು ಎಂದು ಸಾಬೀತುಪಡಿಸಲು ಮಾದರಿ ಬೆರಳೊತ್ತುಗಳ ಗುರುತನ್ನು ಸಾಬೀತುಪಡಿಸಿರುವುದಿಲ್ಲ. ದಿನಾಂಕ 23.06.2011 ರಂದು ಮ್ಯಾಜಿಸ್ಟ್ರೇಟ್‌ರವರ ಮುಂದೆ ಮಾದರಿ ಬೆರಳೊತ್ತುಗಳನ್ನು ಸಂಗ್ರಹಿಸಿರುವುದಿಲ್ಲ ಮತ್ತು ಪಿ.ಎಸ್, ಎಮ್.ಐ.ಜಿಯಲ್ಲೂ ಸಹ ಮರುದಿನ (24.06.2011) ಸಂಗ್ರಹಿಸಿರುವುದಿಲ್ಲ. ಬೆರಳೊತ್ತುಗಳನ್ನು ಪರೀಕ್ಷೆಗೆ ಕಳುಹಿಸಿದ ಬಗ್ಗೆ, ಯಾವ ಸಾಕ್ಷಿಯೂ (ಪ್ರಾ.ಸಾ.13, ಪ್ರಾ.ಸಾ.24, ಅಥವಾ ಪ್ರಾ.ಸಾ.31) ಬೆರಳೊತ್ತುಗಳನ್ನು ಮೊಹರು ಮಾಡಿದ ಸ್ಥಿತಿಯಲ್ಲಿ ಬೆರಳೊತ್ತು ಶಾಖೆಗೆ ಕಳುಹಿಸಲಾಯಿತು ಎಂದು ನುಡಿದಿರುವುದಿಲ್ಲ. ಖೈದಿಗಳ ಗುರುತಿಸುವಿಕೆಯ ಕಾಯಿದೆ–1920ರ 5 ನೇ ಪ್ರಕರಣದ ಅಡಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಬೆರಳೊತ್ತನ್ನು ಹಾಜರುಪಡಿಸಬೇಕು ಎಂಬ ವಿವೇಕದ ನಿಯಮವನ್ನು ಉಲ್ಲಂಘಿಸಲಾಗಿದೆ. ಮುಂದುವರಿದು, ಎರಡೂ ಇಲಾಖೆಗಳು ಇಂದೋರ್‌ನಲ್ಲಿದ್ದರೂ ಸಹ, ಆರೋಪಿಗಳ ಮಾದರಿ ಬೆರಳೊತ್ತುಗಳನ್ನು ಬೆರಳೊತ್ತು ಶಾಖೆಗೆ 3 ದಿನಗಳ ವಿವರಿಸಲಾಗದ ವಿಳಂಬದ ನಂತರ ಅಂದರೆ ದಿನಾಂಕ 27.06.2011 ರಂದು ಕಳುಹಿಸಲಾಗಿದೆ. ಬೆರಳೊತ್ತು ತಜ್ಞರು ನೀಡಿದ ವರದಿಯು (ನಿ.ಪಿ.84) ನಂಬಲಾರ್ಹವಾಗಿರುವುದಿಲ್ಲ ಏಕೆಂದರೆ ಪ್ರಾ.ಸಾ.24–ಕೆ.ಕೆ ದ್ವಿವೇದಿಯವರು (ಬೆರಳೊತ್ತು ತಜ್ಞರು) ಅಥವಾ ಅವರ ವರದಿಯು (ನಿ.ಪಿ.84) ಮೃತರ ನಿರ್ಮೂಲನಾ ಬೆರಳೊತ್ತುಗಳನ್ನು ವಿವರಿಸಿರುವುದಿಲ್ಲ. ನಿರ್ಮೂಲನೆಯ ಅಂತಿಮ ನಿರ್ಣಯವನ್ನು ಮಾತ್ರ ಬರೆಯಲಾಗಿದೆ. ಬೆರಳೊತ್ತುಗಳು ಪ್ರತೀ ವ್ಯಕ್ತಿಗೂ ವಿಶಿಷ್ಟವಾಗಿವೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿರುವುದಿಲ್ಲ, ಆದ್ದರಿಂದ ಅದರ ಮೇಲೆ ಭಾರೀ ಅವಲಂಬನೆಯನ್ನು ಮಾಡಲಾಗುವುದಿಲ್ಲ. ಅದು ಸ್ವಾಭಾವಿಕವಾಗಿ ಮಾತ್ರ ಸಮರ್ಥಿತವಾಗಿರುತ್ತದೆ. ಮುಂದುವರಿದು, ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಚಾಕು, ಪಿಸ್ತೂಲ್ ಮತ್ತು ಆಭರಣಗಳಿಂದ ಬೆರಳೂತ್ತುಗಳನ್ನು ಸಂಗ್ರಹಿಸಿರುವುದಿಲ್ಲ ಎಂಬುದನ್ನು ಮಾನ್ಯ ವಕೀಲರು ಒತ್ತಿ ಹೇಳಿದ್ದಾರೆ. ಬೆರಳೂತ್ತು ಪುರಾವೆಯು ತತ್ಸಂಗತಿಯಾಗಿ ನಿರ್ಣಯಕ್ಕೆ ಎಡೆಮಾಡಿಕೊಡುವುದಿಲ್ಲ ಎಂದು ವಾದ ಮಂಡಿಸಲು, ಮಾನ್ಯ ವಕೀಲರು *ಮೊಹಮದ್*

ಅಮನ್ ಮತ್ತು ಮತ್ತೊಬ್ಬರು ವಿರುದ್ಧ ರಾಜಸ್ಥಾನ ರಾಜ್ಯ[12] *ಮತ್ತು ಚಂದ್ರನ್ @ ಸುರೇಂದ್ರನ್ ಮತ್ತು ಮತ್ತೊಬ್ಬರು ವಿರುದ್ಧ ಕೇರಳ ರಾಜ್ಯ*[13] ಮೊಕದ್ದಮೆಗಳ ಮೇಲೆ ಅವಲಂಬಿಸಿದ್ದಾರೆ.

37. ಶೂ ಪ್ರಿಂಟ್ ವರದಿಯಲ್ಲಿ (ನಿ.ಪಿ.125) ಆಕಸ್ಮಿಕ ಶೂ ಪ್ರಿಂಟ್‌ಗಳು ಅಪೂರ್ಣ ಮತ್ತು ಅಸ್ಪಷ್ಟ ಎಂದು ಉಲ್ಲೇಖಿಸಲಾಗಿದ್ದು, ಅದರ ಹೊರತಾಗಿಯೂ ತಜ್ಞರು ಪರೀಕ್ಷೆಯನ್ನು ಮುಂದುವರಿಸಿದರು ಮತ್ತು ಪ್ರಿಂಟ್‌ಗಳು ಎಫ್.6 (ಬಲ), ಜಿ.4 (ಬಲ) ಮತ್ತು ಹೆಚ್.3 (ನಿ.ಪಿ.125 ರಂತೆ ಯಾವ ಭಾಗದೆಂದು ನಿರ್ದಿಷ್ಟಪಡಿಸುವುದಿಲ್ಲ) ರೊಂದಿಗೆ ಹೊಂದುತ್ತದೆ ಎಂಬ ನಿರ್ಣಯಕ್ಕೆ ಬಂದಿರುತ್ತಾರೆ ಎಂದು ಮಾನ್ಯ ಹಿರಿಯ ವಕೀಲರು ವಾದ ಮಂಡಿಸಿದ್ದಾರೆ. ಎಮ್.ಪಿ. ಪೊಲೀಸ್ ನಿಬಂಧನಾ ನಿಯಮದ ನಿಯಮ 822 (4) ರ ಜೊತೆಗೆ ಖೈದಿಗಳ ಗುರುತಿಸುವಿಕೆ ಕಾಯಿದೆಯ 4 ನೇ ಪ್ರಕರಣದೊಂದಿಗೆ ಓದಲಾದ 2(ಅ) ನೇ ಪ್ರಕರಣದ ಪ್ರಕಾರ ರಾಹುಲ್‌ರವರ ಪಾದಮುದ್ರೆಯನ್ನು ಸಂಗ್ರಹಿಸಲಾಗಿರುವುದಿಲ್ಲ. ರಾಹುಲ್‌ರವರು 44 ಅಳತೆಯ ಶೂವನ್ನು ಧರಿಸಿದ್ದರು ಎಂಬುದನ್ನು ಸಾಬೀತುಪಡಿಸಲು ಇದು ಪ್ರಮುಖವಾಗಿರುತ್ತದೆ. ನೆಲದ ಮೇಲೆ ಸಾಕಷ್ಟು ರಕ್ತವಿತ್ತು ಎಂದು ಪ್ರಾ.ಸಾ.5 ಹೇಳಿದ್ದಾರೆ. ಘಟನಾ ಸ್ಥಳದಲ್ಲಿ ಉಪಸ್ಥಿತರಿದ್ದ ಪ್ರಾ.ಸಾ.5 ಅಥವಾ ಇನ್ನಿತರರ ನಿರ್ಮೂಲನಾ ಶೂ ಪ್ರಿಂಟನ್ನು ಸಂಗ್ರಹಿಸಿಕೊಂಡಿರುವುದಿಲ್ಲ. ಇತರರ ಪೈಕಿ, ಐದು ವ್ಯಕ್ತಿಗಳು ಶವತನಿಖಾ ಪ್ರಕ್ರಿಯೆಗೆ ಸಾಕ್ಷಿಗಳಾಗಲು ಘಟನಾ ಸ್ಥಳಕ್ಕೆ ಪ್ರವೇಶಿಸಿದ್ದಾರೆ ಎಂಬುದು ಈ ಹಂತದಲ್ಲಿ ಗಮನಿಸಬೇಕಾದ ಸಂಗತಿಯಾಗಿರುತ್ತದೆ. ಶೂ ಪ್ರಿಂಟ್‌ಗಳು ರಕ್ತಸಿಕ್ತವಾಗಿದ್ದವು ಮತ್ತು ಭಾಗಶಃ ಸ್ವಾಭಾವಿಕವಾಗಿದ್ದವು ಎಂದು ಅಪರಾಧ ದೃಶ್ಯದ ವರದಿಯು (ನಿ.ಪಿ.77) ನಮೂದಿಸಿರುತ್ತದೆ. ಇವೆಲ್ಲವೂ, ಹೆಜ್ಜೆಗುರುತಿನ ತಜ್ಞರ ವರದಿಯ ಸತ್ಯಾಸತ್ಯತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಅನುಮಾನಗಳನ್ನು ಉಂಟುಮಾಡುತ್ತದೆ.

12. (1997) 10 ಎಸ್‌ಸಿಸಿ 44
13. (1991) ಸಪ್ (1) ಎಸ್‌ಸಿಸಿ 39

38. ಅಪೀಲುದಾರ ನೇಹಾರವರ ಪರವಾಗಿ ಆಕೆಯ ಹಿತಕ್ಕಾಗಿ ವಾದ ಮಂಡಿಸಿದ ಮಾನ್ಯ ವಕೀಲರಾದ ಶ್ರೀ ಶ್ರೀ.ಸಿಂಗ್‌ರವರು, ಶ್ರೀಮತಿ. ಅಂಜನಾ ಪ್ರಕಾಶ್‌ರವರ ವಾದಕ್ಕೆ ಪೂರಕವಾಗಿ ವಾದ ಮಂಡಿಸಿದ್ದಾರೆ. ನೇಹಾರ ಬಂಧನದ ಬಗ್ಗೆ ಅಭಿಯೋಜನೆಯ ವಾದವನ್ನು ಅವರು ಪ್ರಶ್ನಿಸಿರುತ್ತಾರೆ. ದೇವೆಂದ್ರ ನಗರದಲ್ಲಿ ನೇಹಾರವರ ಬಂಧನ ಮೆಮೊವನ್ನು (ನಿ.ಪಿ.9) ಅಧಿಕೃತವಾಗಿ ತಯಾರು ಮಾಡಲಾಗಿರುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ. ನೇಹಾರನ್ನು ಬಂಧಿಸಿದಾಗ, ವೈಯಕ್ತಿಕ ಜಪ್ತಿ ಮೆಮೊ (ನಿ.ಪಿ.10) ಮತ್ತು ಒಂದು ವಿವರಣಾ ಮೆಮೊ (ನಿ.ಪಿ.11) ತಯಾರಿಸಲಾಯಿತು. ಎ.ಟಿ.ಎಮ್.ನ (ನಿ.ಪಿ.22) ಹೊರಗಡೆ ನೇಹಾರವರಿಗೆ ಮಾಡಿದ ಶೋಧವು, ನಿ.ಪಿ.9 ರ ಮೂಲಕ ಜಪ್ತಿ ಮಾಡಿಕೊಂಡ ಫೋನ್‌ನ ಪತ್ತೆಗೆ ಸಾಧ್ಯವಾಗಲಿಲ್ಲ ಎಂಬುದಕ್ಕೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ನೇಹಾರ ಬಂಧನ ಮೆಮೊದಲ್ಲಿ ಇದರ ಬಗ್ಗೆ ದಾಖಲಿಸಿರುವುದಿಲ್ಲ ಎಂದು ಪ್ರಾ.ಸಾ.31–ಐ.ಓ ರವರು ಒಪ್ಪಿಕೊಂಡಿರುತ್ತಾರೆ. ಜಪ್ತಾದ ಫೋನ್ ಬಗ್ಗೆ ಅಭಿಯೋಜನೆಯು ಯಾವುದೇ ತಾಂತ್ರಿಕ ತನಿಖೆಯನ್ನು ನಡೆಸಿರುವುದಿಲ್ಲ ಅಥವಾ ಈ ನಿಟ್ಟಿನಲ್ಲಿ ಯಾವ ಕಾರಣಕ್ಕೆ ತನಿಖೆಯನ್ನು ನಡೆಸಿರುವುದಿಲ್ಲ ಎಂಬುದಕ್ಕೆ ಯಾವುದೇ ವಿವರಣೆಯನ್ನೂ ನೀಡಿರುವುದಿಲ್ಲ. ಮುಂದುವರಿದು, ಸಿ.ಡಿ.ಆರ್‌ಗಳ[14] ವಿಶ್ಲೇಷಣೆಯನ್ನು ಜರುಗಿಸಿದ ಬಗ್ಗೆ ಪ್ರ.ಸಾ.1– ದೀಪಿಕಾ ಶಿಂಧೆ, ಎಸ್.ಐ, ಅವರು ಒಪ್ಪಿಕೊಂಡಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸಿ.ಡಿ.ಆರ್‌ಗಳನ್ನು ಹಾಜರುಪಡಿಸಿರುವುದಿಲ್ಲ.

39. ಈ ಎಲ್ಲಾ ಲೋಪಗಳು ಪೊಲೀಸರ ವಿರುದ್ಧ ಸಾಕ್ಷ್ಯ ಅಧಿನಿಯಮ–1872 ರ 114 (ಜಿ) ಪ್ರಕರಣದ ಅಡಿಯಲ್ಲಿ ಪ್ರತಿಕೂಲವಾದ ತೀರ್ಮಾನಕ್ಕೆ ಬರಲು ನ್ಯಾಯಾಲಯವನ್ನು ಪ್ರೇರೇಪಿಸಿದ್ದು, ನೇಹಾರ ಆತಂಕ, ಆಕೆಯ ಬಂಧನ ಮತ್ತು ತರುವಾಯ ಆಕೆಯಿಂದ ವಸ್ತುಗಳನ್ನು ವಶಪಡಿಸಿಕೊಂಡ ಬಗ್ಗೆ ಗಂಭೀರವಾದ ಅನುಮಾನವನ್ನು ಉಂಟುಮಾಡುತ್ತದೆ

14. ಉಪಕರಣದಿಂದ ಸ್ವೀಕರಿಸಿದ ಮತ್ತು ಮಾಡಿದ ಒಳಬರುವ ಕರೆಗಳು ಮತ್ತು ಹೊರಹೋಗುವ ಕರೆಗಳ ಪಟ್ಟಿಯಿರುವ ಕರೆ ವಿವರ ದಾಖಲೆ.

ಎಂದು ವಾದ ಮಂಡಿಸಲಾಗಿದೆ. ಈ ನಿಟ್ಟಿನಲ್ಲಿ, *ನೂರ್ ಅಗಾ ವಿರುದ್ಧ ಪಂಜಾಬ್ ರಾಜ್ಯ*[15] ಮತ್ತು *ಚುಂತುರಾಮ್ ವಿರುದ್ಧ ಛತೀಸ್‌ಗಢ್ ರಾಜ್ಯ*[16] ಮೊಕದ್ದಮೆಗಳ ಮೇಲೆ ಅವಲಂಬಿಸಿರುತ್ತದೆ.

40. ಪ್ರಾ.ಸಾ.4–ಬನ್ಸೋ ಸೋಲಂಕಿಯವರನ್ನು (ಮಹಿಳಾ ಪೇದೆ) ದಿನಾಂಕ 30.09.2011ರಂದು ಅಂದರೆ ಘಟನೆ ನಡೆದ ಮೂರು ತಿಂಗಳ ನಂತರ ಪಾಟೀ ಸವಾಲು ಮಾಡಲಾಯಿತು ಎಂದು ಮಾನ್ಯ ವಕೀಲರು ಮುಂದುವರಿದು ವಾದ ಮಂಡಿಸಿದ್ದಾರೆ. ಆಕೆಯ ಪಾಟೀ–ಸವಾಲಿನಲ್ಲಿ, ಪ್ರ.ಸಾ.1–ದೀಪಿಕಾ ಶಿಂಧೆ, ಎಸ್.ಐ, ನೇಹಾರನ್ನು ದಿನಾಂಕ 21.06.2011ರ ಸಂಜೆ ಪೊಲೀಸ್ ಠಾಣೆಗೆ ಕರೆತಂದರು ಎಂದು ಸೂಚಿಸಲಾಯಿತು. ನೇಹಾರ ಬಂಧನದ ಸಮಯದಲ್ಲಿ ಪ್ರಾ.ಸಾ.4 ರವರು ಉಪಸ್ಥಿತಿಯಿದ್ದರು ಎಂದು ಹೇಳಿದ್ದರೂ ಸಹ, ದಿನಾಂಕ 22.06.2011 ರಂದು ನೇಹಾರವರ ಮನೆಯನ್ನು ಶೋಧ ಮಾಡುವಾಗ ಆಕೆಯ ಪಾತ್ರದ ಬಗ್ಗೆ ಅವರು ಮೌನವಾಗಿರುತ್ತಾರೆ. ಪ್ರಾ.ಸಾ.28 ರವರು, ಪ್ರ.ಸಾ.1 ರ ಪಾತ್ರದ ಬಗ್ಗೆ ಪಾಟೀ–ಸವಾಲಿನಲ್ಲಿ, ಅವರಿಗೆ ಮತ್ತು ಪ್ರ.ಸಾ.1 ರವರಿಗೆ ಪಾಳಿತಪ್ಪಿದ ಬಡ್ತಿ ದೊರೆಯಿತು ಎಂದು ನುಡಿದಿದ್ದಾರೆ. ಪ್ರ.ಸಾ.1 ರವರು ದಾಳಿ ಮಾಡಿದ ತಂಡದ ಭಾಗವಾಗಿದ್ದರು ಎಂದು ಪ್ರಾ.ಸಾ.6 ರವರು ತಮ್ಮ ಪಾಟೀ–ಸವಾಲಿನ ಸಂದರ್ಭದಲ್ಲಿ ಒಪ್ಪಿಕೊಂಡಿದ್ದಾರೆ. ಈ ಸಂಗತಿಗಳನ್ನು ದಾಖಲೆಯಿಂದ ಹೊರಹಾಕಲಾಗಿದೆ. ಅಧಿವಿಚಾರಣೆಯ ಸಮಯದಲ್ಲಿ ಇದು ಪ್ರತಿ ರಕ್ಷಣೆಯ ಮಾರ್ಗವಾಗಿರುತ್ತದೆ. ಈ ಮೊಕದ್ದಮೆಯ ವಿಚಾರಣೆಯಲ್ಲಿ ಪ್ರ.ಸಾ.1 ರ ಒಳಗೊಳ್ಳುವಿಕೆಯನ್ನು ಅಂತಿಮವಾಗಿ ಸಾಬೀತುಪಡಿಸಿದರೂ ಸಹ ನೇಹಾರ ಪ್ರತಿರಕ್ಷಣೆಯ ಈ ಅಂಶವನ್ನು ಉಭಯ ಕೆಳ ನ್ಯಾಯಾಲಯಗಳು ಕಡೆಗಣಿಸಿರುತ್ತವೆ. ಮುಂದುವರಿದು, ವಿವಿಧ ಅವಕಾಶಗಳ ಹೊರತಾಗಿಯೂ, ತನಿಖೆಯ ಸಂದರ್ಭದಲ್ಲಿ ಪ್ರ.ಸಾ.1 ರ ಕಾರ್ಯ ಅಥವಾ ಆಕೆಯ ಪಾತ್ರವನ್ನು ನಿರ್ದಿಷ್ಟವಾಗಿ ಏಕೆ ಅಳಿಸಲಾಗಿದೆ ಎಂದು ವಿವರಿಸಲು ಅಭಿಯೋಜನೆ

15. (2008) 16 ಎಸ್‌ಸಿಸಿ 417
16. (2020) 10 ಎಸ್‌ಸಿಸಿ 733

ವಿಫಲಗೊಂಡಿರುತ್ತದೆ. ಈ ನಿಟ್ಟಿನಲ್ಲಿ *ರೀನಾ ಹಜಾರಿಕ ವಿರುದ್ಧ ಅಸ್ಸಾಂ ರಾಜ್ಯ*[17] ಮೊಕದ್ದಮೆಯ ಮೇಲೆ ಅವಲಂಬಿತವಾಗಿರುತ್ತದೆ. ಇದು ಅಭಿಯೋಜನೆಯ ಮೇಲೆ ಪ್ರತಿಕೂಲ ತೀರ್ಮಾನವನ್ನು ಸಮರ್ಥಿಸುತ್ತದೆ ಮತ್ತು ಅದರ ವಿಶ್ವಾಸಾರ್ಹತೆಯ ಮೇಲೆ ಅನುಮಾನವನ್ನು ಸೃಷ್ಟಿಸುತ್ತದೆ ಎಂದು ವಾದ ಮಂಡಿಸಲಾಗಿದೆ.

41. ವಾಸ್ತವವಾಗಿ ಪ್ರ.ಸಾ.1–ದೀಪಿಕಾ ಶಿಂಧೆಯವರ ಸಾಕ್ಷ್ಯವು, ಘಟನೆ ಸಂಭವಿಸಿದ ದಿನಾಂಕದಂದೆ ತಾಂತ್ರಿಕ ಸಾಕ್ಷ್ಯವನ್ನು ವಿಶ್ಲೇಷಿಸಲಾಯಿತು ಎಂಬುದನ್ನು ತೋರಿಸುತ್ತದೆ ಎಂದು ವಾದ ಮಂಡಿಸಿದ್ದಾರೆ. ಪ್ರಾ.ಸಾ.4, ಪ್ರಾ.ಸಾ.28 ಮತ್ತು ಪ್ರಾ.ಸಾ.31ನ್ನು ಒಳಗೊಂಡಂತಹ ತನಿಖಾ ತಂಡದ ಸಾಕ್ಷ್ಯದಲ್ಲಿ ದೂರವಾಣಿ ಸಾಕ್ಷ್ಯಗಳ ಸಂಪೂರ್ಣ ಅನುಪಸ್ಥಿತಿಯು ಇದಕ್ಕೆ ಸಮ್ಮತಿಸುವುದಿಲ್ಲ. ಆರೋಪಿಗಳು ಒಬ್ಬರಿಗೊಬ್ಬರು ಮಾತನಾಡಿದ್ದಾರೆಯೇ ಅಥವಾ ಒಬ್ಬರಿಗೊಬ್ಬರು ಪರಿಚಿತರೇ ಅಥವಾ ಮೃತರು ಯಾವುದೇ ಆರೋಪಿಗಳೊಂದಿಗೆ ಮಾತನಾಡಿದ್ದಾರೆಯೇ ಎಂಬುದನ್ನು ತಿಳಿಸುವ ದೂರವಾಣಿ ಸಾಕ್ಷ್ಯ ಅಥವಾ ಸ್ಥಳದ ತ್ರಿಕೋನೀಕರಣವನ್ನು ತನಿಖೆಯ ಸಮಯದಲ್ಲಿ ಸಂಗ್ರಹಿಸಲಾಗಿಲ್ಲ ಮತ್ತು ಅಧಿವಿಚಾರಣೆಯಿಂದ ದೂರವಿಡಲಾಗಿದೆ. ವಿದ್ಯುನ್ಮಾನ ಸಾಕ್ಷ್ಯಗಳು ಲಭ್ಯವಿರುವುದಲ್ಲದೆ ನೇಹಾರ ನಾಶಕ್ಕೆ ಅದನ್ನು ಉಪಯೋಗಿಸಲಾಯಿತು ಎಂದು ಗೊತ್ತಿದ್ದರೂ, ತನಿಖಾ ತಂಡದ ಮೇಲೆ ಈ ನ್ಯಾಯಾಲಯವು ಸಹಜವಾಗಿಯೇ ಅವಲಂಬಿತವಾಗಬೇಕಿರುತ್ತದೆ ಎಂದು ವಾದ ಮಂಡಿಸಿದ್ದಾರೆ. ದಿನಾಂಕ 19.06.2011, 20.06.2011 ಅಥವಾ 21.06.2011 ರಂದು ಅಪರಾಧ ಶಾಖೆಯ ಅಧಿಕಾರಿಗಳ ಉಪಸ್ಥಿತಿಯನ್ನು ಪ್ರಾ.ಸಾ.31–ಐ.ಓ. ರವರು ಉಲ್ಲೇಖಿಸಿರುವುದಿಲ್ಲ ಎಂಬುದನ್ನು ಗಮನಿಸಲಾಗಿದೆ. ಆದಾಗ್ಯೂ, ಪ್ರಾ.ಸಾ.28 ವಿಜಯ್ ಸಿಂಗ್ ಚೌಹಾಣ್‌ರವರು ತಮಗೆ ಅಪರಾಧ ಶಾಖೆಗೆ ಸ್ಥಳ ನಿಯುಕ್ತಿಯ ಬಗ್ಗೆ ಮತ್ತು ದಿನಾಂಕ 22.06.2011 ರಂದು ಅವರು ಏನು ನೋಡಿದರು (ಅಂದರೆ ಪ್ರಾ.ಸಾ.28) ಎಂಬುದನ್ನು ಪ್ರಾ.ಸಾ.19–ವೈ.ಆರ್. ಗಾಯಕ್ವಾಡ್ ರವರಿಗೆ

17. (2019) 13 ಎಸ್‌ಸಿಸಿ 289

ತಿಳಿಸಿದ ಬಗ್ಗೆ ಉಲ್ಲೇಖವನ್ನು ಮಾಡಿರುತ್ತಾರೆ. ಆದಾಗ್ಯೂ, ದಿನಾಂಕ 22.06.2011 ರಂದು ಪ್ರಾ.ಸಾ.28 ರಿಂದ ಪಡೆದುಕೊಂಡ ಯಾವುದೇ ಮಾಹಿತಿಯ ಬಗ್ಗೆ ಪ್ರಾ.ಸಾ.19 ರವರು ತಮ್ಮ ಸಾಕ್ಷ್ಯದಲ್ಲಿ ಮೌನವಹಿಸಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆಯು ಸಮಾನಾಂತರ/ವಿವಿಧ ತನಿಖೆಯನ್ನು ಕೈಗೊಳ್ಳಲು ಅನುಮತಿಸುವುದಿಲ್ಲ ಎಂಬುದರ ಆಧಾರದ ಮೇಲೆ, ಪ್ರ.ಸಾ.1 ರವರು ತನಿಖೆಯನ್ನು ಕೈಗೊಂಡ ಸಾಮರ್ಥ್ಯವನ್ನು ಪ್ರಶ್ನಿಸಲಾಗಿದೆ.

42. ನೇಹಾರವರಿಂದ 'ಒರಿಫ್ಲೇಮ್' ದಾಖಲೆಯನ್ನು ವಶಕ್ಕೆ ಪಡೆದುಕೊಂಡಿದ್ದರೂ, ಅಭಿಯೋಜನೆಯು ಆ ದಾಖಲೆಯ ಮೇಲೆ ನಿಶಾನೆಯ ರೀತಿಯಲ್ಲಿ ಅವಲಂಬಿಸಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ದಿನಾಂಕ 22.06.2011 ರಂದು (ನಿ.ಪಿ.11) ನೇಹಾರ ಮನೆಯಿಂದ ವಶಪಡಿಸಿಕೊಂಡ ಪ್ರಪತ್ರಗಳು, ವಿಷಯಪಟ್ಟಿ ಅಥವಾ ಸುಗಂಧ ದ್ರವ್ಯದ ಬಗ್ಗೆ ಯಾವುದೇ ವಿವರಣೆಯನ್ನು ಒದಗಿಸಲು ಕಂಪನಿಯ ಯಾವುದೇ ಅಧಿಕಾರಿಯನ್ನು ಅಭಿಯೋಜನೆಯು ವಿಚಾರಣೆಗೊಳಪಡಿಸಿರುವುದಿಲ್ಲ. ನೇಹಾರವರ ಮನೆಯಿಂದ ಜಪ್ತಿ ಮಾಡಿದ ಪ್ರಪತ್ರವನ್ನು ಮೃತ ಮೇಘಾರವರು ತುಂಬಿದ್ದರು ಅಥವಾ ನಂತರದವರ ಸಹಿಯನ್ನು ಗುರುತಿಸಲಾಗಿದೆ ಅಥವಾ ಸಾಬೀತುಪಡಿಸಲಾಗಿದೆ ಎಂಬುದನ್ನು ಸೂಚಿಸಲು ಯಾವುದೇ ಸಾಕ್ಷ್ಯಗಳಿರುವುದಿಲ್ಲ. ಪ್ರತ್ಯೇಕ ಸಾಕ್ಷಿಯು, ಅಂತಹ ಪ್ರಪತ್ರವು ಯಾವುದೇ ಸಹಿಗಳನ್ನು ತೋರಿಸುವುದಿಲ್ಲ ಎಂದು ನುಡಿದಿರುವುದಕ್ಕೆ ಮಾನ್ಯ ವಕೀಲರು ಪ್ರಾಧಾನ್ಯ ನೀಡಿದ್ದಾರೆ. ಒಂದು ಕಾಗದ/ದಾಖಲೆಯನ್ನು (ಒರಿಫ್ಲೇಮಿನ) ನೇಹಾರ ಮನೆಯಿಂದ ವಶಪಡಿಸಿಕೊಳ್ಳಲಾಯಿತು ಎಂದು ಮಾತ್ರ ಪ್ರಾ.ಸಾ.3 ರವರು ಹೇಳಿರುತ್ತಾರೆ. ಪ್ರಪತ್ತವು ತುಂಬಲಾಗಿತ್ತೊ ಇಲ್ಲವೋ ಎಂಬುದರ ಬಗ್ಗೆ ಆತನು ತಿಳಿಸಿರುವುದಿಲ್ಲ. ಪ್ರಪತ್ರಗಳೂ ಸೇರಿದಂತೆ ಕೆಲವೊಂದು ವಸ್ತುಗಳನ್ನು ತಮ್ಮ ಸಮ್ಮುಖದಲ್ಲಿ ಜಪ್ತಿಪಡಿಸಿಕೊಳ್ಳಲಾಯಿತು ಆದರೆ ಅವುಗಳ ಸ್ವರೂಪ ಅಥವಾ ವಿವರಗಳನ್ನು ತಿಳಿಸಿರುವುದಿಲ್ಲ ಎಂದು ಪ್ರಾ.ಸಾ.6 ಹೇಳಿರುತ್ತಾರೆ. ಪ್ರಾ.ಸಾ.3 ನ್ಯಾಯಾಲಯದಲ್ಲಿ ಪ್ರಪತ್ರವನ್ನು ಗುರುತಿಸಿದಾಗ, ಅಂತಹ ಪ್ರಪತ್ರದಲ್ಲಿನ ಕೈಬರಹವನ್ನು ಗುರುತಿಸುವ ಉದ್ದೇಶದ ಬಗ್ಗೆ ಯಾವ ಪ್ರಶ್ನೆಯನ್ನೂ ಅವರಿಗೆ ಕೇಳಿರುವುದಿಲ್ಲ. ಅಂತಹ ಜಪ್ತಿ

ಮಾಡಿದ ಸಂದರ್ಭದಲ್ಲಿ ಪ್ರಪತ್ರಗಳನ್ನು ಒಳಗೊಂಡ ಗಂಟಿನಲ್ಲಿ ಪ್ರತ್ಯೇಕ ಸಾಕ್ಷಿಗಳ ಮತ್ತು ಪೋಲೀಸ್ ಸಿಬ್ಬಂದಿಯ ಸಹಿಗಳು ಕಂಡುಬಂದಿರುವುದಿಲ್ಲ. 'ಓರಿಫ್ಲೇಮ್" ಪ್ರಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ವಿವರಗಳನ್ನು ಒದಗಿಸುವ ಏಕೈಕ ಸಾಕ್ಷಿ ಪ್ರಾ.ಸಾ.31–ಐ.ಓ ಆಗಿರುತ್ತಾರೆ. ಈ "ವಿವರಗಳು" ಕೇವಲ ಪ್ರಾ.ಸಾ.31ರ ಊಹೆಗಳಾಗಿರುತ್ತವೆ ಮತ್ತು ತನಿಖೆ ಅಥವಾ ಅಧಿವಿಚಾರಣೆಯ ಸಂದರ್ಭದಲ್ಲಿ ಇದನ್ನು ಪರಿಶೀಲಿಸಿರುವುದಿಲ್ಲ. "ಓರಿಫ್ಲೇಮ್" ಪ್ರಪತ್ರವನ್ನು ವಶಪಡಿಸಿಕೊಂಡಿದಕ್ಕೆ ಸಂಬಂಧಿಸಿದಂತೆ ನೇಹಾರಿಗೆ ಕೇಳಲಾದ ಎಲ್ಲಾ ಪ್ರಶ್ನೆಗಳನ್ನು ನಿರಾಕರಿಸಲಾಗಿದೆ ಎಂದೂ ಸಹ ವಾದ ಮಂಡಿಸಿದ್ದಾರೆ. ಪ್ರಾ.ಸಾ.1 ರವರು ಅವರ ಮುಖ್ಯ–ವಿಚಾರಣೆಯಲ್ಲಿ ತನ್ನ ಪತ್ನಿಯು 'ಓರಿಫ್ಲೇಮ್'ನಲ್ಲಿ ಸಲಹೆಗಾರ್ತಿಯಾಗಿದ್ದರು ಎಂದು ಹೇಳಿದಾಗಲೂ ಅವರಿಗೆ ನೇಹಾರ ಮನೆಯಿಂದ ಜಪ್ತಿ ಮಾಡಿಕೊಂಡ ಪ್ರಪತ್ರವನ್ನು ತೋರಿಸಿರುವುದಿಲ್ಲ. ಈ ನಿಟ್ಟಿನಲ್ಲಿ ಆತನ ಕಡೆಯಿಂದ ಸಾಕ್ಷ್ಯಗಳು ಒದಗಬಹುದಿತ್ತು. ವಾಸ್ತವವಾಗಿ, ಪ್ರಾ.ಸಾ.1ರವರಾಗಲಿ ಅಥವಾ ಓರಿಫ್ಲೇಮ್ನ ಯಾವುದೇ ಉದ್ಯೋಗಿಯು ಮೇಘಾ ಅವರ ಕೈಬರಹವನ್ನು ಒಪ್ಪಿಕೊಂಡಿರುವುದಿಲ್ಲ. ಮೇಘಾರವರದ್ದು ಎಂದು ಹೇಳಲಾದ ಕೈಬರಹ/ಸಹಿಯನ್ನು ಸಾಬೀತುಪಡಿಸಲು ಅಭಿಯೋಜನೆಯು ಪ್ರಪತ್ರದ ಯಾವುದೇ ವಿಧಿವಿಜ್ಞಾನ ಪರೀಕ್ಷೆಯನ್ನು ನಡೆಸಿರುವುದಿಲ್ಲ. ಮುಂದುವರಿದು, ಪ್ರಾ.ಸಾ.1 ರವರು ಜಪ್ತಿಮಾಡಿಕೊಂಡ ಕೆಲವೊಂದು ವಸ್ತುಗಳನ್ನು ಗುರುತಿಸಲು ನಡೆಸಲಾದ ಟಿ.ಐ.ಪಿಯಲ್ಲಿ ಭಾಗವಹಿಸಿದ್ದು, ಅಲ್ಲಿ ಮೃತರಿಗೆ ಸೇರಿದವು ಎಂದು ಹೇಳಲಾದ ಕೆಲವು ಆಭರಣಗಳನ್ನು ಉದ್ದೇಶಿತವಾಗಿ ಗುರುತಿಸಿರುತ್ತಾರೆ ಎಂದು ಹೇಳಲಾಗಿದೆ. ಈ ಎಲ್ಲಾ ಪ್ರಕ್ರಿಯೆಗಳಲ್ಲಿ, ಅಭಿಯೋಜನೆಯು "ಓರಿಫ್ಲೇಮ್" ಪ್ರಪತ್ರವನ್ನು ಆತನಿಗೆ ತೋರಿಸಿರುವುದಿಲ್ಲ. ಆದ್ದರಿಂದ, ಈ ದಾಖಲೆಯ ಮೇಲೆ ಯಾವುದೇ ತನಿಖೆಯನ್ನು ನಡೆಸದ ಕಾರಣ "ಓರಿಫ್ಲೇಮ್" ದಾಖಲೆಯು ಮೃತರ, ಮೇಘಾರ ಅಥವಾ ನೇಹಾರೊಂದಿಗೆ ವ್ಯವಹರಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಂಬಂಧವಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಪ್ರಾ.ಸಾ.31–ಐ.ಓ.ರವರ ಸ್ವಾಧಿಕಾರೋಕ್ತಿಯನ್ನು ಹೊರತುಪಡಿಸಿ, 'ಓರಿಫ್ಲೇಮ್" ಪ್ರಪತ್ರವನ್ನು ಮೇಘಾಗಾಗಿ ಭರ್ತಿ

ಮಾಡಲಾಗಿದೆ ಅಥವಾ ಅವರಿಂದ ಭರ್ತಿ ಮಾಡಲಾಗಿದೆ ಅಥವಾ ಸಹಿ ಮಾಡಲಾಗಿದೆ ಎಂದು ಸೂಚಿಸಲು ಯಾವ ಸಾಕ್ಷ್ಯವು ಇರುವುದಿಲ್ಲ.

43. ನಿಯಂತ್ರಣ ಕೊಠಡಿಯಿಂದ ಮಾಡಿದ ವಿನಂತಿಯ ಆಧಾರದ ಮೇಲೆ ದಿನಾಂಕ 19.06.2011 ರಂದು ಸ್ಥಳಕ್ಕೆ ಹೋಗಿರುವುದನ್ನು ಪ್ರ.ಸಾ.1–ದೀಪಿಕಾ ಶಿಂಧೆ ಒಪ್ಪಿಕೊಂಡಿರುತ್ತಾರೆ ಎಂದು ಶ್ರೀ ಶ್ರೀ.ಸಿಂಗ್‌ರವರು ವಾದ ಮಂಡಿಸಿದ್ದಾರೆ. ಆಕೆಯು ಪಿ.ಎಸ್, ಎವ್.ಐ.ಜಿ.ಯ ಅಧಿಕಾರಿಗಳಿಂದ ಮಾಹಿತಿಯನ್ನು ಕೇಳಿದ್ದು, ತದನಂತರ ಮೃತ ವ್ಯಕ್ತಿಗಳ ನೆರೆಹೊರೆಯವರೊಂದಿಗೆ ಮಾತನಾಡಿರುತ್ತಾರೆ. ಆದಾಗ್ಯೂ, ಪ್ರ.ಸಾ.1 ರವರು ತಮ್ಮ ಮುಖ್ಯ ವಿಚಾರಣೆಯ ಸಂದರ್ಭದಲ್ಲಿ ಈ ನಿಟ್ಟಿನಲ್ಲಿ ಯಾವುದೇ ವಿವರಣೆಯನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಪ್ರ.ಸಾ.1 ರವರು ಆರೋಪಿಗಳ ಸಿ.ಡಿ.ಆರ್‌ಗಳನ್ನು ವಿಚಾರಣೆಗೊಳಪಡಿಸಿರುವುದಾಗಿ ಹೇಳಿದ್ದರೂ ಸಹ, ಆಕೆಯ ಸಾಕ್ಷ್ಯದಲ್ಲಿ ಅಂತಹ ವಿಶ್ಲೇಷಣೆಯ ನಿರ್ದಿಷ್ಟ ವಿವರಗಳನ್ನು ಒದಗಿಸಿರುವುದಿಲ್ಲ. ಪ್ರ.ಸಾ.1 ರವರು ನೇಹಾರನ್ನು ವಿಚಾರಣೆಗೆ ಒಳಪಡಿಸಿರುವುದಾಗಿ ಒಪ್ಪಿಕೊಂಡಿದ್ದಾರೆ. ಮುಂದುವರಿದು, ನೇಹಾರವರು ಒಂದು ಜೀನ್ಸ್ ಮತ್ತು ಮರೂನ್ ಬಣ್ಣದ ಟಾಪ್ ಧರಿಸಿ ತನ್ನ ಮನೆಯಿಂದ ಹೊರಹೋಗುತ್ತಾರೆ ಎಂದು ಮೂಲಗಳಿಂದ ಆಕೆಗೆ ತಿಳಿದುಬಂದಿದೆ ಎಂದು ಪ್ರ.ಸಾ.1 ದೃಢಪಡಿಸುತ್ತಾರೆ. ನೇಹಾರ ಬಂಧನಕ್ಕೂ ಮುಂಚಿತವಾಗಿ ಪ್ರ.ಸಾ.1 ರವರು ಈ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ ಮತ್ತು ಆದ್ದರಂದ, ಪ್ರಾಯಶಃ ದಿನಾಂಕ 22.06.2011ರ ನಂತರವೂ ತಮ್ಮ ಸ್ವಂತ ಒಮ್ಮತದಿಂದ ತನಿಖೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಮುಂದುವರಿದು, ಪ್ರ.ಸಾ.1 ರವರು ತಮ್ಮ ಸಹೋದ್ಯೋಗಿಗಳೊಂದಿಗೆ ಮತ್ತು ಕೆಳದರ್ಜೆಯ ಅಧಿಕಾರಿಗಳೊಂದಿಗೆ ಈ ಮೂಲ ಮಾಹಿತಿಯನ್ನು ಹಂಚಿಕೊಂಡಿರುವುದಾಗಿ ಹೇಳಿರುತ್ತಾರೆ. ಪ್ರಾ.ಸಾ.28 ರವರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ನೀಡುವಾಗ, ನೇಹಾರನ್ನು ತಿರಾಹ್‌ನ ಎಲ್.ಐ.ಜಿಯಲ್ಲಿ ನೋಡಿದಾಗ ಆಕೆಯು "ಕಪ್ಪು ಜೀನ್ಸ್ ಮತ್ತು ಮರೂನ್ ಟಾಪ್" ಧರಿಸಿದ್ದರು ಎಂದು ಹೇಳಿರುತ್ತಾರೆ. ಪ್ರ.ಸಾ.1 ರ ಸಾಕ್ಷ್ಯದಲ್ಲಿ ಸುಳ್ಳಾಗಿದ್ದರೂ, ಪ್ರಾ.ಸಾ.28 ರವರು ನೇಹಾರನ್ನು ಗುರುತಿಸಿರುವುದಾಗಿ

ನುಡಿದಿದ್ದಾರೆ. ಅಂತಹ ಹೇಳಿಕೆಯ ಹೊರತಾಗಿಯೂ ಪ್ರ.ಸಾ.1 ರವರನ್ನು ಪಾಟೀ–ಸವಾಲು ಮಾಡದಿರಲು ಅಭಿಯೋಜನೆಯು ನಿರ್ಧರಿಸಿರುತ್ತದೆ.

44. ತನಿಖೆಯ ಸಮಯದಲ್ಲಿ ಪ್ರ.ಸಾ.1–ದೀಪಿಕಾ ಶಿಂಧೆಯವರ ಉಪಸ್ಥಿತಿಯ ಬಗ್ಗೆ ಪ್ರಾ.ಸಾ.7ರ ಸಾಕ್ಷ್ಯದಿಂದ ದೃಢಪಟ್ಟಿರುತ್ತದೆ. ದಿನಾಂಕ 22.06.2011 ರಂದು ನೇಹಾರ ಮನೆಯಿಂದ ವಶಪಡಿಸಿಕೊಂಡ ವಸ್ತುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಾಕ್ಷಿಯಾಗಿರುವುದಾಗಿ ಅವರು ಹೇಳಿರುತ್ತಾರೆ. ತಮ್ಮ ಸಾಕ್ಷ್ಯದ 14ನೇ ಖಂಡಿಕೆಯಲ್ಲಿ ಮತ್ತು ಪಾಟೀ ಸವಾಲಿನ ಸಮಯದಲ್ಲಿ ಪ್ರ.ಸಾ.1ರವರು ದಾಳಿ ಮಾಡಿದ ಗುಂಪಿನ ಭಾಗವಾಗಿದ್ದರು ಎಂಬುದನ್ನು ಒಪ್ಪಿಕೊಂಡಿದ್ದು, ಆ ಅಂಶವನ್ನು ದಾಖಲೆಯಿಂದ ಹೊರಗಿಡಲ್ಪಟ್ಟಿರುತ್ತದೆ. ದಿನಾಂಕ 22.06.2011ರ ಮೊದಲು ನೇಹಾ ಅವರನ್ನು ಅಕ್ರಮವಾಗಿ ವಶಕ್ಕೆ ತೆಗೆದುಕೊಂಡಿರುವುದು ಈ ಎಲ್ಲಾ ಸಂಗತಿಗಳಿಗೆ ಸರಳವಾಗಿ ಉತ್ತರಿಸಬಹುದು ಎಂದು ಮಾನ್ಯ ವಕೀಲರು ನಿವೇದಿಸಿಕೊಂಡಿರುತ್ತಾರೆ. ನೇಹಾರ ವೈಯಕ್ತಿಕ ಶೋಧ ಮತು ಆಕೆಯ ಮನೆಯಿಂದ ವಶಪಡಿಸಿಕೊಂಡಿದ್ದು ದೋಷಪೂರಿತವಾಗಿದೆ ಮತ್ತು ಈ ಉದ್ದೇಶಿತ ಪ್ರಕ್ರಿಯೆಗಳಿಗೆ ಸಂಬಂಧಿಸಿದ ದಾಖಲೆಗಳ ಮತ್ತು ಜಪ್ತಿಗಳ ಮೇಲೆ ಅವಲಂಬಿಸಲಾಗುವುದಿಲ್ಲ ಎಂದು ಬಲವಾಗಿ ವಾದ ಮಂಡಿಸಿದ್ದಾರೆ. ದಿನಾಂಕ 22.06.2011 ರಂದು ಘಟನೆಯು ನಡೆಯುತ್ತಿರುತ್ತದೆ ಎಂದು ಅಸ್ಪಷ್ಟ ವಿಧಾನದಲ್ಲಿ ತೋರಿಸುವ ಅಭಿಯೋಜನೆಯ ಉದ್ದೇಶಿತ ದಾಖಲೆಯು, ಪೊಲೀಸರು ದಾಖಲೆಯನ್ನು ಸೃಷ್ಟಿಸಿರುತ್ತಾರೆ ಮತ್ತು ಪರಿಣಾಮವಾಗಿ ನೇಹಾರನ್ನು ತಪ್ಪಾಗಿ ಸಿಕ್ಕಿಹಾಕಿಸಿದಂತಾಗಿದೆ ಎಂದು ಸೂಚಿಸುತ್ತದೆ ಎಂದು ವಾದ ಮಂಡಿಸಿದ್ದಾರೆ.

45. ಮುಂದುವರಿದು ಶ್ರೀ ಸಿಂಗ್‌ರವರು, ಆರೋಪಿಗಳ ನಡುವೆ ಯಾವುದೇ ಪೂರ್ವ ಸಂಬಂಧವನ್ನು ಅಭಿಯೋಜನೆಯು ಸಾಬೀತುಪಡಿಸಿರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ. ಮೂವರು ಆರೋಪಿಗಳು ಒಬ್ಬರಿಗೊಬ್ಬರು ತಿಳಿದಿದ್ದರು ಅಥವಾ ಘಟನಾ ಸ್ಥಳದಲ್ಲಿ ದರೋಡೆ

ಮಾಡಲು ಯಾವುದೋ ಪೂರ್ವ ಯೋಜನೆ, ಒಪ್ಪಂದ ಅಥವಾ ಸಾಮಾನ್ಯ ಉದ್ದೇಶವನ್ನು ಹೊಂದಿದ್ದರು ಎಂದು ಸೂಚಿಸುವ ಯಾವುದೇ ಸಾಕ್ಷ್ಯಗಳನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಗಳ ಸಿ.ಡಿ.ಆರ್‌ಗಳನ್ನು ಪರೀಕ್ಷಿಸಲು ಅಭಿಯೋಜನೆಗೆ ಅವಕಾಶವಿದ್ದು, ಯಾವುದೇ ಸಂಬಂಧವಿಲ್ಲದಿದ್ದರೂ ಏನಾದರೂ ಸಂಬಂಧವಿತ್ತೋ ಎಂಬುದನ್ನು ಇದರಿಂದ ತೋರಿಸಬಹುದಿತ್ತು. ಅಭಿಯೋಜನೆಗೆ ಸಿ.ಡಿ.ಆರ್ ಸಾಕ್ಷ್ಯವು ಎರಡೂ ಕಡೆಯಿಂದ ನಿರ್ಣಾಯಕವಾಗಿರುತ್ತದೆ ಮತ್ತು ಅದು ಯಾವ ಕಾರಣಕ್ಕೆ ತನಿಖೆಯ ಭಾಗವಾಗಿಲ್ಲ ಎಂಬ ವಿವರಣೆಯ ಕೊರತೆಯು ತನಿಖೆ ಮತ್ತು ಅದರ ನ್ಯಾಯಸಮ್ಮತತೆಯ ಮೇಲೆ ಅನುಮಾನಗಳನ್ನು ಉಂಟುಮಾಡುತ್ತದೆ. ಅಧಿಕೃತ ತನಿಖೆಯು ಯಾವುದೇ ಸಿ.ಡಿ.ಆರ್‌ನ್ನು ಪರೀಕ್ಷಿಸಲು ಅನುಮತಿಸಿರಲ್ಲಿಲ್ಲ ಎಂದು ಸಾಧಿಸಿದ್ದರೂ (ಇದಕ್ಕಾಗಿ ಪ್ರಾ.ಸಾ.31ರ ಹೇಳಿಕೆಯ ಮೇಲೆ ಅವಲಂಬಿತವಾಗಿದೆ) ಪ್ರ.ಸಾ.1 ರವರು ನಡೆಸಿದ ಅನಧಿಕೃತ ತನಿಖೆಯು (ಅಥವಾ, ಆ ವಸ್ತುವನ್ನು/ಸಾಕ್ಷ್ಯವನ್ನು ನ್ಯಾಯಾಲಯದಿಂದ ದೂರವಿಡಲಾಗಿದೆ.) ಸಿ.ಡಿ.ಆರ್‌ನ್ನು ಪರೀಕ್ಷಿಸಲು ಅನುಮತಿ ಮತ್ತು ಅದನ್ನು ವಿಶ್ಲೇಷಣೆಯನ್ನು ಮಾಡಲು ಅನುಮತಿಯಿರುತ್ತದೆ ಎಂದು ಒಪ್ಪಿಕೊಂಡಿದೆ ಎಂದು ಹೇಳಲಾಗಿದೆ. ಈ ಅಂಶವು ಪ್ರಸ್ತುತ ತನಿಖೆಯು ಅಸಮರ್ಪಕವಾಗಿದೆ ಮತ್ತು ಆರೋಪಿಯ ಅಪರಾಧವನ್ನು ನಿರ್ಣಯಿಸಲು ಅದನ್ನು ಅವಲಂಬಿಸುವುದು ಅಸುರಕ್ಷಿತವಾಗಿದೆ ಎಂಬ ಪ್ರತಿರಕ್ಷೆಯ ವಾದಕ್ಕೆ ವಿಶ್ವಾಸಾರ್ಹತೆಯನ್ನು ನೀಡುತ್ತದೆ. ಈ ನಿಟ್ಟಿನಲ್ಲಿ *ಸುರೇಶ್ ಸಖಾರಾಮ್ ನಂಗಾರೆ ವಿರುದ್ಧ ಮಹಾರಾಷ್ಟ್ರ ರಾಜ್ಯ*[18] ಮೊಕದ್ದಮೆಯ ಮೇಲೆ ಅವಲಂಬಿತವಾಗಿದೆ.

46. ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302ನೇ ಪ್ರಕರಣದ ಅಡಿಯಲ್ಲಿ ನೇಹಾರನ್ನು ಶಿಕ್ಷೆಗೊಳಪಡಿಸಿದಾಗ, ಕೆಳ ನ್ಯಾಯಾಲಯಗಳು ಆಕೆಯೂ ಸಹ ಆರೋಪಿ ವ್ಯಕ್ತಿಗಳೊಂದಿಗೆ ಯಾವುದಾದರು ಸಾಮಾನ್ಯ ಉದ್ದೇಶವನ್ನು ಹೊಂದಿದ್ದರೊ

18. (2012) 9 ಎಸ್‌ಸಿಸಿ 249 (ಖಂಡಿಕೆ 21)

ಅಥವಾ ಕೊಲೆಯನ್ನು ಮಾಡುವ ಸಾಮಾನ್ಯ ಉದ್ದೇಶವನ್ನು ಹೊಂದಿದ್ದರೊ ಎಂದು ಸೂಚಿಸಲು ಯಾವುದೇ ಸಾಕ್ಷ್ಯವಿರದದ್ದನ್ನು ಪರಿಗಣಿಸಲು ವಿಫಲವಾಗಿರುತ್ತದೆ. ಮುಂದುವರಿದು, ನೇಹಾರಿಂದ ಯಾವುದೇ ಆಯುಧವನ್ನು ವಶಪಡಿಸಿಕೊಂಡಿರುವುದಿಲ್ಲ, ಆಕೆಯು ಯಾವುದೇ ಗಾಯದಿಂದ ಬಳಲಿರುವುದಿಲ್ಲ ಮತ್ತು ಆಕೆಯ ಯಾವುದೇ ವೈಯಕ್ತಿಕ ವಸ್ತುಗಳನ್ನು ಘಟನಾ ಸ್ಥಳದಿಂದ ವಶಪಡಿಸಿಕೊಂಡಿರುವುದಿಲ್ಲ ಎಂಬುದು ಆಕೆಯ ದೋಷನಿರ್ಣಯದ ಸ್ವರೂಪವನ್ನು ಎತ್ತಿ ತೋರಿಸುತ್ತದೆ.

47. ಪ್ರಾ.ಸಾ.10ಕ್ಕೆ ಸಂಬಂಧಿಸಿದಂತೆ, ಶ್ರೀಮತಿ. ಪ್ರಕಾಶ್‌ರವರ ವಾದಗಳಿಗೆ ಪೂರಕವಾಗಿ, ಈ ಆಕಸ್ಮಿಕ ಸಾಕ್ಷಿಯು ನೀಡಿದ ಸಾಕ್ಷ್ಯವು ವಿಳಂಬ ಮತ್ತು ವಿರೋಧಾಭಾಸದ ಕಾರಣದಿಂದ ವಿಶ್ವಾಸಾರ್ಹವಲ್ಲ ಎಂದು ವಾದ ಮಂಡಿಸಲಾಗಿದೆ. ಪ್ರಾ.ಸಾ.10ರ ಮುಖ್ಯ–ವಿಚಾರಣೆಯು, ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾದ ಅವರ ಹೇಳಿಕೆಯ ಮೇಲಿನ ಸುಧಾರಣೆಯಾಗಿರುತ್ತದೆ ಎಂದು ಅವರ ಪಾಟೀ–ಸವಾಲು ಬಹಿರಂಗಪಡಿಸುತ್ತದೆ ಮತ್ತು ಸಾಕ್ಷಿಯು ತಮ್ಮ ಆವೃತ್ತಿಯ ಘಟನೆಯನ್ನು ಬಹಳ ವಿವರವಾಗಿ ಹೇಳಿದ್ದು ಅಂದರೆ ಆರೋಪಿಗಳ ಗಾಯದ ಬಗ್ಗೆ ಮತ್ತು ಪ್ರಮುಖವಾಗಿ ನೇಹಾರವರು ತಮ್ಮ ಸ್ಕೂಟಿಯಲ್ಲಿ ಬಂದಿರುವುದು ಮತ್ತು ಒಬ್ಬ ಹುಡುಗನಿಗೆ ಇತರ ಗಾಯಗೊಂಡ ಹುಡುಗನನ್ನು ಆಸ್ಪತ್ರೆಗೆ ಕರೆದೊಯ್ಯಲು ಹೇಳಿದರು ಎಂಬ ಅಂಶದ ಬಗ್ಗೆ ತಮ್ಮದೇ ರೀತಿಯಲ್ಲಿ ವಿವರವಾಗಿ ಹೇಳಿರುತ್ತಾರೆ. ಪ್ರಾ.ಸಾ.10 ಕೂಡ ಆತನನ್ನು ಯಾವ ವಿಷಯವು ಪೊಲೀಸ್ ಠಾಣೆಗೆ ಬರುವಂತೆ ಮಾಡಿತು ಎಂಬುದರ ಬಗ್ಗೆ ಮತ್ತು ಟಿ.ಐ.ಪಿಗೆ ಸಂಬಂಧಿಸಿದಂತೆ ತಮಗೆ ತಾವೇ ವಿರೋಧಿಸಿಕೊಂಡಿರುತ್ತಾರೆ. ಅವರು ತಮ್ಮ ಮುಖ್ಯ–ವಿಚಾರಣೆಯಲ್ಲಿ ಟಿ.ಐ.ಪಿಯನ್ನು ನಡೆಸಲಾದ ಸಂದರ್ಭದಲ್ಲಿ ಮಹಿಳಾ ಪೇದೆ ಹಾಜರಿದ್ದರು ಎಂದು ಹೇಳಿರುತ್ತಾರೆ ಆದರೆ ಪಾಟೀ–ಸವಾಲಿನಲ್ಲಿ, ಅಂತಹ ಪ್ರಕ್ರಿಯೆಯಲ್ಲಿ ಯಾವುದೇ ಮಹಿಳಾ ಪೇದೆ ಹಾಜರಿರಲ್ಲಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ಮುಂದುವರಿದು, ಪ್ರಾ.ಸಾ.12–ತಹಶೀಲ್ದಾರ್, ಪ್ರಾ.ಸಾ.18–ಪ್ರತಾಪ್ ಕುಮಾರ್ ಅಗಸಿಯಾ ಮತ್ತು ಪ್ರಾ.ಸಾ.11–ರಾಜು ಸೇನ್‌ರವರು, ಟಿ.ಐ.ಪಿಯಲ್ಲಿ

ಪ್ರಾ.ಸಾ.10 ಮತ್ತು ಪ್ರಾ.ಸಾ.11 ಒಟ್ಟಿಗೆ ಹಾಜರಾದರು ಎಂದು ಹೇಳಿರುತ್ತಾರೆ ಆದರೆ ಪ್ರಾ.ಸಾ.10 ರವರು ಆ ದಿನದಲ್ಲಿ ಪ್ರಾ.ಸಾ.11ರ ಉಪಸ್ಥಿತಿಯ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಪ್ರಾ.ಸಾ.10ರವರು 'ರೂಢಿಯ' (ಸ್ಟಾಕ್) ಸಾಕ್ಷಿಯಾಗಿ ಹಾಜರಾಗಿರುವುದರಿಂದ ಅವರ ವಿಶ್ವಾಸಾರ್ಹತೆಯು ಪ್ರಶ್ನಾರ್ಹವಾಗಿದೆ ಎಂದು ಮುಂದುವರಿದು ವಾದ ಮಂಡಿಸಲಾಗಿದೆ ಏಕೆಂದರೆ, ಹಿಂದೊಮ್ಮೆ ಪಲಾಸಿಯಾದ ಪಿ.ಎಸ್.ನಲ್ಲಿ ದಾಖಲಾದ ಮತ್ತೊಂದು ಮೊಕದ್ದಮೆಯಲ್ಲಿ ಅಭಿಯೋಜನೆಯ ಪರ ಸಾಕ್ಷಿಯಾಗಿ ಹಾಜರಾಗಿದ್ದ ಬಗ್ಗೆ ಅವರು ತಮ್ಮ ಪಾಟೀ–ಸವಾಲಿನಲ್ಲಿ ನುಡಿದಿರುತ್ತಾರೆ.

48. ಘಟನೆ ನಡೆದ ಕೇವಲ ಒಂದು ದಿನದ ನಂತರ ಅಂದರೆ ದಿನಾಂಕ 20.06.2011ರಂದು ಪ್ರಾ.ಸಾ.10 ರವರು ಮೂರು ವ್ಯಕ್ತಿಗಳನ್ನು ನೋಡಿದ ಬಗ್ಗೆ ತಿಳಿಸಿದ್ದರೂ, ಟಿ.ಐ.ಪಿ ಪ್ರಕ್ರಿಯೆಯನ್ನು ವಿಳಂಬವಾಗಿ ನಡೆಸಿದರ ಬಗ್ಗೆ ಅಭಿಯೋಜನೆಯು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಆದರೆ ಟಿ.ಐ.ಪಿ ಯನ್ನು ದಿನಾಂಕ 14.07.2011 ರಂದು ಬಹಳ ದಿನಗಳ ನಂತರ ನಡೆಸಲಾಯಿತು ಮತ್ತು ಆ ದಿನಾಂಕದೊಳಗೆ ಆರೋಪಿಗಳ ಭಾವಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು ಎಂದು ಶ್ರೀ.ಸಿಂಗ್‌ರವರು ಬಲವಾಗಿ ಮಂಡಿಸಿದ್ದಾರೆ. ಸಾಕ್ಷಿಯು ನೀಡಿದ ಸಾಕ್ಷ್ಯದ ಮೇಲೆ ಅವಲಂಬಿಸಲು ಟಿ.ಐ.ಪಿಯನ್ನು ವಿಳಂಬವಾಗಿ ನಡೆಸಿದ ಬಗ್ಗೆ ವಿವರಣೆಯನ್ನು ನೀಡಬೇಕು ಎಂದು ಗಮನಿಸಿದ ಈ ನ್ಯಾಯಾಲಯದ ತೀರ್ಪುಗಳ ಮೇಲೆ ಅವಲಂಬಿತವಾಗಿದೆ. *ಆಂಧ್ರಪ್ರದೇಶ ರಾಜ್ಯ ವಿರುದ್ಧ ಡಾ.ಎಮ್.ವಿ. ರಮಣ ರೆಡ್ಡಿ ಮತ್ತು ಇತರರು*[19] ಮತ್ತು *ರಾಜೇಶ್ ಗೋವಿಂದ್ ಜಗದೀಶ್ ವಿರುದ್ಧ ಮಹಾರಾಷ್ಟ್ರ ರಾಜ್ಯ*[20] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಹೊರಡಿಸಿದ ತೀರ್ಪುಗಳ ಮೇಲೆ ಅವಲಂಬಿತವಾಗಿದೆ. ದಿನಾಂಕ 14.07.2011ರಂದು ನಡೆಸಲಾದ ಟಿ.ಐ.ಪಿ.ಯು, ವಿಳಂಬವಾಗಿ ನಡೆಸಿದ್ದನ್ನು ಹೊರತಾಗಿ ಮತ್ತು ಕಾರ್ಯವಿಧಾನವು ಪ್ರಶ್ನಾರ್ಹವಾಗಿರುವುದರ ಹೊರತಾಗಿ,

19. (1991) 4 ಎಸ್‌ಸಿಸಿ 536 (ಖಂಡಿಕೆ 23)
20. (1999) 8 ಎಸ್‌ಸಿಸಿ 428 (ಖಂಡಿಕೆ 4–5)

ಸಾರ್ವಜನಿಕ ಕ್ಷೇತ್ರದ ಭಾಗವಾಗಿರದ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಮಾನ್ಯ ವಕೀಲರು *ಮಾತೃ @ ಗಿರೀಶ್ ಚಂದ್ರ ವಿರುದ್ಧ ಉತ್ತರ ಪ್ರದೇಶ ರಾಜ್ಯ*[21] ಮೊಕದ್ದಮೆಯ ಮೇಲೆ ಅವಲಂಬಿತವಾಗಿದ್ದು, ಇದರಲ್ಲಿ ಗುರುತು ಹಚ್ಚುವ ಕಾವಾಯತ್ತು ಪ್ರಧಾನ ಸಾಕ್ಷ್ಯಗಳಾಗಿರುವುದಿಲ್ಲ ಮತ್ತು ತನಿಖೆಯ ಪ್ರಗತಿಯೊಂದಿಗೆ ತನಿಖಾ ಸಂಸ್ಥೆಗೆ ಸಹಾಯ ಮಾಡುವ ಉದ್ದೇಶಕ್ಕಾಗಿ ಮಾತ್ರ ಬಳಸಬಹುದು ಎಂದು ಈ ನ್ಯಾಯಾಲಯವು ಗಮನಿಸಿರುತ್ತದೆ.

49. ಶೂ ಪ್ರಿಂಟ್ ವರದಿಯು (ನಿ.ಪಿ.125) ವಿರೋಧಾತ್ಮಕ ಹೇಳಿಕೆಗಳನ್ನು ಒಳಗೊಂಡಿದ್ದು ಅದು ವಿಶ್ವಾಸಾರ್ಹವಲ್ಲ ಎಂದು ವಾದ ಮಂಡಿಸಲಾಗಿದೆ. ಮುಂದುವರಿದು, ಇದು ಘಟನಾ ಸ್ಥಳದಲ್ಲಿ ಕಂಡುಬಂದ ಶೂ ಪ್ರಿಂಟ್ ಬಗ್ಗೆ ಯಾವುದೇ ನಿರ್ಣಾಯಕ ಸಾಕ್ಷ್ಯವನ್ನು ಒದಗಿಸುವುದಿಲ್ಲ ಮತ್ತು ಹೊಂದಾಣಿಕೆಗೆ ಋಣಾತ್ಮಕವೆಂದು ಕಂಡುಬಂದಿರುತ್ತದೆ. ಪೊಲೀಸರು ಪಡೆದ ಶೂ ಪ್ರಿಂಟ್‌ಗಳಿಗೆ, ಸ್ಥಳದಲ್ಲಿ ಲಭ್ಯವಿದ್ದ ಭೌತಿಕ ಮುದ್ರೆಗಳಿಂದ ಯಾವುದೇ ಅಚ್ಚುಗಳನ್ನು ತಯಾರಿಸಲಾಗಿಲ್ಲ, ಬದಲಿಗೆ ಹೆಜ್ಜೆಗುರುತುಗಳ ಬಣ್ಣದ ಛಾಯಾಚಿತ್ರಗಳನ್ನು ಪಡೆಯಲಾಗಿದೆ ಎಂಬುದನ್ನು ಗಮನಿಸಲಾಗಿದೆ. ಛಾಯಾಚಿತ್ರಗಳನ್ನು ತೆಗೆಯುವಾಗ ಕ್ಯಾಮರಾದಲ್ಲಿ ಸಮಯ/ದಿನಾಂಕವನ್ನು ತೋರಿಸುವ ವೈಶಿಷ್ಟ್ಯಗಳು ಲಭ್ಯವಿದ್ದರೂ, ಛಾಯಾಚಿತ್ರಗಳನ್ನು ತೆಗೆಯಲು ಬಳಸಲಾದ ಕ್ಯಾಮೆರಾವು ಅಂತಹ ವೈಶಿಷ್ಟ್ಯಗಳನ್ನು ಹೊಂದಿರುವುದಿಲ್ಲ. ಬಣ್ಣದ ಛಾಯಾಚಿತ್ರಗಳ ವಿಶ್ಲೇಷಣೆಯ ಸಂದರ್ಭದಲ್ಲಿ, ನಿ.ಪಿ.118 ರಲ್ಲಿ ಇರುವ ಹೆಜ್ಜೆ ಗುರುತಿಗೆ ಸಂಬಂಧಿಸಿದಂತೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲು ಛಾಯಾಚಿತ್ರಗಳು ಸಾಕಷ್ಟಿರುವುದಿಲ್ಲ ಎಂಬುದು ಕಂಡುಬಂದಿದೆ. ಶೂ ಪ್ರಿಂಟ್‌ನಿಂದ ಯಾವುದೇ ಪ್ರತ್ಯೇಕವಾದ ಶೂಗಳ ಗುಣಲಕ್ಷಣಗಳು ಕಂಡುಬಂದಿರುವುದಿಲ್ಲ ಎಂದು ವಾದ ಮಂಡಿಸಲಾಗಿದೆ. ಛಾಯಾಚಿತ್ರದ ಮುದ್ರಣದಲ್ಲಿ ಅಡಿಭಾಗದ ಮುದ್ರೆ ಅಥವಾ ವಿನ್ಯಾಸವು ಕಾಣೆಯಾಗಿದ್ದು, ಘಟನಾ ಸ್ಥಳದಲ್ಲಿ ದೊರೆತ ಯಾವುದೇ ಮುದ್ರೆಯೊಂದಿಗೆ ಎಚ್.3 ಯಲ್ಲಿನ

21. (1971) 2 ಎಸ್‌ಸಿಸಿ 75 (ಖಂಡಿಕೆ 17)

ಚಪ್ಪಲಿಯ ಅಡಿಭಾಗವು ಹೊಂದಾಣಿಕೆಯಾಗುತ್ತದೆಯೇ ಎಂದು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದಾಗ್ಯೂ, ಇ.8 ಮತ್ತು ಇ.9 ಛಾಯಾಚಿತ್ರಗಳು ಎಚ್.3 ಗೆ ಹೊಲುತ್ತದೆ ಎಂದು ಅವಿವರಣೀಯವಾಗಿ ವರದಿಯು ತೀರ್ಮಾನಿಸುತ್ತದೆ. ನೇಹಾರವರಿಂದ ಪಡೆಯಲಾಗಿದೆ ಎಂದು ಹೇಳಲಾದ ಶೂ ಪ್ರಿಂಟ್, ಅವರ ಬಲ ಅಥವಾ ಎಡ ಪಾದದ್ದೋ ಎಂಬುದನ್ನು ನಿರ್ದಿಷ್ಟಪಡಿಸುವುದಿಲ್ಲ. *ಪ್ರೀತಮ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ*[22] ಮತ್ತು *ಬಲ್ಬೀರ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ*[23] ಮೊಕದ್ದಮೆಯಲ್ಲಿ ಹೆಜ್ಜೆಗುರುತಗಳು ಒಂದು ದುರ್ಬಲ ಮತ್ತು ಪ್ರಾಥಮಿಕ ಸಾಕ್ಷ್ಯವಾಗಿರುತ್ತದೆ ಎಂದು ಈ ನ್ಯಾಯಾಲಯವು ಕಂಡುಕೊಂಡಿರುತ್ತದೆ ಎಂದು ಮಂಡಿಸಿದೆ. ಅಭಿಯೋಜನೆಯು ಹಾಜರುಪಡಿಸಿರುವ ಸಾಕ್ಷ್ಯವು ದುರ್ಬಲವಾಗಿದೆ ಎಂದು ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ ಮತ್ತು ನಿ.ಪಿ.125, ಪರೀಕ್ಷಾ ವರದಿ, ಎಸ್.ಎಫ್.ಎಸ್.ಎಲ್ ಸಾಗರದಲ್ಲಿ ಹೊಂದಾಣಿಕೆಯನ್ನು ಮಾಡಿದ್ದರೂ ಸಹ, ಹೊಂದಾಣಿಕೆಯನ್ನು ಮಾಡಲು ಯೋಗ್ಯವಾದ ಸಾಕ್ಷ್ಯವು ಇರುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ಮುಂದುವರಿದು, ವಿವರಿಸಲಾಗದ ವಿಳಂಬದ ನಂತರ ನಿ.ಪಿ.115 ರಲ್ಲಿ ಕಂಡಂತೆ, ಶೂ ಪ್ರಿಂಟ್‌ಗೆ ಸಂಬಂಧಿಸಿದ ಜಪ್ತಾದ ವಸ್ತುಗಳನ್ನು ದಿನಾಂಕ 13.07.2011 ರಂದು ಸಾಗರದ ಎಫ್.ಎಸ್.ಎಲ್‌ಗೆ ಕಳುಹಿಸಲಾಗಿರುತ್ತದೆ.

50. ಆಕಸ್ಮಿಕ ಬೆರಳೊತ್ತುಗಳಿಗೆ ಸಂಬಂಧಿಸಿದ ಬೆರಳೊತ್ತು ವರದಿಯು ವಿಶ್ವಾಸಾರ್ಹವಲ್ಲ ಮತ್ತು ಅದನ್ನು ಕೇವಲ ಪುಷ್ಟೀಕರಣದ ಸಾಕ್ಷ್ಯವಾಗಿ ಉಪಯೋಗಿಸಬಹುದು ಎಂದು ಶ್ರೀ ಸಿಂಗ್‌ರವರು ಮುಂದುವರಿದು ವಾದ ಮಂಡಿಸಿದ್ದಾರೆ. ಈ ನಿಟ್ಟಿನಲ್ಲಿ, ಘಟನಾ ಸ್ಥಳದಿಂದ ಸಂಗ್ರಹಿಸಲಾದ ಬೆರಳೊತ್ತುಗಳು ಒಂದು ತೆರೆದ ಸ್ಥಳದಿಂದ ಸಂಗ್ರಹಿಸಿಕೊಂಡಿರುವುದಾಗಿದ್ದು, ಪ್ರಾ.ಸಾ.5 ರವರು ಬಾಗಿಲು ತೆರೆದಾಗಿನಿಂದ ತನಿಖಾ ಏಜೆನ್ಸಿಯು ಆ ಸ್ಥಳಕ್ಕೆ ಬರುವವರೆಗೂ ಸಾರ್ವಜನಿಕರು ಪ್ರವೇಶಿಸಬಹುದಾದ ತೆರೆದ ಸ್ಥಳವಾಗಿರುತ್ತದೆ ಎಂದು ವಾದ ಮಂಡಿಸಿದ್ದಾರೆ.

22. ಎಐಆರ್ 1956 ಎಸ್‌ಸಿ 415.
23. 1996 (6) ಸ್ಕೇಲ್ 72.

ಆಕಸ್ಮಿಕ ಬೆರಳೊತ್ತುಗಳನ್ನು ಸಂಗ್ರಹಿಸುವಾಗ, ಅಂತಹ ಬೆರಳೊತ್ತುಗಳನ್ನು ತೆಗೆದುಹಾಕಲು ಉಪಸ್ಥಿತಿಯಿದ್ದ ವ್ಯಕ್ತಿಗಳ/ನೆರೆಹೊರೆಯವರ ಅಥವಾ ಮನೆಯ ಇತರ ಸದಸ್ಯರ ಯಾವುದೇ ಬೆರಳೊತ್ತುಗಳನ್ನು ಸಂಗ್ರಹಿಸಿರುವುದಿಲ್ಲ. ಆ ನಿಟ್ಟಿನಲ್ಲಿ ಪ್ರಾ.ಸಾ.3, ಪ್ರಾ.ಸಾ.5 ಮತ್ತು ಪ್ರಾ.ಸಾ.24ರನ್ನು ಪಾಟೀ–ಸವಾಲುಗೊಳಿಸಲಾಯಿತು. ಆ ಸ್ಥಳಕ್ಕೆ ಪ್ರವೇಶಿಸಲು ಅವಕಾಶವಿದ್ದ ಇತರರ ಬೆರಳೊತ್ತುಗಳನ್ನು ಸಂಗ್ರಹಿಸಿಕೊಂಡಿರುವುದಿಲ್ಲ ಎಂದು ಅವರುಗಳು ನುಡಿದಿರುತ್ತಾರೆ. ಬೆರಳೊತ್ತು ತಜ್ಞರು ತಯಾರಿಸಿದ ವರದಿಗೆ (ನಿ.ಪಿ.84) ಸಂಬಂಧಿಸಿದಂತೆ, ಪ್ರಾ.ಸಾ.24–ಕೆ.ಕೆ. ದ್ವಿವೇದಿಯವರು ಬೆರಳೊತ್ತನ್ನು ವಿಶ್ಲೇಷಣೆ ಮಾಡುವಾಗ ಕೆಲವೊಂದು ತೊಡಕುಗಳ ಕಡೆ ಗಮನಹರಿಸಿರುತ್ತಾರೆ. *ಮೊದಲನೆಯದಾಗಿ*, ಬೆರಳೊತ್ತುಗಳನ್ನು ಸಂಗ್ರಹಿಸಿದ ವಿಧಾನ/ಪ್ರಕ್ರಿಯೆ ಬಗ್ಗೆ ವಿವರಿಸಲು ವಿಫಲವಾಗಿದ್ದು; *ಎರಡನೆಯದಾಗಿ*, ಇತರ ವ್ಯಕ್ತಿಗಳ ನಿರ್ಮೂಲನಾ ಬೆರಳೊತ್ತುಗಳನ್ನು ಸಂಗ್ರಹಿಸಲು ವಿಫವಾಗಿದ್ದು ಇದರ ಬಗ್ಗೆ ಪೊಲೀಸರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ; *ಮೂರನೆಯದಾಗಿ* ವಿಶ್ಲೇಷಿಸಿದ ಯಾವುದೇ ಬೆರಳೊತ್ತುಗಳು ಯಾವುದೇ ಮೃತ ವ್ಯಕ್ತಿಗಳಿಗೆ ಹೊಂದಿಕೆಯಾಗಿರುವುದಿಲ್ಲ ಎಂಬ ಅಂಶದ ಬಗ್ಗೆ ಯಾವುದೇ ವಿವರಣೆಯನ್ನು ನೀಡಲು ತಜ್ಞರು ಸಮರ್ಥರಾಗಿರುವುದಿಲ್ಲ ಮತ್ತು *ನಾಲ್ಕನೆಯದಾಗಿ*, ಮೃತ ವ್ಯಕ್ತಿಗಳ ಬೆರಳೊತ್ತುಗಳನ್ನು ಸಂಗ್ರಹಿಸುವಾಗ ಶವಗಳ ಬೆರಳೊತ್ತುಗಳನ್ನು ಬೇರ್ಪಡಿಸುವುದಕ್ಕೆ ಸಂಬಂಧಿಸಿದಂತ ಮಧ್ಯಪ್ರದೇಶ ಪೊಲೀಸರ ನಿಯಮಗಳು ಅಂದರೆ ನಿಯಮ 824 ನ್ನು ಯಾವ ಕಾರಣಕ್ಕಾಗಿ ಪಾಲಿಸಿರುವುದಿಲ್ಲ ಎಂಬುದರ ಬಗ್ಗೆ ತಜ್ಞರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ವಿಶ್ಲೇಷಣೆಗೆ ತಜ್ಞರು ಯವುದೇ ದೃಢವಾದ ಪ್ರಕ್ರಿಯೆಯನ್ನು ಒದಗಿಸಿರುವುದಿಲ್ಲ ಎಂದು ಮುಂದುವರಿದು ವಾದ ಮಂಡಿಸಿದ್ದಾರೆ. ಪ್ರಾ.ಸಾ.24 ಬೆರಳೊತ್ತು ತಜ್ಞರು ವಿವರಿಸಿದ ವಿಶ್ಲೇಷಣೆಯು 8–ಅಂಶದ ವಿಧಾನವನ್ನು ಅವಲಂಬಿಸಿದೆ ಎಂದು ಹೇಳಲಾಗಿದೆ. ಪ್ರಾ.ಸಾ.24 ರವರು ಅನುಸರಿಸಿದ ವಿಧಾನವು, ಅಧಿಕಾರವ್ಯಾಪ್ತಿಯಾದ್ಯಂತ ತನಿಖಾ ಏಜೆನ್ಸಿಗಳು ಉಪಯೋಗಿಸಿದ ಎ.ಸಿ.ಇ–5ನೇ ವಿಧಾನದ (ವಿಶ್ಲೇಷನೆ, ಹೋಲಿಕೆ, ಮೌಲ್ಯಮಾಪನ ಮತ್ತು ಪರಿಶೀಲನಾ ವಿಧಾನ) 1ನೇ ಹಂತವನ್ನು ಮಾತ್ರ ವಿವರಿಸುತ್ತದೆ. ಎ.ಸಿ.ಇ 5ನೇ ವಿಧಾನದ 2 ಮತ್ತು 3ನೇ ಹಂತವನ್ನು

ಅನುಸರಿಸಲಾಗಿರುವುದಿಲ್ಲ. ವಿಶ್ಲೇಷಣೆಗಾಗಿ ಅನುಸರಿಸಲಾದ 8–ಅಂಶಗಳ ಹೊಂದಾಣಿಕೆಯ ವ್ಯವಸ್ಥೆಯು ಸಮರ್ಪಕವಾಗಿರುವುದಿಲ್ಲ ಮತ್ತು ಅಂತಹ ವಿಧಾನಕ್ಕೆ ಅನುಗುಣವಾಗಿಲ್ಲ ಎಂದು ವಾದ ಮಂಡಿಸಿದ್ದಾರೆ. ಬೆರಳೊತ್ತುಗಳನ್ನು ವಿಶ್ಲೇಷಿಸುವ ತಜ್ಞರಿಗೆ ಅಂತಹ ಮಾಹಿತಿಯನ್ನು ಒದಗಿಸುವಾಗ ಆರೋಪಿಗಳ ಬೆರಳೊತ್ತುಗಳನ್ನು ಅನಾಮಧೇಯವಾಗಿಸದ ಕಾರಣ, ಈ ವಿಷಯದಲ್ಲಿ ದೃಢೀಕರಣದ ಪಕ್ಷಪಾತ ಪ್ರಶ್ನೆಯನ್ನು ತಳ್ಳಿಹಾಕಲಾಗುವುದಿಲ್ಲ ಎಂದು ವಾದ ಮಂಡಿಸಲು ಮಾನ್ಯ ವಕೀಲರು *ಹರಿ ಓಂ ವಿರುದ್ಧ ಉತ್ತರ ಪ್ರದೇಶ ರಾಜ್ಯ*[24] ಮೊಕದ್ದಮೆಯ ಮೇಲೆ ಅವಲಂಬಿಸಿರುತ್ತಾರೆ.

51. ಪ್ರಸ್ತುತ ಮೊಕದ್ದಮೆಯಲ್ಲಿ ಮಹತ್ವದ ಸನ್ನಿವೇಶಗಳಾದ ನೇಹಾರವರ ಬಂಧನ (ಇದು ತನಿಖೆಯಲ್ಲಿ ಪ್ರಗತಿಯನ್ನು ಒದಗಿಸಿರುತ್ತದೆ), ಆಕಸ್ಮಿಕ ಸಾಕ್ಷಿ ಪ್ರಾ.ಸಾ.10 ರ ನಿರೂಪಣೆ ಮತ್ತು ಹೇಳಿಕೆ ಮತ್ತು ವಶಪಡಿಸಿಕೊಂಡದಕ್ಕೆ ಸಂಬಂಧಿಸಿದಂತ ಅಸಂಗತತೆಗಳು ಮತ್ತು ತಜ್ಞರ ವರದಿಗಳು ಗಂಭೀರವಾದ ಅನುಮಾನಕ್ಕೆ ಎಡೆಮಾಡಿಕೊಟ್ಟಿರುತ್ತದೆ ಎಂದು ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು ಬಲವಾಗಿ ಮಂಡಿಸಿದ್ದಾರೆ. ಸಾಂದರ್ಭಿಕ ಸಾಕ್ಷ್ಯದ ಮೇಲೆ ಅವಲಂಬಿತವಾದ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯವು *ಶರದ್ ಬಿರ್ದಿಚಂದ್ ಸರ್ದಾ ವಿರುದ್ಧ ಮಹಾರಾಷ್ಟ್ರ ರಾಜ್ಯ*[25] ಮೊಕದ್ದಮೆಯಲ್ಲಿ ಐದು "ಸುವರ್ಣ ತತ್ವಗಳನ್ನು" ಪ್ರತಿಪಾದಿಸಿದ್ದು ಅವುಗಳನ್ನು ಸಂಪೂರ್ಣವಾಗಿ ರುಜುವಾತುಪಡಿಸಬೇಕಿರುತ್ತದೆ ಮತ್ತು ಆರೋಪಿಯು ತಪ್ಪಿತಸ್ಥನಾಗಿ "ಇರಬೇಕು" ಎಂದಿರಬೇಕು ಮತ್ತು ತಪಿತಸ್ಥನಾಗಿ "ಇರಬಹುದು" ಎಂದಿರಬಾರದು ಎಂಬುದು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡತಕ್ಕದ್ದು ಎಂದು ನಿವೇದಿಸಿಕೊಂಡಿರುತ್ತಾರೆ. ಹೀಗೆ ರುಜುವಾತುಪಡಿಸಲಾದ ಸಂಗತಿಗಳು ಆರೋಪಿಯ ಅಪರಾಧದ ಪರಿಕಲ್ಪನೆಯೊಂದಿಗೆ ಮಾತ್ರ ಸುಸಂಗತವಾಗಿರಬೇಕು ಅಂದರೆ ಆರೋಪಿಯು ತಪ್ಪತಸ್ಥನೆಂಬುದನ್ನು ಹೊರತುಪಡಿಸಿ ಬೇರೆ ಯಾವುದೇ ಪರಿಕಲ್ಪನೆಯ ಮೇಲೆ ವಿವರಿಸಲು

24. (2021) 4 ಎಸ್‌ಸಿಸಿ 345 (ಖಂಡಿಕೆ 25, 38–41, 43)
25. (1984) 4 ಎಸ್‌ಸಿಸಿ 116

ಸಾಧ್ಯವಿರುವುದಿಲ್ಲ. ಸನ್ನಿವೇಶಗಳು ನಿರ್ಣಾಯಕ ಸ್ವರೂಪ ಮತ್ತು ಪ್ರವೃತ್ತಿಯನ್ನು ಹೊಂದಿರಬೇಕು. ಸನ್ನಿವೇಶಗಳು ಸಾಬೀತುಪಡಿಸಬೇಕಾದ ಒಂದನ್ನು ಹೊರತುಪಡಿಸಿ ಸಾಧ್ಯವಿರುವ ಎಲ್ಲಾ ಪರಿಕಲ್ಪನೆಗಳನ್ನು ಹೊರಗಿಡಬೇಕು ಮತ್ತು ಆರೋಪಿಯ ಮುಗ್ದತೆಗೆ ಅನುಗುಣವಾದ ನಿರ್ಣಯಕ್ಕೆ ಯಾವುದೇ ಸಮಂಜಸವಾದ ಆಧಾರವನ್ನು ಬಿಡದಂತೆ ಸಂಪೂರ್ಣವಾದ ಕ್ರಮವಾದ ಸಾಕ್ಷ್ಯಗಳು ಇರಬೇಕು ಮತ್ತು ಎಲ್ಲಾ ಮಾನವ ಸಂಭವನೀಯತೆಗಳು ಆರೋಪಿಯೇ ಕೃತ್ಯವನ್ನು ಎಸಗಿದ್ದಾನೆ ಎಂದು ತೋರಿಸಬೇಕು.

52. ಪ್ರ.ಸಾ.1 ರವರು, ತನಿಖೆಯಲ್ಲಿ ಭಾಗಿಯಾಗಿರುವ ಬಗ್ಗೆ, ಮೊಕದ್ದಮೆಯನ್ನು ಬಗೆಹರಿಸಲು ಪಾಳಿತಪ್ಪಿದ ಬಡ್ತಿಯನ್ನು ಪಡೆದಿರುವ ಬಗ್ಗೆ, ಹಾಜರುಪಡಿಸದಂತ ಅಥವಾ ಅವಲಂಬಿಸಿದ ಸಿ.ಡಿ.ಆರ್‌ಗಳನ್ನು ವಿಶ್ಲೇಷಿಸಿದ ಬಗ್ಗೆ ಆಕೆಯ ಪಾಲ್ಗೊಳ್ಳುವಿಕೆ ಮತ್ತು ಬಂಧನ ಮತ್ತು ತರುವಾಯದ ಪ್ರಶ್ನೋತ್ತರದ ಸಂದರ್ಭದಲ್ಲಿ ಆಕೆಯ ಪಾಲ್ಗೊಳ್ಳುವಿಕೆಯ ಬಗ್ಗೆ ಒಪ್ಪಿಕೊಂಡಿದ್ದರೂ ಸಹ, ಆಕೆಯ ಪಾತ್ರವನ್ನು ಸಂಪೂರ್ಣವಾಗಿ ಮರೆಮಾಚಲಾಗಿದೆ ಎಂದು ನಿವೇದಿಸಿದ್ದು, ನೇಹಾರ ಬಂಧನಕ್ಕೆ ಕಾರಣವಾದ ಎಲ್ಲಾ ಸನ್ನಿವೇಶಗಳ ಬಗ್ಗೆ ಗಂಭೀರವಾದ ಅನುಮಾನವನ್ನು ಹುಟ್ಟುಹಾಕುತ್ತವೆ. ಇದು ಆಕೆಯ ಸಂಪೂರ್ಣ ಪಾತ್ರದ ಮೇಲೆ ಅನುಮಾನವನ್ನು ಉಂಟುಮಾಡುತ್ತದೆ ಎಂದು ಬಲವಾಗಿ ಮಂಡಿಸಲಾಗಿದೆ. ಅಂತೆಯೇ, ಮೂರು ಆರೋಪಿಗಳ ಆಣತಿಯ ಮೇರೆಗೆ ಎರಡು ವಿವಿಧ ದಿನಾಂಕದಂದು ಬಿಡಿಬಿಡಿಯಾಗಿ ವಶಪಡಿಸಿಕೊಂಡ ವಸ್ತುಗಳು, ಬಟ್ಟೆ, ಶೂ ಮತ್ತು ವಾಹನ ಇತ್ಯಾದಿಗಳನ್ನು ಉಳಿಸಿಕೊಂಡಿರುವುದಿಲ್ಲ ಎಂದು ಹೇಳಿದ್ದರೂ ಸಹ, ಅಪರಾಧಕ್ಕೆ ಸಿಕ್ಕಿಸುವಂತಹ ವಸ್ತುಗಳಾದ ಆಯುಧಗಳನ್ನು ಆರೋಪಿಗಳು ಉಳಿಸಿಕೊಂಡಿದ್ದರು ಎಂಬ ಅಂಶವು ವಸ್ತುಗಳನ್ನು ವಶಪಡಿಸಿಕೊಂಡ ಪ್ರಾಮಾಣಿಕತೆಯ ಬಗ್ಗೆ ಅನುಮಾನ ಮತ್ತು ಸಂಶಯವನ್ನು ಉಂಟುಮಾಡುತ್ತದೆ. ಈ ಎಲ್ಲಾ ಅಂಶಗಳು ಪ್ರಾ.ಸಾ.10–ಆಕಸ್ಮಿಕ ಸಾಕ್ಷಿಯ ಅವಿಶ್ವಾಸನೀಯತೆ, ಅವರ ಹೇಳಿಕೆಯಲ್ಲಿನ ವಿರೋಧಾಭಾಸಗಳು, ರೂಢಿಯ ಪೊಲೀಸ್ ಸಾಕ್ಷಿಯಾಗಿದ್ದ ಬಗ್ಗೆ ಒಪ್ಪಿಕೊಂಡಿರುವುದು ಮತ್ತು ಆರೋಪಿಯನ್ನು ಸ್ವಲ್ಪ ಸಮಯದವರೆಗೆ ಮಾತ್ರ

ನೋಡಿರುವುದಾಗಿ ಆತ ಒಪ್ಪಿಕೊಂಡಿರುವುದು ಮತ್ತು ಟಿ.ಐ.ಪಿಯನ್ನು ನಡೆಸುವಲ್ಲಿನ ವಿವರಿಸಲಾಗದ ವಿಳಂಬದೊಂದಿಗೆ ಒಟ್ಟಾರೆಯಾಗಿ ಸೇರಿಕೊಂಡಿದ್ದು, ಆರೋಪಿಯನ್ನು ಗುರುತಿಸುವ ಬಗ್ಗೆ ಮತ್ತು ಅಪರಾಧದಲ್ಲಿ ಅವರ ಪಾತ್ರದ ಬಗೆಗಿನ ಅಭಿಯೋಜನೆಯ ಕಥೆಯನ್ನು ದುರ್ಬಲಗೊಳಿಸುತ್ತದೆ ಎಂದು ವಾದ ಮಂಡಿಸಿದ್ದಾರೆ.

ರಾಜ್ಯದ ನಿವೇದನೆಗಳು:

53. ಮಾನ್ಯ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ದಾಖಲಿಸಿದ ಮತ್ತು ಉಚ್ಚ ನ್ಯಾಯಾಲಯವು ತಮ್ಮ ಪ್ರಶ್ನಿತ ತೀರ್ಪಿನಲ್ಲಿ ಸ್ಥಿರೀಕರಿಸಿದ ಅಪೀಲುದಾರರ ಅಪರಾಧದ ಸಮವರ್ತಿತ ನಿರ್ಣಯಗಳನ್ನು ಅಡ್ಡಿಪಡಿಸಬಾರದು ಎಂದು ಮಧ್ಯಪ್ರದೇಶ ರಾಜ್ಯದ ಮಾನ್ಯ ಹೆಚ್ಚುವರಿ ಅಡ್ವೋಕೇಟ್ ಜನರಲ್ (ಎ.ಎ.ಜಿ) ಶ್ರೀಮತಿ. ಸ್ವರುಪಮಾ ಚರ್ತುವೇದಿಯವರು ವಾದ ಮಂಡಿಸಿರುತ್ತಾರೆ. ಮೊಕದ್ದಮೆಯು ಸಾಂದರ್ಭಿಕ ಸಾಕ್ಷ್ಯಗಳ ಮೇಲೆ ಅವಲಂಬಿತವಾಗಿದ್ದರೂ ಸಹ, ಪ್ರತೀ ಸನ್ನಿವೇಶವನ್ನು ಸಂದೇಹಾತೀತವಾಗಿ ಸಾಬೀತುಪಡಿಸುವಲ್ಲಿ ಮತ್ತು ಪ್ರತೀ ಸನ್ನಿವೇಶಗಳನ್ನು ಒಟ್ಟಾರೆಯಾಗಿ ಅಧ್ಯಾಯನದ ಮೇಲೆ ಆರೋಪಿಗಳ/ಅಪೀಲುದಾರರ ಅಪರಾಧವನ್ನು ನಿರ್ಣಯಕವಾಗಿ ಸ್ಥಾಪಿಸುವಲ್ಲಿಯೂ ಸಹ ಅಭಿಯೋಜನೆಯು ಯಶಸ್ವಿಯಾಗಿದೆ ಎಂದು ಆಕೆಯು ನಿವೇದಿಸಿಕೊಂಡಿದ್ದಾರೆ. ಅಪೀಲುದಾರರು ಮುಗ್ದರು ಎಂಬ ಯಾವುದೇ ಪರಿಕಲ್ಪನೆಯನ್ನು ಸಾಕ್ಷ್ಯದ ನಿರ್ಣಾಯಕ ಸ್ವರೂಪವು ತಳ್ಳಿಹಾಕುತ್ತದೆ ಮತ್ತು ಬೇರೆ ಯಾರು ಅಲ್ಲದೆ, ಅವರುಗಳ ವಿರುದ್ಧ ದೋಷಾರೋಪಣೆಯಾಗಿದ್ದು ಅವರೇ ತ್ರಿವಳಿ ಕೊಲೆಯ ಅಪರಾಧಿಗಳು ಎಂಬ ನಿರ್ಣಯಕ್ಕೆ ತಲುಪಬಹುದು ಎಂದು ಆಕೆಯು ಒತ್ತಿ ಹೇಳಿರುತ್ತಾರೆ.

54. ತಜ್ಞರ ಸಾಕ್ಷ್ಯದಿಂದ ಸಾಬೀತುಪಡಿಸಲಾದ ಪ್ರತೀ ಸನ್ನಿವೇಶವನ್ನು ಒಳಗೊಂಡ ಬ್ಯಾಲಿಸ್ಟಿಕ್ ವರದಿಯಲ್ಲಿನ ನಿರ್ಣಯಗಳ ಮೇಲೆ ಅತಿಯಾದ ಅವಲಂಬನೆಯನ್ನು ಇರಿಸಲಾಗಿದೆ. ಈ ನಿಟ್ಟಿನಲ್ಲಿ, ಮಾನ್ಯ ವಕೀಲರು ನಿ.ಪಿ.25–ಎರಡು ಬಳಸಲಾದ ಕಾರ್ಟ್ರಿಡ್ಜ್ (ಅಂಶ 7 ರಲ್ಲಿ)

ಮತ್ತು ಒಂದು ಜೀವಂತ ಗುಂಡನ್ನು (ಅಂಶ 6 ರಲ್ಲಿ) ಪತ್ತೆಯಾದ ಬಗ್ಗೆ ಪ್ರಾ.ಸಾ.31–ಐ.ಓ ರವರು ತಯಾರಿಸಿದ ಅಪರಾಧ ಸ್ಥಳದ ನಕ್ಷೆಯ ಮೇಲೆ ಅವಲಂಬಿಸಿರುತ್ತಾರೆ. ಗುಂಡನ್ನು ಜಪ್ತಿಪಡಿಸಿಕೊಂಡು ನಿ.ಪಿ.27–ಜಪ್ತಿ ಮೆಮೊದಲ್ಲಿ ದಾಖಲು ಮಾಡಲಾಯಿತು. ನಿ.ಪಿ.44–ಮರಣೋತ್ತರ ಪರೀಕ್ಷೆಯು ಮೇಘಾರವರ ದೇಹದಿಂದ ಒಂದು ಗುಂಡನ್ನು ವಶಪಡಿಸಿಕೊಂಡು ರವಾನಿಸಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಪ್ರಾ.ಸಾ.15–ಡಾ.ಪಿ.ಎಸ್. ತಾಕುರ್‌ರವರು ಈ ಗುಂಡನ್ನು ವಶಪಡಿಸಿಕೊಂಡಿದ್ದರ ಬಗ್ಗೆ ನುಡಿದಿರುತ್ತಾರೆ. ನಿ.ಪಿ.127 ರಲ್ಲಿನ ಮೆಮೊನ ಅಡಿಯಲ್ಲಿ ಗುಂಡನ್ನು ಜಪ್ತಿಪಡಿಸಿಕೊಳ್ಳಲಾಯಿತು. ಅಂತೆಯೇ, ದಿನಾಂಕ 20.06.2011 ರ ಮುಂಜಾನೆ ಎಮ್.ವೈ. ಆಸ್ಪತ್ರೆಯಲ್ಲಿ ಪ್ರಾ.ಸಾ.32 ರವರು ರಾಹುಲ್‌ರವರ ಪಾದದಿಂದ ಒಂದು ಗುಂಡನ್ನು ಹೊರತೆಗೆದಿರುತ್ತಾರೆ. ಆಸ್ಪತ್ರೆಯ ಮೆಡಿಕೋ–ಲೀಗಲ್ ಶಾಖೆಯಲ್ಲಿ ಗುಂಡನ್ನು ಇರಿಸಿದ್ದು ಅದನ್ನು ನಿ.ಪಿ.113ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ನಂತರ ದಿನಾಂಕ 23.06.2011 ರಂದು ನಿ.ಪಿ.108ರ ಅಡಿಯಲ್ಲಿನ ಮೆಮೊದಲ್ಲಿ ಅದನ್ನು ಜಪ್ತಿಪಡಿಸಿಕೊಳ್ಳಲಾಯಿತು. ರಾಹುಲ್‌ರ ವಶದಿಂದ ಚಾಕು ಮತ್ತು ಪಿಸ್ತೂಲನ್ನು ಜಪ್ತಿ ಮಾಡಿಕೊಂಡಿದ್ದರ ಬಗ್ಗೆ ನಿ.ಪಿ.14 ರಲ್ಲಿ ದಾಖಲಿಸಲಾಯಿತು. ಪಿಸ್ತೂಲನ್ನು ಪರಿಶೀಲಿಸಿ ಪರೀಕ್ಷೆಗಾಗಿ ಉಪಯೋಗಿಸಲಾಯಿತು ಮತ್ತು ಬ್ಯಾಲಿಸ್ಟಿಕ್ ತಜ್ಞರು ನಿ.ಪಿ.120 ರ ಅನ್ವಯ ನೀಡಲಾದ ವರದಿಯಲ್ಲಿ, ಉಪಯೋಗಿಸಿದ ಗುಂಡುಗಳು (ಅಪರಾಧ ಸ್ಥಳದಿಂದ ಜಪ್ತಿಮಾಡಿಕೊಂಡ ಕಾರ್ಟ್ರಿಡ್ಜ್‌ಗಳು), ಜೀವಂತ ಗುಂಡು (ಅಪರಾಧ ಸ್ಥಳದಿಂದಲೇ ಜಪ್ತಿಮಾಡಿಕೊಂಡ), ರಾಹುಲ್‌ರವರ ಪಾದದಿಂದ ಹೊರತೆಗೆಯಲಾದ ಗುಂಡು ಮತ್ತು ಮೇಘಾರವರ ದೇಹದಿಂದ ಹೊರತೆಗೆಯಲಾದ ಗುಂಡು ಎಲ್ಲವೂ ರಾಹುಲ್‌ರವರ (ನಿ.ಪಿ.14) ಆಣತಿಯಂತೆ ವಶಪಡಿಸಿಕೊಂಡು ಜಪ್ತಿಮಾಡಿಕೊಂಡ ಒಂದೇ ಪಿಸ್ತೂಲ್‌ನಿಂದ ಹಾರಿಸಲಾಗಿರುತ್ತದೆ ಎಂದು ದೃಢಪಡಿಸಿದ್ದಾರೆ. ಶಸ್ತ್ರಾಗಾರರು ನೀಡಿದ ವರದಿಯಾದ ನಿ.ಪಿ.52ರ ಮೇಲೂ ಮಾನ್ಯ ವಕೀಲರು ಅವಲಂಬಿಸಿರುತ್ತಾರೆ. ಪ್ರಾ.ಸಾ.10–ಐ.ಓ ರವರ ಜೊತೆಗೆ, ಪ್ರಾ.ಸಾ.3, ಪ್ರಾ.ಸಾ.5 ಮತ್ತು ಪ್ರಾ.ಸಾ.19 ರವರು ಈ ವಸ್ತುಗಳನ್ನು ಜಪ್ತಿ ಮಾಡಿಕೊಂಡು ಅವುಗಳನ್ನು ಮೊಹರು ಮಾಡಿ ಸೂಕ್ತ ವಶಕ್ಕೆ ಪಡೆದ ಬಗ್ಗೆ

ಮಾತನಾಡಿರುತ್ತಾರೆ ಎಂದು ಮುಂದುವರಿದು ವಾದ ಮಂಡಿಸಲಾಗಿದೆ. ಅವರ ಸಾಕ್ಷ್ಯಗಳಲ್ಲಿ ಯಾವುದೇ ವಿರೋಧಾಭಾಸ ಅಥವಾ ಯಾವುದೇ ಅಂತರವಿರುವುದಿಲ್ಲ. ಮುಂದುವರಿದು ರಾಹುಲ್‌ರವರ ಮನೆಯಿಂದ ಆತನ ಆಣತಿಯಂತೆ ಜಪ್ತಿಮಾಡಿಕೊಂಡ ಆಯುಧಗಳಿಂದಲೇ ವಶಪಡಿಸಿಕೊಂಡಂತಹ ಗುಂಡುಗಳನ್ನು ಹಾರಿಸಲಾಗಿದೆ ಎಂಬ ಅಭಿಯೋಜನೆಯ ಆವೃತ್ತಿಯನ್ನು ಬ್ಯಾಲಿಸ್ಟಿಕ್ ವರದಿಯು ಸಂಪೂರ್ಣವಾಗಿ ಬೆಂಬಲಿಸುತ್ತದೆ.

55. ಮೇಘಾರವರ ಹಣೆಯ ಮೇಲೆ ಆದ ಒಂದು ಗಾಯವನ್ನು ಹೊರತುಪಡಿಸಿ, ಎಲ್ಲಾ ಮೂವರು ಮೃತರ ಸಾವಿಗೆ ಕಾರಣವಾದ ಎಲ್ಲಾ ಗಾಯಗಳು, ಆರೋಪಿಗಳಾದ ರಾಹುಲ್ ಮತ್ತು ಮನೋಜ್‌ರವರ ಹೇಳಿಕೆಯಂತೆ ವಶಪಡಿಸಿಕೊಂಡ ಎರಡು ಚಾಕುವಿನಿಂದ ಸಂಭವಿಸಿರುತ್ತದೆ ಎಂದು ಬ್ಯಾಲಿಸ್ಟಿಕ್ ವರದಿ ಮತ್ತು ವೈದ್ಯಕೀಯ ಅಭಿಪ್ರಾಯವು ಸಾಬೀತುಪಡಿಸುತ್ತದೆ ಎಂದು ಎ.ಎ.ಜಿ.ಯವರು ವಾದ ಮಂಡಿಸಿದ್ದಾರೆ. ಮೃತರ ಮರಣೋತ್ತರ ಪರೀಕ್ಷೆಯನ್ನು ನಡೆಸಿದ ವೈದ್ಯರಾದ ಪ್ರಾ.ಸಾ.15ರ ಸಾಕ್ಷ್ಯದ ಮೇಲೆ ಮತ್ತು ಅವರು ನೀಡಿದ ವರದಿಯ (ನಿ.ಪಿ.44) ಮೇಲೆ ಮಾನ್ಯ ವಕೀಲರು ಅವಲಂಬಿಸಿರುತ್ತಾರೆ. ಅಪರಾಧ ಸಂಭವಿಸಿದ ಸ್ಥಳದಿಂದ ವರದಿಯಾಗುವವರೆಗೆ ಮತ್ತು ತದನಂತರವೂ, ಮೊಹರುಗಳನ್ನು ನಿರ್ವಹಿಸಲಾಗಿದ್ದು ಮತ್ತು ಯಾವುದೇ ಅಡತಡೆಯಿಲ್ಲದೆ ವಸ್ತುಗಳನ್ನು ವಶಪಡಿಸಿಕೊಂಡ ಕ್ರಮವು ನಿರಂತರವಾಗಿ ಸುಸ್ಥಿರದಲ್ಲಿತ್ತು ಎಂದು ವಾದಿಸಲಾಗಿದೆ. ಜಪ್ತಿ ಸಾಕ್ಷಿಗಳು ತಮ್ಮ ಹೇಳಿಕೆಗಳಲ್ಲಿ ಈ ಅಂಶಗಳನ್ನು ಬೆಂಬಲಿಸಿರುತ್ತಾರೆ.

56. ಶೂ ಪ್ರಿಂಟ್‌ಗಳಿಗೆ ಸಂಬಂಧಿಸಿದಂತೆ, ರಾಜ್ಯದ ಪರ ವಕೀಲರು ನಿ.ಪಿ.31 ಮತ್ತು ನಿ.ಪಿ.32 (ಮನೋಜ್‌ರವರ ಆಣತಿಯಂತೆ ಶೂಗಳನ್ನು ಜಪ್ತಿಮಾಡಿಕೊಂಡ ಬಗ್ಗೆ); ನಿ.ಪಿ.34 ಮತ್ತು ನಿ.ಪಿ.35 (ನೇಹಾರವರ ಆಣತಿಯಂತೆ ಶೂವನ್ನು ಜಪ್ತಿಮಾಡಿಕೊಂಡ ಬಗ್ಗೆ); ನಿ.ಪಿ.21 (ದಿನಾಂಕ 22.06.2011 ರಂದು ಮಾಡಿದ ಜಪ್ತಿ); ನಿ.ಪಿ.77 (ಪ್ರಾ.ಸಾ.21–ಹಿರಿಯ ವೈಜ್ಞಾನಿಕ ಅಧಿಕಾರಿಯು ನೀಡಿದ ಅಪರಾಧ ಸ್ಥಳದ ತಪಾಸಣಾ ವರದಿ); ನಿ.ಪಿ.115 (ಈ ಎಲ್ಲಾ

ಮಾದರಿಯನ್ನು ಪರೀಕ್ಷೆಗೆ ರವಾನಿಸುವುದು); ನಿ.ಪಿ.75–ದಿನಾಂಕ 23.06.2011 ರಂದು ಅನ್ನಪೂರ್ಣ ಪಿ.ಎಸ್.ನವರು ಶೂನ ಬಗ್ಗೆ ಜಪ್ತಿ ಮೆಮೊದಲ್ಲಿ ದಾಖಲು ಮಾಡಿರುವುದು; ಶೂವನ್ನು ಜಪ್ತಿ ಮಾಡಿಕೊಳ್ಳಲು ಸಾಕ್ಷಿಯಾದ ಪ್ರಾ.ಸಾ.20 ರ ಹೇಳಿಕೆ; ಶೂ ಪ್ರಿಂಟ್ ವರದಿ (ನಿ.ಪಿ.125) ಮತ್ತು ಪ್ರಾ.ಸಾ.31–ಐ.ಓ ರವರ ಹೇಳಿಕೆಯ ಮೇಲೆ ಅವಲಂಬಿತರಾಗಿರುತ್ತಾರೆ. ಈ ಸಾಕ್ಷಿಗಳು ತಮ್ಮನ್ನು ತಾವು ವಿರೋಧಿಸಿಕೊಂಡಿರುವುದಿಲ್ಲ ಮತ್ತು ಶೂ ಪ್ರಿಂಟ್ ವರದಿ ಹಾಗು ಅಪರಾಧದ ಸ್ಥಳದಲ್ಲಿ ಸಂಗ್ರಹಿಸಿದಂತ ಪ್ರಿಂಟ್‌ಗಳೊಂದಿಗೆ ಅವುಗಳ ಹೊಂದಾಣಿಕೆಯನ್ನು ಅಭಿಯೋಜನೆಯು ಸಂಪೂರ್ಣವಾಗಿ ಮತ್ತು ತೃಪ್ತಿಕರವಾಗಿ ರುಜುವಾತುಪಡಿಸುತ್ತದೆ ಎಂದು ನಿವೇದಿಸಲಾಗಿದೆ. ಅಪರಾಧ ಸಂಭವಿಸಿದಾಗ ಆ ಸ್ಥಳದಲ್ಲಿ ಆರೋಪಿಗಳು ಉಪಸ್ಥಿತಿಯಿದ್ದರು ಮತ್ತು ಇತರರು ಇರುವುದಿಲ್ಲ ಎಂದು ಇವುಗಳು ಸಾಬೀತುಪಡಿಸುತ್ತವೆ.

57. ಕೊಲೆಯ ಹಿಂದಿದ್ದ ಪ್ರಮುಖ ಉದ್ದೇಶವು ದರೋಡೆಯಾಗಿತ್ತು ಎಂದು ಎ.ಐ.ಜಿ.ಯವರು ವಾದಿಸಿರುತ್ತಾರೆ. ನೇಹಾರವರ ವಿವರಣಾ ಹೇಳಿಕೆಯ ನಂತರ ಜಪ್ತಿ ಪಡಿಸಿಕೊಂಡ ನಿ.ಪಿ.10 ಮತ್ತು ನಿ.ಪಿ.11; ರಾಹುಲ್‌ರವರ ಹೇಳಿಕೆಯ ಅನುಸಾರವಾಗಿ ಜಪ್ತಿ ಮಾಡಿದ ವಸ್ತುಗಳು (ನಿ.ಪಿ.13 ಮತ್ತು ನಿ.ಪಿ.14); ಮತ್ತು ಮನೋಜ್‌ರವರ ಹೇಳಿಕೆಯ ಅನುಸಾರವಾಗಿ ವಶಪಡಿಸಿಕೊಂಡ (ನಿ.ಪಿ.16 ಮತ್ತು ನಿ.ಪಿ.17) ದರೋಡೆಯಾದ ವಸ್ತುಗಳು ವಿವರಣಾ ಹೇಳಿಕೆಗಳ ಅನುಸಾರವಾಗಿ ವಶಪಡಿಸಿಕೊಳ್ಳಲಾಯಿತು ಎಂಬುದನ್ನು ಸಾಬೀತುಪಡಿಸುತ್ತದೆ. ವಸ್ತುಗಳ ಟಿ.ಐ.ಪಿಯ ಸಂದರ್ಭದಲ್ಲಿ, ಪ್ರಾ.ಸಾ.1–ನಿರಂಜನ್ ದೇಶಪಾಂಡೆಯವರು ದರೋಡೆಯಾದ ವಸ್ತುಗಳನ್ನು (ಆಭರಣದ ವಸ್ತುಗಳಂತಹವು) ಮೃತರಿಗೆ ಸೇರಿದ ವಸ್ತುಗಳು ಎಂದು ಗುರುತಿಸಿರುತ್ತಾರೆ ಮತ್ತು ಪ್ರಾ.ಸಾ.12–ತಹಶೀಲ್ದಾರರ ಸಾಕ್ಷ್ಯವು ಸಹ ಇದಕ್ಕೆ ಪುಷ್ಟಿ ನೀಡುತ್ತದೆ. ಇದಲ್ಲದೆ, ನೇಹಾರನ್ನು ವಶಕ್ಕೆ ತೆಗೆದುಕೊಂಡು ನಂತರ ಆಕೆಯನ್ನು ದಿನಾಂಕ 22.06.2011 ರಂದು ಬಂಧಿಸಿದಾಗ ಆಕೆಯಿಂದ ಎ.ಟಿ.ಎಮ್ ಕಾರ್ಡ್‌ನ್ನು ಜಪ್ತಿಮಾಡಿಕೊಂಡದ್ದನ್ನು ಪ್ರಾ.ಸಾ.4–ಬನ್ನೋ ಸೂಲಂಕಿಯವರೂ ಸಹ ಬೆಂಬಲಿಸುತ್ತಾರೆ.

ನೇಹಾರ ವಿವರಣಾ ಹೇಳಿಕೆಯ ಅನುಸಾರವಾಗಿ ವಶಪಡಿಸಿಕೊಂಡ ಎ.ಟಿ.ಎಮ್ ಕಾರ್ಡ್‌ನ್ನು (ನಿ.ಪಿ.98) ಬ್ಯಾಂಕ್ ನೀಡಿರುತ್ತದೆ ಎಂದು ಬ್ಯಾಂಕ್ ಅಧಿಕಾರಿಯಾದ ಪ್ರಾ.ಸಾ.27 ನುಡಿದಿರುತ್ತಾರೆ. ಈ ಎಲ್ಲಾ ಅಂಶವನ್ನು ಸತ್ಯಾತೀತವಾಗಿ ಸಾಬೀತುಪಡಿಸಿದ್ದು, ದರೋಡೆ ಮಾಡುವ ಉದ್ದೇಶದಿಂದ ಮೃತರು ವಾಸವಿದ್ದ ಸ್ಥಳಕ್ಕೆ ಆರೋಪಿಗಳು ಸಂಚು ಮಾಡಿ ಪ್ರವೇಶಿಸಿರುತ್ತಾರೆ ಎಂದು ಅಭಿಯೋಜನೆಯು ಆಪಾದಿಸಿರುತ್ತದೆ. ಆರೋಪಿಗಳು ನೀಡಿದ ವಿವರಣಾ ಹೇಳಿಕೆಯ ಅನುಸಾರವಾಗಿ ದರೋಡೆಯಾದ ವಸ್ತುಗಳನ್ನು ವಶಪಡಿಸಿಕೊಂಡಿರುವುದು ಮತ್ತು ನಂತರ ಅವುಗಳನ್ನು ಗುರುತಿಸಿರುವುದು ಕೊಲೆಯೊಂದಿಗೆ ಆರೋಪಿಗಳ ನೇರ ಸಂಪರ್ಕವನ್ನು ಬಹಿರಂಗಪಡಿಸುತ್ತದೆ ಮತ್ತು ಅವರುಗಳು ಅಪರಾಧಿಗಳು ಎಂಬುದನ್ನು ರುಜುವಾತುಪಡಿಸುತ್ತದೆ.

58. ನೇಹಾ ಅವರನ್ನು ಹಿಂದೆಯೇ ಬಂಧಿಸಲಾಗಿತ್ತು ಮತ್ತು ಆ ಉದ್ದೇಶಕ್ಕಾಗಿ ಪ್ರ.ಸಾ.1–ದೀಪಿಕಾ ಶಿಂಧೆಯವರ ಪಾತ್ರವನ್ನು ಉತ್ಪ್ರೇಕ್ಷಿಸಿರುವುದಾಗಿ ಆಪಾದಿಸಿ ಅಭಿಯೋಜನೆಯನ್ನು ಅವಿಶ್ವಾಸಾರ್ಹವಾಗಿ ಮಾಡಬೇಕೆಂದು ಅಪೀಲುದಾರರು ಮನವಿ ಮಾಡಿಕೊಂಡಿದ್ದಾರೆ ಎಂದು ನಿವೇದಿಸಲಾಗಿದೆ. ಆ ಅಧಿಕಾರಿಯು ತನಿಖೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ ಮತ್ತು ಅಪರಾಧವನ್ನು ಪರಿಹರಿಸುವಲ್ಲಿನ ಆಕೆಯ ಪ್ರಾತದಿಂದ ಆಕೆಯು ಪಾಳಿತಪ್ಪಿದ ಬಡ್ತಿಯನ್ನು ಪಡೆದಿರುತ್ತಾರೆ ಎಂಬುದನ್ನು ಸೇರಿಸಲಾಗಿದೆ ಎಂದು ಸೂಚಿಸಲು ಅಪೀಲುದಾರರು ಕೋರಿಕೊಂಡಿರುತ್ತಾರೆ. ಪ್ರ.ಸಾ.1–ದೀಪಿಕಾ ಶಿಂಧೆಯವರು ಪ್ರಸ್ತುತ ಮೊಕದ್ದಮೆಯಲ್ಲಿ ತಾವು ಯಾವುದೇ ಬಂಧನವನ್ನು ಮಾಡಿದ ಬಗ್ಗೆ ಹೇಳಿಕೊಂಡಿರುವುದಿಲ್ಲ ಮತ್ತು ಅಪೀಲುದಾರರು ಆಕೆಯು ನೀಡಿದ ಹೇಳಿಕೆಯ ಮೇಲೆ ಅವಲಂಬಿತವಾಗಿರುವುದಾಗಿ ಎ.ಎ.ಜಿಯವರು ಬಲವಾಗಿ ಮಂಡಿಸಿದ್ದಾರೆ. ಬಲಿಯಾದವರು ಮಹಿಳೆಯಾಗಿದ್ದರಿಂದ, ಅಪರಾಧ ವಿಭಾಗದ ಅಧಿಕಾರಿಯಾಗಿ ಆಕೆಯು ಪ್ರಾಥಮಿಕ ವಿವರಗಳನ್ನು ವಿಚಾರಿಸಲು ನೆರವಾಗುವಲ್ಲಿ ಅಥವಾ ಸಹಾಯ ಮಾಡುವಲ್ಲಿ ತೊಡಗಿಸಿಕೊಂಡಿರುತ್ತಾರೆ. ಮಹಿಳಾ ರಕ್ಷಣೆಯ ಮೇಲೆ ಕೇಂದ್ರೀಕೃತವಾಗಿರುವ *"ನಾವು ನಿಮಗಾಗಿ ಕಾಳಜಿವಹಿಸುತ್ತೇವೆ"* ಎಂಬ ಘಟಕಕ್ಕೆ ಪ್ರ.ಸಾ.1ನ್ನು ನೇಮಿಸಲಾಗಿರುತ್ತದೆ.

ನೇಹಾರ ಬಂಧನವಾದ ನಂತರ, ಮುಂದೆ ಯಾವುದಕ್ಕೂ ಪ್ರ.ಸಾ.1 ರ ಅಗತ್ಯವಿರುವುದಿಲ್ಲ ಎಂದು ಐ.ಓ.ರವರು ಭಾವಿಸಿರುತ್ತಾರೆ. ಆಕೆಯ ಬಡ್ತಿಯು ಇನ್ನಿತರ ಮೊಕದ್ದಮೆಗಳಲ್ಲಿ ಆಕೆಯ ಕೊಡುಗೆ ಮತ್ತು ಪಾತ್ರದ ಮೇಲೆ ಆಧರಿಸಿರುತ್ತದೆ ಮತ್ತು ಪ್ರಸ್ತುತ ಮೊಕದ್ದಮೆಯಲ್ಲಿ ಆಕೆಯು ಪ್ರಾಥಮಿಕ ಹಂತದ ತನಿಖೆಯಲ್ಲಿ ತೊಡಗಿಸಿಕೊಂಡಿರುವುದನ್ನು ಪ್ರಧಾನವಾದದ್ದೆಂದು ಪರಿಗಣಿಸಲಾಗುವುದಿಲ್ಲ. ಅಪೀಲುದಾರರು ಹೇಳಿದಂತ ಆಕೆಯು ಗೌಪ್ಯ ಪಾತ್ರವು ಪತ್ತೆದಾರಿಯ ರೀತಿ ಇರುತ್ತದೆ ಎಂದು ನಿವೇದಿಸಲಾಗಿದೆ. ಆಕೆಯು ತಾನು ಕರೆಯ ವಿವರಗಳನ್ನು ವಿಶ್ಲೇಷಿಸಿದ್ದಾಗಿ ಒಪ್ಪಿಕೊಂಡಿದ್ದು, ತನಿಖೆಯಲ್ಲಿ ಅಥವಾ ಅಪರಾಧಿಗಳನ್ನು ಪತ್ತೆ ಮಾಡುವುದರಲ್ಲಿ, ಅವರ ಬಂಧನ ಅಥವಾ ಅವರ ಆಣತಿಯಂತೆ ವಶಪಡಿಸಿಕೊಂಡ ವಸ್ತುಗಳಲ್ಲಿ ಕರೆಯ ವಿವರಗಳು ಯಾವುದೇ ಪಾತ್ರವನ್ನು ಅಥವಾ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ ಎಂದು ಅಧಿವಿಚಾರಣಾ ಪ್ರಕ್ರಿಯೆಯಿಂದ ಹೊರಬಂದಿರುತ್ತದೆ. ಆದ್ದರಿಂದ ಅಭಿಯೋಜನೆಯಿಂದ ಬಿಂಬಿತವಾದಂತೆ ನೇಹಾ ಅವರನ್ನು ಬಂಧಿಸಲಾಗಿಲ್ಲ ಎಂಬ ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರ ಸಿದ್ಧಾಂತಕ್ಕೆ ಯಾವುದೇ ಆಧಾರವಿರುವುದಿಲ್ಲ, ಆದರೆ ಅದು ಕೇವಲ ವಾದಾತ್ಮಕವಾಗಿರುತ್ತದೆ.

59. ಆಕಸ್ಮಿಕ ಸಾಕ್ಷಿಯಾದ ಪ್ರಾ.ಸಾ.10 ರವರು ಅಪರಾಧದ ನಂತರದ ಪರಿಣಾಮವನ್ನು ಸಾಕ್ಷೀಕರಿಸಿರುತ್ತಾರೆ ಏಕೆಂದರೆ ಅವರು ಅಪರಾಧ ಮಾಡಿದ ನಂತರ ಮೂವರು ಆರೋಪಿಗಳು ಹೊರಡುವುದನ್ನು ನೋಡಿರುವುದಾಗಿ ಎ.ಎ.ಜಿ.ಯವರು ನಿವೇದಿಸಿಕೊಂಡಿದ್ದಾರೆ. ಆರಂಭಿಕ ಹಂತದಲ್ಲಿ ಅಂದರೆ ದಿನಾಂಕ 20.06.2011 ರಂದು ಇಬ್ಬರು ಹುಡುಗರು (ಒಬ್ಬನಿಗೆ ಪಾದದಲ್ಲಿ ಮತ್ತು ಇನ್ನೊಬ್ಬನಿಗೆ ಮೊಣಕೈಯಲ್ಲಿ ಗಾಯವಾಗಿದ್ದು, ಆ ಕಾರಣದಿಂದ ಅವರಿಬ್ಬರಿಗೂ ರಕ್ತಸ್ರಾವವಾಗಿರುತ್ತದೆ) ಬೈಕಿನ ಮೇಲೆ ಕುಳಿತಿದ್ದರು ಮತ್ತು ಆ ಸಮಯದಲ್ಲಿ ಒಬ್ಬ ಹುಡಗಿಯು ಸ್ಕೂಟರಿನ ಮೇಲೆ ಬಂದು ಅವರಿಗೆ ಚಿಕಿತ್ಸೆಗಾಗಿ ವೈದ್ಯರ ಬಳಿ ಹೋಗಲು ಹೇಳಿದರು ಎಂದು ವಿವರಿಸಿದ್ದಾರೆ. ಅಪೀಲುದಾರರು ಎತ್ತಿ ತೋರಿಸಿದ ವ್ಯತ್ಯಾಸಗಳು, ನ್ಯಾಯಾಲಯದಲ್ಲಿ ಅವರ ಹೇಳಿಕೆಯ ಸಮಯದಲ್ಲಿ ಅವರು ನೀಡಿದ ಸಂಪೂರ್ಣ

ಹೇಳಿಕೆಯನ್ನು ಅವಿಶ್ವಾಸಾರ್ಹಗೊಳಿಸಲು ಯಾವುದೇ ಸಾಕ್ಷ್ಯ ಅಥವಾ ಅಂತಹ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ. ಪ್ರಾ.ಸಾ.10 ರ ಪಾಟೀ–ಸವಾಲಿನಲ್ಲಿ ಮೌಲ್ಯಯುತವಾದದನ್ನು ಹೊರತೆಗೆದಿರುವುದಿಲ್ಲ ಎಂದು ಬಲವಾಗಿ ಮಂಡಿಸಲಾಗಿದೆ. ಆರಂಭಿಕ ಅವಕಾಶದಲ್ಲಿಯೇ ಅವರು ಮೂವರು ಆರೋಪಿಗಳನ್ನು ಸ್ಪಷ್ಟವಾಗಿ ಗುರುತಿಸಿರುತ್ತಾರೆ ಅಂದರೆ ಅಪರಾಧ ಸಂಭವಿಸಿದ ಬಗ್ಗೆ ತಿಳಿದುಕೊಂಡ ನಂತರ ಮತ್ತು ಪ್ರಾ.ಸಾ.18 ನಾಯಿಬ್ ತೆಹಶಿಲ್ದಾರ್ ರವರ ಸಮ್ಮುಖದಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ಅವರನ್ನು ನ್ಯಾಯಾಲಯದಲ್ಲಿ ಗುರುತಿಸಿರುತ್ತಾರೆ. ಗುರುತಿಸುವಿಕೆಗೆ ಸಂಬಂಧಿಸಿದಂತೆ ಪ್ರಾ.ಸಾ.10 ರ ಸಾಕ್ಷ್ಯವು ನಂತರದ ಸಾಕ್ಷಿಯನ್ನು ಪುಷ್ಟೀಕರಿಸುತ್ತದೆ.

60. ದಿನಾಂಕ 23.06.2011 ರಂದು ನೇಹರವರ ಅಣತಿಯಂತೆ ಸುಜುಕಿಯ ಸೇವಾ ಪುಸ್ತಕ ಮತ್ತು ಬಟ್ಟೆಗಳನ್ನು ಜಪ್ತಿಪಡಿಸಿಕೊಂಡದನ್ನು ಐ.ಓ.ರವರೂ ಸಹ ಸಾಬೀತುಪಡಿಸುತ್ತಾರೆ ಮತ್ತು ಅದು ಆ ದಿನ ಅದನ್ನು ಮರೆಮಾಡಿದ ಸ್ಥಳದಿಂದ ವಶಪಡಿಸಿಕೊಂಡ ಸ್ಕೂಟಿಗೆ (ಮತ್ತೆ ಆಕೆಯ ಆಣತಿಯಂತೆ) ಸಂಬಂಧಿಸಿರುತ್ತದೆ. ನ್ಯಾಯಾಲಯದಲ್ಲಿ ವಸ್ತುಗಳನ್ನು (ನಿ.ಝಡ್.1, ಝಡ್.2 ಮತ್ತು ಝಡ್.3) ನಂತರ ಗುರುತಿಸಿದ ಪ್ರಾ.ಸಾ.7 ರ ಸಾಕ್ಷ್ಯವು ಈ ಜಪ್ತಿಗಳನ್ನು ಪುಷ್ಟೀಕರಿಸುತ್ತದೆ.

61. ಬೆರಳೊತ್ತು ತಜ್ಞರ ಸಾಕ್ಷ್ಯವು ಎಲ್ಲಾ ಅಪೀಲುದಾರರ ಸಹಭಾಗಿತ್ವ ಮತ್ತು ಅಪರಾಧವನ್ನು ತಪ್ಪದೇ ತೋರಿಸುತ್ತದೆ ಎಂದು ಶ್ರೀಮತಿ. ಚರ್ತುವೇದಿಯವರು ನಿವೇದಿಸಿಕೊಂಡಿದ್ದಾರೆ. ದಿನಾಂಕ 19.06.2011 ರಂದು ಪ್ರಾ.ಸಾ.24 ರವರು ನಾಲ್ಕು ಜೊತೆ ಬೆರಳೊತ್ತುಗಳನ್ನು (ಅಂದರೆ ನಿ.ಪಿ.180) ಸಂಗ್ರಹಿಸುತ್ತಾರೆ. ಪೇದೆ ದಿನೇಶ್‌ರವರು ದಿನಾಂಕ 20.06.2011 ರಂದು ಮೃತರ ಬೆರಳೊತ್ತುಗಳನ್ನು (ನಿ.ಪಿ.81, ನಿ.ಪಿ.82 ಮತ್ತು ನಿ.ಪಿ.83) ಸಂಗ್ರಹಿಸಿಕೊಂಡಿರುತ್ತಾರೆ. ಪ್ರಾ.ಸಾ.13–ಪೇದೆ ವಿಜಯ ಸಿಂಗ್‌ರವರು ಮೂವರು ಆರೋಪಿಗಳ/ಅಪೀಲುದಾರರ ಬೆರಳೊತ್ತುಗಳನ್ನು ದಿನಾಂಕ 24.06.2011 ರಂದು (ನಿ.ಪಿ.41,

ನಿ.ಪಿ.42 ಮತ್ತು ನಿ.ಪಿ.43) ಸಂಗ್ರಹಿಸಿಕೊಂಡಿರುತ್ತಾರೆ. ಆತನ ಪ್ರಕಾರ ಬೆರಳೊತ್ತಿನ ಮಾದರಿಯನ್ನು ಸಂಗ್ರಹಿಸಿಕೊಳ್ಳುವಾಗ, ಪ್ರಪತ್ರಗಳ ಮೇಲೆ ಆರೋಪಿಗಳು ಸಹಿ ಮಾಡಿರುತ್ತಾರೆ (ಆದರೆ ವಾಸ್ತವವಾಗಿ ಅದು ಕಂಡುಬಂದಿರುವುದಿಲ್ಲ) ಮತ್ತು ಪ್ರಪತ್ರಗಳ ಮೇಲೆ ಆರೋಪಿಗಳ ಭಾವಚಿತ್ರವಿರುವುದಿಲ್ಲ ಎಂಬ ಆಂಶವನ್ನು ಗಮನಿಸುತ್ತಾ ಅಪೀಲುದಾರರು ಆತನ ಹೇಳಿಕೆಯನ್ನು ಅವಿಶ್ವಾಸಾರ್ಹಗೊಳಿಸಲು ಕೋರಿಕೊಂಡಿರುತ್ತಾರೆ. ಮಧ್ಯಪ್ರದೇಶದ ಪೊಲೀಸ್ ಕೈಪಿಡಿಯಲ್ಲಿ ಅಗತ್ಯವಿರುವಂತೆ ಪ್ರಪತ್ರವನ್ನು ಉಪಯೋಗಿಸಿದ್ದು, ಬೆರಳೊತ್ತುಗಳ ಮಾದರಿಯನ್ನು ಸಂಗ್ರಹಿಸುವ ಸಂದರ್ಭದಲ್ಲಿ ಯಾವುದೇ ಸಾಕ್ಷಿಯ ಅಗತ್ಯವಿರುವುದಿಲ್ಲ ಎಂದು ಮಾನ್ಯ ಎ.ಎ.ಜಿ ಯವರು ಸೂಚಿಸಿರುತ್ತಾರೆ. ಮುಂದುವರಿದು, ಈ ಸಾಕ್ಷಿಯ ಪಾಟೀ–ಸವಾಲು ಉಪಯುಕ್ತವಾದುದಲ್ಲ ಏಕೆಂದರೆ ಯಾವುದೇ ಪ್ರಮುಖ ವಿಷಯವನ್ನು ಅವರಿಂದ ಹೊರತೆಗೆಯಲಾಗಿರುವುದಿಲ್ಲ.

62. ದಿನಾಂಕ 11.07.2011 ರಂದು ಬೆರಳೊತ್ತು ತಜ್ಞರಾದ ಪ್ರಾ.ಸಾ.24–ಕೆ.ಕೆ. ತ್ರಿವೇದಿಯವರು ನೀಡಿದ ವರದಿಯು ಅಭಿಯೋಜನೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂಬುದಕ್ಕೆ ಎ.ಎ.ಜಿ.ಯವರು ಒತ್ತುಕೊಡುತ್ತಾರೆ. ನಾಲ್ಕು ಬೆರಳೊತ್ತುಗಳನ್ನು ಸಂಗ್ರಹಿಸಿ ಅಪರಾಧ ಸ್ಥಳದಲ್ಲಿ ದೊರೆತಂತಹ ಆಕಸ್ಮಿಕ ಬೆರಳೊತ್ತುಗಳೊಂದಿಗೆ ಹೊಂದಾಣಿಕೆ ಮಾಡಬಹುದು ಎಂದು ಸಾಧಿಸುತ್ತದೆ. ಘಟನಾ ಸ್ಥಳದಿಂದ (ಎ ಮತ್ತು ಬಿ) ಸಂಗ್ರಹಿಸಲಾದ ಎರಡು ಬೆರಳೊತ್ತುಗಳು ರಾಹುಲ್‌ರವರ ಮಾದರಿ ಬೆರಳೊತ್ತಿನೊಂದಿಗೆ ಹೊಂದಾಣಿಕೆಯಾಗಿರುತ್ತದೆ; ಮನೋಜ್‌ರವರ ಬೆರಳೊತ್ತಿನೊಂದಿಗೆ ಡಿ–ಬೆರಳೊತ್ತು ಹೊಂದಾಣಿಕೆಯಾಗಿರುತ್ತದೆ ಮತ್ತು ನೇಹಾರವರ ಬೆರಳೊತ್ತಿನೊಂದಿಗೆ ಇ–ಬೆರಳೊತ್ತು ಹೊಂದಾಣಿಕೆಯಾಗಿರುತ್ತದೆ ಎಂಬುದನ್ನು ವರದಿಯು ಸ್ಪಷ್ಟವಾಗಿ ಹೇಳುತ್ತದೆ. ಸತ್ಯನಾರಾಯಣ ಪಟೇಲ್‌ರವರು ಬೆರಳೊತ್ತುಗಳನ್ನು ಸಂಗ್ರಹಿಸಿದ ಸ್ಥಳವನ್ನು ಒಳಗೊಂಡಂತೆ ಅಪರಾಧ ಸ್ಥಳದ ಛಾಯಾಚಿತ್ರಗಳನ್ನು ತೆಗೆದಿದ್ದು, ಅಪೀಲುದಾರರು ಅಪರಾಧ ಸ್ಥಳದಲ್ಲಿ ಉಪಸ್ಥಿತರಿದ್ದರು ಎಂಬುದನ್ನು ಸಂದೇಹಾತೀತವಾಗಿ ಪುಷ್ಟೀಕರಿಸುತ್ತದೆ.

63. ರಾಹುಲ್ @ ಗೋವಿಂದ್ ಮತ್ತು ಮನೋಜ್‌ರವರೂ ಸಹ ಗಾಯಗೊಂಡಿದ್ದರು ಎಂಬುದು ಒಂದು ನಿರ್ಣಾಯಕ ಸನ್ನಿವೇಶವಾಗಿದ್ದು ಅದನ್ನು ಪರಿಗಣಿಸಬೇಕೆಂದು ವಾದ ಮಂಡಿಸಲಾಗಿದೆ. ಅನ್ನಪೂರ್ಣ ಪಿ.ಎಸ್.ಗೆ ನಿಯೋಜನೆಗೊಳಿಸಲಾದ ಪ್ರಾ.ಸಾ.30–ಆರ್.ಎಸ್. ಮಕ್ವಾನ್, ಎ.ಎಸ್.ಐ. ರವರು ಅಪೀಲುದಾರ ಸಂಖ್ಯೆ.2 ರಾಹುಲ್ @ ಗೋವಿಂದನ ಕಾಲಿಗೆ ಗಾಯವಾಗಿತ್ತು ಎಂದು ಹೇಳಿರುತ್ತಾರೆ. ಈ ವಿಷಯವನ್ನು ಪ್ರಥಮ ವರ್ತಮಾನವನ್ನು (ನಿ.ಪಿ.103) ಬರೆದ ಟಿ.ಪಿ. ಗೌರಿಶಂಕರ್ ಚಾದರ್‌ರವರಿಗೂ ತಿಳಿಸಿರುತ್ತಾರೆ ಮತ್ತು ಭಾರತ ದಂಡ ಸಂಹಿತೆಯ 294, 307, 34ನೇ ಪ್ರಕರಣದ ಅಡಿಯಲ್ಲಿ ಅ.ಸಂ.377/11 ನ್ನು ದಾಖಲಿಸಲಾಗಿರುತ್ತದೆ. ದಿನಾಂಕ 19.06.2011 ರಂದು ಅನ್ನಪೂರ್ಣ ಪಿ.ಎಸ್.ನ ಪೇದೆಯಾದ ದಿನೇಶ್‌ರವರು ಆರೋಪಿ ರಾಹುಲ್‌ರನ್ನು ಕರೆತಂದಿದ್ದು, ಆತನ ಬಲಗಾಲಿನ ಬೆರಳ ಮೇಲೆ ಗಾಯವನ್ನು ಕಂಡಿದ್ದು ಅದು ಬಂದೂಕಿನಿಂದ ಸುಟ್ಟಿದ ಗಾಯದಂತೆ ಇರುತ್ತದೆ ಎಂದು ಪ್ರಾ.ಸಾ.26–ಮುಖೇಶ್ ಬಚಾವತ್‌ರವರು ನುಡಿದಿರುತ್ತಾರೆ. ರಾಹುಲ್‌ರವರಿಂದ ಪಡೆದ ಮಾಹಿತಿಯ ಆಧಾರದ ಮೇಲೆ ಹತ್ತಿರದ ಆರ್.ಟಿ.ಓ ಕಛೇರಿಯಿಂದ ಸಾಕ್ಷಿಗಳ ಸಮ್ಮುಖದಲ್ಲಿ ಎಡಗಾಲಿನ ಒಂದು ಶೂವನ್ನು (44 ಅಳತೆಯ) ವಶಪಡಿಸಿಕೊಳ್ಳಲಾಯಿತು ಎಂಬುದು ಐ.ಓ ರವರ ಹೇಳಿಕೆಯಾಗಿರುತ್ತದೆ. ಜಪ್ತಿಪಡಿಸಿಕೊಂಡ ಎರಡೂ ಶೂಗಳು ಕಂದು ಬಣ್ಣವಾಗಿದ್ದು, ಮೂರು ರಂಧ್ರಗಳಿದ್ದವು ಮತ್ತು ಅನ್ನಪೂರ್ಣ ಪಿ.ಎಸ್.ನ ಅಧಿಕಾರವ್ಯಾಪ್ತಿಯಿಂದ ಜಪ್ತಿಪಡಿಸಿಕೊಳ್ಳಲಾಯಿತು. ಒಂದು ಶೂನಲ್ಲಿ ಗುಂಡಿನ ಗುರುತು ಇರುತ್ತದೆ ಮತ್ತು ಮತ್ತೊಂದು ಶೂ ರಾಹುಲ್‌ರವರಿಗೆ ಸೇರಿರುತ್ತದೆ. ರಾಹುಲ್ @ ಗೋವಿಂದ್‌ರವರ ಬಲಗಾಲಿನ ಬಲಬೆರಳಿಗೆ ಬಂದೂಕಿನಿಂದ ಗಾಯವಾಗಿದ್ದು, ವಶಪಡಿಸಿಕೊಂಡ ಬಲಗಾಲಿನ ಶೂನಲ್ಲಿ ಗುಂಡಿನಿಂದ ರಂಧ್ರವಾಗಿರುತ್ತದೆ ಎಂಬುದು ವೈದ್ಯಾಧಿಕಾರಿಯ ಹೇಳಿಕೆಯಾಗಿರುತ್ತದೆ. ರಾಹುಲ್‌ರವರ ವೈದ್ಯಕೀಯ ವರದಿಯು, ಆತನ ಬಲಗಾಲಿನ ಬೆರಳಿನ ಮೇಲೆ ಗುಂಡಿನಿಂದ ಗಾಯಗೊಂಡಿದ್ದನು ಎಂಬ ಅಂಶವನ್ನು ಬೆಂಬಲಿಸಿತ್ತದೆ.

64. ಆರೋಪಿಯ ಬೂಟುಗಳು ಮತ್ತು ಬಟ್ಟೆಗಳ ಮೇಲೆ ಕಂಡುಬಂದ ರಕ್ತದ ಕಲೆಗಳು ಮೃತರ ದೇಹದ ದ್ರವಕ್ಕೆ ಹೊಂದಿಕೆಯಾಗುತ್ತದೆ ಎಂದು ಡಿ.ಎನ್.ಎ ವರದಿಗಳು ಸಾಬೀತುಪಡಿಸುತ್ತದೆ ಎಂಬು ವಾದಿಸಲಾಗಿದೆ. ಮೃತ ಮೇಘಾರವರ ದೇಹದ ದ್ರವವು ರಾಹುಲ್‌ರವರ ವಸ್ತುಗಳ (ನಿ.ಎಫ್.4 ಎಫ್ 5) ಮೇಲೆ ಕಂಡುಬಂದವು, ಮೃತ ಆಶ್ಲೇಷಾ ದೇಹದ ದ್ರವವು ಮನೋಜ್‌ರವರ ವಸ್ತುಗಳ (ನಿ.ಜಿ.1 ಜಿ3) ಮೇಲೆ ಕಂಡುಬಂದವು ಮತ್ತು ನೇಹಾರವರ ಚಪ್ಪಲಿಯಲ್ಲಿ ಮೃತ ಮೇಘಾರ ದೇಹದ ದ್ರವದ ಕುರುಹುಗಳಿದ್ದವು ಎಂಬ ಅಂಶಗಳನ್ನು ಪ್ರಾ.ಸಾ.35 ರ ಹೇಳಿಕೆಯೊಂದಿಗೆ ಡಿ.ಎನ್.ಎ ವರದಿಯು ಸಾಬೀತುಪಡಿಸುತ್ತದೆ.

65. ಅಪರಾಧವನ್ನು ಆರೋಪಿಗಳಾದ ಆ ಮೂವರು ವ್ಯಕ್ತಿಗಳೇ ಮಾಡಿರುತ್ತಾರೆ ಹೊರತು ಬೇರೆ ಯಾರು ಅಲ್ಲ ಮತ್ತು ಅದಕ್ಕಾಗಿ ಎರಡೂ ಕೆಳನ್ಯಾಯಾಲಯಗಳು ಅವರಿಗೆ ಶಿಕ್ಷೆ ವಿಧಿಸಿರುತ್ತದೆ ಎಂಬುದನ್ನು ಸೂಚಿಸಲು ಅಭಿಯೋಜನೆಯು ಸಂದೇಹಾತೀತವಾಗಿ ಮೊಕದ್ದಮೆಯ ಅಂಶವನ್ನು ಸಾಬೀತುಪಡಿಸಿರುತ್ತದೆ ಎಂದು ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ. ಸಾಕ್ಷಿಗಳು ಘಟನೆಗಳನ್ನು ಸಂಪೂರ್ಣವಾಗಿ ಅಥವಾ ಕಾಲಾನುಕ್ರಮವಾಗಿ ನೆನಪಿಸಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಅಭಿಯೋಜನೆಯು ವಾಸ್ತವಾಂಶಗಳನ್ನು ನಿಖರವಾಗಿ ಸಾಬೀತುಪಡಿಸಲು ಸಾಧ್ಯವಿರುವುದಿಲ್ಲ ಮತ್ತು ಕೆಲವು ಲೋಪದೋಷಗಳು ಅಥವಾ ಅಸಂಗತತೆಗಳು ಇರುತ್ತವೆ ಎಂದು ವಾದ ಮಂಡಿಸಲಾಗಿದೆ. ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು, ಎ.ಎ.ಜಿ.ಯವರು ಈ ನ್ಯಾಯಾಲಯದಿಂದ ಉದಾಹರಿಸಿದ *ಮೂಸ ಪಟೇಲ್ ವಿರುದ್ಧ ಗುಜರಾತ್ ರಾಜ್ಯ*[26] ಮೊಕದ್ದಮೆಯ ಅವಲೋಕನೆಗಳ ಮೇಲೆ ಅವಲಂಬಿತರಾಗಿರುತ್ತಾರೆ.

26. (2011) 2 ಎಸ್‌ಸಿಸಿ 198 (ಖಂಡಿಕೆ 22)

66. ಅಪೀಲುದಾರರಿಗೆ, 313 ನೇ ಪ್ರಕರಣದ ಅಡಿಯಲ್ಲಿ, ಆರೋಪಕ್ಕೆ ಒಳಪಡಿಸುವ ಸನ್ನಿವೇಶಗಳನ್ನು ಮುಂದಿಟ್ಟಾಗ, ಅವರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಎಂದು ಕೊನೆಯದಾಗಿ ವಾದ ಮಂಡಿಸಲಾಗಿದೆ. ಆರೋಪಿಯ ವಿಚಾರಣೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ನಡೆಸುವಾಗ ವಕೀಲರ, ಅಭಿಯೋಜಕರ, ಸಾಕ್ಷಿಗಳ, ಮೂರನೇ ವ್ಯಕ್ತಿಗಳ ಇತ್ಯಾದಿಯವರ ಹಸ್ತಕ್ಷೇಪಗಳನ್ನು ಮೊಟಕುಗೊಳಿಸುವ ಮೂಲಕ ಸ್ವಾಭಾವಿಕ ನ್ಯಾಯವಾದ – *'ಇನ್ನೊಂದು ಕಡೆಯನ್ನು ಆಲಿಸು'* ಎಂಬ ಸಿದ್ಧಾಂತವನ್ನು ಸ್ಪಷ್ಟಪಡಿಸುತ್ತದೆ ಎಂದು ಈ ನ್ಯಾಯಾಲಯವು ಇತರ ಮೊಕದ್ದಮೆಯಲ್ಲಿ ಹೊರಡಿಸಿದ ತೀರ್ಮಾನಗಳಲ್ಲಿ ನೀಡಲಾದ ಅಭಿಪ್ರಾಯಕ್ಕೆ ಒತ್ತು ಕೊಡಲಾಗಿದೆ. ಆರೋಪಿಗೆ ತನ್ನನ್ನು ಆರೋಪಕ್ಕೊಳಪಡಿಸುವ ಸನ್ನಿವೇಶಗಳಿಗೆ ಸಂಬಂಧಿಸಿದ ಬಗ್ಗೆ ವಿವರಣೆ ಒದಗಿಸಲು ಕೇಳಬಹುದು ಮತ್ತು ನ್ಯಾಯಾಲಯವು ಅಂತಹ ವಿವರಣೆಯನ್ನು ನಮೂದಿಸಿಕೊಳ್ಳಬೇಕು. ಆದ್ದರಿಂದ, ಆರೋಪಿ ಮತ್ತು ಅಧಿವಿಚಾರಣಾ ನ್ಯಾಯಾಲಯದ ನಡುವೆ ಒಂದು ಸಂಪರ್ಕವನ್ನು ಸಾಧಿಸುವ ಮೂಲಕ, ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಆರೋಪಿಯ ವಿಚಾರಣೆಯು ಕೇವಲ ಒಂದು ಔಪಚಾರಿಕವಾಗಿರುವುದಿಲ್ಲ ಮತ್ತು ಆರೋಪಿಯು ನೀಡಿದ ಉತ್ತರಗಳು ಪ್ರಾಯೋಗಿಕ ಉಪಯುಕ್ತತೆಯನ್ನು ಹೊಂದಿರುತ್ತವೆ. ಯಾವುದೇ ವಿವರಣೆಯ ಸಂಪೂರ್ಣ ಕೊರತೆಯು ಅಂದರೆ ಒಂದು ಸಮಂಜಸವಾದ ವಿವರಣೆಯ ಕೊರತೆಯು, ಆರೋಪಿಯು ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿರುವುದಿಲ್ಲ ಮತ್ತು ಯಾವುದೇ ವಾದವನ್ನು ಮಂಡಿಸಲು ಇರುವುದಿಲ್ಲ ಎಂದು ನಿವೇದಿಸಲಾಗಿದೆ.

67. ಈ ಎಲ್ಲಾ ನಿವೇದನೆಗಳ ದೃಷ್ಟಿಯಲ್ಲಿ, ಎಲ್ಲಾ ಸಾಕ್ಷ್ಯಗಳ ಮತ್ತು ದಾಖಲೆಯಲ್ಲಿನ ವಸ್ತುಗಳ ಸಂಪೂರ್ಣ ಮತ್ತು ನ್ಯಾಯೋಚಿತವಾಗಿ ರುಜುವಾತುಪಡಿಸಿದ ಆಧಾರದ ಮೇಲೆ ಕೆಳ ನ್ಯಾಯಾಲಯಗಳು ದಾಖಲಿಸಿದ ಏಕಕಾಲೀನ ಅಪರಾಧ ನಿರ್ಣಯಗಳೊಂದಿಗೆ ಈ

ನ್ಯಾಯಾಲಯವು, ವಿಶೇಷ ಅನುಮತಿ ಅಪೀಲು ನ್ಯಾಯಾವ್ಯಾಪ್ತಿಯ ಅಡಿಯಲ್ಲಿ, ಮಧ್ಯಪ್ರವೇಶಿಸಬಾರದು ಎಂದು ಎ.ಎ.ಜಿ.ಯವರು ತೀರ್ಮಾನಿಸಿರುತ್ತಾರೆ.

ವಿಶ್ಲೇಷಣೆ ಮತ್ತು ನಿರ್ಣಯಗಳು:

I. ನೇಹಾರ ಬಂಧನ:

68. ದಿನಾಂಕ 23.06.2011 ರಂದು ಬೆಳಗ್ಗೆ ಸುಮಾರು 6.00 ಗಂಟೆಗೆ ನೇಹಾರವರು ಎ.ಟಿ.ಎಮ್ ಬಳಿ ಅನುಮಾನಾಸ್ಪದವಾಗಿ ಅಡ್ಡಾಡುವುದನ್ನು ನೋಡಿರುವುದಾಗಿ ಪ್ರಾ.ಸಾ.28 (ವಿಜಯ್ ಸಿಂಗ್ ಚೌಹಣ್) ರವರು ನುಡಿದಿರುತ್ತಾರೆ. ಎಮ್.ಐ.ಜಿಯ ಪಿ.ಎಸ್‌ಗೆ ಈ ಮಾಹಿತಿಯನ್ನು ತಲುಪಿಸಿದ್ದು, ಪ್ರಾ.ಸಾ.19–ಗಾಯಕ್ವಾಡ್‌ರವರು ಆ ಮಾಹಿತಿಯನ್ನು ಸ್ವೀಕರಿಸಿರುತ್ತಾರೆ. ಐ.ಓ.ರವರು (ಪ್ರಾ.ಸಾ.31) ಪ್ರಾ.ಸಾ.13 (ವಿಜಯ್ ಸಿಂಗ್), ಪ್ರಾ.ಸಾ.36 (ಮುಲಾಯವ್ ಸಿಂಗ್), ಪೇದೆ ದೇವೆಂದ್ರ ಮತ್ತು ಪ್ರಾ.ಸಾ.4 (ಬನ್ನೋ ಸೋಲಂಕಿ, ಮಹಿಳಾ ಪೇದೆ) ಒಳಗೊಂಡ ಒಂದು ತಂಡವನ್ನು ರಚಿಸಿರುತ್ತಾರೆ. ಈ ತಂಡವು ಸ್ಥಳಕ್ಕೆ ಹೋಗಿ ನೇಹಾರನ್ನು ಭೇಟಿ ಮಾಡಿ, ಪ್ರಾ.ಸಾ.4ರಿಂದ ಆಕೆಯ ಅಂಗ ಶೋಧನೆ ನಡೆಸಲಾಗಿದ್ದು, ಇದು ಆಶ್ಲೇಷಾರವರಿಗೆ ಸೇರಿದ ಎ.ಟಿ.ಎಂ ಕಾರ್ಡ್‌ನ್ನು ಪಡೆಯುವಲ್ಲಿ ಕಾರಣವಾಗಿರುತ್ತದೆ. ಶೋಧನೆ ಮೆಮೊವನ್ನು (ಇದರಲ್ಲಿ ಸಮಯು ಬೆಳಗ್ಗೆ 6.40 ಎಂದು ದಾಖಲಾಗಿರುತ್ತದೆ) ನಿ.ಪಿ.22 ರಂತೆ ಹಾಜರುಪಡಿಸಿಲಾಯಿತು. ನೇಹಾರವರನ್ನು ವಿಚಾರಣೆಗೆ ಕರೆದೊಯ್ಯಲಾಯಿತು ಮತ್ತು ನಂತರ ಆಕೆಯನ್ನು ಬಂಧಿಸಲಾಯಿತು.

69. ಪ್ರಾ.ಸಾ.28 ರ ಸಾಕ್ಷ್ಯವನ್ನು ಪ್ರಾ.ಸಾ.4, ಪ್ರಾ.ಸಾ.31 ಮತ್ತು ಪ್ರಾ.ಸಾ.36 ರವರು ಬೆಂಬಲಿಸಿರುತ್ತಾರೆ. ಆದಾಗ್ಯೂ, ಬೇರೆಯವರ ಸಾಕ್ಷ್ಯದಿಂದ ಪುಷ್ಟೀಕರಿಸಿದಂತ ಪ್ರಾ.ಸಾ.28 ರ ಹೇಳಿಕೆಯು ಅಂದರೆ ನೇಹಾರವರ ಅನುಮಾನಾಸ್ಪದ ಚಟುವಟಿಕೆಯನ್ನು ವರದಿ ಮಾಡಿದ್ದರ ಬಗ್ಗೆ, ಪ್ರಾ.ಸಾ.19 ರವರು (ವೈ.ಆರ್. ಗಾಯಕ್‌ವಾಡ್) ತಮ್ಮ ಹೇಳಿಕೆಯಲ್ಲಿ ಮೌನವಹಿಸಿರುತ್ತಾರೆ. ಪೇದೆ ದೇವೇಂದ್ರರವರನ್ನು ವಿಚಾರಣೆಗೊಳಪಡಿಸಿರುವುದಿಲ್ಲ. ಈ

ಲೋಪವು ವಾಸ್ತವವಾಗಿ ಪ್ರಾಮುಖ್ಯವಾದುದಲ್ಲ ಏಕೆಂದರೆ ಕೆಲವು ಸಂಗತಿಗಳು ಮತ್ತು ಘಟನೆಗಳನ್ನು ಸಾಬೀತುಪಡಿಸುವಾಗ ಸಾಕ್ಷಿಗಳು ಸ್ಥಿರವಾಗಿರುತ್ತಾರೆ ಮತ್ತು ಅಂತಹ ಯಾವುದೇ ಲೋಪವನ್ನು ಕಡೆಗಣಿಸಬಹುದು.

70. ಆದಾಗ್ಯೂ, ನೇಹಾ ಅವರ ಬಂಧನಕ್ಕೆ ನಿಕಟವಿರುವ ಮತ್ತು ಸುತ್ತಮುತ್ತಲಿನ ಘಟನೆಗಳಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಪರಿಶೀಲಿಸಬೇಕು ಎಂದು ಅಪೀಲುದಾರರು ಒತ್ತಾಯಿಸಿದ್ದಾರೆ. ಪ್ರ.ಸಾ.1–ದೀಪಿಕಾ ಶಿಂಧೆಯವರು (ಹೇಳಿಕೆ ನೀಡಿದ ಸಮಯದಲ್ಲಿ ನಿರೀಕ್ಷಕರಾಗಿ ಬಡ್ತಿ ಪಡೆದುಕೊಂಡ) ಕರೆಯ ವಿವರಗಳ ದಾಖಲೆಯನ್ನು ವಿಶ್ಲೇಷಿಸಿರುವುದಾಗಿ ಮತ್ತು ಪ್ರಮುಖವಾಗಿ ನೇಹಾರವರು ದಿನಾಂಕ 22.06.2011 ರಂದು ಅಂತಿಮವಾಗಿ ಬಂಧಿಸಿದ ಸ್ಥಳದಲ್ಲಿ ಇರುತ್ತಾರೆ ಮತ್ತು <u>ಆಕೆಯು ಜೀನ್ಸ್ ಮತ್ತು ಒಂದು ಮೆರೂನ್ ಬಣ್ಣದ ಟಾಪನ್ನು ಧರಿಸಿರುತ್ತಾರೆ</u> ಎಂಬ ಮಾಹಿತಿಯನ್ನು ಬಹಿರಂಗಪಡಿಸದ "ಮೂಲ" ದಿಂದ ಪಡೆದಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ನೇಹಾರವರ ಬಂಧನಕ್ಕೂ ಮುಂಚೆಯೇ ಅಂದರೆ ಬೆಳಗ್ಗೆ ಸುಮಾರು 6.30 ಗಂಟೆಗೆ ಮುಂಚೆಯೇ ಆಕೆಗೆ ಈ ಸುಳಿವು ಸಿಕ್ಕಿತ್ತು ಮತ್ತು ಈ ಮಾಹಿತಿಯನ್ನು ಆಕೆಯು ಪೊಲೀಸರೊಂದಿಗೆ ಹಂಚಿಕೊಂಡರು ಎಂದು ಪ್ರ.ಸಾ.1 ನುಡಿದಿರುತ್ತಾರೆ. ಆದಾಗ್ಯೂ, <u>ಪ್ರಾ.ಸಾ.28 ರವರು ಪ್ರ.ಸಾ.1 ರ ಪಾಲ್ಗೊಳ್ಳುವಿಕೆಯನ್ನು ತಳ್ಳಿಹಾಕಿರುತ್ತಾರೆ</u>. ಅಧಿವಿಚಾರಣೆಯ ಸಂದರ್ಭದಲ್ಲಿ, ಪ್ರತಿರಕ್ಷೆಯು ಕೆಲವೊಂದು ದಾಖಲೆಗಳ ಮೇಲೆ ಪ್ರಮುಖವಾಗಿ ನಿ.ಡಿ.32 ಮತ್ತು ನಿ.ಡಿ.46 ರ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ಪ್ರ.ಸಾ.1 ಅಪರಾಧವನ್ನು ಬಗೆಹರಿಸುವುದರಲ್ಲಿನ ಆಕೆಯ ಪಾತ್ರಕ್ಕಾಗಿ ಪಾಳಿಯಲ್ಲದ ಬಡ್ತಿಯನ್ನು ಪಡೆದಿರುತ್ತಾರೆ ಎಂಬುದನ್ನು ಹೇಳಲು ಅವಲಂಬಿತವಾಗಿರುತ್ತದೆ. ಆ ಪಾಳಿಯಲ್ಲದ ಬಡ್ತಿಯನ್ನು ಪ್ರ.ಸಾ.1 ಮತ್ತು ಪ್ರಾ.ಸಾ.28ರಿಗೆ ನೀಡಿದ್ದು, ಅದನ್ನು ಅವರಿಬ್ಬರೂ ಒಪ್ಪಿಕೊಂಡಿರುತ್ತಾರೆ. ನೇಹಾರವರ ಪತ್ತೆಗೆ ಸಂಬಂಧಿಸಿದಂತೆ ಮತ್ತು ಆಕೆಯ ಉಡುಪಿನ ವಿವರಣೆಯ ಮಟ್ಟಿಗಿನ ಮುಂದುವರಿದ ವಿವರಗಳಿಗೆ ಸಂಬಂಧಿಸಿದಂತೆ ಪೂರ್ವ ಮಾಹಿತಿಯನ್ನು ಪ್ರ.ಸಾ.1 ರವರು ಪಡೆದುಕೊಂಡರು ಎಂಬುದು ಸ್ಪಷ್ಟವಾಗುತ್ತದೆ. ಆಕೆಯ ಪಾತ್ರಕ್ಕೆ

ಸಂಬಂಧಿಸಿದಂತೆ ಅಭಿಯೋಜನೆಯು ಮೌನವು ಕೇವಲ ನಿಗೂಢವಲ್ಲ ಆದರೆ ಒಂದು ಕಳವಳದ ವಿಷಯವಾಗಿರುತ್ತದೆ.

71. ನೇಹಾರನ್ನು ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು ಮತ್ತು ಆಕೆಯನ್ನು ಪ್ರಶ್ನಿಸಲಾಯಿತು ಎಂಬುದನ್ನು ಐ.ಓ.ರವರ ಮತ್ತು ಪ್ರಾ.ಸಾ.3 (ದೀಪಕ್ ರಾನಡೆ) ಮತ್ತು ಪ್ರಾ.ಸಾ.6 (ತ್ರಿಯಂಬಕ್ @ ಪ್ರಫುಲ್ಲ) ರವರ ಸಾಕ್ಷ್ಯದ ಮೂಲಕ ರುಜುವಾತುಪಡಿಸಲು ಅಭಿಯೋಜನೆಯು ಕೋರಿರುತ್ತದೆ. ನಂತರ ಅವರು ನೇಹಾರ ಮನೆಗೆ ತೆರಳಿದರು. ಐ.ಓ.ರವರ ಸಾಕ್ಷ್ಯದ ಪ್ರಕಾರ, ದಾಳಿ ಮಾಡಿದ ತಂಡವು ಪ್ರಾ.ಸಾ.19 ಮತ್ತು ಪ್ರಾ.ಸಾ.4 ರನ್ನು ಒಳಗೊಂಡಿರುತ್ತದೆ. ನೇಹಾರನ್ನು ಆಕೆಯ ಮನೆಗೆ ಹೋಗುವ ದಾರಿಯಲ್ಲಿ ವಿಚಾರಣೆಗೊಳಪಡಿಸಲಾಯಿತು ಮತ್ತು ನಂತರ ಆಕೆಯನ್ನು ಬಂಧಿಸಲಾಯಿತು ಮತ್ತು ತದನಂತರ ಆಕೆಯ ವಿವರಣಾ ಹೇಳಿಕೆಯನ್ನು ದಾಖಲುಮಾಡಲಾಯಿತು ಮತ್ತು ಈ ವಿವರಣಾ ಹೇಳಿಕೆಯು, ಆಕೆಯ ಆಣತಿಯಂತೆ ದರೋಡೆಯಾದ ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಣವಾಯಿತು ಎಂಬುದು ಪ್ರಾ.ಸಾ.31, ಪ್ರಾ.ಸಾ.3 ಮತ್ತು ಪ್ರಾ.ಸಾ.6 ರ ಹೇಳಿಕೆಯಾಗಿದ್ದು, ಇದು ಅಭಿಯೋಜನೆಯ ಮುಂದುವರಿದ ವಾದವಾಗಿರುತ್ತದೆ. ಈ ನಿದರ್ಶನದಲ್ಲಿಯೂ ಸಹ, ಪ್ರ.ಸಾ.1–ದೀಪಿಕಾ ಶಿಂಧೆಯವರ ಪಾತ್ರದ ಬಗ್ಗೆ ಯಾವುದೇ ಅಭಿಯೋಜನೆಯ ಸಾಕ್ಷಿಯು ಸ್ವಲ್ಪ ಮಟ್ಟಿಗಾದರೂ ಹೇಳಿರುವುದಿಲ್ಲ.

72. ಪ್ರ.ಸಾ.1 ರವರು ಹೇಳಿಕೆ ನೀಡುವ ಸಂದರ್ಭದಲ್ಲಿ, ದಿನಾಂಕ 19.06.2011 ರಂದೇ ಅಪರಾಧ ಸ್ಥಳಕ್ಕೆ ಹೋಗಿರುವುದನ್ನು ದೃಢಪಡಿಸುತ್ತಾರೆ.

> "ಪ್ರಸ್ತುತ ಮೊಕದ್ದಮೆಯಲ್ಲಿ ನಾನು ಕರೆಗಳ ವಿವರಗಳನ್ನು ವಿಶ್ಲೇಷಿಸಿದ್ದೇನೆ. ಯಾವ ಕರೆಯನ್ನು ವಿಶ್ಲೇಷಿಸಿದ್ದೇನೆ ಮತ್ತು ಹೇಗೆ ಅದನ್ನು ನನ್ನಿಂದ ವಿಶ್ಲೇಷಿಸಲಾಗಿದೆ ಎಂದು ಈ ದಿನ ನಾನು ಹೇಳಲಾರೆ. ಪ್ರಸ್ತುತ ವಿಷಯವನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ತದನಂತರ ಈ ವಿಷಯದಲ್ಲಿ ಒಬ್ಬ ಆರೋಪಿಯನ್ನು ನಾನು ಪ್ರಶ್ನಿಸಿದ್ದೇನೆ ಎಂದು ನೆನಪಿಸಿಕೊಳ್ಳುತ್ತೇನೆ. ನಾನು ಮಹಿಳಾ ಆರೋಪಿಯನ್ನು (ನೇಹಾ ವರ್ಮಾ) ಪ್ರಶ್ನಿಸಿರಬಹುದು ಮತ್ತು ನ್ಯಾಯಾಲಯದ

ಮುಂದೆ ಹಾಜರಿರುವ ಆಕೆಯೇ ನಾನು ಪ್ರಶ್ನೆ ಮಾಡಿದ ವ್ಯಕ್ತಿಯಾಗಿರಬಹುದು ಎಂದು ಆಕೆಯು ಒಪ್ಪಿಕೊಳ್ಳುತ್ತಾರೆ.''

ತರುವಾಯ, ಘಟನೆಯ ನಂತರ ನೇಹಾರನ್ನು ಪ್ರ.ಸಾ.1 ರವರು ಪ್ರಶ್ನಿಸಿದಾಗ, ಸಮಯಕ್ಕೆ ಸಂಬಂಧಿಸಿದಂತೆ ಆಕೆಯನ್ನು ಯಾವಾಗ ಪ್ರಶ್ನಿಸಲಾಯಿತು ಎಂದು ನಿಖರವಾಗಿ ಹೇಳಲು ಪ್ರ.ಸಾ.1 ರವರಿಗೆ ಸಾಧ್ಯವಾಗಲಿಲ್ಲ. ಆದಾಗ್ಯೂ, ಎಮ್.ಐ.ಜಿ ಯು ಪಿ.ಎಸ್‌ರವರು ನೇಹಾರನ್ನು ಬಂಧಿಸಿದ ನಂತರ ಹಾಗೆ ಮಾಡಿದ್ದೇನೆ ಎಂದು ಅವರು ಸ್ಪಷ್ಟಪಡಿಸಿರುತ್ತಾರೆ. *"ನೇಹಾ ವರ್ಮಾರನ್ನು ಎಮ್.ಐ.ಜಿ ಪೊಲೀಸ್ ಠಾಣೆಯಲ್ಲಿಯೇ ಪ್ರಶ್ನಿಸಿರುವುದಾಗಿ"* ಅವರು ಮುಂದುವರಿದು ಸ್ಪಷ್ಟಪಡಿಸಿದ್ದಾರೆ. ದಿನಾಂಕ 23.06.2011 ರಂದು ಪಂಚ ಸಾಕ್ಷಿಯಾಗಿ ಒಮ್ಮತದಿಂದ ವಿಚಾರಣೆಯಲ್ಲಿ ಭಾಗಿಯಾದ ಪ್ರಾ.ಸಾ.7–ಸಂದೀಪ್ ನರುಲ್‌ಕರ್‌ರವರು ತಮ್ಮ ಪಾಟೀ–ಸವಾಲಿನಲ್ಲಿ, ಪ್ರ.ಸಾ.1 *"ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ನಮ್ಮೊಂದಿಗೆ ಇರಲಿಲ್ಲ, ಅವರು ಬೇರೆ ವಾಹನದಲ್ಲಿದ್ದರು"* ಎಂದು ಒಪ್ಪಿಕೊಂಡಿರುತ್ತಾರೆ. ಈ ಸಾಕ್ಷಿಯನ್ನು ದಿನಾಂಕ 02.03.2012 ರಂದು ಪಾಟೀ–ಸವಾಲಿಗೊಳಪಡಿಸಲಾಗಿದ್ದು, ಆ ದಿನ ಆಕೆಯನ್ನು ಗುರುತಿಸಲು ವಿಫಲರಾಗಿರುತ್ತಾರೆ. ದಿನಾಂಕ 23.06.2011 ರಂದು ನಡೆಸಿದ ವಿಚಾರಣೆಯ ಸಂದರ್ಭದಲ್ಲಿ ಅಂದರೆ ಆತನನ್ನು ಸಾಕ್ಷಿಯಾಗಿ ಹಾಜರಿರಬೇಕು ಎಂದು ಹೇಳಿದ ದಿನ ಎಷ್ಟು ಮಹಿಳಾ ಅಧಿಕಾರಿಗಳು ಹಾಜರಿದ್ದರು ಎಂಬುದನ್ನು ನೆನಪಿಸಿಕೊಳ್ಳಲು ಆಗುವುದಿಲ್ಲ ಎಂದು ಅವರು ಒಪ್ಪಿಕೊಂಡಿರುತ್ತಾರೆ.

73. ಈ ಹಿಂದೆ ಗಮನಿಸಿದಂತೆ, ಪ್ರಸ್ತುತ ಅಪೀಲುದಾರರನ್ನು ಬಂಧಿಸುವ ಮುನ್ನ ಮತ್ತು ಅವರಿಂದ ಅಪರಾಧಕ್ಕೊಳಪಡಿಸುವ ವಸ್ತುಗಳನ್ನು ವಶಪಡಿಸಿಕೊಳ್ಳುವ ಮುನ್ನ, ಪೊಲೀಸ್ ಇಲಾಖೆಯು ಪ್ರ.ಸಾ.1 ಮತ್ತು ಪ್ರ.ಸಾ.28 ರನ್ನು ಒಳಗೊಂಡಂತೆ ಕೆಲವೊಂದು ಅಧಿಕಾರಿಗಳಿಗೆ ಮತ್ತು ಉದ್ಯೋಗಿಗಳಿಗೆ ಬಡ್ತಿ ನೀಡಿರುವ ಅಂಶವು ಒಂದು ಆಸಕ್ತಿದಾಯಕ ಸಂಗತಿಯಾಗಿರುತ್ತದೆ. ಈ ಇಬ್ಬರು ಸಿಬ್ಬಂದಿಗಳು ಎಂ.ಐ.ಜಿ ಪೊಲೀಸ್ ಠಾಣೆಗೆ ಸೇರಿದವರಲ್ಲಿ

ಆದರೆ ಅವರು ಅಪರಾಧ ಶಾಖೆಯಲ್ಲಿ ನಿಯೋಜನೆಗೊಂಡಿದ್ದರು. ಪ್ರಾ.ಸಾ.1 ರವರ ಪಾಟೀ ಸವಾಲಿನ ಸಂದರ್ಭದಲ್ಲಿ ದಾಖಲೆಯಲ್ಲಿರಿಸಿದ ನಿ.ಡಿ.30ನ್ನು (ಅದನ್ನು ಹೊರಡಿಸಿದ ಪ್ರ.ಸಾ.4 ಪವನ್ ಶ್ರೀವಾತ್ಸವ್, ಪೊಲೀಸ್ ಮಹಾನಿರ್ದೇಶಕರು, ಸಾಬೀತುಪಡಿಸಿರುತ್ತಾರೆ) ಇಂದೋರ್ ಜಿಲ್ಲೆಯ ಹಿರಿಯ ಪೊಲೀಸ್ ಅಧೀಕ್ಷಕರು ದಿನಾಂಕ 26.06.2011 ರಂದು ಹೊರಡಿಸಲಾದ ಆದೇಶ ಕ್ರ.ಸಂಖ್ಯೆ.ಎಸ್ಎಸ್ಪಿ/ಇಂದೋರ್/ಪಿಎ/ರಿವಾರ್ಡ್/11/2005–ಎ ಆಗಿರುತ್ತದೆ. ಇತರ ವಿಷಯಗಳ ಜೊತೆಗೆ ಇದು ಈ ಕೆಳಗಿನಂತೆ ಇರುತ್ತದೆ:–

> "ದಿನಾಂಕ 19.06.2011 ರ ಮಧ್ಯಾಹ್ನ ಶ್ರೀನಗರದ ಮುಖ್ಯ ಕಾಲೋನಿಯ ಐಷರಾಮಿ ಏರಿಯಾದ ಮನೆ ನಂ.24ರ ಮೊದಲ ಮಹಡಿಯಲ್ಲಿ ವಾಸವಿದ್ದ ಬ್ಯಾಂಕ್ ಅಧಿಕಾರಿಯಾದ ನಿರಂಜನ್ ದೇಶಪಾಂಡೆಯವರ ಪತ್ನಿ ಮೇಘಾ ದೇಶಪಂಡೆ, ಮಗಳು ಆಶ್ಲೇಷಾ ದೇಶಪಾಂಡೆ ಮತ್ತು ಅತ್ತೆ ರೋಹಿಣಿ ಘಡ್ಕೆಯವರನ್ನು ಚಾಕುವಿನಿಂದ ಇರಿದು ಭೀಕರವಾಗಿ ಹತ್ಯೆ ಮಾಡಲಾಗಿರುತ್ತದೆ. ಆಶ್ಲೇಷಾ ಎಂಬಾಕೆಯ ಮೇಲೆ ಒಟ್ಟು 22 ಇರಿತದ ಗಾಯಗಳು ಪತ್ತೆಯಾಗಿವೆ.
>
> ಈ ತ್ರಿವಳಿ ಹತ್ಯೆಯ ವಿಷಯ ತಿಳಿದ ಕೆಲವೇ ಕ್ಷಣಗಳಲ್ಲಿ ಘಟನೆ ನಡೆದ ಸ್ಥಳದ ಬಳಿ ವಾಸವಿದ್ದ ನಿವಾಸಿಗಳು ಆ ಸ್ಥಳದಲ್ಲಿ ಜಮಾಯಿಸಿದ್ದು, ಜನಜಂಗುಳ ಹೆಚ್ಚಾಗಿದ್ದು, ಕಾನೂನು ಸುವ್ಯವಸ್ಥೆಯ ಸಮಸ್ಯೆಯು ಸೃಷ್ಟಿಯಾಗಿರುತ್ತದೆ. ಹಗಲು ಹೊತ್ತಿನಲ್ಲೇ ನಡೆದ ಕೊಲೆಗಳು ಇಂದೋರ್ ಪೊಲೀಸರ ಕಾರ್ಯವೈಖರಿ ಬಗ್ಗೆ ಹಲವು ಪ್ರಶ್ನೆಗಳು ಉದ್ಭವಿಸುವಂತೆ ಮಾಡಿದ್ದು, ನಗರದ ಮಧ್ಯಭಾಗದಲ್ಲಿರುವ ಐಷಾರಾಮಿ ಕಾಲೋನಿಯಲ್ಲಿಯೆ ಮಹಿಳೆಯರು ಸುರಕ್ಷಿತವಾಗಿಲ್ಲದಿರುವಾಗ ಇತರ ಭಾಗದಲ್ಲಿ ಅಥವಾ ನಗರದಲ್ಲಿ ವಾಸವಾಗಿರುವ ಮಹಿಳೆಯರು ತಮ್ಮ ಸುರಕ್ಷತೆಯ ಬಗ್ಗೆ ಹೇಗೆ ಭಾವಿಸಬಹುದು ಎಂದು ಸಾರ್ವಜನಿಕರು ಪ್ರಶ್ನಿಸಲು ಪ್ರಾರಂಭಿಸಿದರು. ಎಲ್ಲಾ ಪೊಲೀಸ್ ಅಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಧಾವಿಸಿ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿಯಂತ್ರಿಸಲು ಪ್ರಾರಂಭಿಸಿದರು. ವಿದ್ಯುನ್ಮಾನ ಮಾಧ್ಯಮಗಳು ಮತ್ತು ದಿನ ಪತ್ರಿಕೆಗಳು ಸದರಿ ಘಟನೆಯನ್ನು ವ್ಯಾಪಕವಾಗಿ ಪ್ರಸಾರ ಮಾಡಿದವು ಮತ್ತು ಇದು ಸಾರ್ವಜನಿಕರ ಮನಸ್ಸಿನಲ್ಲಿ ಭಯವನ್ನು ಉಂಟುಮಾಡಿರುತ್ತದೆ ಮತ್ತು ಪೊಲೀಸ್ ಆಡಳಿತದ ಮೇಲೆ ಅವರ ನಂಬಿಕೆಯನ್ನು ದುರ್ಬಲಗೊಳಿಸಿರುತ್ತದೆ. ಸದರಿ ಘಟನೆಯ ಆಧ್ಯತೆ ಮತ್ತು ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು, ಹಿರಿಯ ಅಧಿಕಾರಿಗಳು ಸಮರ್ಥ ಅಧಿಕಾರಿಗಳನ್ನೊಳಗೊಂಡ ಒಂದು ಪೊಲೀಸ್ ತಂಡವನ್ನು ರಚಿಸಿದ್ದು, ಆ ತಂಡದಲ್ಲಿ ಸಬ್–ಇನ್ಸ್ಪೆಕ್ಟರ್ ದೀಪಿಕಾ ಶಿಂಧೆ ('ನಾವು ನಿಮಗೆ ಕಾಳಜಿವಹಿಸತ್ತೇವೆ' ಘಟಕದ ಪ್ರಭರದಲ್ಲಿರುವ)

ಮತ್ತು ಆರ್.2906 ವಿಜಯ್ ಸಿಂಗ್ ಅವರನ್ನು ವಿಶೇಷವಾಗಿ ತಂಡದಲ್ಲಿ ಸೇರಿಸಲಾಯಿತು ಮತ್ತು ಅದೇ ಸಮಯದಲ್ಲಿ ಘಟನೆಯನ್ನು ಪರಿಹರಿಸುವ ಪೊಲೀಸ್ ಅಧಿಕಾರಿಗೆ ಬಹುಮಾನವನ್ನು ಘೋಷಿಸಲಾಯಿತು.

ಘಟನೆಯ ನಂತರ ಅಂದರೆ ದಿನಾಂಕ 19.06.2011 ರ ರಾತ್ರಿ 20.00 ಗಂಟೆಗೆ ಸಬ್–ಇನ್ಸ್‌ಪೆಕ್ಟರ್ ದೀಪಿಕಾ ಶಿಂಧೆಯವರಿಗೆ ತಕ್ಷಣವೇ ಘಟನಾ ಸ್ಥಳಕ್ಕೆ ಅಂದರೆ 24 ನೇ ಶ್ರೀನಗರ ಮುಖ್ಯ ರಸ್ತೆಗೆ ತಲುಪಲು ಪೊಲೀಸ್ ನಿಯಂತ್ರಣ ಕೊಠಡಿಯಿಂದ ನಿರ್ದೇಶನ ನೀಡಲಾಯಿತು. ಘಟನಾ ಸ್ಥಳವನ್ನು ತಲುಪಿದ ನಂತರ, ಆಕೆಯು ಕುಟುಂಬ ಸದಸ್ಯರೊಂದಿಗೆ ಮತ್ತು ನೆರೆಹೊರೆಯವರೊಂದಿಗೆ ಘಟನೆ ನಡೆಯುವಾಗ ಭೇಟಿಕೊಟ್ಟ ಜನರ ಬಗ್ಗೆ ಚರ್ಚಿಸಿದ್ದು, ಆ ಸಮಯದಲ್ಲಿ ಘಟನೆಯ ಮೊದಲು ಮೃತ ಆಶ್ಲೇಷಾಳ ಸ್ನೇಹಿತೆ (ಮಹಿಳೆ) ಆಕೆಯ ಮನೆಯಿಂದ ಹೊರಬರುತ್ತಿರುವುದನ್ನು ಮತ್ತು ಆಕೆಯ ಇತರ ಚಟುವಟಿಕೆಗಳ ಬಗ್ಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲಾಯಿತು ಎಂದು ತಿಳಿದು ಬಂದಿರುತ್ತದೆ.

ಜಿಲ್ಲಾ ಅಪರಾಧ ವಿಭಾಗದ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಮನೋಜ್ ಪೈ, ಜಿಲ್ಲಾ ಅಪರಾಧ ವಿಭಾಗದ ಡಿ.ವೈ.ಎಸ್.ಪಿ ಜಿತೇಂದ್ರ ಸಿಂಗ್‌ರವರ ಮೇಲ್ವಿಚಾರಣೆಯ ಅಡಿಯಲ್ಲಿ ಮೃತ ಆಶ್ಲೇಷಾರ ಮೊಬೈಲ್ ಸಂಖ್ಯೆ ಮತ್ತು ಮೇಘಾ ದೇಶಪಾಂಡೆಯವರ ಮೊಬೈಲ್ ಸಂಖ್ಯೆಯಾದ 9981147765, 9669191385 ಮತ್ತು 9826635615 ಕರೆಯ ವಿವರಗಳನ್ನು ಪಡೆಯಲಾಗಿರುತ್ತದೆ. ಮೃತ ಆಶ್ಲೇಷಾರ ಕಾಲೇಜು ಗೆಳೆಯರನ್ನು ಮತ್ತು ಓರಿಫ್ಲೇಮ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮೃತ ಮೇಘಾ ದೇಶಪಾಂಡೆಯವರ ಸಹೋದ್ಯೋಗಿಗಳನ್ನು ವಿಚಾರಿಸಿ ವಿವರವಾದ ಮಾಹಿತಿಯನ್ನು ಸಂಗ್ರಹಿಸಲು ಸಬ್–ಇನ್ಸ್‌ಪೆಕ್ಟರ್ ದೀಪಿಕಾ ಶಿಂಧೆಯವರನ್ನು ನಿಯೋಜಿಸಿದ್ದು, ಆಕೆಯು ತನ್ನ ವೃತ್ತಿಪರ ಕೌಶಲ್ಯ ಮತ್ತು ತಂತ್ರವನ್ನು ಬಳಸಿಕೊಂಡು ಘಟನೆ ನಡೆದ ದಿನಾಂಕದಂದು ಮತ್ತು ಅದಕ್ಕೂ ಮೊದಲು ಒಂದು ಮೊಬೈಲ್ ಸಂಖ್ಯೆ. 8103807143 ಮೃತ ಮೇಘಾಳೊಂದಿಗೆ ನಿಯಮಿತವಾಗಿ ಮಾತನಾಡುತ್ತಿತ್ತು ಎಂದು ಮತ್ತು ಸದರಿ ಶಂಕಿತ ಮೊಬೈಲ್ ಸಂಖ್ಯೆಯು ಘಟನಾ ಸ್ಥಳದಲ್ಲಿ ಇತ್ತು ಎಂಬುದನ್ನು ಗಮನಿಸಿರುತ್ತಾರೆ. ನಂತರ, ಕರೆ ವಿವರಗಳು ಮತ್ತು ಐ.ಎಮ್.ಇ.ಡಿ ಶೋಧನೆಯ ಮೂಲಕ, ಸದರಿ ಶಂಕಿತ ಮೊಬೈಲ್‌ನ್ನು ಇಂದೋರ್‌ನಲ್ಲಿ ವಾಸವಿದ್ದ ನೇಹಾರವರ ತಂದೆ ಅನಿಲ್ ವರ್ಮಾ ಉಪಯೋಗಿಸುತ್ತಿದ್ದರು ಮತ್ತು ಪ್ರಸ್ತುತದಲ್ಲಿ ಮೊಬೈಲ್ ಸಂಖ್ಯೆ. 9009090142 ಮತ್ತು 9826065288 ಸದರಿ ಮೊಬೈಲ್ ನಲ್ಲಿ

ಉಪಯೋಗಿಸುತ್ತಿರುವುದಾಗಿ ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರು ಸಾಬೀತುಪಡಿಸಿರುತ್ತಾರೆ.

ದಿನಾಂಕ 22.06.2011 ರಂದು ಶಂಕಿತ ಮೊಬೈಲ್ ಸಂಖ್ಯೆಯ ಕರೆ ವಿವರಗಳ ವಿಶ್ಲೇಷಣೆಯ ಮೂಲಕ, ಇಂದೋರ್‌ನ ಎಚ್.ಎನ್.10, ದೇವೆಂದ್ರ ನಗರದಲ್ಲಿ ವಾಸವಿದ್ದ ನೇಹಾ ವರ್ಮಾರವರನ್ನು ಸದರಿ ಘಟನೆಯೊಂದಿಗೆ ಸೇರಿಸಬಹುದು ಎಂದು ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರು ಸಾಬೀತುಪಡಿಸಿರುತ್ತಾರೆ. ಇದರ ಜೊತೆಗೆ, ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರು ತಮ್ಮ ಮಾಹಿತಿಯ ವಿಧಾನ ಮತ್ತು ಬುದ್ದಿವಂತಿಕೆಯನ್ನು ಉಪಯೋಗಿಸಿಕೊಂಡು, ಈ ದಿನ ಅಂದರೆ 22 ರಂದು (ಅಸ್ಪಷ್ಟ) ನೇಹಾ ವರ್ಮಾರವರು ಕಪ್ಪು ಜೀನ್ಸ್ ಪ್ಯಾಂಟ್ ಮತ್ತು ಮರೂನ್ ಕಲರ್ ಟಾಪ್ ಧರಿಸಿ ಮನೆಯಿಂದ ಹೊರನಡೆದರು ಎಂಬ ಮಾಹಿತಿಯನ್ನು ಕಲೆಹಾಕಿರುತ್ತಾರೆ ಮತ್ತು ಶಂಕಿತ ನೇಹಾ ವರ್ಮಾರವರ ಕರೆಯ ವಿವರಗಳನ್ನು ವಿಶ್ಲೇಷಿಸಿದ ಮೇಲೆ, ಆಕೆಯ ಪ್ರಸ್ತುತ ನೆಲೆಯು ಇಂದೋರ್‌ನಲ್ಲಿರುವ ಎಲ್.ಐ.ಜಿ ತಿರಾಹದ ಬಳಿ ಇರುವ ಬಗ್ಗೆ ಆರ್. 2906 ವಿಜಯ ಸಿಂಗ್‌ಗೆ ಮಾಹಿತಿ ನೀಡಿರುತ್ತಾರೆ.

ಘಟನೆಯ ನಂತರ, ಇಂದೋರ್ ಪೊಲೀಸರು ಮೂರು ದಿನಗಳ ಕಾಲ ಮಾಡಿದ ಎಲ್ಲಾ ಪ್ರಯತ್ನಗಳ ಹೊರತಾಗಿಯೂ ಯಾವುದೇ ಸುಳಿವು ಅಥವಾ ಘಟನೆಯನ್ನು ಕಂಡುಹಿಡಯಲಾಗಿರಲಾದ್ದರಿಂದ ಸಾರ್ವಜನಿಕರು, ಮಾಧ್ಯಮದವರು ಮತ್ತು ಸಾಮಾಜಿಕ ಸಂಸ್ಥೆಗಳ ಒತ್ತಡ ಮತ್ತು ಪ್ರತಿಭಟನೆಯಿಂದಾಗಿ ಕಾನೂನು ಮತ್ತು ಸುವ್ಯವಸ್ಥೆಯ ಬಿಕ್ಕಟ್ಟು ಸೃಷ್ಟಿಯಾಗಿರುತ್ತದೆ. ಇಂತಹ ಸಂದರ್ಭದಲ್ಲಿ, ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರ ಸುಮಾರು 72 ಗಂಟೆಗಳ ನಿರಂತರ ಪ್ರಯತ್ನ ಮತ್ತು ಶ್ರದ್ಧೆಯಿಂದ, ನೇಹಾ ವರ್ಮಾರನ್ನು ಗುರುತಿಸುವಲ್ಲಿ ಮತ್ತು ಕೊಲೆಗಾರರನ್ನು ಬಂಧಿಸುವಲ್ಲಿ ಮುನ್ನಡೆಯನ್ನು ಸಾಧಿಸಿದರು ಮತ್ತು ಅದೇ ಕಾರ್ಯದಲ್ಲಿ ತಮ್ಮ ಕೆಲಸವನ್ನು ಮುಂದುವರಿಸಿ, ಈ ತ್ರಿವಳಿ ಕೊಲೆ ಮೊಕದ್ದಮೆಯನ್ನು ಪರಿಹರಿಸಿದರು ಮತ್ತು ಈ ಮೊಕದ್ದಮೆಯಲ್ಲಿ ಭಾಗಿಯಾದ ನೇಹಾ ವರ್ಮಾ ಮತ್ತು ಇನ್ನೊಬ್ಬ ರಾಹುಲ್ @ ಗೋವಿಂದ್ ಮರಾಠ ಮತ್ತು ಮನೋಜ್ ಬಲಾಯ್‌ರವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ.

ಮನೋವಿಜ್ಞಾನ ವಿಧಾನದ ಮೂಲಕ ಮಹಿಳಾ ಆರೋಪಿಯಾದ ನೇಹಾ ವರ್ಮಾರವರನ್ನು ವ್ಯಾಪಕವಾಗಿ ಪ್ರಶ್ನಿಸುತ್ತಿರುವಾಗ, ಎಸ್.ಐ ದಿಪೀಕಾ ಶಿಂಧೆಯವರು ಆಕೆಯ ಸಹಚರರ ಬಗ್ಗೆ

ಮಾಹಿತಿಯನ್ನು ಹೊರತೆಗೆದಿರುತ್ತಾರೆ ಮತ್ತು ಇನ್ನಿಬ್ಬರು ಆರೋಪಿಗಳನ್ನು ವ್ಯಾಪಕವಾಗಿ ಪ್ರಶ್ನಿಸಿ ಅವರಿಂದ ಮೊಕದ್ದಮೆಯನ್ನು ಭೇದಿಸಲು ಕಾರಣವಾದ ಘಟನೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರುತ್ತಾರೆ.

ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರು ಕರೆಯ ವಿವರಗಳ ವಿಶ್ಲೇಷಣೆಯಲ್ಲಿ ತಮ್ಮ ದಕ್ಷ ಕೌಶಲ್ಯವನ್ನು ತೋರಿಸುವುದರ ಮೂಲಕ ಮತ್ತು ಕಠಿಣ ಪರಿಶ್ರಮದೊಂದಿಗೆ ತಮ್ಮ ವೃತ್ತಿಪರ ಕೌಶಲ್ಯದಿಂದ ಮತ್ತು ಶ್ರದ್ಧೆಯಿಂದ ಮೊದಲ ಶಂಕಿತೆ ನೇಹಾ ವರ್ಮಾರವರ ಗುರುತು, ರೂಪ ಹೆಸರು ಮತ್ತು ವಿಳಾಸದ ಬಗ್ಗೆ ಮತ್ತು ಆಕೆಯು ಒಳಗೊಳ್ಳುವಿಕೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಲಭ್ಯವಾಗುವಂತೆ ಮಾಡಿರುತ್ತಾರೆ ಮತ್ತು ಅದರ ಆಧಾರದ ಮೇಲೆ ಘಟನೆಯ ಆರೋಪಿಗಳ ಹುಡುಕಾಟಕ್ಕೆ ಮಾತ್ರ ನಿರ್ದೇಶನವನ್ನು ನಿಗದಿಪಡಿಸಲಾಗಿರುತ್ತದೆ.

ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರು ಸದರಿ ತ್ರಿವಳಿ ಕೊಲೆಯ ಅಪರಿಚಿತ ಆರೋಪಿಗಳ ಗುರುತನ್ನು ಹಿಡಿಯುವ ಮೂಲಕ ಮೊಕದ್ದಮೆಯನ್ನು ಭೇದಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದು, ಇದು ಅವರ ವೃತ್ತಿಪರ ಹಿರಿಮೆ, ದೃಢನಿಷ್ಟೆ ಮತ್ತು ಕರ್ತವ್ಯ ನಿಷ್ಟೆಯನ್ನು ತೋರಿಸುತ್ತದೆ. ಆಕೆಯು ನೇಹಾ ವರ್ಮಾರ ಗುರುತನ್ನು ಪತ್ತೆ ಮಾಡದಿದ್ದರೆ, ಸದರಿ ತ್ರಿವಳಿ ಕೊಲೆ ಮೊಕದ್ದಮೆಯ ಆರೋಪಿಗಳನ್ನು ಬಂಧಿಸುವುದು ಅಸಾಧ್ಯವಾಗುತ್ತಿತ್ತು ಮತ್ತು ಆಕೆಯ ಸಾಮರ್ಥ್ಯದಿಂದ, ಆರೋಪಿಗಳ ಗುರುತನ್ನು ಆಕೆಯು ಪತ್ತೆ ಮಾಡಿರುತ್ತಾರೆ ಮತ್ತು ಮೊಕದ್ದಮೆಯನ್ನು ಭೇದಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಮತ್ತು ಇದರಿಂದ ಸಾರ್ವಜನಿಕರಿಗೆ ಒಂದು ಒಳ್ಳೆಯ ಸಂದೇಶ ರವಾನೆಯಾಗಿದ್ದು, ಪೊಲೀಸರ ಮೇಲೆ ಅವರ ನಂಬಿಕೆಯನ್ನು ಮರಳಿ ಪಡೆಯಲಾಗಿರುತ್ತದೆ. ಈ ಹಿಂದೆಯೂ ಕೂಡ, ಸಬ್–ಇನ್ಸ್‌ಪೆಕ್ಟರ್‌ರವರು ಸೇವೆಯು ಅತ್ಯುತ್ತಮವಾಗಿರುತ್ತದೆ.

ಸಬ್–ಇನ್ಸ್‌ಪೆಕ್ಟರ್ ದಿಪೀಕಾ ಶಿಂಧೆಯವರ ಸದರಿ ಧೈರ್ಯ ಮತ್ತು ಶ್ಲಾಘನೀಯ ಕಾರ್ಯವನ್ನು ಗಮನದಲ್ಲಿಟ್ಟುಕೊಂಡು, ಪೊಲೀಸ್ ನಿಯಮಾವಳಿಗಳ ಖಂಡಿಕೆ ಸಂಖ್ಯೆ 7(ಎ) ರ ಅಡಿಯಲ್ಲಿ, ಆಕೆಗೆ ಇನ್ಸ್‌ಪೆಕ್ಟರ್ ಹುದ್ದೆಗೆ ಪಾಳಿತಪ್ಪಿದ ಬಡ್ತಿ ನೀಡಲು ಶಿಫಾರಸ್ಸು ಮಾಡಲಾಗಿದ್ದು, ಇದು ಆಕೆಯ ನೈತಿಕತೆಯನ್ನು ಉನ್ನತ ಮಟ್ಟದಲ್ಲಿರಿಸುತ್ತದೆ ಮತ್ತು ಭವಿಷ್ಯದಲ್ಲಿ ಪೊಲೀಸ್ ಕರ್ತವ್ಯಗಳನ್ನು ಶ್ರದ್ಧೆ ಮತ್ತು ಪರಿಶ್ರಮದಿಂದ ನಿರ್ವಹಿಸುವ ಮೂಲಕ ಇಲಾಖೆಗೆ ವಿಶೇಷ ಮನ್ನಣೆಯನ್ನು ತರುತ್ತಾರೆ.''

74. ಅಂತೆಯೇ, ಪ್ರ.ಸ.6–ಅನಿಲ್ ವರ್ಮಾರವರ (ನೇಹಾ ತಂದೆ) ಆರ್.ಟಿ.ಐ ಪ್ರಶ್ನೆಗೆ ಉತ್ತರವಾಗಿ, ಪಿ.ಐ.ಓ ಪೊಲೀಸ್ ಹೆಡ್‌ಕ್ವಾಟರ್ಸ್, ಭೂಪಾಲ್ ರವರು ಸಂಖ್ಯೆ: ಪಿ.ಎಚ್/10/ದಾಖಲೆ/ಆರ್‌ಟಿಐ/70/12/506/12 (ದಿನಾಂಕ: 22.05.2012 ರ) ಮೂಲಕ ಉತ್ತರವನ್ನು ಒದಗಿಸಲಾಗಿದೆ. ನಿ.ಡಿ.46 ರಂತೆ ಹಾಜರುಪಡಿಸಲಾದ ಈ ದಾಖಲೆಯ ಪ್ರಮುಖ ಭಾಗವನ್ನು ಈ ಕೆಳಗಿನಂತೆ ಹೊರತೆಗೆಯಲಾಗಿದೆ.

> **ವಿಷಯ**: ಮಾಹಿತಿ ಹಕ್ಕು ಕಾಯಿದೆ, 2005 ರ 6(1) ನೇ ಪ್ರಕರಣದ ಅಡಿಯಲ್ಲಿ ಮಾಹಿತಿ.
>
> **ಉಲ್ಲೇಖ**: ದಿನಾಂಕ 29.02.2012, 16.03.2012, 23.03.2012 ಮತ್ತು 26.03.2012 ರ ಅರ್ಜಿಗಳು. ಮೇಲಿನ ಉಲ್ಲೇಖಿತ ಅರ್ಜಿಗಳನ್ನು ಪರಿಶೀಲಿಸಲು ಮನವಿ. ಎರಡು ಅಂಶಗಳಲ್ಲಿ ಸ್ವೀಕರಿಸಿದ ಮಾಹಿತಿಯು ಈ ಕೆಳಗಿನಂತಿದೆ:
>
> 1. ಸಬ್–ಇನ್ಸ್‌ಪೆಕ್ಟರ್ ದೀಪಿಕಾ ಶಿಂಧೆ ಅವರಿಗೆ ಪಾಳಿತಪ್ಪಿದ ಬಡ್ತಿಯನ್ನು ನೀಡಿದರ ಕುರಿತು ದಿನಾಂಕ 24.12.2011 ರ ಸಮಿತಿಯ ವರದಿಯ ನಕಲು ಪ್ರತಿಯನ್ನು ಲಗತ್ತಿಸಲಾಗಿದೆ.
>
> 2. ದಿನಾಂಕ 19.06.2011 ರಂದು, ಮನೆ ಸಂಖ್ಯೆ. 24, ಶ್ರೀನಗರ ಮುಖ್ಯ ಕಾಲೋನಿಯಲ್ಲಿ ವಾಸವಾಗಿದ್ದ ಬ್ಯಾಂಕ್ ಅಧಿಕಾರಿಯಾದ ನಿರಂಜನ್ ದೇಶಪಾಂಡೆಯವರ ಪತ್ನಿ ಮೇಘಾ ದೇಶಪಾಂಡೆ, ಮಗಳು ಆಶ್ಲೇಷಾ ದೇಶಪಾಂಡೆ ಮತ್ತು ಅತ್ತೆ ರೋಹಿಣಿ ಪಡ್ಕೆಯವರ ತ್ರಿವಳಿ ಕೊಲೆ ಮೊಕದ್ದಮೆಯ ಪ್ರಮುಖ ಆರೋಪಿಗಳಾದ ನೇಹಾ ವರ್ಮಾ, ರಾಹುಲ್ @ ಗೋವಿಂದ್ ಮತ್ತು ಮನೋಜ್ ಬಲಾಯ್ ಎಂಬುವವನ್ನು ಸಬ್–ಇನ್ಸ್‌ಪೆಕ್ಟರ್ ಶ್ರೀಮತಿ. ದಿಪೀಕಾ ಶಿಂಧೆಯವರು ಪತ್ತೆ ಮಾಡಿ ಇಂದೋರ್‌ನ ಎಮ್.ಐ.ಜಿ ಪಿ.ಎಸ್.ನ ಅಡಿಯಲ್ಲಿ ಬಂಧಿಸಿರುತ್ತಾರೆ".

75. ಪ್ರ.ಸಾ.1 ರವರು ಮೂರು ಅಂಶದ ಬಗ್ಗೆ ಒಪ್ಪಿಕೊಂಡಿರುವುದು ಅಂದರೆ (ಅ) ಕೆಲವು ಮೊಬೈಲ್ ಸಂಖ್ಯೆಗೆ ಸಂಬಂಧಿಸಿದಂತೆ ಕರೆಯ ವಿವರಗಳನ್ನು ವಿಶ್ಲೇಷಿಸಿರುವುದು; (ಆ) ಮಾಹಿತಿದಾರನಿಂದ ಮೂಲ ಮಾಹಿತಿಯನ್ನು ಪಡೆದುಕೊಂಡು ಅದನ್ನು ಎಮ್.ಐ.ಜಿ ಪೊಲೀಸ್ ಠಾಣೆಗೆ ರವಾನೆ ಮಾಡಿರುವುದು ಮತ್ತು (ಇ) ನೇಹಾರ ಬಂಧನದ ನಂತರ ಆಕೆಯನ್ನು ಎಮ್.ಐ.ಜಿ ಪೊಲೀಸ್ ಠಾಣೆಯಲ್ಲಿ ಪ್ರಶ್ನೆ ಮಾಡಿರುವುದು, ಸಾಬೀತಾಗಿರುತ್ತದೆ.

ದಿನಾಂಕ 23.06.2011 ರಂದೂ ಸಹ ತನಿಖಾ ತಂಡದೊಂದಿಗೆ ಪ್ರ.ಸಾ.1 ರವರು ಇದ್ದರು ಎಂಬುದನ್ನು ಪ್ರಾ.ಸಾ.7 ರ ಹೇಳಿಕೆಯು ಸೂಚಿಸುತ್ತದೆ ಮತ್ತು ಈ ನಿಟ್ಟಿನಲ್ಲಿ ಅಪೀಲುದಾರರ ವಾದವನ್ನು ಬೆಂಬಲಿಸುವಲ್ಲಿ ಪ್ರತ್ಯೇಕವಾದ ಪುಷ್ಟಿಯನ್ನು ಒದಗಿಸುತ್ತದೆ.

76. ಪೂರ್ವ ಬಂಧನ, ಗುಪ್ತಚರ ಮಾಹಿತಿ ಸಂಗ್ರಹಣೆ, ನೇಹಾರವರ ಬಂಧನ ಮತ್ತು ವಿಚಾರಣೆಯಲ್ಲಿ ಪ್ರ.ಸಾ.1 ರ ಪಾತ್ರವನ್ನು ಅಭಿಯೋಜನೆಯು ನ್ಯಾಯಾಲಯದಿಂದ ಆದಷ್ಟು ಹೊರಗಿಡಲು ಪ್ರಯತ್ನಿಸಿರುವುದು ನೇಹಾರವರ ಬಂಧನಕ್ಕೆ ಸಂಬಂದಿಸಿದಂತೆ ಅಭಿಯೋಜನೆಯ ಆವೃತ್ತಿಯನ್ನು ನಂಬಲಾಗುವುದಿಲ್ಲ ಎಂಬ ನಿರ್ಣಯಕ್ಕೆ ಬರಲು ಕಾರಣವಾಗಿರುತ್ತದೆ. ಆಗಿನ ಪೊಲೀಸ್ ಮಹಾನಿರೀಕ್ಷಕರಾದ ಪ್ರ.ಸಾ.3–ಸಂಜಯ್ ರಾಣಾರವರು, ದಿನಾಂಕ 04.10.2011 ರಂದು ಪೊಲೀಸ್ ಇಲಾಖೆಯವರು ನಿ.ಡಿ.32 ನ್ನು ಹೊರಡಿಸಿದ್ದು ಅದು ಒಂದು ಪಟ್ಟಿಯನ್ನು ಒಳಗೊಂಡಿದೆ ಮತ್ತು ಆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ. 26 ರಲ್ಲಿ ಹೆಸರಿಸದ ಮಾಹಿತಿದಾರರಿಗೆ ಅವರ ಕೊಡುಗೆಗಾಗಿ ಬಹುಮಾನವನ್ನು ನೀಡಿರುವುದಾಗಿ ಒಪ್ಪಿಕೊಂಡಿರುವುದು ದಾಖಲೆಯ ವಿಷಯವಾಗಿರುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಈ ಎಲ್ಲಾ ಸಾಕ್ಷ್ಯಗಳು ಅಂದರೆ ಪ್ರ.ಸಾ.1 ಮತ್ತು ಪ್ರ.ಸಾ.7 ರ ಸಾಕ್ಷ್ಯಗಳು ಮತ್ತು ಪೊಲೀಸ್ ಇಲಾಖೆ/ರಾಜ್ಯ ಸರ್ಕಾರವು ಸ್ವತಃ ಒದಗಿಸಿರುವ ದಾಖಲೆಗಳು ಕೇವಲ ಬಾಹ್ಯ ಹಂತದಲ್ಲಿ ಅಲ್ಲದೆ ವ್ಯಾಪಕವಾದ ಆಧಾರದ ಮೇಲೆ ಪ್ರ.ಸಾ.1ರ ಒಳಗೊಳ್ಳುವಿಕೆಯ ಬಗ್ಗೆ ಸ್ಪಷ್ಟವಾಗಿ ಸೂಚಿಸುತ್ತದೆ ಮತ್ತು ತದನಂತರವೂ ಅಂದರೆ ಈ ನಿಟ್ಟಿನಲ್ಲಿ ಅಪರಾಧದ ನಂತರ ತಕ್ಷಣವೇ ನಡೆಸಿದಂತ ವಿಚಾರಣೆ; ಸಂಭಾವ್ಯ ಆರೋಪಿಗಳಿಗೆ ಸಂಬಂಧಿಸಿದಂತೆ ಗುಪ್ತಚರ ಮಾಹಿತಿಯನ್ನು ಸಂಗ್ರಹಿಸಿರುವುದು; ಕರೆ ವಿವರಗಳನ್ನು ವಿಶ್ಲೇಷಿಸುವುದು; ಬಂಧನದಲ್ಲಿ ಪಾಲ್ಗೊಳ್ಳುವುದು; ಆರೋಪಿಗಳನ್ನು ವಿಚಾರಣೆಗೊಳಪಡಿಸಿರುವುದು ಮತ್ತು ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಣವಾದ ಮುಂದಿನ ತನಿಖೆಯಲ್ಲಿ ಆಕೆಯ ಒಳಗೊಳ್ಳುವಿಕೆಯು ಪ್ರಸ್ತುತ ಮೊಕದ್ದಮೆಯಲ್ಲಿ ಪ್ರ.ಸಾ.1 ರ ಒಳಗೊಳ್ಳುವಿಕೆಯನ್ನು ಸೂಚಿಸುತ್ತದೆ.

77. ನೇಹಾರವರನ್ನು ಮುಂಚೆಯೇ ಅಂದರೆ ದಿನಾಂಕ 19.06.2011 ರಂದೇ ವಿಚಾರಣೆಗೆಂದು ಕರೆದೊಯ್ಯಲಾಯಿತು ಎಂದು ಪ್ರ.ಸಾ.6–ಅನಿಲ್ ವರ್ಮಾ (ನೇಹಾರ ತಂದೆ) ತಮ್ಮ ಹೇಳಿಕೆಯಲ್ಲಿ ನುಡಿದಿರುತ್ತಾರೆ. ದಿನಾಂಕ 21.06.2011 ರಂದು ಅಪರಾಧ ಶಾಖೆಯ ಒಬ್ಬ ಕಿಶನ್ ಪಾನ್‌ವರ್‌ರವರು ಅವರ ಬಳಿಗೆ ಬಂದು ನೇಹಾರವರು ಕದ್ದ ಮೊಬೈಲ್ ಫೋನ್ ಬಳಸುತ್ತಿದ್ದರು, ಅದಕ್ಕಾಗಿ ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿರುವುದಾಗಿ ಪ್ರ.ಸಾ.6 ರವರು ನುಡಿದಿರುತ್ತಾರೆ. ಅವರ ಆಜ್ಞೆಯ ಮೇರೆಗೆ, ಪ್ರ.ಸಾ.6 ರವರು ನೇಹಾರವರಿಗೆ ತಕ್ಷಣವೇ ಮನೆಗೆ ತಲುಪುವಂತೆ ತಿಳಿಸಿದರು. ಆಕೆಯು ಮನೆ ತಲುಪಿದ ನಂತರ, ಪ್ರ.ಸಾ.6 ರವರು ಕಿಶನ್ ಪಾನ್‌ವರ್‌ರವರನ್ನು ಸಂಪರ್ಕಿಸಿದರು ಮತ್ತು ಕಛೇರಿಯಿಂದ ಆಕೆಯು ಹಿಂದಿರುಗಿದ ಬಗ್ಗೆ ಮಾಹಿತಿಯನ್ನು ನೀಡಿದರು. ಅವರು 15–20 ನಿಮಿಷಗಳ ನಂತರ ಪ್ರ.ಸಾ.1 ರೊಂದಿಗೆ ಪ್ರ.ಸಾ.6ರ ಮನೆಯನ್ನು ತಲುಪಿದರು. ಅವರು ನೇಹಾರವರ ಮೊಬೈಲ್ ಫೋನ್ ಪರಿಶೀಲಿಸಿದರು ಮತ್ತು ನೇಹಾರನ್ನು ವಿಚಾರಣೆಗೆ ಸುಮಾರು ಒಂದೂವರೆ ಗಂಟೆಗಳ ಕಾಲ ಕರೆದುಕೊಂಡು ಹೋಗುವುದಾಗಿ ತಿಳಿಸಿ ಸ್ಥಳದಿಂದ ತೆರಳಿದರು. ಪ್ರ.ಸಾ.1 ರವರು ಆಕೆಯನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವುದಾಗಿ ಬಹಿರಂಗಪಡಿಸಿರುವುದಿಲ್ಲ ಆದರೆ ಸ್ವಲ್ಪ ದೂರದವರೆಗೆ ಪ್ರ.ಸಾ.6 ರವರಿಗೆ ಆಕೆಯ ಜೊತೆಗೆ ಹೋಗಲು ಅವಕಾಶ ಮಾಡಿಕೊಟ್ಟರು. ಪ್ರ.ಸಾ.6 ರ ಪ್ರಕಾರ ನೇಹಾರನ್ನು ರೀಗಲ್ ಕ್ರಾಸಿಂಗ್‌ನಲ್ಲಿ ಇರುವ ಎಸ್.ಪಿ ಕಛೇರಿಗೆ ಕರೆದುಕೊಂಡು ಹೋಗಿ, ನಂತರ ಆಕೆಯನ್ನು ಮಹಡಿಗೆ ಕರೆದುಕೊಂಡು ಹೋಗಲಾಯಿತು. ಸಾಕ್ಷಿಗೆ ಅಲ್ಲಿಗೆ ಹೋಗಲು ಅವಕಾಶ ನೀಡಿರುವುದಿಲ್ಲ ಬದಲಿಗೆ ಅವರಿಗೆ ಅಲ್ಲಿಂದ ಹೊರಡಲು ಹೇಳಿದ್ದು ಅವರು ಆ ಸಮಯದಲ್ಲಿ ಆತನ ಮಗನೊಂದಿಗೆ ಮನೆಗೆ ಹೋದರು. ದಿನಾಂಕ 23.06.2011 ರಂದು ಬೆಳಗ್ಗೆ 7.30 ಗಂಟೆಗೆ ನೇಹಾರ ಬಟ್ಟೆಗಳನ್ನು ಪೊಲೀಸರು ತೆಗೆದುಕೊಂಡು ಹೋಗಲು ಬರುತ್ತಿದ್ದರಿಂದ ಅವುಗಳನ್ನು ಹೊರಗಡೆ ಇಡಲು ದೂರವಾಣಿ ಮೂಲಕ ಕೇಳಲಾಯಿತು ಎಂದು ಅವರು ಮುಂದುವರಿದು ಹೇಳಿರುತ್ತಾರೆ. ಪೊಲೀಸರು ಪ್ರ.ಸಾ.6 ರ ಮನೆಯನ್ನು ಸಂಜೆ ತಲುಪಿದ್ದು, ಆ ಸಮಯದಲ್ಲಿ ಒಂದು ಜೊತೆ ಜೀನ್ಸ್ ಮತ್ತು ಒಂದು ಮರೋನ್ ಟಾಪನ್ನು ತೆಗೆದುಕೊಂಡು ಹೋದರು. ಅಭಿಯೋಜನೆಯು ಆತನ

ಹೇಳಿಕೆಯು ಸುಳ್ಳೆಂದು ಸೂಚಿಸಲು ಆ ಸಾಕ್ಷಿಯನ್ನು ಪಾಟೀ ಸವಾಲುಗೊಳಿಸಲಾಯಿತು ಆದರೆ ಆತನು ಅದನ್ನು ನಿರಾಕರಿಸಿರುತ್ತಾನೆ.

78. ಪ್ರ.ಸಾ.1, ಪ್ರ.ಸಾ.3 ಮತ್ತು ಪ್ರ.ಸಾ.4 ರ ಸಾಕ್ಷ್ಯಗಳಿಗೆ ಮತ್ತು ದಸ್ತಾವೇಜಿಯ ಸಾಕ್ಷ್ಯಕ್ಕೂ ಸಹ ಹೋಲಿಸಿದ ಅಭಿಯೋಜನೆ ಆವೃತ್ತಿಯ ಒಟ್ಟಾರೆ ಅಧ್ಯಯನವು, ದಿನಾಂಕ 22.06.2011 ರಂದು ನೇಹರ ಬಂಧನದಿಂದ "ಪ್ರಗತಿ" ಪಡೆಯಲಾಯಿತು ಎಂಬ ಅಭಿಯೋಜನೆಯ ವಾದವು ತಪ್ಪಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಪೊಲೀಸರಿಗೆ ಮೃತ ಆಶ್ಲೇಷಾ ಮತ್ತು ಮೇಘಾರವರ ಸಿಮ್ ಕಾರ್ಡ್‌ಗಳ ಬಗ್ಗೆ ಮಾಹಿತಿಯಿರುತ್ತದೆ. ಪ್ರ.ಸಾ.1 ರವರು ಈ ಸಿಮ್ ಕಾರ್ಡ್‌ನ ಕರೆಗಳ ವಿವರಗಳನ್ನು ವಿಶ್ಲೇಷಿಸಿರುತ್ತಾರೆ. ಆದಾಗ್ಯೂ, ಅಧಿವಿಚಾರಣೆಯಿಂದ ಈ ವಿವರಗಳನ್ನು ಅಭಿಯೋಜನೆಯು ದೂರವಿಟ್ಟಿರುತ್ತದೆ. ಅಂತೆಯೇ, ಪ್ರಾ.ಸಾ.28 ಮತ್ತು ಪ್ರಾ.ಸಾ.31 ರವರು ನೇಹಾರವರನ್ನು ಹೇಗೆ ಬಂಧಿಸಲಾಯಿತು ಎಂದು ವಿವರವಾಗಿ ವರ್ಣಿಸಿದ್ದರೂ ಸಹ (ವಿಶೇಷವಾಗಿ ಮಾಹಿತಿಯನ್ನು ಒದಗಿಸಿದ ಪ್ರಾ.ಸಾ.4, ಪ್ರಾ.ಸಾ.19 ರ ಪಾತ್ರ ಮತ್ತು ಪ್ರಾ.ಸಾ.3, ಪ್ರಾ.ಸಾ.6 ಮತ್ತು ಪ್ರಾ.ಸಾ.36 ರ ಭಾಗವಹಿಸುವಿಕೆ) ಎಲ್ಲರೂ ಸಹ ಪ್ರ.ಸಾ.1 ರ ಬಗ್ಗೆ ಸ್ಪಷ್ಟವಾಗಿ ಮೌನವಹಿಸಿದ್ದರು. <u>ಆದರೆ ಪ್ರ.ಸಾ.1 ರವರು, ಯಾವುದೇ ಅನಿಶ್ಚಿತ ಪರಿಭಾಷೆಯಲ್ಲಿ, ಎರಡು ವಿಭಿನ್ನ ಸಂದರ್ಭಗಳಲ್ಲಿ, ನೇಹಾರ ವಿಚಾರಣೆಯಲ್ಲಿ ಭಾಗವಹಿಸಿದ್ದರ ಬಗ್ಗೆ ಮತ್ತು ಆಕೆಯ ಬಂಧನಕ್ಕೆ ಕಾರಣವಾದ ಅಂಶವಾದ ಆಕೆಯು ಯಾವ ಬಟ್ಟೆಗಳನ್ನು ಧರಿಸಿದ್ದರು ಎಂಬ ಮಾಹಿತಿಯನ್ನು ಒಳಗೊಂಡ ಆಕೆ ಇರುವ ಸ್ಥಳದ ಬಗ್ಗೆ ಮಾಹಿತಿಯನ್ನು ನೀಡಿರುವುದರ ಬಗ್ಗೆ ಒಪ್ಪಿಕೊಂಡಿರುತ್ತಾರೆ.</u> ಎಲ್ಲಾ ಅಪೀಲುದಾರರ ಬಂಧನವಾದ ಒಂದು ದಿನದ ನಂತರ ದಿನಾಂಕ 23.06.2011 ರಂದು ವಸ್ತುಗಳನ್ನು ವಶಪಡಿಸಿಕೊಳ್ಳುವಾಗ ಪ್ರ.ಸಾ.1ರ ಭಾಗವಹಿಸುವಿಕೆಯನ್ನು ಪ್ರಾ.ಸಾ.7 ರವರು ಒಪ್ಪಿಕೊಂಡಿರುವುದರಿಂದ ರಹಸ್ಯವು ಬಹಿರಂಗವಾಗಿರುತ್ತದೆ.

79. ಈ ಎಲ್ಲಾ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ನೇಹಾರ ಬಂಧನ ಮತ್ತು ಆಕೆಯ ವಿಚಾರಣೆಗೆ ಸಂಬಂಧಿಸಿದ ಅಭಿಯೋಜನೆಯ ಆವೃತ್ತಿಯು ವಿಶ್ವಾಸಾರ್ಹವಲ್ಲದ್ದಾಗಿರುತ್ತದೆ. ನ್ಯಾಯಾಲಯದಿಂದ ಈ ಎಲ್ಲಾ ಅಂಶಗಳ ನಿಗ್ರಹವು ನೇಹಾರ ಬಂಧನದ ವಿಧಾನಕ್ಕೆ ಮತ್ತು ಪ್ರ.ಸಾ.1 ರ ಪಾತ್ರಕ್ಕೆ ಸಂಬಂಧಿಸಿದಂತೆ ಅಭಿಯೋಜನೆಯ ಆವೃತ್ತಿಯು ವಿಶ್ವಾಸಾರ್ಹವಲ್ಲದ್ದು ಎಂದು ಪ್ರತಿಕೂಲವಾದ ತೀರ್ಮಾನದ ಕಡೆಗೆ ಗಮನ ಸೆಳೆಯುತ್ತದೆ.

80. ಅಭಿಯೋಜನೆಯ ವಾದದಲ್ಲಿ ನೇಹಾರ ಬಂಧನದ ವಿಧಾನವನ್ನು ತಿರಸ್ಕರಿಸಿದ ಪರಿಣಾಮ ಏನು? ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಸಂಪೂರ್ಣ ಕಥೆ ಅಂದರೆ ವಿವರಣಾ ಹೇಳಿಕೆಗಳು ಮತ್ತು ದಿನಾಂಕ 22.06.2011 ಮತ್ತು 23.06.2011 ರಂದು ವಶಪಡಿಸಿಕೊಳ್ಳಲಾದ ಕಥೆಯನ್ನು ತಿರಸ್ಕರಿಸಬೇಕು ಎಂದು ಅಪೀಲುದಾರರು ಬಲವಾಗಿ ಒತ್ತಾಯಿಸಿದ್ದಾರೆ. ಆದರೆ ಇಂತಹ ಕಠೋರ ದೋರಣೆಯು ಅನವಶ್ಯಕ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಪ್ರಸ್ತುತ ಮೊಕದ್ದಮೆಯು ಸಂಪೂರ್ಣವಾಗಿ ಸಾಂದರ್ಭಿಕ ಸಾಕ್ಷ್ಯವನ್ನು ಅವಲಂಬಿಸಿರುತ್ತದೆ. ನೇಹಾ ಅವರ ಬಂಧನಕ್ಕೆ ಸಂಬಂಧಿಸಿದಂತೆ ಅಭಿಯೋಜನೆಯ ಆವೃತ್ತಿಯನ್ನು ತಿರಸ್ಕರಿಸಿದರೆ ಕೇವಲ ಆ ಒಂದು ಸಂದರ್ಭವನ್ನು ಮಾತ್ರ ಸಾಬೀತುಪಡಿಸಲಾಗಿಲ್ಲ ಎಂಬ ಅರ್ಥವಿರುತ್ತದೆ. ನೇಹಾ ಅವರ ಬಂಧನವು ಅಭಿಯೋಜನೆಯ ವಾದದ ಏಕೈಕ ಆಧಾರವನ್ನು ಒದಗಿಸಿದೆ ಎಂಬುದಾಗಿರುವುದಿಲ್ಲ. ಇನ್ನು ಕೆಲವು ರೀತಿಯಲ್ಲಿ ಇದು ಒಂದು ಪ್ರಾಥಮಿಕ ಅಂಶವಾಗಿದ್ದು. ಅದರ ನಿರಾಕರಣೆಯು ನ್ಯಾಯಾಲಯವು ತುಂಬಾ ಜಾಗರೂಕತೆಯಿಂದ ಇತರ ಸಾಕ್ಷ್ಯಗಳೊಂದಿಗೆ ಮುಂದುವರಿಯಬೇಕು ಎಂಬ ಅರ್ಥವನ್ನು ನೀಡುತ್ತದೆ ಮತ್ತು ಇತರ ಎಲ್ಲಾ ಸಂದರ್ಭಗಳನ್ನು ಸಂದೇಹಾತೀತವಾಗಿ ಸಾಬೀತುಪಡಿಸಲಾಗಿದೆಯೇ ಮತ್ತು ಅಂತಿಮವಾಗಿ ಆರೋಪಿಗಳ ಅಪರಾಧವನ್ನು ಸಾಬೀತುಪಡಿಸಲಾಗಿದೆಯೇ ಎಂಬುದನ್ನು ನಿಷ್ಪಕ್ಷಪಾತವಾಗಿ ನಿರ್ಧರಿಸಬೇಕಿದೆ.

II. ಇತರ ಅಪೀಲುದಾರರ ಬಂಧನಕ್ಕೆ ಸಂಬಂಧಿಸಿದ ಸಂದರ್ಭಗಳು:

81. ದಿನಾಂಕ 22.06.2011 ರಂದು ನೇಹಾರವರ ಬಂಧನಕ್ಕೆ ಕಾರಣವಾದ ಸಂದರ್ಭವನ್ನು ನಂಬಲಾಗದಿದ್ದರೆ, ಆ ದಿನ ಪ್ರಾ.ಸಾ.3 ಮತ್ತು ಪ್ರಾ.ಸಾ.6 ರ ಸಮ್ಮುಖದಲ್ಲಿ ಆಕೆಯನ್ನು ವಿಚಾರಣೆಗೊಳಪಡಿಸಲಾಯಿತು ಎಂಬುದು ದಾಖಲೆಯ ವಿಷಯವಾಗಿ ಉಳಿದಿರುತ್ತದೆ. ಈ ಸಾಕ್ಷಿಗಳ ಹೇಳಿಕೆಗಳನ್ನು ವಿಶ್ಲೇಷಿಸುವುದು ಅವಶ್ಯಕವಾಗಿರುತ್ತದೆ. ಪ್ರಾ.ಸಾ.3 ಮತ್ತು ನಿರಂಜನ್ ದೇಶಪಾಂಡೆಯವರು (ಪ್ರಾ.ಸಾ.1) ಮೃತರ ಸಂಬಂಧಿಕರಿರುತ್ತಾರೆ. ಅವರು ದಿನಾಂಕ 19.06.2011 ರಂದು ಉಪಸ್ಥಿತಿಯಿರುತ್ತಾರೆ ಮತ್ತು ರಕ್ತದ ಮಾದರಿ, ಬೆರಳೊತ್ತು ಮತ್ತು ಘಟನಾ ಸ್ಥಳದಲ್ಲಿ ದೊರೆತ ವಸ್ತುಗಳನ್ನು ಜಪ್ತಿಮಾಡಿ ಮೊಹರು ಮಾಡಿರುವುದನ್ನು ನೋಡಿರುತ್ತಾರೆ. ಶವಪಂಚನಾಮೆ ಪ್ರಕ್ರಿಯೆಗೂ ಅವರು ಸಾಕ್ಷಿಯಾಗಿರುತ್ತಾರೆ. ದಿನಾಂಕ 22.06.2011 ರ ಬೆಳಿಗ್ಗೆ ಇತರ ವ್ಯಕ್ತಿಯೊಂದಿಗೆ ಪೊಲೀಸ್ ಠಾಣೆಗೆ ಬರಲು ಐ.ಓ (ಪ್ರಾ.ಸಾ.31) ಹೇಳಿರುವುದಾಗಿ ಅವರು ನುಡಿಯುತ್ತಾರೆ. ಆದಾಗ್ಯೂ, ಪ್ರಾ.ಸಾ.3 ರವರಿಗೆ ಇನ್ನೊಬ್ಬ ವ್ಯಕ್ತಿಯನ್ನು ಕರೆತರುವಂತೆ ಹೇಳಿದ ಬಗ್ಗೆ ಪ್ರಾ.ಸಾ.31 ಬೆಂಬಲಿಸುವುದಿಲ್ಲ. ಅದೇನೇ ಇದ್ದರೂ, ಪ್ರಾ.ಸಾ.3 ಮತ್ತು ಪ್ರಾ.ಸಾ.6 ರವರು ಬೆಳಗ್ಗೆ ಸುಮಾರು 7.30 ಗಂಟೆಗೆ ಪೊಲೀಸ್ ಠಾಣೆಯನ್ನು ತಲುಪಿರುತ್ತಾರೆ. ನೇಹಾ ಬಂಧನ ಬೆಳಗ್ಗೆ 8.10 ಗಂಟೆಗೆ ಆಗಿರುವುದಾಗಿ ತೋರಿಸಲಾಗಿದ್ದು, ವಿವರಣಾ ಹೇಳಿಕೆ, 2 ಬಂಗಾರದ ಬಳೆಗಳು, ಒಂದು ಮುರಿದ ಮಂಗಳಸೂತ್ರ, 3 ಗುರಿಯಾಗಳು, ಬಂಗಾರದ ಪದಕ, ಮೃತ ಮೇಘಾರವರಿಗೆ ಸೇರಿದ ಎ.ಟಿ.ಎಂ ಕಾರ್ಡ್, ಓರಿಫ್ಲೇಮ್ ಸುಗಂಧ ದ್ರವ್ಯ ಬಾಟಲ್ ಮತ್ತು ಓರಿಫ್ಲೇಮ್ ಪ್ರಪತ್ರವನ್ನು (ಮೇಘಾಳ ಸಹಿಯೊಂದಿಗೆ) ವಶಪಡಿಸಿಕೊಂಡದನ್ನು ಪ್ರಾ.ಸಾ.3 ರವರು ನೋಡಿರುತ್ತಾರೆ. ರಾಹುಲ್‌ರವರ ಬಂಧನ (ಬೆಳಗ್ಗೆ 9.00 ಗಂಟೆಗೆ), ಆತನ ವಿವರಣಾ ಹೇಳಿಕೆ, ವಿವಿಧ ವಸ್ತುಗಳು ಅಂದರೆ ಒಂದು ಪಿಸ್ತೂಲ್, ಒಂದು ಚಾಕು, ಎರಡು ಬಂಗಾರದ ಬಳೆಗಳು, "ಗುರಿಯಾ" ಹೊಂದಿದ್ದ ಮಂಗಳಸೂತ್ರದ ಮುರಿದ ಭಾಗ, ಸರ (ಅಂದಾಜು 9 ಗ್ರಾಂ ತೂಕ), ಒಂದು ಕಪ್ಪು ಗುರಿಯಾ, ಮತ್ತು ರಾಹುಲ್‌ರವರ ಭಾವಚಿತ್ರವನ್ನು (ಬಲಗೈಯಲ್ಲಿ ಕಪ್ಪು ಮಣಿಗಳ ಬ್ರೆಸ್‌ಲೆಟ್ ಧರಿಸಿದ್ದಾರೆ) ವಶಪಡಿಸಿಕೊಂಡಿದಕ್ಕೆ ಸಂಬಂಧಿಸಿದಂತೆ ಅವರು

ನುಡಿದಿರುತ್ತಾರೆ. ದಿನಾಂಕ 22.06.2011 ರಂದು ಬೆಳಗ್ಗೆ 10.05 ಗಂಟೆಗೆ ಮನೋಜ್‌ರವರ ಬಂಧನ ಮತ್ತು ಅವರ ವಿವರಣಾ ಹೇಳಿಕೆ ಮತ್ತು ವಸ್ತುಗಳನ್ನು ತೋರಿಸಿದರಿಂದ ಅವುಗಳನ್ನು ವಶಪಡಿಸಿಕೊಂಡದ್ದನ್ನು (ನಿ.ಪಿ.16 ಮತ್ತು ನಿ.ಪಿ.17) ನೋಡಿರುವುದಾಗಿ ಮುಂದುವರಿದು ನುಡಿದಿರುತ್ತಾರೆ. ಎರಡು ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಭಾಗ, ಒಂದು ಚಾಕು ಮತ್ತು ಸನ್‌ಗ್ಲಾಸ್ ಹಾಕಿಕೊಂಡಿರುವ ಮನೋಜ್‌ರ ಭಾವಚಿತ್ರವನ್ನು ವಶಪಡಿಸಿಕೊಂಡ ವಸ್ತುಗಳು ಒಳಗೊಂಡಿರುತ್ತವೆ. ಪ್ರಾ.ಸಾ.6 ಈ ಅಂಶಗಳನ್ನು ಪುಷ್ಟೀಕರಿಸುತ್ತಾರೆ.

82. ಸಮಯದಲ್ಲಿನ ನ್ಯೂನ್ಯತೆಯ ಕಡೆಗೆ ಗಮನ ಸೆಳೆಯುತ್ತಾ ಪ್ರಾ.ಸಾ.3 ರ ಸಾಕ್ಷ್ಯವನ್ನು ಖಂಡಿಸಲಾಯಿತು. ಆತನು ಬೆಳಗ್ಗೆ 7.30 ರ ನಂತರ ಪೊಲೀಸ್ ಠಾಣೆಯನ್ನು ತಲುಪಿರುತ್ತಾನೆ. ಮುಂದುವರಿದು, ಪೊಲೀಸ್ ತಂಡದವರು ಹೋದ ಮನೆಗಳ ವಿವರಗಳ ಬಗ್ಗೆ, ಅಲ್ಲಿ ಯಾರಿದ್ದರು ಎಂಬುದರ ಬಗ್ಗೆ ಪಾಟೀ ಸವಾಲಿನಲ್ಲಿ ನುಡಿಯಲು ಸಾಕ್ಷಿಗೆ ಸಾಧ್ಯವಾಗಿರುವುದಿಲ್ಲ. ಅಂತೆಯೇ, ಪ್ರಾ.ಸಾ.6ರ ಬಗ್ಗೆ ಒಂದು ಪ್ರಶ್ನಾರ್ಹಕ ಚಿಹ್ನೆಯನ್ನು ಎತ್ತಲಾಯಿತು. ಐ.ಓ ರವರು ಪ್ರಾ.ಸಾ.3 ರೊಂದಿಗೆ ಹೋಗಲು ಮತ್ತೊಬ್ಬ ಸಾಕ್ಷಿಗೆ ಹೇಳಿರುವುದಿಲ್ಲ ಎಂದು ಬಲವಾಗಿ ಮಂಡಿಸಲಾಗಿದೆ. ಮೃತರಿಗೆ ಮತ್ತು ಪ್ರಾ.ಸಾ.1 ರವರಿಗೆ ಸಂಬಂಧಿಕರಾಗಿದ್ದರಿಂದ, ಈ ಸಾಕ್ಷಿಗಳು ಆಸಕ್ತಿಯನ್ನು ಹೊಂದಿದ್ದರು ಎಂದು ಬಲವಾಗಿ ಮಂಡಿಸಲಾಗಿದೆ. ದಿನಾಂಕ 22.06.2011 ರಂದು ವಶಪಡಿಸಿಕೊಳ್ಳಲಾದ ವಸ್ತುಗಳಿಗೆ ಸಂಬಂಧಿಸಿದಂತೆ ಮತ್ತೊಂದು ವಾದವೇನೆಂದರೆ, ದರೋಡೆ ಮಾಡಿದ ವಸ್ತುಗಳನ್ನು ಮತ್ತು ಮೃತರನ್ನು ಹಲ್ಲೆಮಾಡಿ ಕೊಲೆಮಾಡಲು ಉಪಯೋಗಿಸಿದ ಆಯುಧಗಳನ್ನು ರಾಹುಲ್ ಮತ್ತು ಮನೋಜ್‌ರವರು ಇಟ್ಟುಕೊಂಡಿದ್ದರು ಎಂಬುದು ನಂಬಲಾಗದ ಸಂಗತಿಯಾಗಿರುತ್ತದೆ ಏಕೆಂದರೆ ಅವರು ಇತರ ವಸ್ತುಗಳಾದ ಶೂ, ಕ್ಯಾಮೆರಾ, ಬಟ್ಟೆಗಳು ಇತ್ಯಾದಿಯನ್ನು ಬಿಸಾಡಲು ಪ್ರಯತ್ನಿಸಿದ್ದರು ಮತ್ತು ಬೈಕ್, ಸ್ಕೂಟಿ ಇತ್ಯಾದಿಗಳನ್ನು ಮರೆಮಾಚಲು ಪ್ರಯತ್ನಿಸಿದ್ದರು ಎಂಬುದಾಗಿದೆ. ಐ.ಓ ರವರ ಹೇಳಿಕೆಯನ್ನು ಪುಷ್ಟೀಕರಿಸಿದ ಇಬ್ಬರು ಸಾಕ್ಷಿಗಳಾದ ಪ್ರಾ.ಸಾ.3 ಮತ್ತು ಪ್ರಾ.ಸಾ.6 ರವರು

ಸತತವಾಗಿ ಈ ವ್ಯಕ್ತಿಗಳ ಬಂಧನದ ಮಾದರಿಯ ಬಗ್ಗೆ ಮಾತನಾಡಿರುತ್ತಾರೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದಾಗ್ಯೂ, ನೇಹಾರಿಗೆ ಸಂಬಂಧಿಸಿದಂತೆ, ಆಕೆಯ ಬಂಧನದಲ್ಲಿ ಮತ್ತು ಆಕೆಗೆ ಸಂಬಂಧಿಸಿದ ಸ್ಥಳಗಳನ್ನು ಶೋಧಿಸುವಲ್ಲಿ ಪ್ರಾ.ಸಾ.4 (ಬನ್ನೊ ಸೋಲಂಕಿ) ಯಾವ ಕಾರಣಕ್ಕಾಗಿ ಭಾಗವಹಿಸಲಿಲ್ಲ ಎಂಬುದನ್ನು ವಿವರಿಸಿರುವುದಿಲ್ಲ. ಮಹಿಳಾ ಪೇದೆಯೊಬ್ಬರು ಮಹಿಳಾ ಆರೋಪಿಯನ್ನು ಪತ್ತೆ ಮಾಡಿ ಬಂಧಿಸುವಾಗ ಹಾಜರಿರಬೇಕು ಎಂಬ ಕಾನೂನು ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಪ್ರಾ.ಸಾ.4 ರವರನ್ನು ಕರೆದ ನಂತರ, ಮುಂದಿನ ಪ್ರಕ್ರಿಯೆಯಲ್ಲಿ ಪ್ರಾ.ಸಾ.4 ಏಕೆ ಭಾಗಿಯಾಗಿಲ್ಲ ಎಂಬ ಬಗ್ಗೆ ಅಭಿಯೋಜನೆಯು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ತಂಡವು ನೇಹಾ ಅವರ ಮನೆಗೆ ಹೋದಾಗ ಆಕೆಯು ಕಾರಿನಲ್ಲಿ ಕುಳಿತುಕೊಂಡಿದ್ದಾಗಿ ಪ್ರಾ.ಸಾ.4 ಒಪ್ಪಿಕೊಂಡಿರುತ್ತಾರೆ. ಐ.ಓ ಮತ್ತು ಪ್ರಾ.ಸಾ.3 ರವರು ತಂಡದಲ್ಲಿ ಅವರ ಉಪಸ್ಥಿತಿಯನ್ನು ದೃಢೀಕರಿಸಿದ್ದಾರೆ. ನೇಹಾರವರ ಮನೆಯಿಂದ ವಶಪಡಿಸಿಕೊಂಡ ಬಗ್ಗೆ ಅಭಿಯೋಜನೆಯ ಆವೃತ್ತಿಯನ್ನು ಪ್ರಾ.ಸಾ.4 ರವರೇ ಪುಷ್ಟೀಕರಿಸುವುದಿಲ್ಲ.

83. ಈ ಹಿಂದೆಯೇ ಗಮನಿಸಿದಂತೆ, ಆರೋಪಿಗಳ ಆಣತಿಯಂತೆ ಜಪ್ತಿಪಡಿಸಿಕೊಂಡ ವಸ್ತುಗಳ ವಿವರಗಳನ್ನೊಳಗೊಂಡ ಜಪ್ತಿ ಮೆಮೊಗಳು; ನಿ.ಪಿ.11 (ನೇಹಾ) ಮೃತ ಮೇಘಾರಿಗೆ ಸೇರಿದ ಎ.ಟಿ.ಎಮ್ ಕಾರ್ಡ್‌ನ್ನು ಒಳಗೊಂಡಿರುತ್ತದೆ; ನಿ.ಪಿ.14 (ರಾಹುಲ್) ದರೋಡೆಯಾದ ಆಭರಣಗಳು (ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಭಾಗ), ಒಂದು ಕಾಡು ಪಿಸ್ತೂಲ್, 35.5 ಸೆ.ಮಿ ಅಳತೆಯ ಒಂದು ಚಾಕು, ಮತ್ತು ಆತನು ತನ್ನ ಬಲಗೈಯಲ್ಲಿ ಧರಿಸಿದ್ದ ಒಂದು ಕಪ್ಪು ಬಣ್ಣದ ವಜ್ರದಂತ ಹರಳಿರುವ ಬ್ರೆಸ್‌ಲೆಟ್ಟನ್ನು ಒಳಗೊಂಡಿರುತ್ತದೆ, ನಿ.ಪಿ.17 (ಮನೋಜ್) ದರೋಡೆಯಾದ ಆಭರಣಗಳು (2 ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಭಾಗ), 34.5 ಸೆ.ಮಿ.ನ ಒಟ್ಟಾರೆಯ ಉದ್ದದ ಒಂದು ಕಬ್ಬಿಣದ ಚಾಕು ಮತ್ತು ಕಂದು ಬಣ್ಣದ ಸನ್‌ಗ್ಲಾಸ್ ಹಾಕಿಕೊಂಡ ಆತನ ಭಾವಚಿತ್ರವನ್ನು

ಒಳಗೊಂಡಿರುತ್ತದೆ. ಅಭಿಯೋಜನೆಯ ಪ್ರಕಾರ, ಈ ಎಲ್ಲಾ ವಸ್ತುಗಳು ಅವರು ಮಾಡಿದ ಅಪರಾಧಕ್ಕೆ ಸಂಬಂಧಿಸಿರುತ್ತದೆ.

84. ವಸ್ತುಗಳನ್ನು ಜಪ್ತಿ ಮಾಡಿಕೊಂಡ ನಂತರ, ಪ್ರಾ.ಸಾ.3 ಮತ್ತು ಪ್ರಾ.ಸಾ.6 ಇಬ್ಬರೂ ಪೊಲೀಸರೊಂದಿಗೆ ದಿನಾಂಕ 22.06.2011 ರಂದು ಸಂಜೆ 5.00 ಗಂಟೆಯವರೆಗೂ ಇದ್ದಿರುವುದಾಗಿ ನುಡಿದಿರುತ್ತಾರೆ. ಎಲ್ಲಾ ಮೂವರು ಆರೋಪಿಗಳ ಬಂಧನವು ಬೆಳಗ್ಗೆ 10.05 ಗಂಟೆಗೆ ಮುಕ್ತಾಯವಾಗಿರುತ್ತದೆ ಮತ್ತು ಅವರ ವಿವರಣಾ ಹೇಳಿಕೆಗಳನ್ನು ದಾಖಲಿಸಿಕೊಂಡು ಎಲ್ಲಾ ವಸ್ತುಗಳನ್ನು ಬೆಳಗ್ಗೆ 10.35 ಗಂಟೆಯ ಒಳಗಾಗಿ ಜಪ್ತಿ ಮಾಡಿಕೊಳ್ಳಲಾಯಿತು (ನಿ.ಪಿ.17 ರ ಪ್ರಕಾರ) ಎಂಬುದು ಅಭಿಯೋಜನೆಯ ಆವೃತ್ತಿಯಾಗಿರುತ್ತದೆ. ಮುಂದಿನ ತನಿಖೆಯನ್ನು ಯಾವ ಕಾರಣಕ್ಕಾಗಿ ಕೈಗೆತ್ತಿಕೊಳ್ಳಲಿಲ್ಲ ಎಂಬುದರ ಬಗ್ಗೆ ಯಾವುದೇ ವಿವರಣೆಯಿರುವುದಿಲ್ಲ. ಎಲ್ಲವೂ ದಿನಾಂಕ 22.06.2011 ರಂದು ಸಂಭವಿಸಿದಂತೆ ತೋರುತ್ತದೆ ಮತ್ತು ತದನಂತರ ಅಂದರೆ ಬೆಳಗ್ಗೆ ಸುಮಾರು 10.35 ರ ನಂತರ ಆರೋಪಿಗಳ ಉಗುರುಗಳನ್ನು ಕತ್ತರಿಸಲಾಯಿತು ಮತ್ತು ಜಪ್ತಿ ಮೆಮೊಗಳನ್ನು (ಪ್ರಾ.ಸಾ.3 ಮತ್ತು ಪ್ರಾ.ಸಾ.6 ರವರು ನುಡಿದಿರುತ್ತದೆ) ಸಿದ್ದಪಡಿಸಲಯಿತು. ಈ ನಿಟ್ಟಿನಲ್ಲಿ ತಯಾರಿಸಿದ ಜಪ್ತಿ ಮೆಮೊಗಳು ನಿ.ಪಿ.18, ನಿ.ಪಿ.19 ಮತ್ತು ನಿ.ಪಿ.20 ಆಗಿರುತ್ತದೆ. ಇವುಗಳನ್ನು ಮಧ್ಯಾಹ್ನದ ಆರಂಭದಲ್ಲಿ ಅಂದರೆ ನಿ.ಪಿ.18 (13.05 ಗಂಟೆಗೆ), ನಿ.ಪಿ.19 (13.15 ಗಂಟೆಗೆ) ಮತ್ತು ನಿ.ಪಿ.20 (13.25 ಗಂಟೆಗೆ) ನಡೆಸಲಾಗಿರುತ್ತದೆ. ನಂತರ ರಾಹುಲ್‌ರವರ ಆಣತಿಯಂತೆ ಆತನು ಘಟನೆಯ ಸಮಯದಲ್ಲಿ ಧರಿಸಿದ್ದ ಆತನ ಎಡಗಾಲಿನ ಶೂವನ್ನು ಆತನ ಮನೆಯ ಹತ್ತಿರದ ತೆರೆದ ಪ್ರದೇಶದಿಂದ (ನಿ.ಪಿ.21) 16.40 ಗಂಟೆಗೆ ಜಪ್ತಿ ಪಡಿಸಿಕೊಳ್ಳಲಾಯಿತು ಎಂದು ಅಭಿಯೋಜನೆಯು ಆರೋಪಿಸಿರುತ್ತದೆ.

85. ಎಲ್ಲಾ ಆರೋಪಿಗಳ ವಿವರಣಾ ಹೇಳಿಕೆಯನ್ನು ದಾಖಲಿಸಿ, ತದನಂತರ ವಸ್ತುಗಳ ವಶಪಡಿಸಿಕೊಳ್ಳುವ ಪ್ರಕ್ರಿಯೆಯು ದಿನಾಂಕ 22.06.2011 ರಂದು ನಡೆದಿದ್ದರೂ, ತನಿಖೆಯಲ್ಲಿ

ಯಾವ ಕಾರಣಕ್ಕಾಗಿ ವಿರಾಮಗಳಿದ್ದವು ಎಂಬುದನ್ನು ಅಭಿಯೋಜನೆಯು ವಿವರಿಸಿರುವುದಿಲ್ಲ. ಆರೋಪಿಗಳನ್ನು ಆ ದಿನ ಬಂಧಿಸಿದ್ದರೂ ಸಹ, ಅವರನ್ನು ಮರುದಿನ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು ಎಂಬುದೂ ಸಹ ದಾಖಲೆಯ ವಿಷಯವಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪೊಲೀಸರು ಮತ್ತಷ್ಟು ಮುಂದವರಿಯಲು ಅಥವಾ ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಅಡಚಣೆಯಿರುವುದಿಲ್ಲ. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಈ ಅಂಶವು ಪ್ರಮುಖವಾಗಿರುತ್ತದೆ ಏಕೆಂದರೆ ನೇಹಾರವರನ್ನು ಯಾವ ರೀತಿಯಲ್ಲಿ ಬಂಧಿಸಲಾಯಿತು ಎಂಬುದನ್ನು ಪರಿಗಣಿಸದಿದ್ದರೂ (ಹಿಂದೆ ಚರ್ಚಿಸಿದ ಹಾಗೆ); ಪ್ರಾ.ಸಾ.3 ಮತ್ತು ಪ್ರಾ.ಸಾ.6 ರವರ ಉಪಸ್ಥಿತಿಯಲ್ಲಿ ಅವರನ್ನು ಬಂಧಿಸಲಾಯಿತು ಎಂಬ ಅಂಶವು ಮತ್ತು ಆರೋಪಿಗಳ ಹೇಳಿಕೆಗೆ ಅನುಗುಣವಾಗಿ ಅವರ ಆಣತಿಯಂತೆ ವಸ್ತುಗಳನ್ನು ಜಪ್ತಿಪಡಿಸಿಕೊಂಡದ್ದೂ ಒಳಗೊಂಡಂತೆ ತನಿಖಾ ಕ್ರಮವನ್ನು ಕೈಗೊಂಡಿದ್ದ ಅಂಶಗಳು ಸಾಬೀತಾಗಿರುತ್ತವೆ. ಈ ಎಲ್ಲಾ ಕಾರಣಗಳಿಂದ ದಿನಾಂಕ 22.06.2011 ರಂದು ನಡೆದ ಘಟನೆಗಳನ್ನು (ಆರೋಪಿಗಳನ್ನು ಬಂಧಿಸಿದ ನಂತರ ಮತ್ತು ಅವರ ಆಣತಿಯ ಮೇರೆಗೆ ವಶಪಡಿಸಿಕೊಂಡದ್ದನ್ನು) ಪ್ರತ್ಯೇಕಿಸಬೇಕು ಮತ್ತು ಅಭಿಯೋಜನೆಯು ಅವಲಂಬಿತವಾದ ಬೇರೆ ದಿನಾಂಕಗಳಂದು ಸಂಭವಿಸಿದ ಇತರ ಘಟನೆಗಳು ಮತ್ತು ಸನ್ನಿವೇಶಗಳನ್ನು ವಿಭಿನ್ನವಾಗಿ ನೋಡಬೇಕಾಗಿರುತ್ತದೆ.

86. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಪ್ರಾ.ಸಾ.3 ಮತ್ತು ಪ್ರಾ.ಸಾ.6 ರ ವಿಶ್ವಾಸಾರ್ಹತೆಯನ್ನು ಅನುಮಾನಿಸಲಾಗುವುದಿಲ್ಲ. ದಿನಾಂಕ 19.06.2011 ರಂದು ನಡೆದ ಮಾರಣಾಂತಿಕ ಹಲ್ಲೆಯ ಬಗ್ಗೆ ತಿಳಿದ ನಂತರ ಪ್ರಾ.ಸಾ.3 ಉಪಸ್ಥಿತಿಯಿದ್ದರು ಮತ್ತು ಪ್ರಾ.ಸಾ.1–ನಿರಂಜನ್ ದೇಶಪಾಂಡೆಯವರು ಇಂದೋರ್ ತಲುಪಿದ ನಂತರ ಆತನ ಜೊತೆಗೆ ಉಳಿದುಕೊಂಡರು. ಆತನು (ಪ್ರಾ.ಸಾ.3) ಮೃತ ರೋಹಿಣಿಯ ಸೋದರಳಿಯನಿದ್ದು, ಆತನೇ ಮೃತರ ಅಂತ್ಯಕ್ರಿಯೆಯ ವಿಧಿಗಳನ್ನು ನೆರವೇರಿಸಿರುತ್ತಾರೆ. ಅಂತೆಯೇ, ಪ್ರಾ.ಸಾ.6 ರವರು ಬರಾಲಿ ಎಂಬ ಹಳ್ಳಿಯಲ್ಲಿ ವಾಸವಾಗಿದ್ದು; ಆ ಹಳ್ಳಿಯನ್ನು ಜಓರಾದಿಂದ (ಪ್ರಾ.ಸಾ.3

ಉಳಿದುಕೊಂಡಿದ್ದ) ಬಸ್ಸಿನಲ್ಲಿ ತಲುಪಲು 45 ನಿಮಿಷ ಬೇಕಾಗುತ್ತದೆ. ಆತನಿಗೆ ಪ್ರಾ.ಸಾ.3 ಗೊತ್ತಿತ್ತು ಮತ್ತು ರೋಹಿಣಿಯ ಪರಿಚಯವು ಸುಮಾರು 10–15 ವರ್ಷಗಳಿಂದ ಆತನಿಗೆ ಇರುತ್ತದೆ. ನೇಹಾರು ಸಿಕ್ಕಿಬಿದ್ದಿದ್ದರಿಂದ ಮತ್ತು ಆಕೆಯ ಶೋಧನೆಯಿಂದ ಆಶ್ಲೇಷಾಳಿಗೆ ಸೇರಿದ ಎ.ಟಿ.ಎಂ ಕಾರ್ಡ್ ಸಿಗಲು ಕಾರಣವಾಗಿದ್ದರಿಂದ, ಆತನನ್ನು ಪೊಲೀಸ್ ಠಾಣೆಗೆ ತನ್ನೊಂದಿಗೆ ಬರಲು ಕೇಳಿದ್ದರಿಂದ ಅವರು ಪ್ರಾ.ಸಾ.3ರ ಮನೆಗೆ ಬಂದರು. ಈ ಎರಡೂ ಸಾಕ್ಷಿಗಳಲ್ಲಿ, ಪ್ರಾ.ಸಾ.3 ಮೃತರಿಗೆ ಸಂಬಂಧಿಕರಾಗಿರುತ್ತಾರೆ; ಆದಾಗ್ಯೂ, ಪ್ರಾ.ಸಾ.6 ಸಂಬಂಧಿಕರಾಗಿರುವುದಿಲ್ಲ. ಇಬ್ಬರೂ ಸಾಕ್ಷಿಗಳು ಪರಸ್ಪರರ ಸಾಕ್ಷ್ಯವನ್ನು ಪುಷ್ಟೀಕರಿಸಿದರು ಮತ್ತು ನೇಹಾರವರ ವಿಚಾರಣೆಯ ಬಗ್ಗೆ, ಆಕೆಯ ಬಂಧನ, ವಿವರಣಾ ಹೇಳಿಕೆ, ಆಕೆಯ ಹೇಳಿಕೆಯ ಅನುಸಾರವಾಗಿ ವಶಪಡಿಸಿಕೊಂಡ ವಸ್ತುಗಳು ಮತ್ತು ರಾಹುಲ್ ಮತ್ತು ಮನೋಜ್ ರವರ ಬಂಧನ, ವಿವರಣಾ ಹೇಳಿಕೆಗಳು ಮತ್ತು ವಶಪಡಿಸಿಕೊಂಡ ವಸ್ತುಗಳ ಬಗ್ಗೆ ಅಭಿಯೋಜನೆಯ ಆವೃತ್ತಿಯನ್ನು ಸಾಬೀತುಪಡಿಸಿರುತ್ತದೆ. ಮುಂದುವರಿದು, ಅವರ ಸಾಕ್ಷ್ಯದಲ್ಲಿ ಮತ್ತು ಐ.ಓ (ಪ್ರಾ.ಸಾ.31) ರ ಸಾಕ್ಷ್ಯದಲ್ಲಿ ಯಾವುದೇ ನ್ಯೂನತೆಗಳಿರುವುದಿಲ್ಲ ಮತ್ತು ಉಜ್ಜಯಿನಿಯ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಯಾದ ಪ್ರಾ.ಸಾ.27 ರವರು ಎ.ಟಿ.ಎಮ್ ಕಾರ್ಡ್‌ಗಳನ್ನು ನೀಡಿದ ಬಗ್ಗೆ ಪತ್ರವನ್ನು (ನಿ.ಪಿ.98) ಎಸ್.ಎಚ್.ಓ ಗೆ ಕಳುಹಿಸಿರುವುದಾಗಿ ನುಡಿದಿರುವುದು ಮತ್ತೊಂದು ಸಾಕ್ಷ್ಯವಾಗಿರುತ್ತದೆ. ನೇಹಾರವರ ವಿವರಣಾ ಹೇಳಿಕೆಗೆ ಅನುಸಾರವಾಗಿ ಮೇಘಾರವರ ಎ.ಟಿ.ಎಂ ಕಾರ್ಡ್ ವಶಪಡಿಸಿಕೊಂಡದ್ದನ್ನು ಆತನ ಬ್ಯಾಂಕ್‌ನಿಂದ ನೀಡಲಾಗಿದ್ದು; ದಿನಾಂಕ 22.06.2011 ರಂದು ಜಪ್ತಿ ಮಾಡಲಾದ ವಸ್ತುಗಳಲ್ಲಿ ಇದೂ ಒಂದಾಗಿರುತ್ತದೆ.

87. ಪ್ರಾ.ಸಾ.3 ಮತ್ತು ಪ್ರಾ.ಸಾ.6ರ ಸಾಕ್ಷ್ಯದ ಸಂಪೂರ್ಣ ವಿಶ್ಲೇಷಣೆಯು, ಕೆಲವು ನ್ಯೂನತೆಗಳ ಹೊರತಾಗಿಯೂ ಅಂದರೆ ಘಟನೆಗಳ ಬಗ್ಗೆ ಅಥವಾ ಉಪಸ್ಥಿತರಿದ್ದ ವ್ಯಕ್ತಿಗಳ ಬಗ್ಗೆ ನೆನಪಿಸಿಕೊಳ್ಳುವುದು ಅಪೂರ್ಣ ಅಥವಾ ದೋಷಪೂರಿತ ಎಂದು ಬದಿಗಿಟ್ಟರೂ, ಅವರ ಸಾಕ್ಷ್ಯವು ನಂಬಲಾರ್ಹವಾಗಿವೆ. ನೇಹಾ, ರಾಹುಲ್ ಮತ್ತು ಮನೋಜ್‌ರವರ ವಿವರಣಾ

ಹೇಳಿಕೆಗಳನ್ನು ಅವರು ಸಾಕ್ಷೀಕರಿಸಿದ್ದು, ಜಪ್ತಿ ಮೆಮೊಗಳಲ್ಲಿ (ನಿ.ಪಿ.11, ಪಿ.14 ಮತ್ತು ಪಿ.17) ದಾಖಲಾದ ವಸ್ತುಗಳ ವಶಪಡಿಸಿಕೊಳ್ಳುವಿಕೆ ಮತ್ತು ಪೊಲೀಸರಿಂದ ಅವುಗಳನ್ನು ಜಪ್ತಿಪಡಿಸಿಕೊಂಡದ್ದನ್ನು ಸಹ ಸಾಕ್ಷೀಕರಿಸಿರುವುದು ಅವರ ಹೇಳಿಕೆಯ ಪರಿಣಾಮವಾಗಿರುತ್ತದೆ.

III. ದಿನಾಂಕ 23.06.2011 ರಂದು ವಶಪಡಿಸಿಕೊಂಡ ವಸ್ತುಗಳು:

88. ಪ್ರಾ.ಸಾ.7–ಸಂದೀಪ್ ನರುಲ್‌ಕರ್‌ರವರು ಒಬ್ಬ ಪ್ರತ್ಯೇಕ ಸಾಕ್ಷಿಯಾಗಿದ್ದು, ದಿನಾಂಕ 23.06.2011 ರಂದು ದಾಖಲಿಸಿಕೊಂಡ ಆರೋಪಿಗಳಾದ ರಾಹುಲ್ ಮತ್ತು ನೇಹಾರವರ ವಿವರಣಾ ಹೇಳಿಕೆಗಳಿಗೆ ಮತ್ತು ಅದಕ್ಕೆ ಅನುಸಾರವಾಗಿ ವಶಪಡಿಸಿಕೊಂಡ ವಸ್ತುಗಳಿಗೆ ಸಾಕ್ಷಿಯಾಗಿರುತ್ತಾರೆ. ರಾಹುಲ್‌ರವರು ಪೊಲೀಸರಿಗೆ ದಿನಾಂಕ 19.06.2011 ರ ಘಟನೆಯ ಬಗ್ಗೆ ಹೇಳಿದ್ದು ಹಾಗೂ ಆ ಘಟನೆಯಲ್ಲಿ ಒಂದು ಕ್ಯಾಮರಾ ಮತ್ತು ಎರೆಡು ಮೊಬೈಲ್ ಸೆಟ್‌ಗಳನ್ನು ದರೋಡೆ ಮಾಡಲಾಯಿತು ಎಂದು ಹೇಳಿರುವುದಕ್ಕೆ ಸಾಕ್ಷಿಯಾಗಿರುವುದಾಗಿ ಅವರು ನುಡಿದಿರುತ್ತಾರೆ. ಘಟನೆಯ ಸಮಯದಲ್ಲಿ ಬಳಸಲಾದ ಕ್ಯಾಮರಾ, ಮೋಟಾರ್ ಸೈಕಲ್, ಧರಿಸಿದ್ದ ಬಟ್ಟೆಗಳು ಮತ್ತು ಚಾಕುವಿನ ಬಗ್ಗೆ ರಾಹುಲ್ ಮಾಹಿತಿ ನೀಡಿದ್ದು, ಆ ವಸ್ತುಗಳನ್ನು ಮರಳಿ ಪಡೆಯಬಹುದು ಎಂದು ಹೇಳಿರುತ್ತಾರೆ. ನಂತರ ಪೊಲೀಸರು ವಿವರಣಾ ಮೆಮೊ (ನಿ.ಪಿ.28) ತಯಾರಿಸಿದರು ಮತ್ತು ಪ್ರಾ.ಸಾ.7 ರವರು ಅದನ್ನು ಸಾಕ್ಷೀಕರಿಸಿ ಸಹಿ ಮಾಡಿದ್ದಾರೆ. ರಾಹುಲ್‌ರ ನಿರ್ದೇಶನದಂತೆ ಪೊಲೀಸರು ಪೀತಾಂಪುರ್ ರಸ್ತೆಯ ಮೇಲಿರುವ ಒಂದು ಸಣ್ಣ ಸೇತುವೆಯ ಪಕ್ಕದಲ್ಲಿ ಪ್ರಶ್ನಿತ ಮೋಟಾರ್ ಸೈಕಲ್ಲನ್ನು, ಒಂದು ಕಂದು ಬಣ್ಣದ ಪ್ಯಾಂಟ್, ತುಂಬು ತೋಳಿನ ಬೂದು ಬಣ್ಣದ ಅಂಗಿ ಮತ್ತು ಲೋಹದ ಹಿಡಿಕೆಯೊಂದಿದ್ದ ರಕ್ತದ ಕಲೆಯಿದ್ದ ಒಂದು ಕಬ್ಬಿಣದ ಚಾಕುವನ್ನು (ನಿ.ಪಿ.29) ವಶಪಡಿಸಿಕೊಂಡಿದ್ದಾರೆ. ಮುಂದುವರಿದು, ಮುರಿದ ಕ್ಯಾಮೆರಾದ (ನಿ.ಪಿ.30) ಒಂದು ಲೆನ್ಸ್‌ನ್ನು ಸಹ ಪೊಲೀಸರು ಜಪ್ತಿ ಮಾಡಿಕೊಂಡರು. ಎರಡೂ ಜಪ್ತಿ ಮೆಮೊಗಳು (ನಿ.ಪಿ.29, ಪಿ.30) ಪ್ರಾ.ಸಾ.7 ರ ಸಹಿಯನ್ನು ಒಳಗೊಂಡಿರುತ್ತದೆ. ನ್ಯಾಯಾಲಯದಲ್ಲಿ ವಸ್ತುಗಳನ್ನು

ತೋರಿಸಿದಾಗ, ಅವರೂ ಸಹ ವಸ್ತುಗಳನ್ನು (ಕಂದು ಬಣ್ಣದ ಪ್ಯಾಂಟ್, ಚಾಕು, ಮುರಿದ ಕ್ಯಾಮೆರಾದ ಒಂದು ಲೆನ್ಸ್) ಗುರುತಿಸಿದರು. ಪೊಲೀಸಿನವರು ಮನೋಜ್‌ರವರನ್ನು ಅವರ ಸಮ್ಮುಖದಲ್ಲಿ ವಿಚಾರಿಸಿದರು ಮತ್ತು ಮನೋಜ್‌ರವರು ದರೋಡೆ ಮತ್ತು ಕೊಲೆಗಳ ಬಗ್ಗೆ ಮತ್ತು ಘಟನೆಯ ಸಂದರ್ಭದಲ್ಲಿ ತೊಟ್ಟುಕೊಂಡಿದ್ದ ಶೂ ಮತ್ತು ಬಟ್ಟೆಗಳ ಬಗ್ಗೆ ಮಾಹಿತಿಯನ್ನು ನೀಡಿದರು ಮತ್ತು ಅವುಗಳನ್ನು ವಶಪಡಿಸಿಕೊಳ್ಳಬಹುದು ಎಂದು ಮನೋಜ್ ಹೇಳಿದರು ಎಂದು ಮುಂದುವರಿದು ನುಡಿಯುತ್ತಾರೆ. ಸಾಕ್ಷಿಗಳ ಸಹಿಯನ್ನು ಒಳಗೊಂಡ ನಿ.ಪಿ.31–ಜ್ಞಾಪನಾ ಪತ್ರವನ್ನು ಪೊಲೀಸರು ನಂತರ ಸಿದ್ಧಪಡಿಸಿದರು. ಮನೋಜ್‌ರವರ ನಿರ್ದೇಶನದಂತೆ, ಪೊಲೀಸರು *'ಪಿರೋಜಿ'* ಬಣ್ಣದ ಟಿ.ಶರ್ಟ್, ರಕ್ತದ ಕಲೆಯಿದ್ದ ಕಪ್ಪು ಬಣ್ಣದ ಉದ್ದನೆಯ ಪ್ಯಾಂಟ್, ಒಂದು ನೀಲಿ ಬಣ್ಣದ ಒಳ ಉಡುಪು ಮತ್ತು ಒಂದು ಜೊತೆ ಮೈಕ್ರೋ–ಲೆದರ್ ಕಪ್ಪು ಬಣ್ಣದ ಶೂಗಳನ್ನು ಅವರ ತಂದೆಯ ಮನೆಯಿಂದ ಜಪ್ತಿ ಮಾಡಿಕೊಂಡರು; ಈ ಎಲ್ಲಾ ವಸ್ತುಗಳ (ನಿ.ಪಿ.32) ಜಪ್ತಿ ಮೆಮೊ ಸಹ ಅವರ ಸಹಿಯನ್ನು ಒಳಗೊಂಡಿರುತ್ತದೆ. ಸಾಕ್ಷಿಗಳ ಸಹಿಯೊಂದಿಗೆ *ಜಪ್ತಿ ಪಂಚನಾಮೆಯ* (ನಿ.ಪಿ.33) ಅಡಿಯಲ್ಲಿ ಮಾರುತಿ ಶೋರೂಮ್ ಹತ್ತಿರದ ಒಂದು ಖಾಲಿ ಜಾಗದಿಂದ ಪೊಲೀಸರು ವಶಪಡಿಸಿಕೊಂಡ ವಸ್ತುಗಳಾದ ಬಟ್ಟೆಗಳು, ಶೂ ಮತ್ತು ಒಂದು ಮುರಿದ ಸಾಮ್‌ಸಾಂಗ್ ಮೊಬೈಲ್ ಫೋನಿನ ಐಎಮ್ಇಡಿ ಸಂಖ್ಯೆಯು 352450/03/115949/9 ಎಂದು ಅವರು ತಿಳಿಸಿದ್ದಾರೆ.

89. ಪ್ರಾ.ಸಾ.7 ರವರು ನೇಹಾರ ವಿಚಾರಣೆಯನ್ನು ಸಾಕ್ಷೀಕರಿಸಿದ್ದು, ವಿಚಾರಣೆಯ ಸಂದರ್ಭದಲ್ಲಿ ಆಕೆಯು ದರೋಡೆ ಮತ್ತು ಕೊಲೆ ಮಾಡಿದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ ಮತ್ತು ತಾನು ಬಚ್ಚಿಟ್ಟಿದ್ದ ಘಟನಾ ಸಮಯದಲ್ಲಿ ಆಕೆಯು ಧರಿಸಿದ್ದ ಬಟ್ಟೆ, ಚಪ್ಪಲಿ ಮತ್ತು ಸುಜುಕಿ ಆಕ್ಸೆಸ್ ವಾಹನವನ್ನು (ನಿ.ಪಿ.34) ತೋರಿಸಬಹುದು ಎಂದು ಪೊಲೀಸರಿಗೆ ತಿಳಿಸಿರುತ್ತಾರೆ. ಆಕೆಯ ಸೂಚನೆಯಂತೆ, ಪೊಲೀಸರು ಪ್ರಶ್ನಿತ ಸುಜಕಿ ಆಕ್ಸೆಸ್ ಸ್ಕೂಟಿಯನ್ನು ಎಮ್.ವೈ.ಆಸ್ಪತ್ರೆಯ ಹಳೆಯ ಒ.ಪಿ.ಡಿಯ ಹಿಂಭಾಗದಿಂದ ಜಪ್ತಿಪಡಿಸಿಕೊಂಡರು ಮತ್ತು ನಂತರ ಒಂದು ಸೇವಾ ಪುಸ್ತಕ, ಒಂದು ರಕ್ತದ ಕಲೆಯಿದ್ದ

ಗುಲಾಬಿ ಬಣ್ಣದ ಬಿಳಿ ಒಳಬಟ್ಟೆಯಿದ್ದ ತುಂಬು ತೋಳಿನ ಅಂಗಿ, ತಿಳಿ ನೀಲಿ ಬಣ್ಣದ ಜೀನ್ಸ್ ಅದರ ಹಿಂಬದಿಯ ಜೀಬಿನಲ್ಲಿ ಮೂರು ಗುಂಡಿಗಳಿದ್ದು, ಒಂದು ಜೊತೆ ಹೆಂಗಸರ ಕಪ್ಪು ಬಣ್ಣದ ಎತ್ತರದ ಹಿಮ್ಮಡಿಯ ಚಪ್ಪಲಿ ಅದಕ್ಕೆ ಕಂದು ಬಣ್ಣದ ಪಟ್ಟಿಯು ಆ ಚಪ್ಪಲಿಯ ಮುಂದೆ ಮತ್ತು ಹಿಂದೆ ಇರುತ್ತದೆ ಮತ್ತು ಎತ್ತರದ ಹಿಮ್ಮಡಿಯ ಚೈನ್‌ನಲ್ಲಿ ರಕ್ತದ ಕಲೆಗಳು ಇದ್ದವು ಮತ್ತು ಎಲ್ಲಾ ವಸ್ತುಗಳನ್ನು ಆ ಸ್ಕೂಟಿಯಿಂದ ವಶಪಡಿಸಿಕೊಂಡರು. ಸಾಕ್ಷಿಗಳ ಸಹಿಯನ್ನು ಒಳಗೊಂಡಂತೆ ಪೊಲೀಸರು (ನಿ.ಪಿ.35) ಆ ವಸ್ತುಗಳನ್ನು ಜಪ್ತಿ ಮಾಡಿಕೊಂಡರು. ಪ್ರಾ.ಸಾ.7 ನ್ಯಾಯಾಲಯದಲ್ಲಿ ಈ ವಸ್ತುಗಳನ್ನು ಗುರುತಿಸಿದರು.

90. ಎಲ್ಲಾ ಆರೋಪಿಗಳು ದಿನಾಂಕ 23.06.2011 ರ ಬೆಳಗ್ಗೆ ವಿವರಣಾ ಹೇಳಿಕೆಯನ್ನು ನೀಡಿರುತ್ತಾರೆ ಎಂಬುದನ್ನು ಪ್ರಾ.ಸಾ.7 ಮತ್ತು ಪ್ರಾ.ಸಾ.13 ರ ಹೇಳಿಕೆಗಳ ಸಮಗ್ರ ಗ್ರಹಿಕೆಯು ತೋರಿಸುತ್ತದೆ. ಆದಾಗ್ಯೂ, ವಿವರಣಾ ಹೇಳಿಕೆಗಳ ಅನುಸಾರವಾಗಿ ವಸ್ತುಗಳನ್ನು ಮಧ್ಯಾಹ್ನ ವಶಪಡಿಸಿಕೊಳ್ಳಲಾಯಿತು ಅಂದರೆ; ನಿ.ಪಿ.29 ನ್ನು (ರಾಹುಲ್‌ಗೆ ಸಂಬಂಧಿಸಿದ ಮತ್ತು ಮೋಟಾರ್ ಸೈಕಲ್, ಒಂದು ಚಾಕು ಮತ್ತು ಅವನ ಬಟ್ಟೆಗಳನ್ನು ಜಪ್ತಿಮಾಡಿದಕ್ಕೆ ಸಾಕ್ಷಿಯಾಗಿದ್ದು) 15.30 ಗಂಟೆಗೆ ವಶಪಡಿಸಿಕೊಳ್ಳಲಾಯಿತು; ನಿ.ಪಿ.30 ನ್ನು (ರಾಹುಲ್‌ರವರ ಆಣತಿಯಂತೆಯೇ ಜಪ್ತಿಪಡಿಸಿಕೊಂಡ ಮುರಿದ ಕ್ಯಾಮೆರಾ) 16.40 ಗಂಟೆಗೆ, ನಿ.ಪಿ.32 ನ್ನು (ಒಂದು ಜೊತೆ ಶೂ, ಟಿ–ಶರ್ಟ್, ಒಂದು ಪ್ಯಾಂಟ್ ಮತ್ತು ಒಂದು ಒಳ ಉಡುಪನ್ನು ಮನೋಜ್‌ರವರ ಆಣತಿಯಂತೆ ಜಪ್ತಿ ಪಡಿಸಿಕೊಳ್ಳಲಾಯಿತು) 14.45 ಗಂಟೆಗೆ; ನಿ.ಪಿ.33 ನ್ನು (ಮುರಿದ ಮೊಬೈಲ್ ಫೋನನ್ನು ಮನೋಜ್‌ರವರ ಆಣತಿಯಂತೆ ಮಾಡಿಕೊಳ್ಳಲಾದ ಮತ್ತೊಂದು ಜಪ್ತಿ) 16.00 ಗಂಟೆಗೆ ಮತ್ತು ನಿ.ಪಿ.35 ನ್ನು (ಬಟ್ಟೆಗಳು, ರಕ್ತಸಿಕ್ತವಾದ ಕಪ್ಪುಬಣ್ಣದ ಚಪ್ಪಲಿ ಮತ್ತು ಸುಜುಕಿ ಸ್ಕೂಟಿಯನ್ನು ನೇಹಾರವರ ಆಣತಿಯಂತೆ ಜಪ್ತಿಮಾಡಿಕೊಳ್ಳಲಾಯಿತು) 17.30 ಗಂಟೆಗೆ ವಶಪಡಿಸಿಕೊಳ್ಳಲಾಯಿತು. ಯಾವುದೇ ಕ್ರಮಬದ್ಧವಿಲ್ಲದೆ ಏಕೆ ವಶಪಡಿಸಿಕೊಳ್ಳಲಾಯಿತು ಎಂಬುದರ ಬಗ್ಗೆ ಅಭಿಯೋಜನೆಯು ವಿವರಿಸಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಏಕೆಂದರೆ ಸಾಕ್ಷಿಗಳ ಪ್ರಕಾರ ಮೊದಲ

ದಿನವೇ ಅಂದರೆ ದಿನಾಂಕ 22.06.2011 ರಂದು ಎಲ್ಲಾ ಮೂವರು ಆರೋಪಿಗಳು ಅಪರಾಧದಲ್ಲಿ ತಮ್ಮ ಪಾತ್ರದ ಬಗ್ಗೆ ಬಹಿರಂಗಪಡಿಸಿರುತ್ತಾರೆ ಮತ್ತು ಅವರಿಗೆ ಸಂಬಂಧಿಸಿದ ಅಥವಾ ಅವರಿಂದ ಬಚ್ಚಿಡಲ್ಪಟ್ಟ ವಸ್ತುಗಳನ್ನು ಒಳಗೊಂಡಂತೆ ಅಪರಾಧಕ್ಕೆ ಸಂಬಂಧಪಟ್ಟ ವಸ್ತುಗಳನ್ನು ವಶಪಡಿಸಿಕೊಳ್ಳಲು ಸಹಕರಿಸಲು ಅವರು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ.

91. ಎರಡು ಸತತವಾದ ದಿನಾಂಕಗಳಲ್ಲಿ ಸಾಕ್ಷಿಗಳ ಎರಡು ಜೋಡಿಯು ಪ್ರಕ್ರಿಯೆಯಲ್ಲಿ ಏಕೆ ಪಾಲ್ಗೊಂಡರು ಎಂಬುದು ಎರಡನೆಯ ವಿವರಿಸಲಾಗದ ಅಂಶವಾಗಿರುತ್ತದೆ. ಮೂವರು ಆರೋಪಿಗಳನ್ನು ಬಂಧಿಸಿರುವುದನ್ನು, ಅವರ ವಿವರಣಾ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದನ್ನು ಮತ್ತು ಮೊದಲನೆಯ ದಿನ ಅಂದರೆ ದಿನಾಂಕ 22.06.2011 ರಂದು ವಶಪಡಿಸಿಕೊಂಡ ವಸ್ತುಗಳನ್ನು ಪ್ರಾ.ಸಾ.3 ಮತ್ತು ಪ್ರಾ.ಸಾ.6 ರವರುಗಳು ಸಾಕ್ಷೀಕರಿಸಿರುತ್ತಾರೆ. ಮರುದಿನ ಅಂದರೆ ದಿನಾಂಕ 23.06.2011 ರಂದು (ಪ್ರಾ.ಸಾ.7 ಮತ್ತು ಪ್ರಕಾಶ್ ಇಚ್ಕೆ) ಸಂಪೂರ್ಣವಾಗಿ ವಿಭಿನ್ನವಾದ ಸಾಕ್ಷಿಗಳನ್ನು ಕರೆಸಲಾಗಿರುತ್ತದೆ. ಮುಂದುವರಿದು, ದಿನಾಂಕ 23.06.2011 ರಂದು ವಶಪಡಿಸಿಕೊಂಡ ವಸ್ತುಗಳಿಗೆ ಸಾಕ್ಷಿಗಳಲ್ಲಿ ಒಬ್ಬರಾದವರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ. ಈ ಹಿಂದೆಯೇ ಗಮನಿಸಿದಂತೆ, ವಸ್ತುಗಳ ವಶಪಡಿಸಿಕೊಳ್ಳುವಿಕೆಗೆ ಸಾಕ್ಷಿಯಾದವರು ದೂರವಾಣಿ ಕರೆಯನ್ನು ಬೆಳಗ್ಗೆ 7–8 ಗಂಟೆಗೆ ಸ್ವೀಕರಿಸಿರುತ್ತಾರೆ ಮತ್ತು ದಿನಾಂಕ 23.06.2011 ರಂದು ಬೆಳಗ್ಗೆ ಸುಮಾರು 8.30 ಗಂಟೆಗೆ ಪೊಲೀಸ್ ಠಾಣೆಗೆ ಬಂದು ವರದಿ ಮಾಡಿಕೊಳ್ಳಲು ಅವರಿಗೆ ತಿಳಿಸಿದ್ದು; ಆ ದಿನ ಆರೋಪಿಗಳು ನೀಡಿದ ವಿವರಣಾ ಹೇಳಿಕೆಗಳನ್ನು ವಿವಿಧ ಸಮಯದಲ್ಲಿ ದಾಖಲಿಸಲಾಗಿದ್ದು, ಬೆಳಗ್ಗೆ 10.00 ಗಂಟೆಗೂ ಮುನ್ನ ದಾಖಲಿಸಲಾಗಿರುತ್ತದೆ. ಆದಾಗ್ಯೂ, ಆ ದಿನ ಮೊದಲನೆಯದಾಗಿ ವಸ್ತುಗಳನ್ನು ವಶಪಡಿಸಿಕೊಂಡಾಗ ಬೆಳಗ್ಗೆ ಸುಮಾರು 10.00 ಗಂಟೆಯಿಂದ 1.30 ಗಂಟೆಯವರೆಗೆ ನಡೆಯಿತೆನ್ನಲಾದ ಯಾವುದೇ ಚಟುವಟಿಕೆಯ ಅನುಪಸ್ಥಿತಿಯ ಬಗ್ಗೆ ಅಭಿಯೋಜನೆಯು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಪ್ರಾ.ಸಾ.7 ರವರು ತಮಗೆ ಮೃತರ ಕುಟುಂಬ ಸದಸ್ಯರ ಪರಿಚಯವಿತ್ತು ಮತ್ತು ಅವರ ಮೊಬೈಲ್ ಸಂಖ್ಯೆಗಳು ತಿಳಿದಿದ್ದವು ಎಂದು ಸ್ವತಃ

ಒಪ್ಪಿಕೊಂಡಿರುತ್ತಾರೆ. ಈ ಮೊದಲೇ ಗಮನಿಸಿದಂತೆ ಅ ದಿನದ ತನಿಖಾ ಪ್ರಕ್ರಿಯೆಯಲ್ಲಿ ಪ್ರ.ಸಾ.1–ದಿಪೀಕಾ ಶಿಂಧೆಯವರು ಪಾಲ್ಗೊಂಡಿದ್ದರು ಎಂದೂ ಸಹ ಅವರು ಒಪ್ಪಿಕೊಂಡಿರುತ್ತಾರೆ.

92. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಈ ಎಲ್ಲಾ ಅಂಶಗಳು, ಮರುದಿನ ಅಂದರೆ 23.06.2011 ರಂದು ಏನು ನಡೆಯಿತು ಎಂಬ ಅಭಿಯೋಜನೆಯ ಆವೃತ್ತಿಯ ಮೇಲೆ ಅನುಮಾನವನ್ನು ಉಂಟುಮಾಡುತ್ತದೆ. ಆರೋಪಿಗಳನ್ನು ದಿನಾಂಕ 22.06.2011 ರ ಬೆಳಗ್ಗೆ ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು ಮತ್ತು ಅವರುಗಳು ವಿವರಣಾ ಹೇಳಿಕೆಗಳನ್ನು ನೀಡಿದರು ಮತ್ತು ಅವರ ಆಣತಿಯಂತೆ ಆ ದಿನ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು; ಆ ಪ್ರಕ್ರಿಯೆಯು ಮುಂಜಾನೆಯೇ ಮುಕ್ತಾಯವಾಗಿರುತ್ತದೆ ಮತ್ತು ತನಿಖೆಯು ಅಳವಡಿಸಿಕೊಂಡ ಆ ಬಿಡಿಯಾದ ಪ್ರಕ್ರಿಯೆಯು ಅದರ ಸತ್ಯಾಸತ್ಯತೆಯ ಬಗ್ಗೆ ಅನುಮಾನವನ್ನು ಉಂಟುಮಾಡುತ್ತದೆ. ಆರೋಪಿಗಳು ನೀಡಿದ ಹೇಳಿಕೆಗಳ ಮೇಲೆ ಕಾರ್ಯನಿರ್ವಹಿಸಲು ಮತ್ತು ಎಲ್ಲಾ ಸಾಕ್ಷ್ಯಗಳನ್ನು ಸಂಗ್ರಹಿಸಲು ಅಭಿಯೋಜನೆಗೆ ಯಾವುದೋ ಅಡತಡೆಗಳಿರುವುದಿಲ್ಲ– ದಿನಾಂಕ 22.06.2011 ರಂದು ಅವರನ್ನು ಬಂಧಿಸಿದ ದಿನದಿಂದೇ ಅವರ ಒಪ್ಪಿಗೆಯಿಂದ ಅವುಗಳು ಕೂಡಲೇ ಮತ್ತು ಸುಲಭವಾಗಿ ದೊರೆತ್ತಿರುತ್ತವೆ (ಆರೋಪಿಗಳು ಮಾಹಿತಿಯನ್ನು ಹಂಚಿಕೊಳ್ಳಲು ಇಚ್ಚೀಸಿದ್ದರು). ಸಮಯದ ಅಭಾವ ಅಥವಾ ಇನ್ನಿತರ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಅಡತಡೆಗಳಿದ್ದರೂ ಸಹ, ದಿನಾಂಕ 22.06.2011 ರಂದು ವಶಪಡೆದ ವಸ್ತುಗಳನ್ನು ಸಾಕ್ಷೀಕರಿಸಿದ ಇತರ ಸಾಕ್ಷಿಗಳನ್ನು ಭಾಗವಹಿಸಲು ಹೇಳದೆ ಇರುವ ಬಗ್ಗೆ ಯಾವುದೇ ವಿವರಣೆಯನ್ನು ನೀಡದೆ, ಸಂಪೂರ್ಣ ವಿಭಿನ್ನ ಪಂಚ ಸಾಕ್ಷಿಗಳ ಒಳಗೊಳ್ಳುವಿಕೆಯು ಆ ಅನುಮಾನವನ್ನು ಒತ್ತಿಹೇಳುತ್ತದೆ. ಪ್ರಾ.ಸಾ.7 ರವರಿಗೆ ಮೃತ ಕುಟುಂಬದ ಪರಿಚಯವಿತ್ತು ಮತ್ತು ಅವರೊಂದಿಗೆ ಆತನ ಮೊಬೈಲ್ ಸಂಖ್ಯೆಯು ಲಭ್ಯವಿತ್ತು ಎಂಬ ಅಂಶಗಳು ಈ ಅನುಮಾನವನ್ನು ಮತ್ತಷ್ಟು ತೀವ್ರಗೊಳಿಸುತ್ತದೆ. ಐ.ಓ (ಪ್ರಾ.ಸಾ.31) ರವರು ತಮ್ಮ ಹೇಳಿಕೆಯಲ್ಲಿ ಈ ಅಂಶದ ಬಗ್ಗೆ ಏನನ್ನು ಹೇಳಿರುವುದಿಲ್ಲ. ದಿನಾಂಕ

23.06.2011 ರಂದು ನಡೆಸಲಾದ ಪ್ರಕ್ರಿಯೆಯಲ್ಲಿ ಇತರ ಮೂವರ ಬದಲಿಗೆ ಯಾವ ಕಾರಣಕ್ಕಾಗಿ ಪ್ರಾ.ಸಾ.7 ಪಾಲ್ಗೊಂಡರು ಮತ್ತು ವಸ್ತುಗಳನ್ನು ವಶಪಡಿಸಿಕೊಂಡದ್ದಕ್ಕೆ ಇತರ ಸಾಕ್ಷಿಯಾಗಿದ್ದ ಪ್ರಕಾಶ್ ಇಚ್ಕೆಯವರನ್ನು ವಿಚಾರಣೆಗೆ ಒಳಪಡಿಸದ ಬಗ್ಗೆ ಅವರು ಮೌನವಾಗಿರುತ್ತಾರೆ. ಕೆಲವು ಗುಪ್ತ ಸ್ಥಳಗಳಿಂದ ವಶಪಡಿಸಿಕೊಳ್ಳಲಾಯಿತು ಎಂಬುದನ್ನು ಎತ್ತಿತೋರಿಸಲು ಈ ಎಲ್ಲಾ ವಸ್ತುಗಳನ್ನು ಯಾವುದೇ ವಿವೇಶ ವೈಶಿಷ್ಟ್ಯವಿಲ್ಲದೆ ತೆರೆದ ಪ್ರದೇಶದಿಂದ ವಶಪಡಿಸಿಕೊಂಡಿದ್ದರಿಂದ, ವಶಪಡಿಸಿಕೊಂಡ ಅಂತಹ ವಸ್ತುಗಳನ್ನು ದಿನಾಂಕ 22.06.2011 ರಂದು ವಶಪಡಿಸಿಕೊಂಡ ವಿಧಾನದ ಜೊತೆ ಸಮೀಕರಿಸಲಾಗುವುದಿಲ್ಲ. ಈ ಅಂಶವು ಪ್ರಮುಖವಾಗಿರುತ್ತದೆ ಏಕೆಂದರೆ ಪೊಲೀಸರು ಜಪ್ತಿಮಾಡಿಕೊಂಡ ಬಟ್ಟೆಗಳು (ಅಭಿಯೋಜನೆಯ ಪ್ರಕಾರ ಅವು ತೆರೆದ ಪ್ರದೇಶದಲ್ಲಿ ಬಿದ್ದಿದ್ದವು ಮತ್ತು ಹೊರಗಿನ ಅಂಶಕ್ಕೆ ಒಡ್ಡಿಕೊಂಡಿದ್ದವು) ಆ ವಸ್ತುಗಳಾಗಿದ್ದು, ಮೃತರಿಂದ ಮತ್ತು ಘಟನಾ ಸ್ಥಳದಿಂದ ಸಂಗ್ರಹಿಸಲಾದ ಮಾದರಿಯ ಮೇಲೆ ಕಂಡಂತಹ ಡಿ.ಎನ್.ಎ ಗುರುತಗಳೊಂದಿಗೆ ಈ ವಸ್ತುಗಳಿಂದ ಸಂಗ್ರಹಿಸಲಾದ ಡಿ.ಎನ್.ಎ ಮಾದರಿಯು ಹೊಂದಾಣಿಕೆಯಾಗುತ್ತದೆಯೇ ಇಲ್ಲವೇ ಎಂದು ಖಚಿತಪಡಿಸಿಕೊಳ್ಳಲು ವಶಪಡಿಸಿಕೊಂಡ ವಸ್ತುಗಳಾಗಿರುತ್ತವೆ.

IV. ಪ್ರತ್ಯಕ್ಷದರ್ಶಿ ಪ್ರಾ.ಸಾ.10 ರ ಸಾಕ್ಷ್ಯ:

93. ಪ್ರಾ.ಸಾ.10 ರ ಸಾಕ್ಷ್ಯದ ಮೇಲೆ ಅಭಿಯೋಜನೆಯು ಹೆಚ್ಚಾಗಿ ಅವಲಂಬಿತವಾಗಿರುತ್ತದೆ. ದಿನಾಂಕ 19.06.2011 ಸಾಯಂಕಾಲ ಇಬ್ಬರು ಹುಡುಗರು ಮೋಟಾರ್ ಸೈಕಲ್ ಚಾಲು ಮಾಡಲು ಪ್ರಯತ್ನಿಸುತ್ತಿದ್ದು, ಅವರಲ್ಲಿ ಒಬ್ಬನ ಪಾದದಲ್ಲಿ ಮತ್ತು ಇನ್ನೊಬ್ಬನ ಮುಂದೋಳಿನಲ್ಲಿ ರಕ್ತಸ್ರಾವವಾಗುತ್ತಿದ್ದುದ್ದನ್ನು ನೋಡಿರುವುದಾಗಿ ಹೇಳಿರುತ್ತಾರೆ. ಒಂದು ಹುಡುಗಿಯು ಒಂದು ಸ್ಕೂಟಿಯಲ್ಲಿ ಬಂದಳು ಮತ್ತು ಅವರಿಗೆ ಆಸ್ಪತ್ರೆಗೆ ಹೋಗುವುದು ಸೂಕ್ತವೆಂದು ಸಲಹೆ ನೀಡಿದಳು ಎಂದೂ ಸಹ ಅವರು ಹೇಳಿರುತ್ತಾರೆ. ಘಟನೆ ಸಂಭವಿಸಿದ ಮರುದಿನ ಅಂದರೆ ದಿನಾಂಕ 20.06.2011 ರಂದು ಪೊಲೀಸರಿಗೆ ಮಾಹಿತಿ ನೀಡಿರುವುದಾಗಿ ಸಾಕ್ಷಿಯು ಹೇಳಿರುತ್ತಾರೆ. ಕೊಲೆಯ ಬಗ್ಗೆ ತಿಳಿದ ನಂತರ ಆತನು ಪೊಲೀಸ್ ಠಾಣೆಗೆ

ಹೋಗಿರುವುದಾಗಿ ತನ್ನ ಪಾಟೀ–ಸವಾಲಿನಲ್ಲಿ ನುಡಿದಿರುತ್ತಾರೆ. ನಂತರ ಅವರು 'ಗುಮಾಸ್ತ' ಪರವಾನಗಿ ಪಡೆಯಲು ಹೋದರು ಎಂದು ನುಡಿದಿರುತ್ತಾರೆ. ಅವರು ತಾನು ದಿನಪತ್ರಿಕೆ ಓದುವುದಿಲ್ಲ ಎಂದು ಒಪ್ಪಿಕೊಂಡಿದ್ದು, ಪೊಲೀಸ್ ಠಾಣೆಗೆ ಹೋದಾಗ ಕೊಲೆಯ ಬಗ್ಗೆ ಕೆಲವು ಚರ್ಚೆಗಳು ನಡೆಯುತ್ತಿದ್ದು, ಆ ಸಮಯದಲ್ಲಿ ಅವರೇ ಸ್ವತಃ ಮಾಹಿತಿಯನ್ನು ಒದಗಿಸಿರುತ್ತಾರೆ ಮತ್ತು ಅವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು ಎಂದು ಅವರು ಹೇಳಿರುತ್ತಾರೆ. ಅವರು ಒಂದು ಚಹಾ ಅಂಗಡಿಯನ್ನು ಹೊಂದಿದ್ದಾರೆ ಮತ್ತು ಆಸ್ತಿಯ ದಲ್ಲಾಳಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದು, ಅವರು ಆಸ್ತಿ ದಲ್ಲಾಳಿಯಾಗಿ ಯಾವುದೇ ನೋಂದಾಣಿ ಹೊಂದಿಲ್ಲ ಎಂದು ನಂತರ ಒಪ್ಪಿಕೊಂಡಿರುತ್ತಾರೆ. ಈ ಹಿಂದೆ ಇನ್ನಿತರ ಮೊಕದ್ದಮೆಗಳಲ್ಲಿ ಪೊಲೀಸರ ಪರವಾಗಿ ಸಾಕ್ಷಿ ಹೇಳಿರುವುದಾಗಿಯೂ ಸಹ ಒಪ್ಪಿಕೊಂಡಿರುತ್ತಾರೆ. ಪ್ರಾ.ಸಾ.10 ರವರು ಯಾವುದಾದರೂ ಖಾಲಿ ಜಾಗವಿದೆಯೇ ಎಂಬುದನ್ನು ವಿಚಾರಿಸಲು ಬಂದಿದ್ದರಿಂದ ಅವರು ಅಪರಾಧ ಸ್ಥಳದ ಹತ್ತಿರ ಅಥವಾ ಅಪರಾಧದ ನಂತರದ ಉಪಸ್ಥಿತಿಯಿರುವುದನ್ನು ಅಪ್ರಸ್ತುತವಾಗಿ ವಿವರಿಸಿರುತ್ತಾರೆ. ಅವರನ್ನು ಒಬ್ಬ ಆಕಸ್ಮಿಕ ಸಾಕ್ಷಿಯೆಂದು ಕರೆಯಬಹುದು.

94. ಒಬ್ಬ ಆಕಸ್ಮಿಕ ಸಾಕ್ಷಿಯು ಸ್ಥಳದಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಸಾಕ್ಷಿಯಾಗಿರುತ್ತಾರೆ. *ಪುರನ್ ವಿರುದ್ಧ ಪಂಜಾಬ್ ರಾಜ್ಯ*[27] ಮೊಕದ್ದಮೆಯಲ್ಲಿ ಈ ರೀತಿಯ ಸಾಕ್ಷಿಯನ್ನು ಈ ಕೆಳಗಿನ ಪದಗಳಲ್ಲಿ ವಿವರಿಸಲಾಗಿದೆ:

> "ಅಂತಹ ಸಾಕ್ಷಿಗಳು ಯಾವುದಾದರು ಘಟನೆ ಸಂಭವಿಸುವಾಗ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಅಭ್ಯಾಸವನ್ನು ಹೊಂದಿರುತ್ತಾರೆ ಮತ್ತು ಘಟನೆಯನ್ನು ನೋಡಿದ ನಂತರ ಕಣ್ಮರೆಯಾಗುತ್ತಾರೆ ಮತ್ತು ನಂತರ ಸಾಕ್ಷ್ಯ ನೀಡಲು ಅವರನ್ನು ಕರೆಯಲಾಗುತ್ತದೆ."

27. ಎಐಆರ್ 1953 ಎಸ್‌ಸಿ 459

ಈ ನ್ಯಾಯಾಲಯವು, ಆಕಸ್ಮಿಕ ಸಾಕ್ಷಿಗಳ ಸಾಕ್ಷ್ಯವನ್ನು ವ್ಯವಹರಿಸುವ ಬಗ್ಗೆ ಒಂದು ಎಚ್ಚರಿಕೆಯ ಗಂಟೆಯನ್ನು ನೀಡಿದೆ. *ದರ್ಯಾ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ*[28] ಮೊಕದ್ದಮೆಯಲ್ಲಿ ಹೀಗೆ ಗಮನಿಸಲಾಗಿದೆ:

> "ಸಾಕ್ಷಿಯು ನೊಂದವರ ನಿಕಟ ಸಂಬಂಧಿಯಾಗಿದ್ದು, ತನ್ನ ದಾಳಿಕೋರನಿಗೆ ನೊಂದವನ ಹಗೆತನವನ್ನು ಹಂಚಿಕೊಳ್ಳುವುದನ್ನು ತೋರಿಸಿದರೆ, ಕ್ರಿಮಿನಲ್ ನ್ಯಾಯಾಲಯಗಳಿಗೆ ಅಂತಹ ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸುವುದು ಮತ್ತು ಅದರ ಮೇಲೆ ಕಾರ್ಯನಿರ್ವಹಿಸಲು ನಿರ್ಧರಿಸುವ ಮೊದಲು ಆ ಸಾಕ್ಷ್ಯದಲ್ಲಿನ ಎಲ್ಲಾ ಲೋಪಗಳನ್ನು ಪರಿಶೀಲಿಸುವುದು ಸ್ವಾಭಾವಿಕವಾಗಿ ಅವಶ್ಯಕವಾಗಿರುತ್ತದೆ. ಅಂತಹ ಸಾಕ್ಷ್ಯಗಳೊಂದಿಗೆ ವ್ಯವಹರಿಸುವಾಗ, ನ್ಯಾಯಾಲಯಗಳು ಸದರಿ ಸಾಕ್ಷಿಗಳು ಆಕಸ್ಮಿಕ ಸಾಕ್ಷಿಗಳೇ ಅಥವಾ ಅವರುಗಳ ಅಪರಾಧದ ಸ್ಥಳದಲ್ಲಿ ನಿಜವಾಗಿಯೂ ಹಾಜರಿದ್ದರೇ ಎಂಬ ವಿಚಾರಣೆಯೊಂದಿಗೆ ಪ್ರಾರಂಭಿಸಬೇಕಿರುತ್ತದೆ. ನೊಂದ ವ್ಯಕ್ತಿಗೆ ಸಂಬಂಧಿಸಿದ ಸಾಕ್ಷಿಯು ಆಕಸ್ಮಿಕ ಸಾಕ್ಷಿಯಲ್ಲ ಎಂಬುದು ಕ್ರಿಮಿನಲ್ ನ್ಯಾಯಾಲಯಕ್ಕೆ ಮನದಟ್ಟಾದರೆ, ನಂತರ ಆತನ ಸಾಕ್ಷ್ಯವನ್ನು ಸಂಭವನೀಯತೆಯ ದೃಷ್ಟಿಕೋನದಿಂದ ಪರಿಶೀಲಿಸಬೇಕು ಮತ್ತು ದಾಳಿಯ ಬಗ್ಗೆ ಆತನು ನೀಡಿದ ಹೇಳಿಕೆಯನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕು".

ಜನ್ಮೈಲ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ[29] ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಈ ರೀತಿಯಂತೆ ಅಭಿಪ್ರಾಯಪಟ್ಟಿರುತ್ತದೆ:

> "22. ಆಕಸ್ಮಿಕ ಸಾಕ್ಷಿಯ ಸಾಕ್ಷ್ಯವು ಬಹಳ ಎಚ್ಚರಿಕೆಯ ಮತ್ತು ನಿಕಟವಾದ ಪರಿಶೀಲನೆಯ ಅಗತ್ಯವನ್ನು ಹೊಂದಿರುತ್ತದೆ ಮತ್ತು ಒಬ್ಬ ಆಕಸ್ಮಿಕ ಸಾಕ್ಷಿಯು ಘಟನಾ ಸ್ಥಳದಲ್ಲಿನ ತಮ್ಮ ಉಪಸ್ಥಿತಿಯನ್ನು ಸಮರ್ಪಕವಾಗಿ ವಿವರಿಸಬೇಕು *(ಸತ್ಬೀರ್ ವಿರುದ್ಧ ಸೂರತ್ ಸಿಂಗ್*[30], *ಹರ್ಜಿಂದರ್ ಸಿಂಗ್ ವಿರುದ್ಧ ಗುಜರಾತ್ ರಾಜ್ಯ, ಆಚಾರಪರಂಬತ್ ಪ್ರದೀಪನ್ ಮತ್ತು ಮತ್ತೊಬ್ಬರು ವಿರುದ್ಧ ಕೇರಳ ರಾಜ್ಯ*[31] *ಮತ್ತು ಸರ್ವೇಶ್ ನರೇನ್ ಶುಕ್ಲ ವಿರುದ್ಧ ದರೋಗಾ* ಸಿಂಗ್[32]). ಘಟನಾ ಸ್ಥಳದಲ್ಲಿ ಉಪಸ್ಥಿತಿಯಿದ್ದ ಬಗ್ಗೆ ಅನುಮಾನವಿರುವ ಆಕಸ್ಮಿಕ ಸಾಕ್ಷಿಯ ಹೇಳಿಕೆಯನ್ನು ತಿರಸ್ಕರಿಸಬೇಕು *(ಶಂಕರ್‌ಲಾಲ್ ವಿರುದ್ಧ ರಾಜಸ್ತಾನ ರಾಜ್ಯ*[33] *ಮೂಲಕ)*".

28. 1964 (7) ಎಸ್‌ಸಿಆರ್ 397
29. (2009) 9 ಎಸ್‌ಸಿಸಿ 719.
30. (1997) 4 ಎಸ್‌ಸಿಸಿ 192.
31. (2006) 13 ಎಸ್‌ಸಿಸಿ 643.
32. (2007) 13 ಎಸ್‌ಸಿಸಿ 360.
33. (2004) 10 ಎಸ್‌ಸಿಸಿ 632.

95. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ಈ ಸಾಕ್ಷಿಯ (ಪ್ರಾ.ಸಾ.10) ಹೇಳಿಕೆಯನ್ನು ಪ್ರಶ್ನಿಸದೆ ಅಥವಾ ಅನುಮಾನಿಸದೆ ತೆಗೆದುಕೊಳ್ಳಲಾಗುವುದಿಲ್ಲ ಎಂದಾಗಿದೆ. ಪ್ರಾ.ಸಾ.10 ರವರು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ಸುಧಾರಿಸಿಕೊಂಡಿರುತ್ತಾರೆ ಮತ್ತು ಈ ನಿಟ್ಟಿನಲ್ಲಿ ಅಭಿಮುಖವಾಗಿರುತ್ತಾರೆ. ಪೊಲೀಸರಿಗೆ ಅವರು ಪ್ರಾರಂಭದಲ್ಲಿ ನೀಡಿದ ಹೇಳಿಕೆಯು ಹುಡುಗಿಯ (ನ್ಯಾಯಾಲಯದಲ್ಲಿ ಅವರು ನೇಹಾ ಎಂದು ಗುರುತುಹಿಡಿದ) ಉಪಸ್ಥಿತಿಯನ್ನು ಉಲ್ಲೇಖಿಸುವುದಿಲ್ಲ. ಅಂತೆಯೇ, ಅವರು ತಮ್ಮ ಹೇಳಿಕೆಯನ್ನು ಸುಧಾರಿಸಿಕೊಂಡಿದ್ದು, ಆ ಹುಡುಗಿಯು ಇಬ್ಬರು ಹುಡುಗರಲ್ಲಿ ಗಂಭೀರವಾಗಿ ಗಾಯಗೊಂಡ ಒಬ್ಬನನ್ನು ಆಸ್ಪತ್ರೆಗೆ ಹೋಗಲು ಹೇಳಿರುವುದಾಗಿ ನ್ಯಾಯಾಲಯದಲ್ಲಿ ನುಡಿದಿದ್ದಾರೆ. ಇದರೆ ಜೊತೆಗೆ, ಅವರು ದಿನಾಂಕ 20.06.2011 ರಂದು ಪೊಲೀಸ್ ಠಾಣೆಗೆ ಹೋಗಲು ಕಾರಣಗಳಾದ ಗುಮಾಸ್ತ ಪರವಾನಗಿಯನ್ನು ಪಡೆಯಲು ಅಥವಾ ಅಪರಾಧದ ಬಗ್ಗೆ ವರದಿ ಮಾಡಲು ಎಂಬ ಅಂಶದ ಬಗ್ಗೆ ವಿರೋಧಾಭಾಸಗಳಿರುತ್ತವೆ; ಮತ್ತು ಆಸ್ತಿಯ ದಲ್ಲಾಳಿಯ ವ್ಯವಹಾರ ಮಾಡಲು ಯಾವುದೇ ಪರವಾನಗಿ ಇರುವುದಿಲ್ಲ ಎಂದು ಒಪ್ಪಿಕೊಂಡಿದ್ದರೂ ಸಹ ಆಸ್ತಿ ದಲ್ಲಾಳಿಯಾಗಿ ಖಾಲಿ ಆಸ್ತಿಗಳ ಬಗ್ಗೆ ವಿಚಾರಿಸಲು ಅಪರಾಧ ಸ್ಥಳದಲ್ಲಿ ಅವರ ಉಪಸ್ಥಿತಿಯ ಬಗ್ಗೆ ವಿರೋಧಾಭಾಸಗಳಿದ್ದು, ಅವುಗಳು ಪ್ರಮುಖವಾಗಿರುತ್ತದೆ. ಸಾಕ್ಷಿಗಳ ವಿಶ್ವಾಸಾರ್ಹತೆಯ ಮೂಲಕ್ಕೆ ಸಂಬಂಧಿಸಿರುವುದರಿಂದ ಈ ವಿರೋಧಾಭಾಸಗಳು ಗಂಭೀರವಾಗಿರುತ್ತವೆ. ವಿಶೇಷವಾಗಿ ಹುಡುಗಿಯ ಉಪಸ್ಥಿತಿಯ ಬಗ್ಗೆ ಅವರ ಪೂರ್ವಭಾವನೆಗಳು ಮತ್ತು ಸುಧಾರಣೆಯೂ ಸಹ ನಿರ್ಲಕ್ಷಿಸಲು ಬಹಳ ಗಂಭೀರ ಮತ್ತು ಮೂಲಭೂತವಾಗಿವೆ. ಬಹುಮುಖ್ಯವಾಗಿ, ಈ ಸಾಕ್ಷಿಯು ರೂಢಿಯ ಸಾಕ್ಷಿಯಾಗಿ (ಸ್ಟಾಕ್ ಸಾಕ್ಷಿ) ಕಾಣಿಸಿಕೊಳ್ಳುತ್ತಾನೆ. ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ಪ್ರಾ.ಸಾ.10 ರ ಹೇಳಿಕೆಯನ್ನು ಸ್ವೀಕರಿಸಲಾಗುವುದಿಲ್ಲ.

V. ಪ್ರಾ.ಸಾ.8 ರಿಂದ ಮನೋಜ್‌ರವರ ಗುರುತಿಸುವಿಕೆ:

96. ಪ್ರಾ.ಸಾ.8–ಅಚ್ಯುತ್‌ಮಾಲ್ ತೆಜ್ವಾನಿಯವರಿಂದ ಮನೋಜ್‌ರವರು ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದು ಹೇಳಲು ಅಭಿಯೋಜನೆಯು ಪ್ರಾ.ಸಾ.8ರ ಸಾಕ್ಷ್ಯದ ಮೇಲೆ

ಅವಲಂಬಿತವಾಗಿರುತ್ತದೆ. ಈ ಸಾಕ್ಷಿಯು ಪಾಕಿಸ್ತಾನದ ವಿಜ್ಞಾನ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುವುದಾಗಿ ನುಡಿದಿರುತ್ತಾರೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಿಂದ ವೈದ್ಯಕೀಯ ಅಭ್ಯಾಸ ಮಾಡಲು ಯಾವುದೇ ಪರವಾನಗಿ ಇರುವುದಿಲ್ಲವೆಂದು ಅವರು ಒಪ್ಪಿಕೊಂಡಿರುತ್ತಾರೆ; ಅವರು ವೈದ್ಯರಾಗಿ ಅಭ್ಯಾಸ ಮಾಡಲು ಯಾವುದೇ ಅನುಮತಿಯನ್ನು ಹೊಂದಿಲ್ಲ ಎಂದೂ ಸಹ ಒಪ್ಪಿಕೊಂಡಿರುತ್ತಾರೆ; ಆದರೆ ಅವರು ಕವಿತಾ ಕ್ಲಿನಿಕ್ ಅನ್ನು ನಡೆಸುತ್ತಿದ್ದರು. ಅವರು ನ್ಯಾಯಾಲಯದಲ್ಲಿ ಮನೋಜ್‌ರನ್ನು ಗುರುತಿಸಿದರು ಮತ್ತು ದಿನಾಂಕ 19.06.2011 ರಂದು ಮನೋಜ್‌ರವರು ಅವರ ಮೊಣಕೈ ಗಾಯಕ್ಕೆ ಚಿಕಿತ್ಸೆ ಪಡೆದಿರುತ್ತಾರೆ ಮತ್ತು ಇನ್ನೊಂದು ಹುಡುಗ ಆತನೊಂದಿಗೆ ಬಂದಿರುವುದಾಗಿ ಹೇಳಿರುತ್ತಾರೆ (ಸಿಂಧಿಯಲ್ಲಿ ಮಾತನಾಡಿದ). ಅವರು ನಿ.ಪಿ.37 ರನ್ನು ಸಾಬೀತುಪಡಿಸಿದ್ದು ಅದು ಮನೋಜ್‌ರವರಿಗೆ ನೀಡಿದ ಔಷಧಿ ಬರೆದ ಚೀಟಿಯಾಗಿದ್ದು ಅದನ್ನು ಅವರು ನೀಡಿರುತ್ತಾರೆ ಮತ್ತು ಐ.ಓ ರವರು (ಪ್ರಾ.ಸಾ.31) ಹೇಳಿದ ಪ್ರಕಾರ ಅದನ್ನು ದಿನಾಂಕ 25.06.2011 ರಂದು (ನಿ.ಪಿ.36) ಜಪ್ತಿಪಡಿಸಿಕೊಳ್ಳಲಾಗಿರುತ್ತದೆ.

97. ಪ್ರಾ.ಸಾ.8 ವಿಶ್ವಾಸಾರ್ಹ ಸಾಕ್ಷಿಯಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಅವರು ಒಬ್ಬ ಅನರ್ಹ ವೃತ್ತಿಪರರು ಮತ್ತು ಪರವಾನಗಿ ಪಡೆಯದವರಾಗಿದ್ದರು ಅಂದರೆ ಅವರೊಬ್ಬ ನಕಲಿ ವೈದ್ಯ ಎಂಬ ಅಂಶವನ್ನು ಹೊರತುಪಡಿಸಿ, ಅವರು ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನದಿಂದ ವಲಸೆ ಬಂದಿರುವ ಕಾರಣದಿಂದ ಪೊಲೀಸರೊಂದಿಗೆ ಅವರ ಹಿಂದಿನ ಸಂಪರ್ಕವನ್ನು ತಳ್ಳಿಹಾಕಲಾಗುವುದಿಲ್ಲ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ಸೂಕ್ತವಾಗಿ ಗಮನಿಸಿರುತ್ತಾರೆ. ಅವರು ಯಾವುದೋ ಪ್ರತಿಫಲಕ್ಕಾಗಿ ತಮ್ಮ ವೃತ್ತಿಯನ್ನು ಪೊಲೀಸ್ ಪ್ರೋತ್ಸಾಹದ ನೆರಳಿನಲ್ಲಿ ಅಭ್ಯಾಸ ಮಾಡುತ್ತಿರುವುದುರಿಂದ ಅವರು ಅನುಕೂಲಕರವಾದ ಸಾಕ್ಷಿಯಾಗಿದ್ದು ಇದು ಸುಪ್ತವಾದ ಅನುಮಾನವನ್ನು ಉಂಟುಮಾಡಿರುತ್ತದೆ. ಪೊಲೀಸರು ಗುರುತು ಹಚ್ಚುವ ಕವಾಯತಿನಲ್ಲಿ ಅವರನ್ನು ಒಳಗೊಂಡಿರುವುದಿಲ್ಲ ಮತ್ತು ವಿಚಾರಣೆಯ ಸಂದರ್ಭದಲ್ಲಿ ಮನೋಜ್‌ರನ್ನು ಅವರ ಬಳಿಗೆ ಕರೆದ್ಯೊಯಲಾಗಿರುತ್ತದೆ. ಈ ಎಲ್ಲಾ ಸಂದರ್ಭಗಳಲ್ಲಿ ಈ ಸಾಕ್ಷಿಯ ಸಾಕ್ಷ್ಯವು

ವಿಶ್ವಾಸಾರ್ಹವಲ್ಲ. ಆದ್ದರಿಂದ ಈ ಸಂದರ್ಭವನ್ನು ಸಾಬೀತುಪಡಿಸಲಾಗಿದೆ ಎಂದು ಅಭಿಪ್ರಾಯಪಡಲಾಗುವುದಿಲ್ಲ.

VI. ಆರೋಪಿಯ ಗುರುತು ಹಚ್ಚುವ ಕವಾಯತು:

98. ಅಭಿಯೋಜನೆಯು ಪ್ರಾ.ಸಾ.10 ಮತ್ತು ಪ್ರಾ.ಸಾ.18 (ಪ್ರತಾಪ್ ಕುಮಾರ್ ಅಗಾಸಿಯಾ, ನಾಯಬ್ ತೆಹಸಿಲ್ದಾರ್) ಸಾಕ್ಷ್ಯಗಳ ಮೇಲೆ ಅವಲಂಬಿತವಾಗಿದೆ. ಪ್ರಾ.ಸಾ.10 ರವರು ಮನೋಜ್ ಮತ್ತು ರಾಹುಲ್‌ರವರ ತಲೆಯನ್ನು ನಿರ್ದಿಷ್ಟವಾಗಿ ಮುಟ್ಟುವುದರ ಮೂಲಕ ಅವರನ್ನು ಸರಿಯಾಗಿ ಗುರುತಿಸಿದ್ದಾರೆ ಎಂದು ಇಬ್ಬರೂ ನುಡಿದಿರುತ್ತಾರೆ. ಪ್ರಾ.ಸಾ.18 ರ ಪ್ರಕಾರ, ಇಬ್ಬರೂ ಆರೋಪಿಗಳನ್ನು ಹೋಲುವ ಇತರ ಹತ್ತು ಜನಗಳೊಂದಿಗೆ ಅವರನ್ನು ನಿಲ್ಲುವಂತೆ ಮಾಡಲಾಯಿತು. ಈ ಗುರುತು ಹಚ್ಚುವ ಮೆಮೊ ಅಂದರೆ ಗುರುತು ಹಚ್ಚುವ ಕವಾಯತ್ತಿನ (ಟಿ.ಐ.ಪಿ) ಪ್ರಕ್ರಿಯೆಯ ಫಲಿತಾಂಶವನ್ನು ನಿ.ಪಿ.38 ರಲ್ಲಿ ದಾಖಲುಮಾಡಲಾಗಿದ್ದು; ಪ್ರಾ.ಸಾ.10 ರಿಂದ ಮನೋಜ್ ಮತ್ತು ರಾಹುಲ್‌ರವರನ್ನು ಗುರುತುಹಿಡಿಯಲಾಯಿತು ಮತ್ತು ನಿ.ಪಿ.40 ರಲ್ಲಿ ಪ್ರಾ.ಸಾ.11 ರಾಜು ಸೇನ್‌ರವರು ಮನೋಜ್‌ರವರನ್ನು ಮಾತ್ರ ಗುರುತು ಹಿಡಿದರು ಎಂದು ದಾಖಲುಮಾಡಲಾಗಿದೆ. ಅಂತೆಯೇ, ನಿ.ಪಿ.39 ರಲ್ಲಿ ದಾಖಲಿಸಿದಂತೆ, ಪ್ರಾ.ಸಾ.10 ರವರು ಒಂದೇ ರೀತಿಯ ದೈಹಿಕ ಲಕ್ಷಣಗಳನ್ನು ಹೊಂದಿದ್ದ ಇತರ ಐದು ಹುಡುಗಿಯರಲ್ಲಿ ನೇಹಾರವರನ್ನು ಗುರುತಿಸಿರುತ್ತಾರೆ ಎಂದು ಪ್ರಾ.ಸಾ.18 ಪ್ರತ್ಯೇಕ ಪ್ರಕ್ರಿಯೆಯಲ್ಲಿ ನುಡಿದಿರುತ್ತಾರೆ.

99. ಟಿ.ಐ.ಪಿ.ಯ ಪ್ರಕ್ರಿಯೆಯನ್ನು ಅತಿಯಾದ ವಿಳಂಬದ ನಂತರ ನಡೆಸಲಾಯಿತು ಎಂಬುದು ಅದರ ವಿರುದ್ಧವಿರುವ ಪ್ರಮುಖವಾದ ವಾದವಾಗಿರುತ್ತದೆ. ಅಪೀಲುದಾರರನ್ನು ದಿನಾಂಕ 22.06.2011 ರಂದು ಬಂಧಿಸಲಾಯಿತು ಮತ್ತು ದಿನಾಂಕ 30.06.2011 ರವರೆಗೆ ಅವರು ವಶದಲ್ಲಿದ್ದರು. ಆ ಸಮಯದಲ್ಲಾಗಲಿ ಅಥವಾ ನಂತರವಾಗಲೀ ಅವರ ಟಿ.ಐ.ಪಿಯನ್ನು ನಡೆಸಲು ಯಾವುದೇ ಮ್ಯಾಜಿಸ್ಟ್ರೇಟ್‌ನ ಭಾಗವಹಿಸುವಿಕೆಗೆ ಯಾವುದೇ ಪ್ರಯತ್ನಪಟ್ಟಿರುವುದಿಲ್ಲ

ಮತ್ತು ಟಿ.ಐ.ಪಿಯನ್ನು ದಿನಾಂಕ 14.07.2011 ರಂದು ಮಾತ್ರ ನಡೆಸಲಾಯಿತು ಎಂದು ಬಲವಾಗಿ ವಾದ ಮಂಡಿಸಿದ್ದಾರೆ. ನಿ.ಪಿ.38 ಮನೋಜ್ ಮತ್ತು ರಾಹುಲ್‌ರವರಿಗೆ ಸಂಬಂಧಪಟ್ಟ ಟಿ.ಐ.ಪಿಯಾಗಿದ್ದು, ಇದರಲ್ಲಿ ಆರೋಪಿಗಳ ಜೊತೆ ಅವರಿಷ್ಟದ ಪ್ರಕಾರ ನಿಂತ ಇತರ 10 ಜನರ ಹೆಸರನ್ನು ದಾಖಲಿಸಿರುತ್ತದೆ. ಪ್ರತಿ ವ್ಯಕ್ತಿಗೂ ಆತನ ಕುತ್ತಿಗೆಯವರೆಗೂ ಒಂದು ಕಂಬಳಿಯಿಂದ ಮುಚ್ಚಲ್ಪಟ್ಟಿರುತ್ತದೆ. ಆ ಪ್ರಕ್ರಿಯೆಯು ನಡೆದಾಗ ಯಾವುದೇ ಪೊಲೀಸ್ ಸಿಬ್ಬಂದಿ ಅಲ್ಲಿರಲಿಲ್ಲ ಮತ್ತು ಸಾಕ್ಷಿಯು ಆರೋಪಿಗಳನ್ನು ಸರಿಯಾಗಿ ಗುರುತಿಸಿದ್ದಾರೆ ಎಂದು ಅದು ದಾಖಲಿಸುತ್ತದೆ.

100. ಕ್ರಿಮಿನಲ್ ಅಧಿವಿಚಾರಣೆಗಳಲ್ಲಿ ಸಾಕ್ಷಿದಾರರಿಂದ ಆರೋಪಿಯನ್ನು ಗುರುತಿಸುವ ಜನಪ್ರಿಯವಾದ ಮತ್ತು ವ್ಯಾಪಕವಾಗಿ ಬಳಸಲಾಗುವ ವಿಧಾನವೆಂದರೆ ಅದು ಗುರುತು ಹಚ್ಚುವ ಕವಾಯತಾಗಿರುತ್ತದೆ. ಆರೋಪಿಗಳನ್ನು ಅಲ್ಲಿ ನೋಡಿದ್ದೇನೆ ಅಥವಾ ಘಟನೆ ನಡೆದ ಸಮಯದಲ್ಲಿ ನೋಡಿದ್ದೇನೆ ಎಂದು ಹೇಳಿಕೊಳ್ಳುವ ಸಾಕ್ಷಿಯು ಯಾವುದೇ ಸಹಾಯವಿಲ್ಲದೆ ಅಥವಾ ಇತರ ಮೂಲಗಳಿಲ್ಲದೆ ಆರೋಪಿಗಳ ದೈಹಿಕ ಲಕ್ಷಣವನ್ನೇ ಹೊಂದಿರುವ ಇತರ ವ್ಯಕ್ತಿಗಳ ಮಧ್ಯೆಯಲ್ಲಿ ಅಂತಹ ಆರೋಪಿಗಳನ್ನು ಗುರುತಿಸಲು ಗುರುತು ಹಚ್ಚುವ ಕವಾಯತ್ತನ್ನು ಬಳಸಲಾಗುತ್ತದೆ. ಸಾಕ್ಷಿಗಳ ಸತ್ಯಾಸತ್ಯತೆ ಮತ್ತು ಅಪರಿಚಿತ ವ್ಯಕ್ತಿಗಳನ್ನು ಗುರುತಿಸುವ ಅವರ ಸಾಮರ್ಥ್ಯವನ್ನು ಪರೀಕ್ಷಿಸಲು ಟಿ.ಐ.ಪಿಯನ್ನು ಬಳಸಲಾಗುತ್ತದೆ. ಗುರುತು ಹಚ್ಚುವ ಕವಾಯತಿಗೂ ಮುನ್ನ ಸಾಕ್ಷಿಗಳಿಗೆ ಆರೋಪಿಗಳನ್ನು ತೋರಿಸುವ ಅವಕಾಶವನ್ನು ತೊಡೆದುಹಾಕುವ ಸಲುವಾಗಿ ಗುರುತು ಹಚ್ಚುವ ಕವಾಯತ್ತನ್ನು ಸಾಮಾನ್ಯವಾಗಿ ಸಾಧ್ಯವಾದಷ್ಟು ಬೇಗ ನಡೆಸಬೇಕು ಇಲ್ಲವಾದಲ್ಲಿ ಅದು ಅಂತಹ ಸಾಕ್ಷಿಗಳ ಸ್ಮರಣೆಯ ಮೇಲೆ ಪರಿಣಾಮ ಬೀರಬಹುದು. ಟಿ.ಐ.ಪಿಯನ್ನು ವಿಚಾರಣೆಯ ಸಂದರ್ಭದಲ್ಲಿ ನಡೆಸಲಾಗುವುದು; ಆದಾಗ್ಯೂ, *ಮಲ್ಖಾನ್ ಸಿಂಗ್ ವಿರುದ್ಧ ಎಂ.ಪಿ ರಾಜ್ಯ*[34] ಮೊಕದ್ದಮೆಯಲ್ಲಿ

34. (2003) 5 ಎಸ್‌ಸಿಸಿ 746 (ಖಂಡಿಕೆ 7).

ಅಭಿಪ್ರಾಯಪಟ್ಟಂತೆ ಆರೋಪಿಯು ಅದನ್ನು ಹಕ್ಕು ಎಂದು ಹೇಳಿಕೊಳ್ಳಲು ಕಾನೂನಿನಲ್ಲಿ ಯಾವುದೇ ಅವಕಾಶವಿರುವುದಿಲ್ಲ. *ರಾಮನಾಥನ್ ವಿರುದ್ಧ ತಮಿಳುನಾಡು ರಾಜ್ಯ*[35] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಟಿ.ಐ.ಪಿಯ ಉಪಯುಕ್ತತೆ ಮತ್ತು ಮಹತ್ವವನ್ನು ವಿವರಿಸಿದೆ. ಟಿ.ಐ.ಪಿ ಯನ್ನು ನಡೆಸುವಲ್ಲಿನ ವಿಳಂಬ ಅಥವಾ ವಿಫಲತೆಯು ತತ್ಸಂಗತವಾಗಿ ಅಸ್ವೀಕಾರ್ಯ ಅಥವಾ ಸ್ವೀಕರಿಸಲಾಗದ ಸಾಕ್ಷ್ಯವಾಗುತ್ತದೆ ಎಂದು ಹೇಳುತ್ತದೆ ಎಂಬ ಯಾವುದೇ ಕಠಿಣ ಅಥವಾ ದೃಢ ನಿಯಮವಿರುವುದಿಲ್ಲ; ಆದ್ಯಾಗೂ, *ಶ್ಯಾಮಲ್ ಘೋಷ್ ವಿರುದ್ಧ ಪಶ್ಚಿಮ ಬೆಂಗಾಲ್ ರಾಜ್ಯ*[36] ಮೊಕದ್ದಮೆಯಲ್ಲಿ ಅಭಿಪ್ರಾಯಪಟ್ಟಂತೆ ಅದು ಅಂತಹ ಗುರುತುಹಚ್ಚುವಿಕೆಯಲ್ಲಿನ ವಿಶ್ವಾಸಾರ್ಹತೆ ಮತ್ತು ಮಹತ್ವದ ಮೇಲೆ ಪರಿಣಾಮ ಬೀರುತ್ತದೆ.

101. ಪ್ರಾ.ಸಾ.10 ರ ಸಾಕ್ಷ್ಯದ ವಿಶ್ವಾಸಾರ್ಹತೆಗೆ ಸಂಬಂಧಿಸಿದಂತೆ ಮತ್ತು ಅದನ್ನು ಏಕೆ ಪ್ರಶ್ನಿಸದೆ ಅಥವಾ ಅನುಮಾನಿಸದೆ ತೆಗೆದುಕೊಳ್ಳಲಾಗುವುದಿಲ್ಲ ಎಂಬುದಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯವು ಮೊದಲೇ ಚರ್ಚಿಸಿರುತ್ತದೆ. ಆದಾಗ್ಯೂ, ಅವರು ಎಲ್ಲಿದ್ದರು ಮತ್ತು ಅವರು ಆರೋಪಿಯನ್ನು ಎಲ್ಲಿ ನೋಡಿದರು ಎಂಬುದರ ನಡುವಿನ ಅಂತರದ ಬಗ್ಗೆ ಮೂಲ ವಿವರಗಳನ್ನು ನಮೂದಿಸುವುದನ್ನು ಬಿಟ್ಟಿರುವುದು ವಸ್ತವಾಂಶವಾಗಿ ಉಳಿದಿರುತ್ತದೆ. ಮುಂದುವರಿದು, ಅವರ ಕಥೆಯು ಆರೋಪಿಯನ್ನು ಕ್ಷಣಿಕವಾಗಿ ನೋಡಿದ ಬಗ್ಗೆ ಸ್ಪಷ್ಟವಾಗಿ ಸೂಚಿಸುತ್ತದೆ. ಈ ಸಾಕ್ಷಿಯು (ಈ ಮೊಕದ್ದಮೆಯಲ್ಲಿ ಪ್ರಮುಖವಾಗಿರುವ) ಆರೋಪಿಯನ್ನು ಗಮನಿಸಿದ ಸ್ಥಳದಿಂದ ಅಂದಾಜು ದೂರವನ್ನು ತೋರಿಸಲು ಅಥವಾ ನಕ್ಷೆಯನ್ನು ತಯಾರಿಸಲು ಅಭಿಯೋಜನೆಯು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಈ ಇಲ್ಲಾ ಅಂಶಗಳನ್ನು ಗಮನಿಸಿದಾಗ ಮತ್ತು ಆರೋಪಿಗಳನ್ನು ಬಂಧಿಸಿದ ನಂತರ ಟಿ.ಐ.ಪಿ.ಯನ್ನು ನಡೆಸುವಲ್ಲಿನ ವಿಳಂಬವನ್ನು ಗಮನಿಸಿದಾಗ (ಅಭಿಯೋಜನೆಯಿಂದ ವಿವರಿಸಲಾಗದ, ಅದರ ಆವೃತ್ತಿಯ ಪ್ರಕಾರ ಜೂನ್ 2011 ರ ಅಂತ್ಯದೊಳಗೆ ಮೊಕದ್ದಮೆಯು ಮುಕ್ತಾಯವಾಗುತಿತ್ತು) ಟಿ.ಐ.ಪಿ.ಯನ್ನು ಶಂಕಿಸುವಂತೆ ಮಾಡುತ್ತದೆ. ಟಿ.ಐ.ಪಿ.ಯನ್ನು ನಡೆಸಿದ್ದು ಮತ್ತು

35. (1978) 3 ಎಸ್‌ಸಿಸಿ 86 (ಖಂಡಿಕೆ 18).
36. (2012) 7 ಎಸ್‌ಸಿಸಿ 646.

ಪರಿಣಾಮವಾಗಿ ಪ್ರಾ.ಸಾ.10 ರಿಂದ ಖೈದಿಕಟ್ಟೆಯಲ್ಲಿ ಆರೋಪಿಗಳ ಗುರುತಿಸುವಿಕೆಯು ಸಂದೇಹತೀತವಾಗಿ ಸಾಬೀತುಪಡಿಸಲಾದ ಸಂದರ್ಭಗಳಲ್ಲಿ ಒಂದು ಎಂದು ಹೇಳಲಾಗುವುದಿಲ್ಲ.

VII. ವಸ್ತುಗಳ ವಶಪಡಿಸಿಕೊಳ್ಳುವಿಕೆ ಮತ್ತು ಅವುಗಳ ಗುರುತು ಹಚ್ಚುವಿಕೆ:

102. ಅವರ ಬಂಧನದ ದಿನದಂದು (22.06.2011) ಆರೋಪಿಗಳು ವಿವರಣಾ ಹೇಳಿಕೆಗಳನ್ನು ನೀಡಿದರು ಮತ್ತು ದರೋಡೆ ಮಾಡಿದ ವಸ್ತುಗಳನ್ನು ಅಥವಾ ಅಪರಾಧಕ್ಕೆ ಸಂಬಂಧಿಸಿರುವ ವಸ್ತುಗಳನ್ನು ಯಾವ ಸ್ಥಳದಲ್ಲಿ ಇರಿಸಲಾಗಿದೆ ಅಥವಾ ಮರೆಮಾಡಲಾಗಿದೆ ಎಂಬ ಸ್ಥಳಗಳನ್ನು ಪೊಲೀಸರಿಗೆ ತೋರಿಸಿದರು. ಈ ಎಲ್ಲಾ ವಸ್ತುಗಳನ್ನು ಅದೇ ದಿನ ಬೆಳಿಗ್ಗೆ ಜಪ್ತಿ ಮಾಡಿಕೊಳ್ಳಲಾಯಿತು. ನಿ.ಪಿ.11 ರಲ್ಲಿರುವಂತೆ, ಇತರ ವಿಷಯಗಳ ಜೊತೆ ನೇಹಾರ ಆಣತಿಯಂತೆ ವಶಪಡಿಸಿಕೊಂಡ ವಸ್ತುಗಳೆಂದರೆ, ಅಂದಾಜು ರೂ.50,000/– ಮೌಲ್ಯದ ಎರಡು ಬಾಗಿದ ಚಿನ್ನದ ಬಳೆಗಳು, ಒಂದು ಬಂಗಾರದ ಪದಕ, ಮೂರು ಗುರಿಯಾ ಮತ್ತು ಅಂದಾಜು ರೂ.22,000/– ಮೌಲ್ಯದ ಸರದೊಂದಿಗಿನ ಮಂಗಳಸೂತ್ರದ ಒಂದು ಭಾಗ ಮತ್ತು ಗುರಿಯಾ, ಬಾಂಕ್ ಆಫ್ ಇಂಡಿಯಾದಿಂದ ನೀಡಲಾದ ಮೇಘಾರವರ ಎ.ಟಿ.ಎಮ್ ಕಾರ್ಡ್ ಒಳಗೊಂಡಿರುತ್ತದೆ. ಅಂತೆಯೇ, ನಿ.ಪಿ.14 (ರಾಹುಲ್‌ರವರ ಆಣತಿಯಂತೆ ವಶಪಡಿಸಿಕೊಂಡ ವಸ್ತುಗಳು) ಅಂದಾಜು ರೂ.50,000/– ಮೌಲ್ಯದ ಎರಡು ಬಾಗಿದ ಬಂಗಾರದ ಬಳೆಗಳು ಮತ್ತು ಇವು ಏರೋನಾಮ ವಿನ್ಯಾಸವನ್ನು ಹೊಂದಿದ್ದವು, ಒಂದು ಗುರಿಯಾ, ಅಂದಾಜು ರೂ.20,000/– ಮೌಲ್ಯದ ಒಂದು ಸರ ಮತ್ತು ಅದರ ಜೊತೆಗೆ ಮಂಗಳಸೂತ್ರದ ಒಂದು ಭಾಗ ಒಳಗೊಂಡಿರುತ್ತದೆ. ಕೊನೆಯದಾಗಿ, ನಿ.ಪಿ.17 (ಮನೋಜ್ ರವರ ಆಣತಿಯಲ್ಲಿ ವಶಪಡಿಸಿಕೊಂಡ ವಸ್ತುಗಳು) ಇತರ ವಿಷಯಗಳು ಜೊತೆ, ಅಂದಾಜು ರೂ.50,000/– ಮೌಲ್ಯದ ಗುಂಡಾದ ವಿನ್ಯಾಸವುಳ್ಳ ಎರಡು ಬಾಗಿದ ಬಂಗಾರದ ಬಳೆಗಳು, ಒಂದು ಗುರಿಯಾ

ಮತ್ತು ಅಂದಾಜು ರೂ.20,000/– ಮೌಲ್ಯದ ಸರ ಮತ್ತು ಅದರ ಜೊತೆಗೆ ಮಂಗಳಸೂತ್ರದ ಒಂದು ಭಾಗವನ್ನು ಒಳಗೊಂಡಿರುತ್ತದೆ.

103. ಹಿಂದಿನ ದಿನ (21.06.2011) ಕೆಲವೊಂದು ವಸ್ತುಗಳು ಅಂದರೆ ಎರಡು ಎ.ಟಿ.ಎಮ್ ಕಾರ್ಡ್‌ಗಳು (ಮೇಘಾ ಮತ್ತು ಆಶ್ಲೇಷಾ), ಮೇಘಾರ ಮೊಬೈಲ್, ಆಶ್ಲೇಷಾರ ಕ್ಯಾಮರಾ ಮತ್ತು ನಿರ್ದಿಷ್ಟ ಆಭರಣಗಳು (ಮೇಘಾ ಮತ್ತು ರೋಹಿಣಿಗೆ ಸೇರಿದ) ಸ್ಥಳದಿಂದ ಕಾಣೆಯಾಗಿವೆ ಎಂದು ಪ್ರಾ.ಸಾ.1–ನಿರಂಜನ್ ದೇಶಪಾಂಡೆಯವರು ವರದಿ ಮಾಡಿರುತ್ತಾರೆ.

104. ದಿನಾಂಕ 09.07.2011 ರಂದು ಈ ಕಾರ್ಯವಿಧಾನವನ್ನು ನಡೆಸಬೇಕು ಎಂದು ಹೇಳಿದ ಪ್ರಾ.ಸಾ.12–ಜಮೀಲ್ ಖಾನ್‌ರವರ ಮೇಲ್ವಿಚಾರಣೆಯಲ್ಲಿ ವಸ್ತುಗಳ ಟಿ.ಐ.ಪಿ.ಯನ್ನು ನಡೆಸಲಾಯಿತು. ಭಾರತೀಯ ಸಂಗೀತ ಕಲಾ ಅಕಾಡೆಮಿ, ಸೆಕ್ಟರ್ ಜಿ, ಎಮ್.ಐ.ಜಿ ಕಾಲೋನಿಯಲ್ಲಿ ಟಿ.ಐ.ಪಿಯನ್ನು ನಡೆಸಲಾಯಿತು ಮತ್ತು ಅಲ್ಲಿ ಎಮ್.ಐ.ಜಿ ಪೊಲೀಸ್ ಠಾಣೆಯ ಪೊಲೀಸರು ಮೊಹರು ಮಾಡಿದ ಪ್ಯಾಕೆಟ್‌ಗಳೊಂದಿಗೆ ಅಲ್ಲಿಗೆ ತಲುಪಿದರು. ಅಂತಹದೇ ಒಂದು ಪ್ಯಾಕೆಟಿನ್ನೊಂದಿಗೆ ಒಬ್ಬ ಅನಿಲ್ ಸೋನಿಯವರು ಅಲ್ಲಿಗೆ ತಲುಪಿದರು. ಎರಡು ಪ್ಯಾಕೆಟ್‌ಗಳನ್ನು ತೆರೆಯಲಾಯಿತು ಮತ್ತು ಅಲ್ಲಿರುವ ವಸ್ತುಗಳನ್ನು ಮಿಶ್ರಣ ಮಾಡಲಾಯಿತು ಎಂದು ಹೇಳಿರುತ್ತಾರೆ. ತದನಂತರ ಪ್ರಾ.ಸಾ.1 ಸ್ಥಳವನ್ನು ತಲುಪಿದರು ಮತ್ತು ವಸ್ತುಗಳನ್ನು ಗಮನಿಸಿ ಗುರುತಿಸಿದರು. ಪ್ರಾ.ಸಾ.12 ರವರು ಈ ರೀತಿ ನುಡಿದಿರುತ್ತಾರೆ:

> “ಗುರುತು ಹಚ್ಚುವ ಪ್ರಕ್ರಿಯೆಯಲ್ಲಿ, ಗುರುತು ಹಚ್ಚಲು ಬಂದ ನಿರಂಜನ್ ದೇಶಪಾಂಡೆಯವರು ಎರಡು ಮುದುರಿದ ಬಂಗಾರದ ಬಳೆಗಳು, ಒಂದು ಬಂಗಾರದ ಪೆಂಡಲ್ (ಸಿಕ್ ಪೆಂಡೆಂಟ್), ಒಂದು ಮುರಿದ ಮಂಗಳಸೂತ್ರ ಸರ ಮತ್ತು ಗುರಿಯೊಂದಿಗೆ ಸ್ಟಡ್, ಎರಡು ಬಂಗಾರದ ಬಾಣದಂತಹ ಬಳೆಗಳು, ಒಂದು ಮುರಿದ ಬಂಗಾರದ ಮಂಗಳಸೂತ್ರ, ಎರಡು ಬಂಗಾರದ ವಿನ್ಯಾಸವುಳ್ಳ ಬಳೆಗಳು, ಒಂದು ಮುರಿದ ಬಂಗಾರದ ಮಂಗಳಸೂತ್ರ ಸರ ಮತ್ತು ಒಂದು ಗುರಿಯಾವನ್ನು ಗುರುತಿಸಿರುತ್ತಾರೆ”.

105. ಗುರುತು ಹಚ್ಚುವ ಕೆಲಸ ಮುಗಿದ ನಂತರ, ಆಭರಣಗಳನ್ನು ಪುನಃ ಮಾಹರು ಮಾಡಲಾಯಿತು ಮತ್ತು ಅಬಿಲ್ ಸೋನಿಯವರು ತಂದ ಆಭರಣಗಳನ್ನೂ ಸಹ ತೆಗೆದುಕೊಂಡು ಹೋಗಲಾಯಿತು ಎಂದು ಸಾಕ್ಷಿಯು ನುಡಿದಿರುತ್ತಾರೆ. ಅವರು ಕೂಡ ನ್ಯಾಯಾಲಯದಲ್ಲಿ ಆಭರಣಗಳನ್ನು (ಪ್ರಾ.ಸಾ.1 ರವರು ಅವರ ಸಮ್ಮುಖದಲ್ಲಿ ಗುರುತು ಹಚ್ಚಿಸಿದ) ಗುರುತಿಸಿರುತ್ತಾರೆ. ಅದೇ ರೀತಿಯಲ್ಲಿ ಪ್ರಾ.ಸಾ.1 ನುಡಿದಿರುತ್ತಾರೆ. ಎರಡೂ ಹೇಳಿಕೆಗಳ ನಡುವಿನ ಒಂದೇ ವ್ಯತ್ಯಾಸವೆಂದರೆ ಪ್ರಾ.ಸಾ.1 ರವರು ಪ್ರಾ.ಸಾ.7 ಉಪಸ್ಥಿತಿಯಿದ್ದರು ಎಂದು ಹೇಳಿರುವುದಾಗಿದೆ (ಆದರೆ ವಾಸ್ತವವಾಗಿ ಪ್ರಾ.ಸಾ.7 ರ ಸಾಕ್ಷ್ಯದ ಪ್ರಕಾರ ಅವರು ಇರುವುದಿಲ್ಲವೆನ್ನುವುದು ಸ್ಪಷ್ಟವಾಗಿರುತ್ತದೆ). ಅದು ಅಸಮಂಜಸವೆಂದು ಬಲವಾಗಿ ಮಂಡಿಸುವುದನ್ನು ಹೊರತುಪಡಿಸಿ, ಆಭರಣಗಳ ಟಿ.ಐ.ಪಿಯ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸುತ್ತಾ ಟಿ.ಐ.ಪಿ ನಡೆಸಲಾದ ಸ್ಥಳಕ್ಕೆ ಮೊಹರು ಮಾಡಿದ ವಸ್ತುಗಳನ್ನು ತಂದ ಅನಿಲ್ ಸೋನಿ ಅಥವಾ ಪೊಲೀಸ್ ಪೇದೆಯನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ವಾದ ಮಂಡಿಸುತ್ತಾರೆ. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಈ ಲೋಪಗಳು ಅಪ್ರಧಾನವಾಗಿರುತ್ತದೆ ಮತ್ತು ಆಭರಣಗಳ ಸಮರ್ಪಕವಾದ ಗುರುತುಹಚ್ಚಿಸುವಿಕೆಗೆ ಅವಶ್ಯಕವಾದ ವಿಶ್ವಾಸಾರ್ಹತೆಯನ್ನು ಸಡಿಲಗೊಳಿಸುವುದಿಲ್ಲ. ವಾಸ್ತವವಾಗಿ, ವಸ್ತುಗಳ ಟಿ.ಐ.ಪಿ.ಯ ಸಂದರ್ಭದಲ್ಲಿ ಅವರನ್ನು ಹೊರತುಪಡಿಸಿ ಬೇರೆ ಯಾರು ಉಪಸ್ಥಿತಿಯಿರಲಿಲ್ಲ ಮತ್ತು ಪ್ರಾ.ಸಾ.1 ರವರು ಗುರುತು ಹಚ್ಚುವುದನ್ನು ಪೂರ್ಣಗೊಳಿಸಿದ ನಂತರ, ಮೆಮೊ (ನಿ.ಪಿ.1) ಸಿದ್ದಪಡಿಸಲಾಯಿತು ಮತ್ತು ಆಭರಣಗಳನ್ನು ಪ್ರತ್ಯೇಕವಾಗಿ ಇರಿಸಲಾಯಿತು ಮತ್ತು ಅನಿಲ್ ಸೋನಿಯವರು ಉಳಿದವುಗಳನ್ನು ತೆಗೆದುಕೊಂಡು ಹೋದರು ಎಂದು ಪ್ರಾ.ಸಾ.12 ರವರು ತಮ್ಮ ಪಾಟೀ–ಸವಾಲಿನ ಸಂದರ್ಭದಲ್ಲಿ ಸ್ಪಷ್ಟವಾಗಿ ನುಡಿದಿರುತ್ತಾರೆ.

106. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಒಂದು ಕಡೆ ಪ್ರಾ.ಸಾ.1 ಮತ್ತು ಪ್ರಾ.ಸಾ.12 ರವರ ಸಾಕ್ಷ್ಯಗಳ ಜಂಟಿ ಅಧ್ಯಯನವು ಮತ್ತು ಇನ್ನೊಂದು ಕಡೆಯಲ್ಲಿ ಟಿ.ಐ.ಪಿಯ

ಪ್ರಕ್ರಿಯೆಗಳು (ದಿನಾಂಕ 9.7.2011 ರ ನಿ.ಪಿ.1) ಪ್ರಾ.ಸಾ.1 ರವರು ದರೋಡೆಯಾದ ವಸ್ತುಗಳನ್ನು ಸಮರ್ಪಕವಾಗಿ ಗುರುತಿಸಿರುತ್ತಾರೆ ಎಂದು ಅಭಿಯೋಜನೆಯು ಸಾಬೀತುಪಡಿಸಿದೆ ಎಂದು ಸಾಧಿಸಲಾಗಿದೆ. ಈ ವಸ್ತುಗಳು ಯಾವುದೇ ವಿಶಿಷ್ಟ ಗುಣಲಕ್ಷಣ ಮತ್ತು ವಿನ್ಯಾಸವಿಲ್ಲದ ಸಾಮಾನ್ಯ ಆಭರಣಗಳಾಗಿವೆ ಮತ್ತು ಪ್ರಾ.ಸಾ.1 ರವರಿಗೆ ಇವುಗಳು ತಿಳಿದಿರುವುದಿಲ್ಲ, ವಿಶೇಷವಾಗಿ ಅವರ ಅತ್ತೆಯ ಆಭರಣಗಳು ಅವರಿಗೆ ತಿಳಿದಿರುವುದಿಲ್ಲ ಎಂದು ಆರೋಪಿಗಳ ಪರ ವಕೀಲರು ಬಲವಾಗಿ ಮಂಡಿಸಿದ್ದಾರೆ. ದಿನಾಂಕ 21.06.2011 ರಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಪ್ರಾ.ಸಾ.1 ರವರು ಕಾಣೆಯಾದ ವಸ್ತುಗಳ ಬಗ್ಗೆ ವರದಿಯನ್ನು ನೀಡಿರುತ್ತಾರೆ ಮತ್ತು ವಿಶೇಷವಾಗಿ ಅವುಗಳ ಪಟ್ಟಿ ಮಾಡಿರುತ್ತಾರೆ ಎಂಬುದನ್ನು ಗಮನಿಸಿದರೆ, ಅವುಗಳನ್ನು ತರುವಾಯ ಆರೋಪಿಗಳ ಆಣತಿಯಂತೆ ವಶಪಡಿಸಿಕೊಂಡಿರುವುದು ಮತ್ತು ಪ್ರಾ.ಸಾ.1 ರವರು ಪ್ರಾ.ಸಾ.12 ರ ಸಮ್ಮುಖದಲ್ಲಿ ಅವುಗಳನ್ನು ಸಮರ್ಪಕವಾಗಿ ಗುರುತಿಸಿರುವುದು ಅವುಗಳ ವಿಶ್ವಾಸಾರ್ಹತೆಯ ಮೇಲೆ ಯಾವುದೇ ಅನುಮಾನ ಇರುವುದಿಲ್ಲ. ಪಾಟೀ–ಸವಾಲಿನ ಸಂದರ್ಭದಲ್ಲಿ ಪ್ರಾ.ಸಾ.1 ರವರಿಗೆ ಹೇಗೆ ಅವರು ಆತನ ಪತ್ನಿ, ಮಗಳು ಮತ್ತು ಅತ್ತೆಯ ಆಭರಣಗಳನ್ನು ಗುರುತಿಸಲು ಸಾಧ್ಯವಾಯಿತು ಎಂಬುದರ ಬಗ್ಗೆ ಯಾವುದೇ ಪ್ರಶ್ನೆಮಾಡಿರುವುದಿಲ್ಲ. ಯಾರಿಗಾದರೂ ಆಭರಣ ಅಥವಾ ಇತರ ಬೆಲೆಬಾಳುವ ವಸ್ತುಗಳನ್ನು ಯಾವ ಕಾರಣಕ್ಕಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎಂಬುದಕ್ಕೆ ವಿವಿಧ ಕಾರಣಗಳಿರಬಹುದು. ಒಬ್ಬ ಪತಿಗೆ ತನ್ನ ಪತ್ನಿಯ ವೈಯಕ್ತಿಕ ವಸ್ತುಗಳನ್ನು ನೆನಪಿಸಿಕೊಳ್ಳಲು ಸಾಧ್ಯವಿರುವುದಿಲ್ಲ ಅಥವಾ ಒಬ್ಬ ಪತ್ನಿಯು ತನ್ನ ಪತಿಯ ವೈಯಕ್ತಿಕ ವಸ್ತುಗಳನ್ನು ನೆನಪಿಟ್ಟುಕೊಳ್ಳಬೇಕು ಮತ್ತು ಗುರುತಿಸಬೇಕು ಎಂದು ನಿರೀಕ್ಷಿಸಲು ಸಾಧ್ಯವಿಲ್ಲ ಎಂಬ ಯಾವುದೇ ಸಾಮಾನ್ಯ ಕಲ್ಪನೆಯು ಇರುವಂತಿಲ್ಲ. ಇದು ಪ್ರತೀ ವ್ಯಕ್ತಿಯ ವ್ಯಕ್ತಿತ್ವ ಮತ್ತು ವೈಯಕ್ತಿಕ ಗುಣಲಕ್ಷಣಗಳನ್ನು ಅವಲಂಬಿಸಿರುತ್ತದೆ, ಮತ್ತು ಇದು ಪ್ರತಿಯೊಬ್ಬರಲ್ಲೂ ಭಿನ್ನವಾಗಿರುತ್ತದೆ. ಪ್ರಾ.ಸಾ.1 ರವರಿಗೆ ಇದರ ವಿವರಗಳ ಬಗ್ಗೆ ಮಾಹಿತಿಯಿರುವ ಸಾಧ್ಯತೆಯಿರುತ್ತದೆ ಮತ್ತು ಬೆಲೆ ಬಾಳುವ ವಸ್ತುಗಳನ್ನು ಖರೀದಿಸಿದಾಗ ಅವರು ಉಪಸ್ಥಿತಿಯಿದ್ದಿರುವ ಸಾಧ್ಯತೆಯು ಇರುತ್ತದೆ ಅಥವಾ ಮೃತ ವ್ಯಕ್ತಿಗಳಿಗೆ ನೀಡಿದ

ಉಡುಗೊರೆಯ ಭಾಗವಾಗಿರುವ ಸಾಧ್ಯತೆಯೂ ಇರುತ್ತದೆ. ಮಂಗಳಸೂತ್ರದ ಬಗ್ಗೆ ನೆನಪಿಸಿಕೊಳ್ಳುವುದು, ವರದಿ ಮಾಡುವುದು ಮತ್ತು ಗುರುತಿಸುವುದು ಬಹಳ ನಿರ್ದಿಷ್ಟವಾಗಿರುತ್ತದೆ. ಪ್ರಾ.ಸಾ.10 ರವರಿಗೆ ತಮ್ಮ ಪತ್ನಿ ಮೇಘಾರಿಗೆ ಸೇರಿದ ಆ ವಸ್ತುವಿನ ಬಗ್ಗೆ ತಿಳಿದಿತ್ತು ಎಂದು ಸಮಂಜಸವಾಗಿ ಊಹಿಸಬಹುದು. ಈ ಎಲ್ಲಾ ಸನ್ನಿವೇಶಗಳಲ್ಲಿ, ಮೃತರಿಗೆ ಸೇರಿದ ವಸ್ತುಗಳ ವಶಪಡಿಸಿಕೊಳ್ಳುವಿಕೆಗೆ ಸಂಬಂಧಿಸಿದಂತೆ ಇರುವ ಸಾಕ್ಷ್ಯ, ಆರೋಪಿಗಳ ಆಣತಿಯಂತೆ ಅವರಿಂದ ವಶಪಡಿಸಿಕೊಂಡಿರುವುದನ್ನು ಮತ್ತು ಟಿ.ಐ.ಪಿಯ ಸಮಯದಲ್ಲಿ ಅವುಗಳ ಸಮರ್ಪಕವಾದ ಗುರುತು ಹಚ್ಚಿಸುವಿಕೆಯನ್ನು ಅಭಿಯೋಜನೆಯು ಸಂದೇಹಾತೀತವಾಗಿ ಸಾಬೀತುಪಡಿಸಿರುತ್ತದೆ.

VIII. ಅಪೀಲುದಾರರ ಬೆರಳೊತ್ತುಗಳಿಗೆ ಸಂಬಂಧಿಸಿದಂತೆ ತಜ್ಞರ ಸಾಕ್ಷ್ಯಕ್ಕೆ ಸಂಬಂಧಿಸಿದ ಸಂದರ್ಭಗಳು:

107. ಪ್ರಾ.ಸಾ.21–ಡಾ. ಸುಧೀರ್ ಶರ್ಮಾ, ಹಿರಿಯ ವೈಜ್ಞಾನಿಕ ಅಧಿಕಾರಿ, ಅಪರಾಧ ಸ್ಥಳದ ಮೊಬೈಲ್ ಘಟಕ, ಅವರು ದಿನಾಂಕ 19.06.2011 ರಂದು ಸಾಯಂಕಾಲ 6.35 ಗಂಟೆಗೆ ಘಟನಾ ಸ್ಥಳವನ್ನು ತಲುಪಿದಾಗ, ಫ್ಲಾಟ್‌ನ ಮುಖ್ಯ ಬಾಗಿಲು ತೆರೆದಿತ್ತು ಮತ್ತು ಮೊಹರು ಮಾಡಿರಲಿಲ್ಲ ಎಂದು ನುಡಿದಿರುತ್ತಾರೆ. ಅವರು ತಮ್ಮ ಹೇಳಿಕೆಯಲ್ಲಿ ಅಲ್ಲಿ ದೊರೆತ ಶೂ ಪ್ರಿಂಟ್ ಮತ್ತು ಇತರ ಭೌತಿಕ ಸಾಕ್ಷ್ಯಗಳ ಬಗ್ಗೆ ಉಲ್ಲೇಖಿಸಿದ್ದಾರೆ ಮತ್ತು ಅವುಗಳನ್ನೇನಾದರೂ ಅಕ್ರಮವಾಗಿ ಬದಲಾಯಿಸಲಾಗಿದೆಯೇ ಎಂಬುದರ ಬಗ್ಗೆಯೂ ಅವರನ್ನು ಪಾಟೀ ಸವಾಲುಗೊಳಿಸಲಾಯಿತು. ಫ್ಲಾಟ್‌ನಲ್ಲಿ ಒಂದು ಕಂಪ್ಯೂಟರ್ ಇತ್ತು ಮತ್ತು ಅದನ್ನು ಜಪ್ತಿಪಡಿಸಿಕೊಳ್ಳಬಹುದಿತ್ತು ಆದರೆ ಅದನ್ನು ವಶಪಡಿಸಿಕೊಳ್ಳಲಾಗಿದೆಯೇ ಅಥವಾ ಇಲ್ಲವೋ ಎಂಬುದರ ಬಗ್ಗೆ ಅವರಿಗೆ ತಿಳಿದಿರುವುದಿಲ್ಲ ಎಂದು ಹೇಳಿರುತ್ತಾರೆ.

108. ಪ್ರಾ.ಸಾ.24–ಕೆ.ಕೆ. ದ್ವಿವೇದಿಯವರು (ಬೆರಳೊತ್ತು ತಜ್ಞರು) ಬೆರಳೊತ್ತುಗಳನ್ನು ಸಂಗ್ರಹಿಸುವ ಸಾಧ್ಯತೆಗಾಗಿ ಅಪರಾಧ ಸ್ಥಳವನ್ನು ಶೋಧಿಸಿರುತ್ತಾರೆ. ಐದು ಜೊತೆ ಬೆರಳೊತ್ತುಗಳನ್ನು (ಅಂದರೆ ನಿ.ಪಿ.80, "ಆಕಸ್ಮಿಕ ಬೆರಳೊತ್ತುಗಳು") ಅವರು ಸಂಗ್ರಹಿಸಿಕೊಂಡರು ಮತ್ತು ಇಬ್ಬರು ಸಾಕ್ಷಿಗಳು (ಪ್ರಾ.ಸಾ.5 ಮತ್ತು ಪ್ರಾ.ಸಾ.9) ಮತ್ತು ಸ್ವತಃ ಅವರೇ ಅದರ ಮೇಲೆ ಸಹಿ ಮಾಡಿರುತ್ತಾರೆ. ಪ್ರಾ.ಸಾ.17–ಸತ್ಯನಾರಾಯಣ ಪಾಟೀಲ್ (ಅಪರಾಧ ಘಟನೆಯ ಛಾಯಾಗ್ರಾಹಕ) ರವರು ಬೆರಳೊತ್ತುಗಳನ್ನು ಸಂಗ್ರಹಿಸಿದ ಸ್ಥಳದ ಛಾಯಾಚಿತ್ರಗಳನ್ನು ತೆಗೆದುಕೊಂಡರು. ಆದಾಗ್ಯೂ, ಈ ಅಂಶವು ಪ್ರಾ.ಸಾ.17 ರ ಸಾಕ್ಷ್ಯದಿಂದಾಗಲಿ ಅಥವಾ ನಿಶಾನೆಗಳಿಂದಾಗಲೀ ಅಥವಾ ದಾಖಲೆಗಳಿಂದಾಗಲೀ ಪುಷ್ಟೀಕರಿಸಿರುವುದಿಲ್ಲ.

109. ಮೊದಲ ಮಹಡಿಯಲ್ಲಿ ಸ್ನಾನಗೃಹದ ಪಕ್ಕದಲ್ಲಿರುವ ಮಲಗುವ ಕೋಣೆಯ ಬಾಗಿಲಿನ ಒಳಭಾಗದಿಂದ 'ಎ' ಮತ್ತು 'ಬಿ' ಬೆರಳೊತ್ತುಗಳನ್ನು ಸಂಗ್ರಹಿಸಲಾಯಿತು, ಅಡುಗೆಮನೆಗೆ ಹೊಂದಿಕೊಂಡಂತೆ ಮಲಗುವ ಕೋಣೆಯ ಬಾಗಿಲಿನ ಹೊರ ಭಾಗದಿಂದ 'ಸಿ' ಮತ್ತು 'ಡಿ' ಬೆರಳೊತ್ತುಗಳನ್ನು ಸಂಗ್ರಹಿಸಲಾಯಿತು; ಮತ್ತು ಅದೇ ಬಾಗಿಲಿನ ಹೊರಭಾಗದಿಂದ 'ಇ' ಬೆರಳೊತ್ತನ್ನು ಸಂಗ್ರಹಿಸಲಾಯಿತು. ಪರೀಕ್ಷೆಯ ನಂತರ, ಎ, ಬಿ, ಡಿ ಮತ್ತು ಇ ಬೆರಳೊತ್ತುಗಳು ಹೋಲಿಕೆಗೆ ಸೂಕ್ತವೆಂದು ಕಂಡುಬಂದವು.

110. ಪೇದೆ ದಿನೇಶ್ ರವರು ದಿನಾಂಕ 20.06.2011 ರಂದು ಮೃತರ [ನಿ.ಪಿ.81 (ಮೇಘಾ), ನಿ.ಪಿ.82 (ರೋಹಿಣಿ) ಮತ್ತು ನಿ.ಪಿ.83 (ಆಶ್ಲೇಷ)] ಬೆರಳೊತ್ತುಗಳನ್ನು ಸಂಗ್ರಹಿಸಿದರು. ಆದಾಗ್ಯೂ, ಅಧಿವಿಚಾರಣೆಯ ವೇಳೆ ಪೇದೆ ದಿನೇಶ್‌ರವರನ್ನು ಅಭಿಯೋಜನೆಯು ವಿಚಾರಣೆಗೆ ಒಳಪಡಿಸಿರುವುದಿಲ್ಲ. ದಿನಾಂಕ 24.06.2011 ರಂದು ಪ್ರಾ.ಸಾ.13–ಪೇದೆ ವಿಜಯ್ ಸಿಂಗ್‌ರವರು ಮೂವರು ಅಪೀಲುದಾರರಾದ [ನಿ.ಪಿ.41 (ರಾಹುಲ್), ನಿ.ಪಿ.42 (ಮನೋಜ್) ಮತ್ತು

ನಿ.ಪಿ.43 (ನೇಹಾ)] ರವರ ಬೆರಳೊತ್ತುಗಳನ್ನು ಸಂಗ್ರಹಿಸಿದ್ದು, ಅವರು ತಮ್ಮ ಮುಖ್ಯ-ವಿಚಾರಣೆಯಲ್ಲಿ ಮೂವರು ಆರೋಪಿಗಳ (ನ್ಯಾಯಾಲಯದಲ್ಲಿ ಹಾಜರಿದ್ದ ಮತ್ತು ಅವರಿಂದ ಗುರುತಿಸಲ್ಪಟ್ಟ) ಸಹಿಗಳನ್ನು ಅವರವರ ಬೆರಳೊತ್ತು ಮೇಲೆ ಅಂಟಿಸಿದ ಚೀಟಿಗಳ ಮೇಲೆ ಪಡೆದಿರುವುದಾಗಿ ಮತ್ತು ನಂತರ ಅವುಗಳನ್ನು ಎಸ್.ಎಸ್.ಪಿ ಕಛೇರಿಗೆ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಅವರು ಬೆರಳೊತ್ತು ವಿಭಾಗದಿಂದ ತರಬೇತಿಯನ್ನು ಪಡೆದಿದ್ದಾರೆ ಮತ್ತು ಅವರು ಬೆರಳೊತ್ತುಗಳನ್ನು ಸಂಗ್ರಹಿಸಲು ಸಮರ್ಥರಾಗಿದ್ದಾರೆ ಎಂದು ತಮ್ಮ ಪಾಟೀ-ಸವಾಲಿನಲ್ಲಿ ನುಡಿದಿರುತ್ತಾರೆ. ಅವರು ರಾಹುಲ್‌ರವರ ಬಲಗೈಯ ಉಂಗುರದ ಬೆರಳಿಗೆ ಚಾಕುವಿನಿಂದ ಉಂಟಾದ ಗಾಯ/ತುಂಡರಿಸಿದ ಗಾಯವನ್ನು ಗಮನಿಸಿದ್ದು, ಮೂವರು ಆರೋಪಿಗಳ ಬೆರಳುಗಳ ಮೇಲೆ ಇತರ ಯಾವುದೇ ಗಾಯಗಳಿರಲಿಲ್ಲ ಎಂಬುದನ್ನು ಗಮನಿಸಿದ್ದಾರೆ. ಆರೋಪಿಯಿಂದ ಯಾವುದೇ ಲಿಖಿತ ಒಪ್ಪಿಗೆಯನ್ನು ಪಡೆದಿರುವುದಿಲ್ಲ ಎಂದೂ ಸಹ ಅವರು ಉಲ್ಲೇಖಿಸಿದ್ದಾರೆ.

111. ಪ್ರಾ.ಸಾ.24-ಕೆ.ಕೆ. ತ್ರಿವೇದಿಯವರು, ತಮ್ಮ ಸಾಕ್ಷ್ಯದ ಜೊತೆಗೆ, ತಾವು ದಿನಾಂಕ 11.07.2011 ರಂದು ನೀಡಿದ ಬೆರಳೊತ್ತು ತಜ್ಞರ (ನಿ.ಪಿ.54) ವರದಿಯನ್ನು ಸೇರಿಸಿದ್ದು, ಅದು ಬೆರಳೊತ್ತಿನ ಬಗೆಗಿನ ಅಭಿಯೋಜನೆಯ ವಾದದ ನಿರ್ಣಾಯಕ ಭಾಗವನ್ನು ರೂಪಿಸುತ್ತದೆ. ದಿನಾಂಕ 27.06.2011 ರಂದು ಆರೋಪಿಗಳ ಬೆರಳೊತ್ತುಗಳನ್ನು ಸ್ವೀಕರಿಸಲಾಯಿತು ಮತ್ತು ಪ್ರಾ.ಸಾ.24 ರವರು 8-ಅಂಶಗಳ ವಿಧಾನದ ಮೂಲಕ ಸಂಗ್ರಹಿಸಿದ ಆಕಸ್ಮಿಕ ಬೆರಳೊತ್ತುಗಳೊಂದಿಗೆ ಹೊಂದಾಣಿಕೆ ಮಾಡಲಾಯಿತು ಹಾಗು ಎ ಮತ್ತು ಬಿ ಬೆರಳೊತ್ತುಗಳು ರಾಹುಲ್‌ರ ಬಲಗೈಯಿನ ತೋರುಬೆರಳು ಮತ್ತು ಮಧ್ಯದ ಬೆರಳಿನೊಂದಿಗೆ ಹೋಲಿಕೆಯಾಗಿರುವುದನ್ನು ಮತ್ತು ಡಿ ಬೆರಳೊತ್ತು ಮನೋಜ್‌ರ ಬಲಗೈಯಿನ ಮಧ್ಯದ ಬೆರಳಿನೊಂದಿಗೆ ಹೋಲಿಕೆಯಾಗಿರುವುದನ್ನು ಮತ್ತು ಇ ಬೆರಳೊತ್ತು ನೇಹಾರ ಹೆಬ್ಬೆರಳಿನೊಂದಿಗೆ ಹೋಲಿಕೆಯಾಗಿರುವುದನ್ನು ಕಂಡುಕೊಳ್ಳಲಾಯಿತು. ಪ್ರಾ.ಸಾ.24 ರವರು ದಿನಾಂಕ 06.07.2011 ರಂದು ಬೆರಳೊತ್ತು ವರದಿಯನ್ನು ಭೋಪಾಲ್‌ನ ಫಿಂಗರ್ ಪ್ರಿಂಟ್

ಬ್ಯೂರೋನಿಗೆ ರವಾನಿಸಿದ್ದು, ದಿನಾಂಕ 11.07.2011 ರಂದು ಅದನ್ನು ಅವರು ಪರಿಶೀಲಿಸಿದರು. ಅಪೀಲುದಾರರು ಅಪರಾಧ ಸ್ಥಳದಲ್ಲಿ ಉಪಸ್ಥಿತಿಯಿದ್ದರು ಎಂಬುದನ್ನು ಪುಷ್ಟೀಕರಿಸಲು ಈ ನಿರ್ಣಯಗಳ ಮೇಲೆ ಅಭಿಯೋಜನೆಯು ಅವಲಂಬಿಸಿರುತ್ತದೆ.

112. ಇಂದೋರ್‌ನ ಫಿಂಗರ್ ಪ್ರಿಂಟ್ ಬ್ರಾಂಚ್ ತಮ್ಮ ಪತ್ರ ಸಂಖ್ಯೆ. ಎಸಿ ಶಾಖೆ/ಇ/80/11 ದಿನಾಂಕ 20.06.2011 ರ ಮೂಲಕ ಎಮ್.ಐ.ಜಿ ಪೊಲೀಸ್ ಠಾಣೆಗೆ ಕಳುಹಿಸಿದ್ದು, ಕುಟುಂಬ ಸದಸ್ಯರ/ ಅನುಮಾನಿತರ ಬೆರಳೊತ್ತುಗಳೊಂದಿಗೆ ಆಕಸ್ಮಿಕ ಬೆರಳೊತ್ತುಗಳನ್ನು ಹೋಲಿಕೆ ಮಾಡಲು ರವಾನಿಸಿರುತ್ತಾರೆ ಎಂದು ಪ್ರಾ.ಸಾ.24–ಕೆ.ಕೆ. ದ್ವಿವೇದಿಯವರು ತಮ್ಮ ಮುಖ್ಯ–ವಿಚಾರಣೆಯಲ್ಲಿ ತಿಳಿಸಿರುತ್ತಾರೆ. ಆದಾಗ್ಯೂ, ಅವರ ಪಾಟೀ–ಸವಾಲಿನಲ್ಲಿ ಅಂತಹ ಯಾವುದೇ ಪತ್ರವು ದಾಖಲೆಯಲ್ಲಿರಲಿಲ್ಲ ಎಂದು ಬಹಿರಂಗಪಡಿಸುತ್ತದೆ. ಅಪೀಲುದಾರರ ಪರ ಮಾನ್ಯ ವಕೀಲರು ಬಲವಾಗಿ ಮಂಡಿಸಿದ ಅಂಶವನ್ನು ಅಂದರೆ ಅವರು ಇತರ ಯಾವುದೇ ವ್ಯಕ್ತಿಯ ಬೆರಳೊತ್ತುಗಳನ್ನು (ಮೃತರ ಕುಟುಂಬ ಸದಸ್ಯರನ್ನು ಒಳಗೊಂಡಂತೆ) ಅಥವಾ ಘಟನಾ ಸ್ಥಳದಲ್ಲಿದ್ದ ಯಾವುದೇ ವಸ್ತುಗಳನ್ನು ಹೋಲಿಕೆ ಮಾಡುವ ಉದ್ದೇಶಕ್ಕಾಗಿ ಸಂಗ್ರಹಿಸಿರುವುದಿಲ್ಲ ಎಂಬುದನ್ನು ಪಾಟೀ–ಸವಾಲು ತೋರಿಸುತ್ತದೆ. ಬಾಗಿಲಿನ ಮೇಲೆ ಸಂಪೂರ್ಣ ಹಸ್ತದ ಬೆರಳೊತ್ತಿನ ಗುರುತಾಗಲೀ ಅಥವಾ ರಕ್ತಸಿಕ್ತ ಬೆರಳೊತ್ತುಗಳಾಗಲೀ ಇರುವುದಿಲ್ಲ ಮತ್ತು ಬಾಗಿಲಿನ ಮೇಲೆ ಲಭ್ಯವಿದ್ದ ಇತರ ಬೆರಳೊತ್ತುಗಳು ಸಂಗ್ರಹಿಸಲು ಯೋಗ್ಯವಾಗಿರುವುದಿಲ್ಲ ಎಂದೂ ಸಹ ನುಡಿದಿರುತ್ತಾರೆ.

113. ಅಪೀಲುದಾರರ ಪರ ಮಾನ್ಯ ವಕೀಲರು ಬೆರಳೊತ್ತು ಸಾಕ್ಷ್ಯಕ್ಕೆ ಸಂಬಂಧಿಸಿದ ಸನ್ನಿವೇಶಗಳನ್ನು ಈ ಮುಂದೆ ಹೇಳಲಾಗಿರುವ ಆಧಾರದ ಮೇಲೆ ಪ್ರಶ್ನಿಸಿದ್ದು, ಅವುಗಳೆಂದರೆ (i) ಯಾವುದೇ ನಿರ್ಮೂಲನಾ ಬೆರಳೊತ್ತಿನ ಅನುಪಸ್ಥಿತಿ; (ii) ಅಪೀಲುದಾರರ ಬೆರಳೊತ್ತುಗಳನ್ನು ಸಂಗ್ರಹಿಸುವಲ್ಲಿನ ಅಕ್ರಮ; (iii) ಅಭಿಯೋಜನೆಯಿಂದ ಪೇದೆ ದಿನೇಶ್‌ರನ್ನು (ನಿರ್ಮೂಲನೆಯ ಪ್ರಕ್ರಿಯೆಗಾಗಿ ಮೃತರ ಬೆರಳೊತ್ತುಗಳನ್ನು ಸಂಗ್ರಹಿಸಿದವರು)

ವಿಚಾರಣೆಗೆ ಒಳಪಡಿಸದಿರುವುದು; (iv) ನ್ಯಾಯಾಲಯದಲ್ಲಿ ಫಿಂಗರ್ ಪ್ರಿಂಟ್ ತಜ್ಞರ ವರದಿಯನ್ನು ಹಾಜರುಪಡಿಸಿದಾಗ, ಅದರೊಂದಿಗೆ ಮುಚ್ಚಳಿಕೆ ಪತ್ರವು ಇಲ್ಲದಿರುವುದು; ಮತ್ತು ಖೈದಿಗಳ ಗುರುತಿಸುವಿಕೆ ಕಾಯಿದೆ–1920 ಕ್ಕೆ ಯಾವುದೇ ಅನುಸರಣೆ ಇಲ್ಲದ ಕಾರಣ, ಅಪೀಲುದಾರರ ಬೆರಳೊತ್ತುಗಳನ್ನು ಕಾನೂನಿನ ಅನುಸಾರವಾಗಿ ಸಂಗ್ರಹಿಸಲಾಗಿರುವುದಿಲ್ಲ.

114. ಈ ನ್ಯಾಯಾಲಯವು ಆರಂಭದಲ್ಲಿ ಕೊನೆಯ ವಾದವನ್ನು ಕೈಗೆತ್ತಿಕೊಂಡಿರುತ್ತದೆ. *ಸೋನ್ವಿರ್ ವಿರುದ್ಧ ದೆಹಲಿ ರಾಜ್ಯ (ಎನ್.ಸಿ.ಟಿ)*[37] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಖೈದಿಗಳ ಗುರುಸಿತುವಿಕೆ ಕಾಯಿದೆ–1920 ರ ನಿಬಂಧನೆಗಳು ಕಡ್ಡಾಯವಲ್ಲ ಬದಲಿಗೆ ನಿರ್ದೇಶಿತವಾಗಿರುತ್ತದೆ ಮತ್ತು ಅವು ಮಾದರಿಯನ್ನು ಸಂಗ್ರಹಿಸಿಕೊಳ್ಳುವಿಕೆಯ ಪ್ರಾಮಾಣಿಕತೆಯನ್ನು ಮಾತ್ರ ದೃಢೀಕರಿಸುತ್ತದೆ (ಆರೋಪಿಯ ಬೆರಳೊತ್ತುಗಳನ್ನು) ಮತ್ತು ಸಾಕ್ಷ್ಯ ತಯಾರಿಕೆಯ ಸಾಧ್ಯತೆಯನ್ನು ನಿರ್ಮೂಲಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ. ಆದಾಗ್ಯೂ, ಈ ಮೊಕದ್ದಮೆಯಲ್ಲಿ ಕಾಯಿದೆಯ ನಿಬಂಧನೆಗಳನ್ನು ಅನುಸರಿಸದಿರುವುದು ಮತ್ತು ಪಾಲಿಸದಿರುವುದು ವಾಸ್ತವವಾಗಿ ಸಾಕ್ಷ್ಯಗಳನ್ನು ದುರ್ಬಲಗೊಳಿಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದರು *ಆಶಿಷ್ ಜೈನ್ ಮತ್ತು ಇತರರು ವಿರುದ್ಧ ಮಕರಂದ್ ಸಿಂಗ್*[38] ಮೊಕದ್ದಮೆಯಲ್ಲಿ ಮತ್ತೊಮ್ಮೆ ದೃಢೀಕರಿಸಲ್ಪಟ್ಟಿರುತ್ತದೆ.

115. ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಾ.ಸಾ.24 ರವರ ಹೇಳಿಕೆಯು ತಮ್ಮ ಸಮ್ಮುಖದಲ್ಲಿ ಪೇದೆ ದಿನೇಶ್‌ರವರು ಬೆರಳೊತ್ತುಗಳನ್ನು ಸಂಗ್ರಹಿಸಿದರು ಎಂಬುದನ್ನು ಪುಷ್ಟೀಕರಿಸುತ್ತದೆ. ಆದ್ದರಿಂದ, ಪೇದೆ ದಿನೇಶ್‌ರವರನ್ನು ವಿಚಾರಣೆಗೆ ಒಳಪಡಿಸದಿರುವುದು ಬೆರಳೊತ್ತಿಗೆ ಸಂಬಂಧಿಸಿದಂತೆ ಅಭಿಯೋಜನೆಯ ವಾದವು ಮಾರಕವಾಗಿರುವುದಿಲ್ಲ. ಅಪರಾಧ ಸ್ಥಳದ

37. (2018) 8 ಎಸ್‌ಸಿಸಿ 24.
38. (2019) 3 ಎಸ್‌ಸಿಸಿ 770.

ಸಮಗ್ರತೆಗೆ ಸಂಬಂಧಿಸಿದಂತೆ, ಪ್ರಾ.ಸಾ.21 ರವರು, ಫ್ಲಾಟ್‌ನ ಬಾಗಿಲು ತೆರೆದಿದ್ದರೂ ಸಹ ಅವರು ಅಲ್ಲಿಗೆ ತಲುಪಿದಾಗ ಪೊಲೀಸರು ಹೊರಗಡೆ ನಿಂತುಕೊಂಡಿದ್ದರು ಮತ್ತು ಅಪರಾಧ ಸ್ಥಳವು ಅಶುದ್ಧವಾಗಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ 19.06.2011 ರ ಸಾಯಂಕಾಲ ತನಿಖೆಯನ್ನು ನಡೆಸಿದಾಗ ಅಪರಾಧ ನಡೆದ ಸ್ಥಳವನ್ನು ಸೀಲು ಮಾಡಿರುವುದಿಲ್ಲ ಎಂದು ಐ.ಓ (ಪ್ರಾ.ಸಾ.31) ರವರು ಒಪ್ಪಿಕೊಂಡಿರುತ್ತಾರೆ; ಆದಾಗ್ಯೂ, ಅವರಿಗಿಂತ ಮೊದಲು ಸ್ಥಳಕ್ಕಾಗಮಿಸಿದ ವಿಧಿವಿಜ್ಞಾನ ವಿಭಾಗದ ಸಿಬ್ಬಂದಿಯು ಸ್ಥಳವನ್ನು ಬಂದೋಬಸ್ತು ಮಾಡಿದ್ದರು ಎಂಬುದನ್ನು ಸ್ಪಷ್ಟಪಡಿಸಿದರು. ಈ ಸ್ಥಿರವಾದ ಸಾಕ್ಷ್ಯವನ್ನು ಗಮನಿಸಿದರೆ, ಸಾರ್ವಜನಿಕರು ಅಥವಾ ಅನಧಿಕೃತ ವ್ಯಕ್ತಿಗಳು ಘಟನೆಯು ವರದಿಯಾದ ಕೂಡಲೇ ಅಪರಾಧದ ಸ್ಥಳವನ್ನು ಅಶುದ್ಧಗೊಳಿಸುವ ಸಾಧ್ಯತೆಯು ದೂರದ ವಿಷಯವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ.

116. ಘಟನಾ ಸ್ಥಳದಲ್ಲಿದ್ದ ಮತ್ತು ಅಜಾಗರೂಕತೆಯಿಂದ ಭೌತಿಕ ಸಾಕ್ಷ್ಯವನ್ನು ಮುಟ್ಟಿರಬಹುದಾದ ಎಲ್ಲಾ ಸಿಬ್ಬಂದಿಗಳಿಂದ ಸಂಗ್ರಹಿಸಲಾದ ಬೆರಳೊತ್ತುಗಳನ್ನು "ನಿರ್ಮೂಲನಾ ಬೆರಳೊತ್ತುಗಳು" ಎಂದು ಕರೆಯಲಾಗುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಮೃತರ ನಿರ್ಮೂಲನಾ ಬೆರಳೊತ್ತುಗಳನ್ನು ದಿನಾಂಕ 20.06.2021 ರಂದು ಸಂಗ್ರಹಿಸಿದ್ದು, ಅವುಗಳು ದಾಖಲೆಯ ಭಾಗವಾಗಿರುತ್ತವೆ. ಈ ದಾಖಲೆಯು ಪ್ರಾ.ಸಾ.3, ಪ್ರಾ.ಸಾ.5 ಮತ್ತು ಪ್ರಾ.ಸಾ.9 ರವರು ಅಪರಾಧ ಸ್ಥಳದಲ್ಲಿ ಉಪಸ್ಥಿತರಿದ್ದರು ಎಂಬುದನ್ನು ತೋರಿಸುತ್ತದೆ ಆದರೆ ಅವರುಗಳ ಬೆರಳೊತ್ತುಗಳನ್ನು ಸಂಗ್ರಹಿಸಲಾಗಿರುವುದಿಲ್ಲ ಎಂದು ಒಪ್ಪಿಕೊಳ್ಳಲಾಗಿದೆ. ಪ್ರಾರಂಭದಲ್ಲಿ ಸಾಕ್ಷಿಗಳನ್ನು ಹೊರಗೆ ಇರಲು ಹೇಳಲಾಯಿತು ಆದರೆ ನಂತರ ಜಪ್ತಿಮಾಡುವುದನ್ನು ಸಾಕ್ಷೀಕರಿಸಲು ಸಾಕ್ಷಿಗಳನ್ನು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಹೇಳಲಾಯಿತು ಎಂಬುದು ಪ್ರಾ.ಸಾ.9 ರ ಸಾಕ್ಷ್ಯದಿಂದ ತೋರಿಸುತ್ತದೆ. ಎಲ್ಲಾ ಮೂವರು ಸಾಕ್ಷಿಗಳು ಬೆರಳೊತ್ತು ತಜ್ಞರು ಸ್ಥಳಕ್ಕೆ ಭೇಟಿ ನೀಡಿದ ಬಗ್ಗೆ ಮತ್ತು ಮೇಲ್ಭಾಗಕ್ಕೆ ಒಂದು ಪುಡಿಯನ್ನು ಬಳಸಿ ಬೆರಳೊತ್ತುಗಳನ್ನು ಸಂಗ್ರಹಿಸಿದ ಬಗ್ಗೆ ಸಮಂಜಸವಾಗಿ ನುಡಿದಿರುತ್ತಾರೆ.

ಪ್ರಾ.ಸಾ.5 ರವರು ತಮ್ಮ ಬೆರಳೊತ್ತುಗಳನ್ನು ಸಂಗ್ರಹಿಸಿರುವುದಿಲ್ಲ ಎಂದು ತಮ್ಮ ಪಾಟೀ–ಸವಾಲಿನಲ್ಲಿ ನುಡಿದಿರುತ್ತಾರೆ. ಸುನಾವಣೆಯ ಸಂದರ್ಭದಲ್ಲಿ, ಅಪೀಲುದಾರರ ಪರ ಮಾನ್ಯ ವಕೀಲರು ಘಟನಾ ಸ್ಥಳದಲ್ಲಿ ಉಪಸ್ಥಿತರಿದ್ದ ಇತರ ವ್ಯಕ್ತಿಗಳ ನಿರ್ಮೂಲನಾ ಬೆರಳೊತ್ತುಗಳನ್ನು ಸಂಗ್ರಹಿಸಿರದ ಅಂಶವನ್ನು ಪದೇ ಪದೇ ಒತ್ತಿ ಹೇಳಿದರು ಮತ್ತು ಆರೋಪಿಗಳಿಂದ ಜಪ್ತಿ ಮಾಡಲಾದ ಚಾಕು, ಪಿಸ್ತೂಲ್ ಮತ್ತು ಆಭರಣಗಳಿಂದ ಬೆರಳೊತ್ತುಗಳನ್ನು ಸಂಗ್ರಹಿಸಿರುವುದಿಲ್ಲ ಎಂಬುದನ್ನು ಸಹ ಎತ್ತಿ ತೋರಿಸಿದರು. ಯಾವುದೇ ವಸ್ತುಗಳು ಈ ಅಂಶದ ಮೇಲೆ ಬೆಳಕನ್ನು ಬೀರುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಅಪೀಲುದಾರರು ಅವಲಂಬಿಸಿದ ಇತ್ತೀಚಿನ ತೀರ್ಪಿನಲ್ಲಿ ಅಂದರೆ *ಹರಿ ಓಂ @ ಹಿರೋ ವಿರುದ್ಧ ಯು.ಪಿ ರಾಜ್ಯ*[39] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಬೆರಳೊತ್ತು ತಜ್ಞರ ಅಭಿಪ್ರಾಯವನ್ನು ಒಪ್ಪಿಕೊಂಡರೂ ಸಹ, ಅಪರಾಧ ನಿರ್ಣಯಕ್ಕೆ ಅದು ಏಕೈಕ ಆಧಾರವಾಗಿರಲು ಸಾಧ್ಯವಿಲ್ಲ ಎಂಬ ಆಧಾರದ ಮೇಲ ಆರೋಪಿಯನ್ನು ಖುಲಸೆಗೊಳಿಸಿರುತ್ತದೆ. ಅಪರಾಧ ಸ್ಥಳವನ್ನು ಭದ್ರಪಡಿಸಲಾಗಿತ್ತೇ ಮತ್ತು ಬೆರಳೊತ್ತು ಸಂಗ್ರಹಿಸುವುದನ್ನು ಸಾಕ್ಷೀಕರಿಸಲಾಗಿದೆಯೇ ಎಂಬುದು ಪ್ರಮುಖವಾಗಿರುತ್ತದೆ. ಈ ಎರಡೂ ಅಂಶದ ಪರಿಗಣನೆಯಲ್ಲಿ, ಅಭಿಯೋಜನೆಯ ಸಾಕ್ಷ್ಯವು ವಿಶ್ವಾಸಾರ್ಹವಾಗಿರುತ್ತದೆ ಮತ್ತು ಸಮ್ಮತಿಗೆ ಯೋಗ್ಯವಾಗಿರುತ್ತದೆ. ಪ್ರಾ.ಸಾ.21–ಹಿರಿಯ ವೈಜ್ಞಾನಿಕ ಅಧಿಕಾರಿಯ ಸಾಕ್ಷ್ಯ ಮತ್ತು ಅವರು ದಿನಾಂಕ 20.06.2021 ರಂದು ಒದಗಿಸಿದ ಅಪರಾಧ ವರದಿಯು (ನಿ.ಪಿ.77) ಈ ಎಲ್ಲಾ ಅಂಶಗಳನ್ನು ಪುಷ್ಟೀಕರಿಸುತ್ತದೆ.

117. ಬೆರಳೊತ್ತು ಸಾಕ್ಷ್ಯಕ್ಕೆ ಸಂಬಂಧಿಸಿದ ಮತ್ತೊಂದು ಅಂಶವೆಂದರೆ, ಬೆರಳೊತ್ತು ವರದಿಯನ್ನು (ನಿ.ಪಿ.84) ದಿನಾಂಕ 11.07.2011 ರಂದು ಸಿದ್ದಪಡಿಸಲಾಯಿತು ಎಂಬುದಾಗಿದೆ. ನಿ.ಪಿ.85 ರಿಂದ ನಿ.ಪಿ.92 ಬೆರಳೊತ್ತನ್ನು ಸಂಗ್ರಹಿಸಿದ ಛಾಯಾಚಿತ್ರಗಳಾಗಿರುತ್ತದೆ (ಬೆರಳೊತ್ತು ವರದಿ ನಿ.ಪಿ.84 ಕ್ಕೆ ಇವುಗಳನ್ನು ಸೇರಿಸಲಾಗಿರುತ್ತದೆ). ಒಂದು ಪತ್ರದೊಂದಿಗೆ (ನಿ.ಪಿ.93)

39. (2021) 4 ಎಸ್‌ಸಿಸಿ 345

ಬೆರಳೊತ್ತು ವರದಿಯನ್ನು ಲಗತ್ತಿಸಲಾಗಿದೆ. ತಜ್ಞರು ಬೆರಳೊತ್ತುಗಳನ್ನು ಸಂಗ್ರಹಿಸಿದ ಬಗ್ಗೆ ನುಡಿದಿದ್ದು, ಐ.ಓ ರವರ ಸಾಕ್ಷ್ಯವನ್ನು ಹೊರತುಪಡಿಸಿ, ಮೂವರು ಸಾಕ್ಷಿಗಳು (ಪ್ರಾ.ಸಾ.3, ಪ್ರಾ.ಸಾ. 5 ಮತ್ತು ಪ್ರಾ.ಸಾ.9) ಅದನ್ನು ಪುಷ್ಟೀಕರಿಸುತ್ತದೆ, ಮತ್ತು ಈ ಸನ್ನಿವೇಶದ ವಿಶ್ವಾಸಾರ್ಹತೆ ಅಂದರೆ ಅಪರಾಧ ಸ್ಥಳದಿಂದ ಬೆರಳೊತ್ತುಗಳನ್ನು ಸಂಗ್ರಹಿಸಿದ್ದು ಮತ್ತು ಆರೋಪಿಗಳ ಮಾದರಿ ಬೆರಳೊತ್ತುಗಳೊಂದಿಗೆ ಅವುಗಳನ್ನು ಹೋಲಿಕೆ ಮಾಡಿರುವುದು ಮತ್ತು ತಜ್ಞರ ಸಾಕ್ಷ್ಯವು ಸಾಬೀತಾಗಿರುತ್ತದೆ. ವರದಿಯಲ್ಲಿನ ವಿಳಂಬ, ಬೆರಳೊತ್ತುಗಳು ಆಕಸ್ಮಿಕ ಬೆರಳೊತ್ತುಗಳಾಗಿರುವುದು, ನಿರ್ಮೂಲನಾ ಬೆರಳೊತ್ತುಗಳ ಕೊರತೆ ಅಥವಾ ಅಪರಾಧ ಸ್ಥಳವನ್ನು ಭದ್ರಗೊಳಿಸಿರುವುದಾಗಿ ತೋರಿಸದಿರುವುದು ಇತ್ಯಾದಿಗಳ ಮೇಲೆ ಆಧಾರವಾದ ಈ ಭಾಗದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಅಪೀಲುದಾರರ ವಾದಗಳು, ಹುರುಳಿಲ್ಲದ ಅಂಶಗಳಾಗಿದ್ದು, ಅವುಗಳನ್ನು ತಳ್ಳಿಹಾಕಲಾಗಿರುತ್ತದೆ.

IX. ಮೃತರ ಮೇಲಿನ ಗಾಯಗಳಿಗೆ ಸಂಬಂಧಿಸಿದ ಸನ್ನಿವೇಶಗಳು:

118. ಮೃತರ ಮೈಮೇಲಿನ ಗಾಯಗಳ ಪ್ರಮಾಣವನ್ನು ಮರಣೊತ್ತರ ಪರೀಕ್ಷೆಯ ವರದಿಯು (ನಿ.ಪಿ.44) ಸೂಚಿಸುತ್ತದೆ. ಮೇಘಾರವರಿಗೆ (46 ವರ್ಷ) ಹಣೆಯ ಮೇಲೆ ಬಂದೂಕಿನ ಗಾಯ ಮತ್ತು 4 ಆಳವಾದ ಇರಿತದ ಗಾಯಗಳು (ಹೊಟ್ಟೆ, ಭುಜ ಮತ್ತು ಎದೆ) ಆಗಿದ್ದವು. ರೋಹಿಣಿಯವರಿಗೆ (76 ವರ್ಷ) ಆಕೆಯ ದೇಹದಾದ್ಯಂತ ಅಂದರೆ ಬೆರಳುಗಳು ಮತ್ತು ಕೈಗಳು, ತೋಳುಗಳ ಮೇಲೆ ಇರಿತದ ಗಾಯ, ಹೊಟ್ಟೆಯ ಮೇಲೆ ಮತ್ತು ಎದೆಯ ಮೇಲೆ ಹಲವಾರು ಗಾಯಗಳಾಗಿದ್ದು, ಅದು ಆಕೆಯ ಪ್ರಮುಖ ಅಂಗಗಳನ್ನು ಇರಿದಿದ್ದವು. ಅಂತೆಯೇ ಆಶ್ಲೇಷಾರವರ (22 ವರ್ಷ) ದೇಹಾದಾದ್ಯಂತ ಹಲವಾರು ಇರಿತದ ಗಾಯಗಳಾಗಿದ್ದವು ಅಂದರೆ ಆಕೆಯ ಬೆರಳುಗಳು, ಕೈಗಳು ಮತ್ತು ಮುಂದೋಳುಗಳು, ಸೊಂಟ, ಕುತ್ತಿಗೆ, ಹೊಟ್ಟೆ ಮತ್ತು ಎದೆಯಲ್ಲಿ ಗಾಯಗಳಾಗಿದ್ದು ಅದು ಆಕೆಯ ಪ್ರಮುಖ ಅಂಗಗಳನ್ನು ಇರಿದಿದ್ದವು ಮತ್ತು ಆಕೆಯ ತೊಡೆಯ ಮೇಲೆ ಮೇಲ್ನೋಟಕ್ಕೆ ಕಾಣುವಂತ ಅನೇಕ ಗಾಯಗಳಾಗಿದ್ದವು.

119. ಪ್ರಾ.ಸಾ.15–ಡಾ. ಠಾಕೊರ್‌ರವರ (ಮರಣೊತ್ತರ ಪರೀಕ್ಷೆ ನಡೆಸಿದ ವೈದ್ಯರು) ಪ್ರಕಾರ, ಮೇಘಾರವರ ಸಾವು ಬಂದೂಕು ಗಾಯಗಳು ಮತ್ತು ರಕ್ತಸ್ರಾವದಿಂದ ಉಂಟಾದ ಆಘಾತದಿಂದ ಸಂಭವಿಸಿರುತ್ತದೆ ಎಂಬುದು ತಜ್ಞರ ಅಭಿಪ್ರಾಯವಾಗಿರುತ್ತದೆ. ರೋಹಿಣಿ ಮತ್ತು ಆಶ್ಲೇಷ ಅವರ ಸಾವು, ಹಲವಾರು ಇರಿತದ ಗಾಯಗಳಿಂದ ಮತ್ತು ರಕ್ತಸ್ರಾವದಿಂದ ಉಂಟಾದ ಆಘಾತದಿಂದ ಸಂಭವಿಸಿರುತ್ತದೆ. ಈ ಎಲ್ಲಾ ಮೂರು ಸಾವುಗಳು ನರಹತ್ಯೆಯ ಸ್ವರೂಪದ್ದಾಗಿರುತ್ತವೆ. ಬಂದೂಕಿನಿಂದ ಆದ ಗಾಯವನ್ನು ಹೊರತುಪಡಿಸಿ (ಮೇಘಾರ ಮೈಮೇಲಿದ್ದ ಗಾಯ ಸಂಖ್ಯೆ–1), ಎಲ್ಲಾ ಮೂವರು ಮೃತರ ಮೇಲೆ ಆದಂತಹ ಗಾಯಗಳು, ರಾಹುಲ್ ಮತ್ತು ಮನೋಜ್‌ರವರಿಂದ ಕ್ರಮವಾಗಿ ಜಪ್ತಿಪಡಿಸಿಕೊಂಡ (ವಸ್ತು ಎ ಮತ್ತು ಬಿ ನಿ.ಪಿ.47ರ ತನಿಖೆಯ ಅಡಿಯಲ್ಲಿ ಅವರ ಅಭಿಪ್ರಾಯ ಪಡೆಯಲು ಕಳುಹಿಸಲಾಗಿದೆ) ಎರಡು ಚಾಕುಗಳಿಂದ ಸಂಭವಿಸಿರುತ್ತದೆ ಎಂಬುದನ್ನು ಈ ಸಾಕ್ಷಿಯು, ತಮ್ಮ ಅಭಿಪ್ರಾಯದಿಂದ ಮತ್ತು ಸಾಕ್ಷ್ಯದಿಂದ, ದೃಢೀಕರಿಸಿರುತ್ತಾರೆ.

X. ಬ್ಯಾಲಿಸ್ಟಿಕ್ ವರದಿ:

ಎ. ಅಪರಾಧ ಸ್ಥಳದಿಂದ ಮತ್ತು ಮೃತ ಮೇಘಾರಿಂದ ವಶಪಡಿಸಿಕೊಂಡ ಗುಂಡುಗಳು:

120. ದಿನಾಂಕ 19.06.2011 ರಂದು ಅಪರಾಧ ಸ್ಥಳದಿಂದ ಐ.ಓ ರವರು (ಪ್ರಾ.ಸಾ.31) 3 ಕಾರ್ಟ್ರಿಡ್ಜ್‌ಗಳನ್ನು (ಒಂದು ಜೀವಂತ, ಮತ್ತು ಎರಡು ಶೆಲ್ಲಗಳನ್ನು) ಜಪ್ತಿಪಡಿಸಿಕೊಂಡರು. ಅವರು ಸ್ಥಳದ ನಕ್ಷೆ (ನಿ.ಪಿ.25 ಮತ್ತು ನಿ.ಪಿ.26) ಮತ್ತು ಪ್ರಾ.ಸಾ.5 (ಮಾಲೀಕ ವಿಶಾಲ್ ಪಾಂಡೆ) ಮತ್ತು ಪ್ರಾ.ಸಾ.9 ರಿಂದ (ಒಬ್ಬ ಮಹೇಶ್ ಪಾರ್ಮರ್, ಮಾಹಿತಿದಾರ ವಿಶಾಲ್ ಪಾಂಡೆಯವರ, ನೆರೆಯವರು) ಸಾಕ್ಷೀಕರಿಸಿದ ವಸ್ತುಗಳನ್ನು ವಶಪಡಿಸಿಕೊಳ್ಳುವ ಮೊಮವನ್ನು (ನಿ.ಪಿ.27) ಸಿದ್ಧಪಡಿಸಿದರು. ಪ್ರಾ.ಸಾ.5 ರಿಂದ ಸಾಕ್ಷೀಕರಿಸಿದ ಸ್ಥಳದ ನಕ್ಷೆಯನ್ನು ಸಿದ್ಧಪಡಿಸಿದ ಬಗ್ಗೆ ಐ.ಓ ರವರು ನುಡಿದಿರುತ್ತಾರೆ ಮತ್ತು ಒಂದು ಖಾಲಿ ಮತ್ತು ಬಳಸದ ಕಾರ್ಟ್ರಿಡ್ಜ್ (ಆಶ್ಲೇಷಾ ಅವರ ದೇಹದ ಬಳಿ ನೆಲದ ಮೇಲೆ ಬಿದ್ದಿರುವ), ಒಂದು ಖಾಲಿ, ಬಳಸದ ಕಾರ್ಟ್ರಿಡ್ಜ್‌ಯನ್ನು ಹಾಸಿಗೆಯ ಬಳಿಯಿಂದ ಮತ್ತು ಒಂದು ಬಳಸದ ಜೀವಂತ

ಕಾರ್ಟ್ರಿಡ್ಜ್‌ಯನ್ನು ರೋಹಿಣಿಯವರ ದೇಹದ (ತಲೆ) ಬಳಿಯಿಂದ ಜಪ್ತಿಪಡಿಸಿಕೊಳ್ಳಲಾಯಿತು ಎಂದು ಐ.ಓ ರವರು ನುಡಿದಿರುತ್ತಾರೆ. ಎಲ್ಲಾ ಕಾರ್ಟ್ರಿಡ್ಜ್‌ಗಳ ಮೇಲೆ 'ಕೆ.ಎಫ್.7.65' ಎಂದು ಬರೆಯಲಾಗಿತ್ತು ಎಂದೂ ಸಹ ನುಡಿದಿರುತ್ತಾರೆ. ಸ್ಥಳದ ನಕ್ಷೆಯು ತಮ್ಮ ಸಮ್ಮುಖದಲ್ಲಿ ಸಿದ್ಧಪಡಿಸಲಾಯಿತು ಮತ್ತು ಎರಡು ಕಾರ್ಟ್ರಿಡ್ಜ್‌ಗಳು ಸಿಕ್ಕ ಸ್ಥಳದ ಬಗ್ಗೆ ಅಂದರೆ ಹಾಸಿಗೆಯ ಅಡಿಯಲ್ಲಿ ಮತ್ತು ರೋಹಿಣಿಯ ದೇಹದ ಬಳಿಯಲ್ಲಿ ಸಿಕ್ಕ ಬಗ್ಗೆ ಪ್ರಾ.ಸಾ.5 ನುಡಿದಿರುತ್ತಾರೆ. ಆದಾಗ್ಯೂ, ಅಪೀಲುದಾರರು ಗುಂಡುಗಳ ಸಂಖ್ಯೆ ಅಂದರೆ ಮೂರನೇ ಗುಂಡನ್ನು ಜಪ್ತಿಪಡಿಸಿಕೊಂಡ ಬಗ್ಗೆ ಪ್ರಾ.ಸಾ.5 ರವರನ್ನು ಪಾಟೀ–ಸವಾಲುಗೊಳಿಸಿರುವುದಿಲ್ಲ. ಪ್ರಾ.ಸಾ.9 ಸಹ ಇದೇ ಮಾದರಿಯಲ್ಲಿ ನುಡಿದಿರುತ್ತಾರೆ.

121. ದಿನಾಂಕ 20.06.2011 ರಂದು ಪ್ರಾ.ಸಾ.33–ಎಸ್.ಎಸ್. ಕುಜುರ್‌ರವರು ಒಂದು ಮುಚ್ಚಳಿಕೆ ಪತ್ರದೊಂದಿಗೆ ಮೇಘಾರ ಮೃತದೇಹವನ್ನು ಬೆಳಗ್ಗೆ ಸುಮಾರು 11.00 ಗಂಟೆಗೆ ತಂದಿದ್ದು, ಮರಣೋತ್ತರ ಪರೀಕ್ಷೆಯು ಬೆಳಗ್ಗೆ ಸುಮಾರು 11.45 ಗಂಟೆಗೆ ಪ್ರಾರಂಭ ಮಾಡಿರುವುದಾಗಿ ಪ್ರಾ.ಸಾ.15 (ಮರಣೋತ್ತರ ಪರೀಕ್ಷೆಯನ್ನು ನಡೆಸಿದ ವೈದ್ಯರು) ನುಡಿದಿರುತ್ತಾರೆ. ಮರಣೊತ್ತರ ಪರೀಕ್ಷೆಯನ್ನು ಡಾ. ಪ್ರಶಾಂತ್ ರಜಪೂತ್ ಮತ್ತು ಡಾ.ಎನ್. ಫಡ್ಸೆ (ಇಬ್ಬರನ್ನೂ ಸಹ ವಿಚಾರಣೆಗೆ ಒಳಪಡಿಸಿರುವುದಿಲ್ಲ) ಅವರೊಂದಿಗೆ ನಡೆಸಲಾಗಿರುತ್ತದೆ. ಮೃತ ಮೇಘಾರವರ ಮೃತದೇಹದ ಮರಣೊತ್ತರ ಪರೀಕ್ಷೆ ನಡೆಸಿದಾಗ, ಒಂದು ಗುಂಡನ್ನು ವಶಪಡಿಸಿಕೊಳ್ಳಲಾಯಿತು. ಗುಂಡನ್ನು ಹೊರತೆಗೆದಿದ್ದನ್ನು ಗಾಯ ಸಂಖ್ಯೆ.1 ಎಂದು ವಿವರಿಸಲಾಗಿದೆ ಮತ್ತು ಕಪಾಲ ಮುಂಭಾಗದಿಂದ ಆ ಗುಂಡನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಎಲ್ಲಾ ವಸ್ತುಗಳನ್ನು ಮೊಹರು ಮಾಡಿ, ಚೀಟಿ ಅಂಟಿಸಿ, ಪ್ರಾ.ಸಾ.33 ರಿಗೆ ಹಸ್ತಾಂತರಿಸಲಾಯಿತು ಎಂದು ಪ್ರಾ.ಸಾ.15 ನುಡಿದಿರುತ್ತಾರೆ. ಪ್ರಾ.ಸಾ.33 ರವರು ಮರಣೋತ್ತರ ಪರೀಕ್ಷೆಯ ವರದಿಯನ್ನು (ನಿ.ಪಿ.44) ಸಿದ್ಧಪಡಿಸಿ, ಐಮ್.ವೈ ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋದರು ಮತ್ತು ಒಂದು ಜಪ್ತಿ ಮೆಮೊವನ್ನು (ನಿ.ಪಿ.127) ಪ್ರಾ.ಸಾ.34–ಮಹೇಶ್ ಪ್ರಸಾದ್ ಯಾದವ್‌ರಿಂದ

ಸಿದ್ದಪಡಿಸಲಾಯಿತು. ಮುಖ್ಯ ಪೇದೆ ಶಂಭುನಾಥ್ ಮತ್ತು ಪೇದೆ ರಾಮ್‌ಜನ್‌ರವರು ಜಪ್ತಿ ವರದಿಯನ್ನು ಸಾಕ್ಷೀಕರಿಸಿರುತ್ತಾರೆ, ಆದರೆ ಅವರಿಬ್ಬರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ ಅವರಿಗೆ ಸಂಬಂಧಿಸಿದ ಮತ್ತು ಅವರ ಒಳಗೊಳ್ಳುವಿಕೆಗೆ ಸಂಬಂಧಿಸಿದ ಸಂಗತಿಗಳನ್ನು ಪ್ರಾ.ಸಾ.33ರ ಹೇಳಿಕೆ ಪುಷ್ಟೀಕರಿಸುತ್ತದೆ.

122. ಮುಂದುವರಿದು, ದೇಹದ ಸಂಪರ್ಕದಿಂದ ಆಯುಧವು ಗುಂಡು ಹಾರಿಸಿದ್ದು, ಮೇಘಾರವರಿಗೆ ಯಾವ ಆಯುಧವು ಗಾಯಗಳನ್ನು ಉಂಟುಮಾಡಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಪ್ರಾ.ಸಾ.15 ತಮ್ಮ ಪಾಟೀ–ಸವಾಲಿನಲ್ಲಿ ಹೇಳಿರುತ್ತಾರೆ. ಯಾವುದೇ ಮಾದರಿಯ ಮೊಹರನ್ನು ಅವರು ವೈದ್ಯರಿಂದ ಪಡೆಯಲಿಲ್ಲ ಮತ್ತು ಸದರಿ ವಸ್ತುಗಳನ್ನು ಸ್ವೀಕರಿಸಿದ್ದಕ್ಕೆ ವೈದ್ಯರಿಗೆ ಯಾವುದೇ ರಶೀದಿಯನ್ನು ನೀಡಿರುವುದಿಲ್ಲ ಎಂದು ಪ್ರಾ.ಸಾ.33ರವರು ತಮ್ಮ ಪಾಟೀ–ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಮುಂದುವರಿದು, ದಿನಾಂಕ 19.06.2011 ರಂದು ಮೃತ ದೇಹಗಳನ್ನು ಪೊಲೀಸ್ ವಾಹನದಲ್ಲಿ ಸಾಯಂಕಾಲ 6.00 ಗಂಟೆಯ ನಂತರ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು ಎಂದು ಹೇಳಿದ್ದಾರೆ. ಶವಾಗಾರವನ್ನು ಬೀಗಹಾಕಿದ ನಂತರ (ರಾತ್ರಿಯಾಗಿದ್ದರಿಂದ) ಬೀಗವನ್ನು ಆಸ್ಪತ್ರೆಯಲ್ಲಿ ಬಿಟ್ಟು ಮನೆಗೆ ಹೋಗಿರುವುದಾಗಿ ನುಡಿದಿರುತ್ತಾರೆ. ಪ್ರಾ.ಸಾ.33 ರವರು ವಸ್ತುಗಳನ್ನು ಹಾಜರುಪಡಿಸಿದ ಮೇಲೆ, ಪ್ರಾ.ಸಾ.34–ಮಹೇಶ್ ಪ್ರಸಾದ್ ಯಾದವ್‌ರವರು ದಿನಾಂಕ 20.06.2011 ರಂದು ಜಪ್ತಿ ಮೆಮೊವನ್ನು (ನಿ.ಪಿ.127) ಸಿದ್ಧಪಡಿಸಿದ ಬಗ್ಗೆ ನುಡಿದಿರುತ್ತಾರೆ ಮತ್ತು ಆಸ್ಪತ್ರೆಗೆ ಜಪ್ತಿ ಮೆಮೊದ ಒಂದು ಪ್ರತಿಯನ್ನು ಕಳುಹಿಸದಿರುವ ಬಗ್ಗೆ, ಜಪ್ತಿಪಡಿಸಿಕೊಂಡ ವಸ್ತುಗಳ ವಿವರಣೆ ಬಗ್ಗೆ ಕಾಲಂ ಸಂಖ್ಯೆ. 10 ನ್ನು ತುಂಬದಿರುವ ಬಗ್ಗೆ, ಮಾದರಿ ಮೊಹರನ್ನು ಗುರುತು ಮಾಡದ ಬಗ್ಗೆ ಮತ್ತು ಜಪ್ತಿ ಮೆಮೊದಲ್ಲಿ ಉಲ್ಲೇಖಿಸಲಾದ ವಸ್ತುಗಳಲ್ಲಿ ಅದರ ಸಂಖ್ಯೆಯನ್ನು ಗುರುತು ಮಾಡದ ಬಗ್ಗೆ ಪ್ರಾ.ಸಾ.33 ರವರು ತಮ್ಮ ಪಾಟೀ–ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಮುಂದುವರಿದು, ಪ್ಯಾಕೆಟ್‌ನ ಒಳಗಡೆ ಏನಿದೆ ಎಂದು ನೋಡಲು ಅವರು ಅದನ್ನು ತೆರೆದಿರುವುದಿಲ್ಲ ಮತ್ತು ಮರಣೋತ್ತರ ಪರೀಕ್ಷೆಯ ವರದಿಯನ್ನು ಸ್ವತಃ

ಸ್ವೀಕರಿಸಿರುವುದಿಲ್ಲ, ಆದರೆ ವಸ್ತುಗಳನ್ನು ಜಪ್ತಿಪಡಿಸಿಕೊಂಡ ಬಗ್ಗೆ ಕೇವಲ ಪೊಲೀಸ್ ಡೈರಿಯಲ್ಲಿ ನಮೂದು ಮಾಡಿದ್ದಾಗಿ ನುಡಿದಿರುತ್ತಾರೆ. ಪ್ರಾ.ಸಾ.15, ಪ್ರಾ.ಸಾ.33 ಮತ್ತು ಪ್ರಾ.ಸಾ.34 ರ ಸಾಕ್ಷ್ಯಗಳ ಜಂಟಿ ಅಧ್ಯಯನವು, ವೈದ್ಯರಿಂದ (ಪ್ರಾ.ಸಾ.15) ಗುಂಡನ್ನು ಹೊರತೆಗೆಯಲಾಯಿತು ಮತ್ತು ಅದಕ್ಕೆ ಸಂಬಂಧಿಸಿದಂತೆ ಒಂದು ಜಪ್ತಿ ಮೆಮೊವನ್ನು ಸಿದ್ಧಪಡಿಸಲಾಯಿತು ಮತ್ತು ಜಪ್ತಾದ ವಸ್ತುಗಳನ್ನು ನಂತರ ಮೊಹರು ಮಾಡಲಾಯಿತು (ಮೊಹರಿನಲ್ಲಿ ಯಾವುದೇ ಗುರುತು ಹಾಕದಿದ್ದರೂ) ಎಂಬುದನ್ನು ರುಜುವಾತುಪಡಿಸುತ್ತದೆ.

ಬಿ) ರಾಹುಲ್‌ರಿಂದ ಗುಂಡನ್ನು ವಶಪಡಿಸಿಕೊಳ್ಳುವುದು ಮತ್ತು ಅದಕ್ಕೆ ಸಂಬಂಧಿಸಿದ ಸಂಗತಿಗಳು:

123. ಅಪರಾಧ ಸ್ಥಳದಿಂದ ಕಾಟ್ರಿಡ್ಜ್‌ಗಳನ್ನು ವಶಪಡಿಸಿಕೊಂಡದಕ್ಕೆ ಸಾಮ್ಯವಾಗಿ, ಘಟನೆಯ ಸಂದರ್ಭದಲ್ಲಿ ಆರೋಪಿ ರಾಹುಲ್ ಗುಂಡಿನಿಂದ ಗಾಯಗೊಂಡನು ಎಂಬುದು ಅಭಿಯೋಜನೆಯ ಆವೃತ್ತಿಯಾಗಿರುತ್ತದೆ. ರಾಹುಲ್‌ರವರು ಅನ್ನಪೂರ್ಣ ಪೊಲೀಸ್ ಠಾಣೆಗೆ ತೆರಳಿ ಗುಂಡು ಹಾರಿದ ಬಗ್ಗೆ ಸುಳ್ಳು ಮೊಕದ್ದಮೆಯನ್ನು ದಾಖಲಿಸಿದ್ದಾರೆ ಎಂದು ಅಭಿಯೋಜನೆಯು ಆರೋಪಿಸಿದೆ. ಈ ಬಗ್ಗೆ, ಪ್ರಾ.ಸಾ.30–ಆರ್.ಎಸ್. ಮಕ್ವಾನ್ (ಅನ್ನಪೂರ್ಣ ಪಿ.ಎಸ್.ನ ಎ.ಎಸ್.ಐ) ರವರು ದಿನಾಂಕ 19.06.2011 ರಂದು ರಾಹುಲ್ @ ಗೋವಿಂದ್‌ರವರು ತಮ್ಮ ಕಾಲಿಗೆ ಯಾರೋ ಗುಂಡು ಹಾರಿಸಿದ್ದಾಗಿ ಆರೋಪಿಸಿ ಪೊಲೀಸ್ ಠಾಣೆಗೆ ಬಂದು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಹೋಗುತ್ತಿರುವುದಾಗಿ ಹೇಳಿ ಆಟೋರಿಕ್ಷಾದಲ್ಲಿ ಹೋಗಿರುವುದನ್ನು ನೋಡಿರುವುದಾಗಿ ನುಡಿದಿರುತ್ತಾರೆ. ಅವರು ಪ್ರಾ.ಸಾ.29–ಗೌರಿ ಶಂಕರ್ ಚಾದರ್‌ಗೆ ಮಾಹಿತಿಯನ್ನು ನೀಡಿದರು. ಪ್ರಾ.ಸಾ.30 ರವರು ಪೇದೆ ದಿನೇಶ್‌ರೊಂದಿಗೆ (ವಿಚಾರಣೆಗೆ ಒಳಪಡದ) ಜಿಲ್ಲಾ ಆಸ್ಪತ್ರೆಗೆ ಹೋದರು. ಒಂದು ಪ್ರಥಮ ಮಾಹಿತಿಯನ್ನು (ನಿ.ಪಿ.103) ತಯಾರಿಸಲಾಯಿತು. ನಂತರ, ಪ್ರಾ.ಸಾ.30 ರವರು ಎಫ್.ಐ.ಆರ್ (ನಿ.ಪಿ.107) ದಾಖಲಿಸಲು ಪೊಲೀಸ್ ಠಾಣೆಗೆ ಹಿಂದಿರುಗಿರುತ್ತಾರೆ. ಪ್ರಾ.ಸಾ.26–ಡಾ.ಮುಖೇಶ್ ಬಚಾವತ್ ರವರು (ಜಿಲ್ಲಾ ಆಸ್ಪತ್ರೆಯಲ್ಲಿನ ವೈದ್ಯಾಧಿಕಾರಿ) ರಾಹುಲ್‌ರವರನ್ನು ಸುಮಾರು 22.40 ಗಂಟೆಗೆ

ಪರೀಕ್ಷಿಸಿರುತ್ತಾರೆ ಮತ್ತು ರಾಹುಲ್‌ರವರನ್ನು ಎಮ್.ವೈ. ಆಸ್ಪತ್ರೆಗೆ ಹೋಗಲು ಹೇಳುವ ಮೊದಲು ವೈದ್ಯಕೀಯ ವರದಿಯನ್ನು (ನಿ.ಪಿ.97) ಸಿದ್ಧಪಡಿಸಿರುತ್ತಾರೆ. ಪೇದೆ ದಿನೇಶ್‌ರವರು ರಾಹುಲ್‌ರವರ ಜೊತೆ ಅವರ ಚಿಕಿತ್ಸೆಗಾಗಿ ಎಮ್.ವೈ. ಆಸ್ಪತ್ರೆಗೆ ಹೋದರು. ದಿನಾಂಕ 20.06.2011 ರ ಮುಂಜಾನೆ ಪ್ರಾ.ಸಾ.32–ಡಾ. ನಿಲೇಶ್ ಗುರುರವರು ರಾಹುಲ್‌ರವರನ್ನು ಪರೀಕ್ಷಿಸಿದರು ಮತ್ತು ಅವರ ಬಲಗಾಲಿನಿಂದ ಗುಂಡನ್ನು ಹೊರತೆಗೆದರು. ಅದನ್ನು ಆಸ್ಪತ್ರೆಯ ಎಮ್.ಎಲ್.ಸಿ ವಿಭಾಗದಲ್ಲಿ ಇಡಲಾಯಿತು (ನಿ.ಪಿ.113). ದಿನಾಂಕ 23.06.2011 ರಂದು ಮೊಹರಾದ ಪ್ಯಾಕೆಟನ್ನು ಎಮ್.ವೈ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದು, ಅದರಲ್ಲಿ ರಾಹುಲ್ @ ಗೋವಿಂದ್‌ರವರ ಪಾದದಿಂದ ಗುಂಡನ್ನು ಹೊರತೆಗೆದಿರುವುದು ಇರುತ್ತದೆ ಎಂದು ಪ್ರಾ.ಸಾ.30 ರವರು ನುಡಿದಿರುತ್ತಾರೆ. ಶಿವರಾಜ್ ಸಿಂಗ್ ರಘುವಂಶಿಯವರು (ವಿಚಾರಣೆಗೆ ಒಳಗಾಗದ) ನಿ.ಪಿ.108 (ಅಸ್ತು ಝಡ್–7) ಎಂದು ಗುರುತಿಸಲಾದ ಜಪ್ತಿ ಮೆಮೊವನ್ನು ಸಿದ್ಧಪಡಿಸಿರುತ್ತಾರೆ ಮತ್ತು ಇದನ್ನು ಪ್ರಾ.ಸಾ.22 ಸಾಕ್ಷೀಕರಿಸಿದ್ದಾರೆ. ಗುಂಡಿನ ಸ್ಥಿತಿ, ಅದರಲ್ಲಿ ರಕ್ತದ ಕಲೆಗಳಿದ್ದವೆ ಇತ್ಯಾದಿಗಳ ಬಗ್ಗೆ ಪ್ರಾ.ಸಾ.30 ರನ್ನು ಪಾಟೀ–ಸವಾಲಿನಲ್ಲಿ ಪ್ರಶ್ನಿಸಲಾಗಿರುತ್ತದೆ.

124. ವಾಸ್ತವವಾಗಿ ರಾಹುಲ್‌ರವರ ಬಲಗಾಲಿನಿಂದ ಗುಂಡನ್ನು ಹೊರತೆಗೆಯಲಾಯಿತು ಮತ್ತು ಅದನ್ನು ಬ್ಯಾಲಿಸ್ಟಿಕ್ ತಜ್ಞರಿಗೆ ಕಳುಹಿಸಲಾಯಿತು ಎಂಬ ಅಂಶವನ್ನು ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂದು ಅಪೀಲುದಾರರು ಪ್ರಬಲವಾಗಿ ವಾದ ಮಂಡಿಸಿದ್ದಾರೆ. ಪ್ರಾ.ಸಾ.26 ಮತ್ತು ಪ್ರಾ.ಸಾ.30 ರವರು ಪರೀಕ್ಷೆ ಮಾಡಿದ ಹುಡುಗ ರಾಹುಲ್ ಅಲ್ಲ ಎಂಬುದು ಅವರ ವಾದವಾಗಿದೆ. ಆದಾಗ್ಯೂ, ಆ ನಿಟ್ಟಿನಲ್ಲಿ ಯಾವುದೇ ಸಂದೇಹವಿರುವುದಿಲ್ಲ ಏಕೆಂದರೆ *ಪ್ರಥಮ ಮಾಹಿತಿಯನ್ನು* ದಾಖಲು ಮಾಡಿದ ಪ್ರಾ.ಸಾ.29–ಜಿ.ಎಸ್. ಚಂದರ್‌ರವರು ರಾಹುಲ್‌ರನ್ನು ನ್ಯಾಯಾಲಯದಲ್ಲಿ ಗೋವಿಂದ್ ಎಂದು ಗುರುತು ಹಿಡಿದಿದ್ದು, ಅವರ ಪಾದಕ್ಕೆ ಅಪರಿಚಿತ ವ್ಯಕ್ತಿಯಿಂದ ಗುಂಡು ಹಾರಿಸಲಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ ಮತ್ತು ವಿಷಯವನ್ನು ಅನ್ನಪೂರ್ಣ ಪಿ.ಎಸ್.ಗೆ ವರದಿ ಮಾಡಿರುತ್ತಾರೆ.

ಇದಲ್ಲದೆ, *ಪ್ರಥಮ ಮಾಹಿತಿಯ* (ನಿ.ಪಿ.103) ಮೇಲಿರುವ ಪಿರ್ಯಾದಿಯ ಸಹಿ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಿರುವ ಅಪೀಲುದಾರ ರಾಹುಲ್‌ರವರ ಸಹಿ ಒಂದೇ ಆಗಿರುತ್ತದೆ. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಗುಂಡನ್ನು ಜಪ್ತಿ ಮಾಡಿಕೊಂಡ ವಿಧಾನಕ್ಕೆ ಸಂಬಂಧಿಸಿದಂತೆ ಎತ್ತಲಾದ ಸಂಶಯವು ಮಹತ್ವದಲ್ಲ. ಗುಂಡನ್ನು ಹೊರತೆಗೆದ ವೈದ್ಯರು ಮೊದಲಿಗೆ ಅದನ್ನು ಸುರಕ್ಷಿತವಾಗಿ ಇಡಲು ಅದನ್ನು ಆಸ್ಪತ್ರೆಯ ಎಮ್.ಎಲ್.ಸಿ ವಿಭಾಗದಲ್ಲಿ ಇರಿಸಿದರು ಮತ್ತು ನಂತರ ಅದನ್ನು ದಿನಾಂಕ 23.06.2011 ರಂದು ಪ್ರಾ.ಸಾ.30 ರವರು ಹಿಂಪಡೆದರು ಮತ್ತು ಎಮ್.ಐ.ಜಿ ಪೊಲೀಸ್ ಠಾಣೆಯಲ್ಲಿ ಅದೇ ದಿನ ಅದನ್ನು ಜಪ್ತಿ ಮಾಡಿಕೊಳ್ಳಲಾಯಿತು ಎಂಬುದನ್ನು ಪ್ರಾ.ಸಾ.29 ರಿಂದ ರಾಹುಲ್ ರವರ ಗುರುತಿಸುವಿಕೆ, ಪ್ರಾ.ಸಾ.30 ಮತ್ತು ಪ್ರಾ.ಸಾ.31 (ಐ.ಓ) ರವರ ಹೇಳಿಕೆಗಳು ತೋರಿಸುತ್ತವೆ. ಪ್ರಾ.ಸಾ.22–ಭರತ್ ಸಿಂಗ್ ಠಾಕೂರ್‌ರವರು ಜಪ್ತಿ ಮೆಮೊಗೆ (ಎಮ್.ಐ.ಜಿ ಪೊಲೀಸ್ ಠಾಣೆಯಿಂದ ನಿ.ಪಿ.108 ಎಂದು ಜಪ್ತಿಯಾದ ನಿ.ಪಿ.78) ಸಾಕ್ಷಿಯಾಗಿರುತ್ತಾರೆ. ಹೀಗಾಗಿ, ಸಾಕ್ಷ್ಯಗಳ ಮತ್ತು ಜಪ್ತಾದ ವಸ್ತುಗಳ ಸಮಗ್ರ ಅಧ್ಯಯನವು ಈ ನ್ಯಾಯಾಲಯದ ಅಭಿಪ್ರಾಯದಲ್ಲಿ ರಾಹುಲ್‌ರವರು ದಿನಾಂಕ 19.06.2011 ರಂದು ಗುಂಡಿನ ಗಾಯಕ್ಕೆ ತುತ್ತಾದರು ಎಂಬ ಅಂಶಕ್ಕೆ ವಿಶ್ವಾಸಾರ್ಹತೆಯನ್ನು ನೀಡುತ್ತದೆ ಮತ್ತು ಅಭಿಯೋಜನೆಯು ಪ್ರಸ್ತುತಪಡಿಸಿದಂತೆ ಅದರ ಸುತ್ತಲಿನ ಸಂದರ್ಭಗಳನ್ನು ಸಾಭೀತುಪಡಿಸುತ್ತದೆ.

125. ಪ್ರಾ.ಸಾ.16–ಭೀಮ್ ಬಹದ್ದೂರ್, ಮುಖ್ಯ ಪೇದೆ, ಡಿ.ಆರ್.ಪಿ. ಲೈನ್, ಇಂದೋರ್, ಇವರು ಬ್ಯಾಲಿಸ್ಟಿಕ್ ವರದಿಯನ್ನು (ನಿ.ಪಿ.52) ಸಿದ್ಧಪಡಿಸಿದರು. ಇದು ಜಪ್ತಿಪಡಿಸಿಕೊಂಡ ಬಂದೂಕಿನ ಮತ್ತು ವಶಪಡಿಸಿಕೊಂಡ ಕಾಟ್ರಿಡ್ಜನ ಸ್ವರೂಪವನ್ನು ವಿವರಿಸುತ್ತದೆ. ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯವು (ನಿ.ಪಿ.120) ಸಿದ್ದಪಡಿಸಿದ ಪರೀಕ್ಷಾ ವರದಿಯು, ಒಂದು ಬ್ಯಾಂಡೇಜ್‌ನ ತುಂಡಿನಲ್ಲಿ (ಮೃತರ ಗುಂಡೇಟಿನ ಗಾಯದ ಹತ್ತಿ) ಕಂಡುಬಂದ ರಕ್ತದ ರಾಸಾಯನಿಕ ಪರೀಕ್ಷೆಯಲ್ಲಿ ನೈಟ್ರೇಟ್, ತಾಮ್ರ ಅಥವಾ ಸೀಸವು ಧನಾತ್ಮಕವಾಗಿ

ಕಂಡುಬಂದಿರುವುದಿಲ್ಲ ಎಂದು ತಿಳಿಸಿರುತ್ತದೆ. ಆದಾಗ್ಯೂ, ಎರಡು ಗುಂಡುಗಳು 7.65 ಎಂ.ಎಂ ರಂಧ್ರದ ಕಾಟ್ರಿಡ್ಜನ ಪ್ರಮಾಣೀಕೃತ ಶಕ್ತಿಗೆ ಹೊಂದಿಕೆಯಾಗುತ್ತದೆ ಮತ್ತು ಗುಂಡು ಟಿಬಿ–ಎ1 ಒಂದೇ ರೀತಿ ಕಂಡುಬಂದಿವೆ ಎಂದು ವರದಿಯು ತಿಳಿಸುತ್ತದೆ. ಚರ್ಮದ ಮೂರು ತುಂಡುಗಳಲ್ಲಿ ತಾಮ್ರವು ಧನಾತ್ಮಕವಾಗಿ ಕಂಡುಬಂದಿದೆ. ಪ್ರಮುಖವಾಗಿ, ವರದಿಯ ಪ್ರಕಾರ ಮೃತ ಮೇಘಾರವರ ದೇಹದಿಂದ ವಶಪಡಿಸಿಕೊಂಡ ಎರಡು ಗುಂಡುಗಳು (ಇಬಿ2 ಮತ್ತು ಇಬಿ1) ಮತ್ತು ರಾಹುಲ್‌ರ ಬಲಪಾದದಿಂದ ವಶಪಡಿಸಿಕೊಂಡ ಗುಂಡು ನಿ.ಎ.1 ಎಂದು ಗುರುತಿಸಲಾದ ಪಿಸ್ತೂಲ್‌ನಿಂದ ಹಾರಿಸಲಾಗಿರುತ್ತದೆ ಎಂದು ವರದಿಯು ತಿಳಿಸಿರುತ್ತದೆ. ಬಲಗಡೆಯ ಶೂಗೆ ಹಾರಿಸಲಾದ ಗುಂಡು (ಪ್ರಾ.ಸಾ.20 ರಿಂದ ಸಾಬೀತಾದ ನಿ.ಪಿ.75 ರ ಜಪ್ತಿ ಮೆಮೊ ಅಡಿಯಲ್ಲಿ ದಿನಾಂಕ 22.06.2011 ರಂದು ಜಪ್ತಿಪಡಿಸಿಕೊಳ್ಳಲಾದ) ಒಂದು ತಾಮ್ರದ ಹೊರಕವಚ ಹೊಂದಿದ ಗುಂಡಿನಿಂದಾಗಿರುತ್ತದೆ. ಐ.ಓ (ಪ್ರಾ.ಸಾ.31) ಅವರಿಂದ ಗುರುತಿಸಲಾದ ನಿ.ಪಿ.120, ಇತರ ವಿಷಯಗಳ ಜೊತೆಗೆ, ಇತರ ವಸ್ತುಗಳಾದ ವಸ್ತು ಎ–5 (ಇಸಿ–1 ಮತ್ತು ಇಸಿ–2 ಎಂದು ಗುರುತಿಸಲಾದ 7.65 ಎಮ್.ಎಮ್.ನ ರಂಧ್ರವಿರುವ ಕಾಟ್ರಿಡ್ಜ್‌ನ ಹಾರಿಸಲಾದ ಎರಡು ಖಾಲಿ ಶೆಲ್ಲಗಳನ್ನು ಒಳಗೊಂಡಿರುವ); ವಸ್ತು ಎ–6 (ಎಲ್.ಆರ್–1 ಎಂದು ಗುರುತಿಸಲಾದ ಜೀವಂತ 7–65 ಎಮ್.ಎಮ್ ರಂಧ್ರವಿರುವ ಪಿಸ್ತೂಲ್ ಕಾಟ್ರಿಡ್ಜ್‌ನ್ನು ಒಳಗೊಂಡಿರುವ); ವಸ್ತು ಎ–10 (ರಕ್ತಸಿಕ್ತವಾದ ವಿಕ್ಸ್ ಸೀಸೆಯನ್ನು ಒಳಗೊಂಡಿರುವ); ವಸ್ತು ಬಿ–5 (ಒಟ್ಟಾರೆಯಾಗಿ ಎಸ್.ಕೆ–1 ಎಂದು ಗುರುಸಿದಲಾದ ಮೂರು ಚಿಕ್ಕ ಚಿಕ್ಕ ಚರ್ಮದ ತುಂಡುಗಳನ್ನು ಒಳಗೊಂಡಿರುವ); ವಸ್ತು ಬಿ–6 (ಒಂದು ತುಂಡು ಬ್ಯಾಂಡೇಜ್ ಬಟ್ಟೆಯನ್ನು ಮತ್ತು ಅದರ ಮೇಲಿನ ವಸ್ತುವನ್ನು ಒಳಗೊಂಡಿರುವ); ವಸ್ತು ಎಫ್–1 (ಒಂದು ಕಾಡ ತೂಸು ಪಸ್ತೂಲ್ ಎ–1); ವಸ್ತು ಎಫ್–6 (ಒಂದು ಬಲಗಾಲಿನ ಶೂ ಒಳಗೊಂಡಿರುವ) ಮತ್ತು ವಸ್ತು ಬಿ–7 (ಇಬಿ–1 ಎಂದು ಗುರುತಿಸಲಾದ ಒಂದು ಗುಂಡು) ಪಟ್ಟಿ ಮಾಡಿರುತ್ತಾರೆ. ಪ್ರಾ.ಸಾ.16–ಭೀಮ್ ಬಹದ್ದೂರ್‌ರವರು, ಬ್ಯಾಲಿಸ್ಟಿಕ್ ತಜ್ಞರು ಎಮ್.ಐ.ಜಿ ಪೊಲೀಸರಿಂದ ವೊಹರಾದ ಪ್ಯಾಕಟ್‌ನ್ನಿಂದ ಪಡೆದ ಪಿಸ್ತೂಲ್‌ನಿಂದ ಹಾರಿಸಿ

ಪರೀಕ್ಷಿಸಿರುತ್ತಾರೆ ಎಂದು ದಿನಾಂಕ 14.07.2011 ರಂದು ನೀಡಿದ ಬ್ಯಾಲಿಸ್ಟಿಕ್ ವರದಿಯಲ್ಲಿ ತಿಳಿಸಿರುತ್ತಾರೆ. ಇತರ ವಿಷಯಗಳ ಜೊತೆ, ಬ್ಯಾಲಿಸ್ಟಿಕ್ ವರದಿಯು ಈ ರೀತಿ ತಿಳಿಸುತ್ತದೆ:

> "ಇವುಗಳು 7.65 ಎಮ್.ಎಮ್ ರಂಧ್ರದ ಪಿಸ್ತೂಲ್‌ನ ಬಳಸಿದ ಕಾಟ್ರಿಡ್ಜ್‌ನ ಖಾಲಿ ಶೆಲ್ಗಳು ಮತ್ತು ಅವುಗಳ ಮೇಲೆ "ಕೆ.ಎಫ್" ಎಂದು ಗುರುತಿಸಲಾಗಿರುತ್ತದೆ. ಅವುಗಳು ಫೈರಿಂಗ್ ಪಿನ್/ಬ್ರೀಚ್ ಫೇಸ್‌ನ ಗುರುತನ್ನು ಹೊಂದಿರುತ್ತವೆ. ಸೂಕ್ಷ್ಮದರ್ಶಕದ ಮೂಲಕ ಹೋಲಿಸಿದಾಗ, ಎರಡೂ ಒಂದೇ ರೀತಿ ಕಂಡುಬಂದಿರುತ್ತವೆ ಮತ್ತು ಪರೀಕ್ಷಿಸಿದ ಕಾಟ್ರಿಡ್ಜ್ ಟಿ.ಸಿ.ಎ1 ರೀತಿಯಾಗಿ ಕಂಡುಬಂದಿರುತ್ತದೆ. ಸೂಕ್ಷ್ಮದರ್ಶಕದಿಂದ ಪರೀಕ್ಷಿಸಿದ ವಸ್ತುವಿನ ಛಾಯಾಚಿತ್ರವನ್ನು ನಿ.ಇಸಿಐ ಮತ್ತು ಟಿಸಿ–ಎ1 ರಲ್ಲಿ ಒಂದೇ ರೀತಿ ಕಂಡುಬಂದಿರುವುದಾಗಿ ತೆಗೆದುಕೊಳ್ಳಲಾಗಿದೆ ಮತ್ತು ಅದರಲ್ಲಿ ಹೋಲಿಕೆಯ ಅಂಶಗಳನ್ನು ಗುರುತುಮಾಡಲಾಯಿತು".

ವರದಿಯನ್ನು ತಯಾರಿಸಿದ ಪ್ರಾ.ಸಾ.16 ರವರು ತಮ್ಮ ಹೇಳಿಕೆಯಲ್ಲಿ ಈ ರೀತಿ ಹೇಳಿರುತ್ತಾರೆ:

> "ಕಾರ್ಯನಿರ್ವಹಿಸುತ್ತಿದ್ದ ಫೈರಿಂಗ್ ಪಿನ್, ಮ್ಯಾಗಜೀನ್ ಕ್ಯಾಚ್ ಅನ್ನು ಪರೀಕ್ಷಿಸಿದ್ದು, ಇವುಗಳು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರುವುದು ಕಂಡುಬಂದಿರುತ್ತವೆ. ಕಾಡು ಪಿಸ್ತೂಲಿನಿಂದ ಹಾರಿಸಿದ ಗುಂಡು ಜನರ ಪ್ರಾಣಹಾನಿಗೆ ಕಾರಣವಾಗಬಹುದು".

126. ಐ.ಓ ರವರು ಎಲ್ಲಾ ಜಪ್ತಾದ ವಸ್ತುಗಳನ್ನು ನಿ.ಪಿ.115 ರ ಪತ್ರದ ಮೂಲಕ ದಿನಾಂಕ 13.07.2011 ರಂದು ರಾಸಾಯನಿಕ ಮತ್ತು ಬ್ಯಾಲಿಸ್ಟಿಕ್ ಪರೀಕ್ಷೆಗೆ ಕಳುಹಿಸಿದ್ದು, ಅವರಿಂದ ಪಡೆದ ಹಿಂಬರಹವು ನಿ.ಪಿ.116 ರಿಂದ ನಿ.ಪಿ.118 ಆಗಿರುತ್ತದೆ ಎಂದು ನುಡಿದಿರುತ್ತಾರೆ. ಬ್ಯಾಲಿಸ್ಟಿಕ್ ತಜ್ಞರಾದ ಪ್ರಾ.ಸಾ.16 ಅವರನ್ನು ಪಾಟೀ–ಸವಾಲು ಮಾಡಿರುವುದಿಲ್ಲ. ಪ್ರಾ.ಸಾ.16 ತಜ್ಞರು ಮಾಡಿದ ಬಾಲಿಸ್ಟೀಕ್ ಪರೀಕ್ಷೆ ಅಥವಾ ನಿರ್ಣಯವನ್ನು ಅವಿಶ್ವಾಸಾರ್ಹಗೊಳಿಸಲು ಯಾವುದೇ ದಾಖಲೆಗಳಿರುವುದಿಲ್ಲ ಮತ್ತು ಆದ್ದರಿಂದ, ಈ ಸಂದರ್ಭವನ್ನು ಸಾಬೀತುಗೊಳಿಸಲಾಗಿದೆ.

XI. ಡಿ.ಎನ್.ಎ ಸಾಕ್ಷ್ಯ ಮತ್ತು ಡಿ.ಎನ್.ಎ ತಜ್ಞರ ವರದಿ:

127. ಘಟನೆ ಸಂಭವಿಸಿದ ನೆಲದ ಮೇಲೆ ಅಂದರೆ ಮೃತ ಮೇಘಾರ ಮೃತದೇಹದ ಬಿದ್ದಿದ ನೆಲದ ಮೇಲೆ ಪತ್ತೆಯಾದ ರಕ್ತದ ಮಾದರಿಯನ್ನು ಹತ್ತಿಯ ತುಂಡಿನಿಂದ ಸಂಗ್ರಹಿಸಿ, ಅದನ್ನು ಎ–1 ಎಂದು ಗುರುತು ಮಾಡಿ ಕಾಗದದ ಲಕೋಟೆಯಲ್ಲಿ ಹಾಕಲಾಯಿತು. ಅಂತೆಯೇ, ಮೃತ ರೋಹಿಣಿಯ ಬಳಿ ಪತ್ತೆಯಾದ ರಕ್ತದ ಮಾದರಿಯನ್ನು ಎ–2 ಎಂದು ಗುರುತಿಸಲಾಯಿತು ಮತ್ತು ಆಶ್ಲೇಷಾ ಮೃತದೇಹದ ಬಳಿಯಿಂದ ಸಂಗ್ರಹಿಸಿದ ರಕ್ತದ ಮಾದರಿಯನ್ನು ಎ–3 ಎಂದು ಗುರುತಿಸಲಾಯಿತು. ಐ.ಓ ರವರು ಘಟನಾ ಸ್ಥಳದಲ್ಲಿ ತಯಾರಿಸಿದ ಜಪ್ತಿ ಮೆಮೊ (ನಿ.ಪಿ.27) ಪ್ರಕಾರ ಸಾದಾ ಹತ್ತಿಯ ಮಾದರಿಯನ್ನು ಒಂದು ಕಾಗದದ ಲಕೊಟೆಯಲ್ಲಿ ಇಡಲಾಯಿತು ಮತ್ತು ಅದನ್ನು ಎ–4 ಎಂದು ಗುರುತಿಸಲಾಯಿತು. ಅಪರಾಧ ಸ್ಥಳದಿಂದ ಈ ಮಾದರಿಗಳನ್ನು/ವಸ್ತುಗಳನ್ನು ಜಪ್ತಿಪಡಿಸಿಕೊಂಡಿದ್ದಕ್ಕೆ ಸಾಕ್ಷಿಯಾದ ಪ್ರಾ.ಸಾ.5 ಮತ್ತು ಪ್ರಾ.ಸಾ.9 ರವರ ಸಾಕ್ಷ್ಯವು ಇದನ್ನು ಪುಷ್ಟೀಕರಿಸುತ್ತದೆ. ಅಪರಾಧ ಸ್ಥಳದ ಛಾಯಾಚಿತ್ರವನ್ನು (ನಿ.ಪಿ.61 ರಿಂದ ನಿ.ಪಿ.65) ಪ್ರಾ.ಸಾ.17–ಸತ್ಯನಾರಾಯಣ ಪಟೇಲ್ ರವರು (ಅಪರಾಧ ಸ್ಥಳದ ಛಾಯಾಗ್ರಾಹಕರು) ತೆಗೆದಿರುತ್ತಾರೆ. ಈ ಛಾಯಾಚಿತ್ರಗಳು ರಕ್ತದ ಕಲೆಗಳನ್ನು ಮತ್ತು ದೇಹಗಳು ಬಿದ್ದಿದ ದಿಕ್ಕನ್ನು ತೋರಿಸುತ್ತದೆ. ಬಟ್ಟೆಗಳು (ಬಿ1, ಸಿ1, ಡಿ1), ಯೋನಿ ಸ್ವಾಬ್ಸ್ (ಬಿ2, ಸಿ2, ಡಿ2) ಮತ್ತು ಗುಪ್ತಾಂಗದ ಕೂದಲುಗಳನ್ನು (ಬಿ3, ಸಿ3, ಡಿ3) ಸಹ ಮೃತರಾದ ಮೇಘ, ರೋಹಿಣಿ ಮತ್ತು ಆಶ್ಲೇಷಾರಿಂದ ಕ್ರಮವಾಗಿ ಸಂಗ್ರಹಿಸಲಾಗಿರುತ್ತದೆ.

128. ದಿನಾಂಕ 23.06.2011 ರಂದು ನೀಡಿದ ವಿವರಣಾ ಹೇಳಿಕೆಗಳ (ನಿ.ಪಿ.28, ನಿ.ಪಿ.31 ಮತ್ತು ನಿ.ಪಿ.34) ಅನುಸಾರವಾಗಿ ಆರೋಪಿಗಳಿಂದ ಡಿ.ಎನ್.ಎ ವಸ್ತುಗಳನ್ನು ಸಂಗ್ರಹಿಸಲಾದ ಬಟ್ಟೆಗಳನ್ನು ವಶಪಡಿಸಿಕೊಳ್ಳಲಾಯಿತು. ಈ ಹಿಂದೆ ಚರ್ಚಿಸಿದಂತೆ, ಪ್ರಾ.ಸಾ.7–ಸಂದೀಪ್ ನರೂಲ್ಕರ್ ಮತ್ತು ಪ್ರಕಾಶ್ ಇಚ್ಕೆ (ಅಭಿಯೋಜನೆಯಿಂದ ವಿಚಾರಣೆಗೆ ಒಳಪಡಿಸದ) ಅವರ ಸಮ್ಮುಖದಲ್ಲಿ ಸಂಬಂಧಿತ ಉಡುಪಿನ ವಸ್ತುಗಳನ್ನು (ನಿ.ಪಿ.29, ನಿ.ಪಿ.32 ಮತ್ತು ನಿ.ಪಿ.35)

ಜಪ್ತಿಪಡಿಸಿಕೊಂಡಿರುವುದು, ದಿನಾಂಕ 23.06.2011 ರಂದು ವಶಪಡಿಸಿಕೊಂಡದರ ಮೇಲೆ ಸಂಶಯವನ್ನು ಉಂಟುಮಾಡುತ್ತದೆ. ಅವರುಗಳ ಬಟ್ಟೆಗಳ ಜೊತೆ, ದಿನಾಂಕ 22.06.2011 ರಂದು (ನಿ.ಪಿ.14) ಮನೋಜ್‌ರವರಿಂದ ಜಪ್ತಿಪಡಿಸಿಕೊಂಡ ಚಾಕು ಮತ್ತು ದಿನಾಂಕ 23.06.2011 ರಂದು (ನಿ.ಪಿ.29) ರಾಹುಲ್‌ರವರಿಂದ ಜಪ್ತಿಪಡಿಸಿಕೊಂಡ ಕಬ್ಬಿಣದ ಚಾಕುವಿನಿಂದ ಕೂಡ ಡಿ.ಎನ್.ಎ ಅಂಶವನ್ನು ಸಂಗ್ರಹಿಸಲಾಯಿತು ಎಂದು ಅಭಿಯೋಜನೆಯು ನಿವೇದಿಸಿಕೊಂಡಿರುತ್ತದೆ.

129. ಪ್ರಾ.ಸಾ.35–ಡಾ. ಪಂಕಜ್ ಶ್ರೀವಾತ್ಸವ್, ವೈಜ್ಞಾನಿಕ ಅಧಿಕಾರಿ, ಡಿ.ಎನ್.ಎ ಫಿಂಗರ್‌ಪ್ರಿಂಟ್ ಘಟಕ, ಎಫ್.ಎಸ್.ಎಲ್, ಸಾಗರ, ರವರು ದಿನಾಂಕ 10.08.2011 ರಂದು ಸಿದ್ಧಪಡಿಸಿದ ಡಿ.ಎನ್.ಎ ವರದಿಯೊಂದಿಗೆ (ನಿ.ಪಿ.122) ಓದಲಾದ ಅವರ ಹೇಳಿಕೆಯು ಡಿ.ಎನ್.ಎ ವಿಶ್ಲೇಷಣೆಯ ಬಗ್ಗೆ ವಿವರಗಳನ್ನು ಒದಗಿಸುತ್ತದೆ. ದಿನಾಂಕ 14.07.2011 ರಂದು ಈ ಮೊಕದ್ದಮೆಗೆ ಸಂಬಂಧಿಸಿದ 19 ನಿಶಾನೆಗಳನ್ನು ಮೊಹರು ಮಾಡಿದ ಸ್ಥಿತಿಯಲ್ಲಿ ಇಲಾಖೆಯು ಸ್ವೀಕರಿಸಿದ್ದು, ಅವರ ಪಾಟೀ–ಸವಾಲಿನ ಪ್ರಕಾರ, ದಿನಾಂಕ 18.07.2011 ರಂದು ಅವುಗಳನ್ನು ಅವರು ಪರೀಕ್ಷಿಸಿದರು. ಡಿ.ಎನ್.ಎಯನ್ನು ಸ್ವಯಃಚಾಲಿತವಾಗಿ ಡಿ.ಎನ್.ಎ ಅನ್ನು ಹೊರತೆಗೆಯುವ ವ್ಯವಸ್ಥೆಯ 12 ಜಿಸಿ (ಆಟೋಮ್ಯಾಟೆಡ್ ಡಿ.ಎನ್.ಎ ಎಕ್ಸ್‌ಟ್ರಾಕ್ಷನ್ ಸಿಸ್ಟಮ್) ಮತ್ತು ಜೈವಿಕವಾಗಿ ಹೊರತೆಗೆಯುವ ಮೂಲಕ ಹೊರತೆಗೆಯಲಾಯಿತು ಎಂದು ತಜ್ಞರ ವರದಿ ಬಹಿರಂಗಪಡಿಸುತ್ತದೆ. ಬಲವರ್ಧನೆಯ ಬಹುವಿಧವಾದ ಪಿಸಿಆರ್ ವಿಧಾನದಿಂದ (ಆಮ್ಪ್ಲಿಫಿಕೇಶನ್ ಮಲ್ಟಿಪಲ್ ಪಿಸಿಆರ್ ಟೆಕ್ನಿಕ್) ಪರೀಕ್ಷಿಸಲು 16 ಅನುವಂಶಿಕ ಗುರುತುಗಳನ್ನು ಡಿ.ಎನ್.ಎ ಯಿಂದ ಸಂಗ್ರಹಿಸಲಾಗಿರುತ್ತದೆ; ಆದ್ದರಿಂದ, ಆಂಪ್ಲಿಫೈಡ್ ಡಿ.ಎನ್.ಎ, ಎಎಮ್ಎಫ್ಎಫ್/ಎಸ್.ಟಿ.ಆರ್ ಐಡೆಂಟಿಫೈಯರ್ ಕಿಟ್, ಎಎಮ್‌ಪಿಎಫ್/ಎಸ್‌ಟಿಆರ್ ವೈ ಫೈಲರ್ ಕಿಟನ್ ಸ್ವಯಂಚಾಲಿತ ಡಿ.ಎನ್.ಎ ಸೀಕ್ವೆನ್ಸರ್ ಜೊತೆಗೆ ಜಿನೋಟೈಪಿಂಗೆ ಪ್ರೋಫೈಲ್ ಅನ್ನು ಪಡೆಯಲಾಯಿತು. ಫಲಿತಾಂಶದ ವಿಶ್ಲೇಷಣೆಗಳನ್ನು ಜೀನ್ ಮ್ಯಾಪಿಂಗ್ ಸಾಫ್ಟ್‌ವೇರ್ ವಿ3.5 ಮೂಲಕ ಮಾಡಲಾಯಿತು.

ವರದಿಯಲ್ಲಿ ಉಲ್ಲೇಖಿಸಲಾದ 'ಭೌತಿಕ ವಸ್ತು' ಅಂದರೆ ರಕ್ತ ಎಂದು ಪ್ರಾ.ಸಾ.35 ಸ್ಪಷ್ಟಪಡಿಸುತ್ತಾರೆ.

130. ಮೇಘಾರಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಎಲ್ಲಾ ವಸ್ತುಗಳನ್ನು (ಎ1–ಆಕೆಯ ದೇಹದ ಬಳಿಯ ರಕ್ತದ ಹತ್ತಿಯ ತುಂಡು, ಬಿ1–ಬಟ್ಟೆಗಳು, ಬಿ2–ಹೊರಬಂದ ಯೋನಿನ ಜಿಗುಟಾದ ವಸ್ತು, ಆಕೆಯ ದೇಹದಿಂದ ಜಪ್ತಾದ ಗುಂಡು) ಹೋಲಿಕೆ ಮಾಡಲಾಯಿತು ಮತ್ತು ಇದರಿಂದ ಏಕಪ್ರಕಾರದ ಸ್ತ್ರೀ ಡಿ.ಎನ್.ಎ ಪ್ರೋಫೈಲ್ ಕಂಡುಬಂದಿರುತ್ತದೆ. ಅಂತಯೇ, ರೋಹಿಣಿ (ಎ2, ಸಿ1, ಸಿ2) ಮತ್ತು ಆಶ್ಲೇಷಾ (ಎ3, ಡಿ1, ಡಿ3) ಅವರಿಗೆ ಸಂಬಂಧಿಸಿದ ವಸ್ತುಗಳಲ್ಲೂ ಸಹ ಏಕಪ್ರಕಾರದ ಸ್ತ್ರೀ ಡಿ.ಎನ್.ಎ ಪ್ರೊಫೈಲ್ ಕಂಡುಬಂದಿರುತ್ತದೆ. ರಾಹುಲ್ ಮತ್ತು ಮನೋಜ್‌ರವರದಿಂದ ವಶಪಡಿಸಿಕೊಂಡ ಎರಡು ಚಾಕುಗಳು ಮತ್ತು ಮೂವರು ಆರೋಪಿಗಳ ಬಟ್ಟೆಯಿಂದ ಪಡೆದ ಡಿ.ಎನ್.ಎ ಅಂಶದೊಂದಿಗೆ ಈ ಡಿ.ಎನ್.ಎ ಪ್ರೋಫೈಲ್‌ಗಳನ್ನು ಹೋಲಿಕೆ ಮಡಲಾಯಿತು ಮತ್ತು ಇದು ಡಿ.ಎನ್.ಎ ವರದಿಯ ಭಾಗವಾಗಿರುತ್ತದೆ. ಡಿ.ಎನ್.ಎ ಹೋಲಿಕೆಗಳ ನಿರ್ಣಯಗಳು ಮತ್ತು ವರದಿಯಲ್ಲಿ ಪ್ರಾ.ಸಾ.35 ರ ಅಭಿಪ್ರಾಯವು, ಈ ಕೆಳಗಿನ ಪಟ್ಟಿಯಲ್ಲಿ ಸಂಕ್ಷೇಪಿಸಲಾಗಿದೆ.

ನೊಂದವರು		**ಆರೋಪಿಗಳ ವಸ್ತುಗಳು**
ಮೇಘಾ	ಎ1, ಬಿ1, ಬಿ2 ಮತ್ತು ಬಿ4	ರಾಹುಲ್‌ರಿಂದ ವಶಪಡಿಸಿಕೊಂಡ ಬಟ್ಟೆಗಳು (ನಿ.ಎಫ್.4) ಮತ್ತು ಚಾಕು (ನಿ.ಎಫ್.5)
		ನೇಹಾರವರಿಗೆ ಸೇರಿದ ಬಟ್ಟೆಗಳು (ನಿ.ಎಚ್.2)
		ಮೃತರ ಮೃತದೇಹದಿಂದ ವಶಪಡಿಸಿಕೊಂಡ ಗುಂಡು (ನಿ.ಬಿ.4)
ಆಶ್ಲೇಷಾ	ಎ3, ಡಿ1, ಡಿ2	ಮನೋಜ್‌ರವರಿಂದ ವಶಪಡಿಸಿಕೊಂಡ ಬಟ್ಟೆಗಳು (ನಿ.ಜಿ.3) ಮತ್ತು ಚಾಕು (ನಿ.ಜಿ.1)

131. ಅಪರಾಧ ಸ್ಥಳದಿಂದ ವಶಪಡಿಸಿಕೊಂಡ ರಕ್ತದ ಕಲೆಯುಳ್ಳ ಬೆಡ್‌ಶೀಟ್‌ನಲ್ಲಿ ಕಂಡುಬರುವ ಡಿ.ಎನ್.ಎ ಅಂಶ (ನಿ.ಪಿ.9) ಮೃತರ ಮಿಶ್ರ ಡಿ.ಎನ್.ಎ ಪ್ರೊಫೈಲ್‌ನ

ಉಪಸ್ಥಿತಿಯನ್ನು ಅಂದರೆ ಒಂದಕ್ಕಿಂತ ಹೆಚ್ಚು ವ್ಯಕ್ತಿಯ ಡಿ.ಎನ್.ಎ ಅಂಶದ ಉಪಸ್ಥಿತಿಯನ್ನು ಸೂಚಿಸುತ್ತದೆ. ರೋಹಿಣಿಯವರ ಡಿ.ಎನ್.ಎ ಪ್ರೊಫೈಲ್‌ಗೆ ಹೊಂದಿಕೆಯಾಗುವ ವಸ್ತುಗಳಲ್ಲಿ ಡಿ.ಎನ್.ಎ ಅಂಶಗಳ ಉಲ್ಲೇಖವಿರುವುದಿಲ್ಲ. ಮೇಲಿನ ಪಟ್ಟಿಯಿಂದ ಸ್ಪಷ್ಟವಾಗುವಂತೆ, ಅಭಿಯೋಜನೆಯು ಅವಲಂಬಿಸಿರುವ ಡಿ.ಎನ್.ಎ ಅಂಶವು ನೊಂದವರಾದ್ದಾಗಿರುತ್ತದೆ ಮತ್ತು ಅಭಿಯೋಜನೆಯ ಪ್ರಕಾರ ಆರೋಪಿಗಳಿಂದ ವಶಪಡಿಸಿಕೊಂಡ ವಸ್ತುಗಳ ಮೇಲೆ ಅವುಗಳು ಕಂಡುಬಂದಿರುತ್ತದೆ. ಇದು ಅಪರಾಧದ ಸ್ಥಳದಲ್ಲಿ ಅಥವಾ ಮೃತರ ಮೃತದೇಹದ ಮೇಲೆ ಆರೋಪಿಗಳ ಡಿ.ಎನ್.ಎ ಅಂಶವು ಕಂಡುಬಂದ ಮೊಕದ್ದಮೆಯಾಗಿರುವುದಿಲ್ಲ, ಆದ್ದರಿಂದ ಬಂಧನದ ಸಮಯದಲ್ಲಿ ಆರೋಪಿಯಿಂದ ಸಂಗ್ರಹಿಸಿದ ಬೆರಳಿನ ಉಗುರಿನ ತುಂಡನ್ನು (ನಿ.ಪಿ.18 ಪಿ–11 ಮತ್ತು ಪಿ–20) ಪರಿಗಣಿಸಿರುವುದಿಲ್ಲ/ಬಳಸಿರುವುದಿಲ್ಲ ಎಂದು ಕಂಡುಬರುತ್ತದೆ.

132. ಪ್ರಾ.ಸಾ.35 ರ ಪಾಟೀ–ಸವಾಲಿನ ಸಮಯದಲ್ಲಿ (ಎ) ಜಪ್ತಿ/ಘಟನೆ ಸಂಭವಿಸಿದ ಮತ್ತು ಪರೀಕ್ಷೆಯ ನಡುವಿನ ಅವಧಿಯು ಡಿ.ಎನ್.ಎ ವಿಶ್ಲೇಷಣೆಯ ಮೇಲೆ ಯಾವುದಾದರೂ ಪ್ರಭಾವವನ್ನು ಹೊಂದಿರುತ್ತದೆಯೇ; (ಬಿ) ಮನೋಜ್‌ರವರ ಬಟ್ಟೆಯಲ್ಲಿ (ಜಿ3) ಕತ್ತರಿಸಿದ ಗುರುತೇನಾದರೂ ಇದೆಯೇ; (ಸಿ) ವಸ್ತುಗಳು ಮೊಹರಾದ ಸ್ಥಿತಿಯಲ್ಲಿದ್ದವೇ; (ಡಿ) ಬಟ್ಟೆಗಳನ್ನು ನಿರ್ದಿಷ್ಟ ಸ್ಥಿತಿಯಲ್ಲಿ ಇಡಬೇಕಾಗಿತ್ತು ಮತ್ತು ಬಟ್ಟೆಗಳನ್ನು ಒಟ್ಟಿಗೆ ಇರಿಸಿದಾಗ, ರಕ್ತವು ಬೆರೆಯಬಹುದು ಎಂಬ ಪ್ರಶ್ನೆಗಳನ್ನು ಕೇಳಲಾಗಿ ಅವರು ನೀಡಿದ ಉತ್ತರವು ತೃಪ್ತಿಕರವಾಗಿದೆ. ಆದಾಗ್ಯೂ, ಐಡಿ 3074 ಅನ್ನು ಐಡಿ 3078 ಎಂದು ಉಲ್ಲೆಖಿಸಿದ ಮುದ್ರಣದಲ್ಲಿನ ದೋಷವು ಕಳವಳವನ್ನು ಉಂಟುಮಾಡುತ್ತದೆ ಮತ್ತು ಅಪೀಲುದಾರರ ಪರ ಮಾನ್ಯ ವಕೀಲರು ಇದನ್ನು ಒತ್ತಿ ಹೇಳಿರುತ್ತಾರೆ.

133. ಈ ನ್ಯಾಯಾಲಯದ ಮುಂದೆ, ಅಪೀಲುದಾರರು, ದಿನಾಂಕ 23.06.2011 ರಂದು ಜಪ್ತಿಪಡಿಸಿಕೊಂಡ ವಸ್ತುಗಳನ್ನು 20 ದಿನಗಳ ನಂತರ ಅಂದರೆ ದಿನಾಂಕ 13.07.2011 ರಂದು

(ನಿ.ಪಿ.115) ಕಳುಹಿಸಿದ್ದು ಆ ವಿಳಂಬದ ಬಗ್ಗೆ ವಿವರಿಸದೆ ಇರುವುದು ಮತ್ತು ಅವುಗಳನ್ನು ಸಂರಕ್ಷಿಸಲಾದ ಸ್ಥಿತಿ ಮತ್ತು ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯ ಕೊರತೆಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿದ್ದು; ಪ್ರಾ.ಸಾ.35 ರವರು ಅವಲೋಕನಾ ಹಾಳೆಯ ಮೇಲೆ ಟಿಪ್ಪಣಿಗಳನ್ನು ಮಾಡಿರುವುದಾಗಿ ನುಡಿದಿರುವುದನ್ನು ದಾಖಲೆಯಲ್ಲಿ ಇರಿಸಲಾಗಿದೆ. ಡಾ.ಎಮ್.ಪಿ ಸಿಂಗ್‌ರವರು (ನಿ.ಪಿ.123 ಮತ್ತು ಪಿ.124) ಸಿದ್ದಪಡಿಸಿದ ಸೆರಾಲಜಿ ವರದಿ ಕೂಡ ದಾಖಲೆಯಲ್ಲಿದ್ದು, ಒಂದು ಗುಂಡಿನ (ಬಿ4) ಮೇಲೆ ರಕ್ತವಿತ್ತು ಎಂಬುದನ್ನು ಬಹಿರಂಗಪಡಿಸುತ್ತದೆ ಆದರೆ ಪರೀಕ್ಷೆಯನ್ನು ನಡೆಸಲು ರಕ್ತದ ಪ್ರಮಾಣವು ಅಗತ್ಯವಾಗಿರುವಷ್ಟು ಇರುವುದಿಲ್ಲ ಎಂದೂ ಸಹ ತಿಳಿಸಿರುತ್ತದೆ. ಇದು ಡಿ.ಎನ್.ಎ ಅನ್ನು ಹೊರತೆಗೆಯಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಸ್ವಾಭಾವಿಕವಾಗಿ ಹುಟ್ಟುಹಾಕುತ್ತದೆ. ಸೆರಾಲಜಿಸ್ಟ್‌ರವರ ವರದಿಯಲ್ಲಿ ಉಲ್ಲೇಖಿಸಲಾದ ಇತರ ವಸ್ತುಗಳನ್ನು ಅಂದರೆ ಎ–10 (ವಿಕ್ಸ್ ಸೀಸೆ), ಎಫ್–2 (ರಾಹುಲ್‌ರ ಎಡಗಾಲಿನ ಶೂ), ಎಫ್–3 (ರಾಹುಲ್‌ರ ಉಗುರುಗಳು) ಎಫ್–6 (ರಾಹುಲ್‌ರ ಬಲಗಾಲಿನ ಶೂ) ಎಫ್–7 (ರಾಹುಲ್‌ರ ಎಡಗಾಲಿನಿಂದ ವಶಪಡಿಸಿಕೊಂಡ ಗುಂಡು), ಜಿ–2 (ಮನೋಜ್‌ರ ಉಗುರುಗಳು), ಜಿ–4 (ಮನೋಜ್‌ರ ಶೂ), ಎಚ್–1 (ನೇಹಾರ ಉಗುರುಗಳು), ಮತ್ತು ಎಚ್–3 (ನೇಹಾರ ಚಪ್ಪಲಿ). ಆದಾಗ್ಯೂ, ರಕ್ತದ ಕಲೆಗಳು ತುಂಬಾ ವಿಘಟಿತವಾಗಿದ್ದವು ಅಥವಾ ವಸ್ತುಗಳ ಮೇಲಿನ ರಕ್ತದ ಪ್ರಮಾಣವು ವರ್ಗೀಕರಣ ಪರೀಕ್ಷೆಗಳನ್ನು ನಡೆಸಲು ಅಗತ್ಯವಿರುವ ಪ್ರಮಾಣದಲ್ಲಿ ಇರುವುದಿಲ್ಲ.

134. ಸುನಾವಣೆಯ ಸಮಯದಲ್ಲಿ, *ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯ ಕೊಲ್ಕತ್ತಾ*[40] ಪ್ರಕಟಿಸಿದ ಲೇಖನದ ಮೇಲೆ ಅವಲಂಬಿಸಲಾಗಿದೆ. ಲೇಖನದ ಸಂಬಂಧಿತ ಸಾರಗಳನ್ನು ಈ ಕೆಳಗಿನಂತೆ ನೀಡಲಾಗಿದೆ:

40. ಡಿ.ಎನ್.ಎ ಪ್ರೊಫಿಲಿಂಗ್ ಇನ್ ಜಸ್ಟೀಸ್ ಡೆಲಿವರಿ ಸಿಸ್ಟಮ್, ಕೇಂದ್ರ ವಿಧಿ *ವಿಜ್ಞಾನ ಪ್ರಯೋಗಾಲಯ ಕೊಲ್ಕತ್ತಾ, ವಿಧಿ ವಿಜ್ಞಾನ ನಿರ್ದೇಶನಾಲಯ, ಕೊಲ್ಕತ್ತಾ (2007)*

“ಡೀಆಕ್ಸಿರೈಬೋ ನ್ಯೂಕ್ಲೀಯಿಕ್ ಆಮ್ಲ (ಡಿ.ಎನ್.ಎ) ಜೀವಿಗಳ ಜೀವಕೋಶಗಳ ನ್ಯೂಕ್ಲಿಯಸ್‌ನಲ್ಲಿರುವ ಅನುವಂಶಿಕ ವಸ್ತುವಾಗಿರುತ್ತದೆ. ಸರಾಸರಿ ಮಾನವನ ದೇಹವು ಸುಮಾರು 100 ಟ್ರಿಲಿಯನ್ ಕೋಶಗಳಿಂದ ಕೂಡಿರುತ್ತದೆ. ಜೀವಕೋಶದ ಕೇಂದ್ರಕದಲ್ಲಿ ಡಬಲ್ ಹೆಲಿಕ್ಸ್‌ನಂತೆ ಡಿ.ಎನ್.ಎ ಇರುತ್ತದೆ ಮತ್ತು ಸೇರಿಸಲಾದ ಪ್ರೋಟೀನ್ಗಳ ಜೊತೆ ವರ್ಣತಂತುಗಳನ್ನು ರೂಪಿಸಲು ಸೂಪರ್ ಕಾಯಿಲ್ಡ್ ಆಗಿರುತ್ತದೆ. ಪ್ರತೀ ಕೇಂದ್ರಕದ ಜೀವಕೋಶಗಳಲ್ಲಿ 23 ಜೋಡಿಯ ವರ್ಣತಂತುಗಳು ಇರುತ್ತವೆ ಮತ್ತು ಒಬ್ಬ ವ್ಯಕ್ತಿಯು ತಾಯಿಯಿಂದ 23 ವರ್ಣತಂತುಗಳನ್ನು ಮತ್ತು ತಂದೆಯಿಂದ 23 ವರ್ಣತಂತುಗಳನ್ನು ಪಡೆಯುತ್ತಾನೆ ಮತ್ತು ಅನುಕ್ರಮವಾಗಿ ಅಂಡಾಣು ಮತ್ತು ವೀರ್ಯದ ಮೂಲಕ ಹರಡುತ್ತದೆ. ಪ್ರತೀ ಜೀವಕೋಶದ ವಿಭಜನೆಯ ಸಮಯದಲ್ಲಿ ವರ್ಣತಂತುಗಳು ಪುರಾವರ್ತಿಸುತ್ತದೆ ಮತ್ತು ಒಂದು ಜೋಡಿಯು ಪ್ರತೀ ಮಗಳ ಜೀವ ಕೋಶಗಳಿಗೆ ಹೋಗುತ್ತವೆ. ಆಂತರಿಕ ರಚನೆಯ ಮಾಹಿತಿ, ಭೌತಿಕ ಗುಣಲಕ್ಷಣಗಳು ಮತ್ತು ದೇಹದ ಕಾರ್ಯಗಳ ಬಗ್ಗೆ ಎಲ್ಲಾ ಮಾಹಿತಿಯನ್ನು ನಾಲ್ಕು ನ್ಯೂಕ್ಲಿಯಾಟೈಡ್‌ಗಳು ಅಥವಾ ಬೇಸ್‌ಗಳ ಅನುಕ್ರಮದಲ್ಲಿ ಡಿ.ಎನ್.ಎ ಅಣುಗಳಲ್ಲಿ ಸಂಕೇತಿಸಲಾಗಿದೆ: ಅಡೆನಿನ್ (ಎ), ಗ್ವಾನಿನ್ (ಜಿ), ಥೈಮಿನ್ (ಟಿ) ಮತ್ತು ಸೈಟೊಸಿಸ್ (ಸಿ) ಜೊತೆಗೆ ಶುಗರ್ ಫಾಸಫೇಟ್‌ನ ಆಧಾರವಾಗಿರುತ್ತದೆ. ಒಂದು ಮಾನವ ಹ್ಯಾಪ್ಲಾಯ್ಡ್ ಜೀವಕೋಶವು ಅಂದಾಜು 3 ಶತಕೋಟಿ ಬೇಸ್‌ಗಳನ್ನು ಹೊಂದಿರುತ್ತದೆ. ದೇಹದ ಎಲ್ಲಾ ಜೀವಕೋಶಗಳು ನಿಖರವಾಗಿ ಒಂದೇ ಡಿಎನ್‌ಎ ಯನ್ನು ಹೊಂದಿರುತ್ತವೆ ಆದರೆ ಇದು ನ್ಯೂಕ್ಲಿಯಾಟೈಡ್‌ಗಳ ಅನುಕ್ರಮದಲ್ಲಿ ಒಬ್ಬ ವ್ಯಕ್ತಿಯಿಂದ ಮತೊಬ್ಬ ವ್ಯಕ್ತಿಗೆ ಬದಲಾಗುತ್ತದೆ. ಮೈಟೋಕಾಂಡ್ರಿಯಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದ ಮೈಟೋಕಾಂಡ್ರಿಯಲ್ ಡಿ.ಎನ್.ಎ (ಎಮ್‌ಟಿಡಿಎನ್‌ಎ) ವೃತ್ತಾಕಾರವಾಗಿ ಮತ್ತು ಡಬಲ್ ಸ್ಟ್ರಾಂಡೆಡ್ ಆಗಿರುತ್ತದೆ ಮತ್ತು 16,569 ಬೇಸ್ ಜೋಡಿಯಾಗಿ ಮಾತೃ ವಂಶಾವಳಿಯನ್ನು ತೋರಿಸುತ್ತದೆ. ಮಾತೃ ವಂಶಾವಳಿಗೆ ಸಂಬಂಧಿಸಿದ ವ್ಯಕ್ತಿಗಳ ಅಧ್ಯಯನದಲ್ಲಿ ಇದು ವಿಶೇಷವಾಗಿ ಉಪಯುಕ್ತವಾಗಿರುತ್ತದೆ. ನ್ಯೂಕ್ಲಿಯರ್ ಡಿಎನ್‌ಎಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ, ಕ್ಷೀಣಿಸಿದ ಮಾದರಿಗಳ ವಿಶ್ಲೇಷಣೆಯಲ್ಲಿ ಬಳಸಬಹುದು. ಅಂತೆಯೇ, ‘ವೈ’ ವರ್ಣತಂತು ಪಿತೃವಿನ ಅನುವಂಶಿಕತೆಯನ್ನು ತೋರಿಸುತ್ತದೆ ಮತ್ತು ಇದನ್ನು ಪುರುಷ ವಂಶಾವಳಿಯನ್ನು ಪತ್ತೆಹಚ್ಚಲು ಮತ್ತು ಲೈಂಗಿಕ ಅಕ್ರಮಣದ ಮಿಶ್ರಣಗಳಲ್ಲಿ ಪುರುಷರಿಂದ ಸಂಗ್ರಹಿಸಿದ ಡಿಎನ್‌ಎ ನಿರ್ಧರಿಸಲು ಬಳಸಲಾಗುತ್ತದೆ.

ಕೇವಲ ಶೇಖಡ 0.1 ರಷ್ಟು ಡಿಎನ್ಎಯು (ಸುಮಾರು 3 ಮಿಲಿಯನ್ ಬೇಸ್‌ಗಳು) ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತದೆ. ವಿಧಿ ವಿಜ್ಞಾನದ ಡಿಎನ್ಎ ವಿಜ್ಞಾನಿಗಳು ಜೈವಿಕ ಸುಳಿವಿನ ವಸ್ತುಗಳು ಅಥವಾ ನಿಯಂತ್ರಣ ಮಾದರಿಗಳೊಂದಿಗೆ ಹೋಲಿಸಲು ವ್ಯಕ್ತಿಯ ಡಿಎನ್ಎ ಪ್ರೋಫೈಲ್‌ನ್ನು ರಚಿಸಲು ಕೆಲವೇ ವೇರಿಯಬಲ್‌ಗಳನ್ನು ವಿಶ್ಲೇಷಿಸುತ್ತಾರೆ.

.....

ಡಿಎನ್ಎ ಪ್ರೋಫಿಲಿಂಗ್ ವಿಧಾನಶಾಸ್ತ್ರ:

ಸಾಕ್ಷ್ಯಗಳಿಂದ ವಶಪಡಿಸಿಕೊಂಡ ದೇಹದ ದ್ರವ, ಕಲೆಗಳು ಮತ್ತು ಇತರ ಜೈವಿಕ ಮಾದರಿಗಳಿಂದ ಡಿಎನ್ಎ ಪ್ರೋಫೈಲನ್ನು ರಚಿಸಲಾಗುತ್ತದೆ ಮತ್ತು ಫಲಿತಾಂಶವನ್ನು ಉಲ್ಲೇಖಿಸಲಾದ ಮಾದರಿಗಳಿಂದ ಬಂದ ಫಲಿತಾಂಶದೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಆದ್ದರಿಂದ ನೊಂದವರ ಮತ್ತು/ಅಥವಾ ಶಂಕಿತರ (ರು) ನಡುವೆ ಪರಸ್ಪರ ಸಂಪರ್ಕ ಅಥವಾ ಅಪರಾಧದ ಸ್ಥಳದೊಂದಿಗೆ ಸಂಪರ್ಕವನ್ನು ರುಜುವಾತುಪಡಿಸಬಹುದು. ಡಿಎನ್ಎ ಪ್ರೋಫೈಲಿಂಗ್ ಎನ್ನುವುದು ಡಿಎನ್ಎಯ ಕೆಲವು ಅಧಿಕ ಅಸ್ಥಿರವಾದ ಭಾಗಗಳ ವಿಶ್ಲೇಷಣೆಯ ಸಂಕೀರ್ಣ ಪ್ರಕ್ರಿಯೆಯಾಗಿರುತ್ತದೆ. ಡಿಎನ್ಎಯ ಅಸ್ಥಿರವಾದ ಭಾಗಗಳನ್ನು ಅನುವಂಶಿಕ ಗುರುತುಗಳು ಎಂದು ಕರೆಯಲಾಗುತ್ತದೆ. ವಿಧಿ ವಿಜ್ಞಾನದ ಉದ್ದೇಶಕ್ಕಾಗಿ ಆಯ್ಕೆ ಮಾಡಲಾದ ಪ್ರಸ್ತುತ ಅನುವಂಶಿಕ ಗುರುತುಗಳನ್ನು ಶಾರ್ಟ್ ಟಾಂಡೆಮ್ ರಿಪೀಟ್ಸ್ (ಎಸ್.ಟಿ.ಆರ್) ಎಂದು ಕರೆಯಲಾಗುತ್ತದೆ. ಸ್ವಯಂಚಾಲಿತ ಡಿಎನ್ಎ ಅನುಕ್ರಮವನ್ನು ಉಪಯೋಗಿಸಿ 15 ಜೋಡಿ ಎಸ್.ಟಿ.ಆರ್‌ಗಳ ವಿಶ್ಲೇಷಣೆಯು, ಒಬ್ಬ ವ್ಯಕ್ತಿಗೆ (ಮಾನೊಜೈಗೋಟಿಕ್ ಅವಳಿ ಹೊರತುಪಡಿಸಿ) ವಿಶಿಷ್ಟವಾದ ಡಿಎನ್ಎ ಪ್ರೋಫೈಲನ್ನು ನೀಡುತ್ತದೆ. ಅಂತೆಯೇ, ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಅಥವಾ ತಂದೆಯ ವಂಶಾವಳಿಯನ್ನು ನಿರ್ಧರಿಸಲೂ ಸಹ ಎಸ್‌ಟಿಆರ್‌ನಲ್ಲಿರುವ "ವೈ" ವರ್ಣತಂತುವನ್ನು ಉಪಯೋಗಿಸಬಹುದು. ಲೈಂಗಿಕ ದೌರ್ಜನ್ಯದ ಪ್ರಕರಣಗಳಲ್ಲಿ, ಸ್ತ್ರೀ ಭಾಗದಿಂದ ಅಧಿಕ ಮಟ್ಟದ ಉಪಸ್ಥಿತಿಯಲ್ಲಿ ಅಥವಾ ಅಜೂಸ್ಪರ್ಮಿಕ್ ಅಥವಾ ಸಂತಾನಹರಣ ಮಾಡಲಾದ ಸಂದರ್ಭದಲ್ಲಿಯೂ ಸಹ ಪುರುಷ ಪ್ರೋಫೈಲ್ ಅನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ. ಪ್ರಕೃತಿಯ ಒತ್ತಡ ಮತ್ತು ಜೀವರಾಸಾಯನಿಕ ಅವನತಿಗೆ ಡಿಎನ್ಎಯು ಒಳಗಾದ ಸಂದರ್ಭದಲ್ಲಿ, ಚಿಕ್ಕದಾದ ಆಂಪ್ಲಿಕಾನ್ ಗಾತ್ರದ ಕಾರಣದಿಂದ ಚಿಕ್ಕ ಐಎಸ್‌ಟಿಆರ್‌ಗಳನ್ನು ವಾಡಿಕೆಯಂತೆ ನಡೆಸಲಾಗುವ ಎಸ್‌ಟಿಆರ್‌ಗೆ ಉಪಯೋಗಿಸಬಹುದು.

ಡಿಎನ್ಎ ಪ್ರೊಫೈಲಿಂಗ್ ಒಂದು ಸಂಕೀರ್ಣ ಪ್ರಕ್ರಿಯೆಯಾಗಿದೆ ಮತ್ತು ಪ್ರಯೋಗಾಲಯದಲ್ಲಿ ಲಭ್ಯವಿರುವ ಸೌಲಭ್ಯವನ್ನು ಅವಲಂಬಿಸಿ ಪ್ರೊಫೈಲ್ ಅನ್ನು ರಚಿಸುವಲ್ಲಿ ಒಳಗೊಂಡಿರುವ ಪ್ರತೀ ಅನುಕ್ರಮ ಹಂತವು ಬದಲಾಗಬಹುದು. ಆದಾಗ್ಯೂ, ವಿಶ್ಲೇಷಣೆಯ ತತ್ವಗಳು ಒಂದೇ ಆಗಿರುತ್ತವೆ, ಅವುಗಳೆಂದರೆ:

1. ಡಿಎನ್ಎಯ ಪ್ರತ್ಯೇಕತೆ, ಶುದ್ಧೀಕರಣ ಮತ್ತು ಪ್ರಮಾಣ
2. ಆಯ್ದ ಅನುವಂಶಿಕ ಗುರುತುಗಳ ವರ್ಧನೆ
3. ತುಣುಕುಗಳನ್ನು ಊಹಿಸುವುದು ಮತ್ತು ಜಿನೋಟೈಪಿಂಗ್
4. ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ ಮತ್ತು ವ್ಯಾಖ್ಯಾನ

ಎಮ್ಟಿ ಡಿಎನ್ಎಯ ವಿಶ್ಲೇಷಣೆಯಲ್ಲಿ, ಹೈಪರ್ವೇರಿಯಬಲ್ ಭಾಗ 1 ಮತ್ತು 2 (ಎಚ್ವಿಆರ್ 1 ಮತ್ತು 2) ರಲ್ಲಿನ ವ್ಯತ್ಯಾಸಗಳನ್ನು ನಿಯಂತ್ರಣ ಮಾದರಿಗಳೊಂದಿಗೆ ಅನುಕ್ರಮ ಮತ್ತು ಫಲಿತಾಂಶಗಳನ್ನು ಹೋಲಿಸುವ ಮೂಲಕ ಕಂಡುಹಿಡಿಯಲಾಗುತ್ತದೆ.....

<u>ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ</u>

ಒಂದು ವಿಲಕ್ಷಣ ಡಿಎನ್ಎ ಮೊಕದ್ದಮೆಯು ಅತ್ಯಾಚಾರದವಾದ ಸಂದರ್ಭದಲ್ಲಿ ಸಂಗ್ರಹಿಸಲಾದ ವೀರ್ಯ ಮತ್ತು ಶಂಕಿತನ ವ್ಯಕ್ತಿಯ ರಕ್ತದ ಮಾದರಿಯಂತಹ ಅಥವಾ ಉಲ್ಲೇಖದ ಮಾದರಿಗಳಂತಹ ಸಾಕ್ಷ್ಯಗಳ ಮಾದರಿಗಳ ಹೋಲಿಕೆಯನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ, ಪ್ರೊಫೈಲ್ ಹೋಲಿಕೆಯ ಮೂರು ಸಂಭವನೀಯ ಫಲಿತಾಂಶಗಳು:

1. ಹೊಂದಾಣಿಕೆ: ಎರಡು ಮಾದರಿಗಳಿಂದ ಸಂಗ್ರಹಿಸಿದ ಡಿಎನ್ಎ ಪ್ರೊಫೈಲ್ಗಳು ಪ್ರತ್ಯೇಕಿಸಲಾಗದಿದ್ದರೆ, ಅವು ಹೊಂದಾಣಿಕೆಯಾಗುತ್ತವೆ ಎಂದು ಹೇಳಲಾಗುತ್ತದೆ.
2. ಪ್ರತ್ಯೇಕಗೊಳಿಸುವಿಕೆ: ಪ್ರೊಫೈಲ್ಗಳ ಹೋಲಿಕೆಯು ವ್ಯತ್ಯಾಸಗಳನ್ನು ತೋರಿಸಿದರೆ, ಅದನ್ನು ವಿಭಿನ್ನ ಮೂಲಗಳಿಂದ ಹುಟ್ಟಿಕೊಳ್ಳುವ ಎರಡು ಮಾದರಿಗಳಿಂದ ಮಾತ್ರ ವಿವರಿಸಬಹುದು.
3. ಅನಿಶ್ಚಿತತೆ: ಮೂರು ಸಂಭವನೀಯ ಫಲಿತಾಂಶಗಳ ನಿರ್ಣಯವನ್ನು ದತ್ತಾಂಶವು ಬೆಂಬಲಿಸುವುದಿಲ್ಲ, ಮಾದರಿಗಳ ನಡುವಿನ "ಹೊಂದಾಣಿಕೆ" ಮಾತ್ರ ಸಂಖ್ಯಾಶಾಸ್ತ್ರೀಯ ಲೆಕ್ಕಾಚಾರದಿಂದ ಬೆಂಬಲಿಸುವ ಅಗತ್ಯವಿದೆ. ಹೊಂದಾಣಿಕೆಗೆ ಅರ್ಥವನ್ನು ಒದಗಿಸಲು ಅಂಕಿಅಂಶಗಳು ಪ್ರಯತ್ನಿಸುತ್ತವೆ. ಹೊಂದಾಣಿಕೆಯ ಅಂಕಿಅಂಶಗಳನ್ನು ಸಾಮನ್ಯವಾಗಿ ರಾಂಡಮ್ ಮ್ಯಾಚ್ ಪ್ರಾಬಬಲಿಟಿ (ಆರ್.ಎಮ್.ಪಿ) ಯ ಅಂದಾಜಿನಂತೆ ಒದಗಿಸಲಾಗುತ್ತದೆ

ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜನಸಂಖ್ಯೆಯಲ್ಲಿನ ನಿರ್ದಿಷ್ಟ ಡಿಎನ್ಎ ಪ್ರೋಫೈಲ್‌ನ ಆವರ್ತನೆಯು ಒದಗಿಸುತ್ತದೆ.

ಪಿತೃತ್ವ/ಮಾತೃತ್ವ ಪರೀಕ್ಷೆಯ ಸಂದರ್ಭದಲ್ಲಿ, ಎರಡಕ್ಕಿಂತ ಹೆಚ್ಚು ಲೋಕಿಗಳನ್ನು ಬೇರ್ಪಡಿಸುವುದನ್ನು ಪ್ರತ್ಯೇಕಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಹೊಂದಾಣಿಕೆಯನ್ನು ವರದಿ ಮಾಡುವಾಗ 1 ಅಥವಾ 2 ಲೋಕಿಗಳ ಸಂಭವನೀಯ ರೂಪಾಂತರಗಳ ಸಾಧ್ಯತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಮಾತೃತ್ವ ಸೂಚ್ಯಂಕಗಳ ಪಿತೃತ್ವವನ್ನು ಮತ್ತು ಸಂಭವನೀಯತೆಯ ಅನುಪಾತದ ಹೊಂದಾಣಿಕೆಯನ್ನು ಮತ್ತಷ್ಟು ಬೆಂಬಲಿಸಲು ಲೆಕ್ಕಾಚಾರ ಮಾಡಲಾಗುತ್ತದೆ.

<u>ಸಾಕ್ಷ್ಯಾಧಾರಗಳ ಸಂಗ್ರಹಣೆ ಮತ್ತು ಸಂರಕ್ಷಣೆ:</u>

ಡಿಎನ್ಎ ಸಾಕ್ಷ್ಯಗಳನ್ನು ಸರಿಯಾಗಿ ದಾಖಲಿಸಿ, ಸಂಗ್ರಹಿಸಿ, ಪ್ಯಾಕ್ ಮಾಡದಿದ್ದರೆ ಮತ್ತು ಸಂರಕ್ಷಿಸದಿದ್ದರೆ, ಕಾನೂನು ನ್ಯಾಯಾಲಯದಲ್ಲಿ ಕಾನೂನುಬದ್ಧ ಮತ್ತು ವೈಜ್ಞಾನಿಕ ಅಗತ್ಯತೆಗಳ ಸ್ವೀಕಾರಾರ್ಹತೆಯನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಡಿಎನ್ಎ ಅತ್ಯಂತ ಚಿಕ್ಕ ಮಾದರಿಗಳನ್ನು ಸಾಕ್ಷ್ಯವಾಗಿ ಬಳಸಬಹುದಾದ್ದರಿಂದ, ಡಿಎನ್ಎ ಸಾಕ್ಷ್ಯವನ್ನು ಪತ್ತೆಹಚ್ಚುವ, ಸಂಗ್ರಹಿಸುವ ಮತ್ತು ಸಂರಕ್ಷಿಸುವಾಗ ಅದಕ್ಕಾಗುವ ಸೋಂಕಿನ ಸಮಸ್ಯೆಗಳಿಗೆ ಹೆಚ್ಚಿನ ಗಮನ ನೀಡುವುದು ಅಗತ್ಯವಾಗಿರುತ್ತದೆ. ಮೊಕದ್ದಮೆಗೆ ಸಂಬಂಧಿಸಿದ ಡಿಎನ್ಎಯೊಂದಿಗೆ ಮತ್ತೊಂದು ಮೂಲದಿಂದ ಸಂಗ್ರಹಿಸಿದ ಡಿಎನ್ಎ ಮಿಶ್ರಿತಗೊಂಡಾಗ ಡಿಎನ್ಎ ಸಾಕ್ಷ್ಯವು ಮಲಿನಗೊಳ್ಳುತ್ತದೆ. ಯಾರಾದರೂ ಸಾಕ್ಷ್ಯದ ಮೇಲೆ ಸೀನಿದಾಗ ಅಥವಾ ಕೆಮ್ಮಿದಾಗ ಅಥವಾ ಆತ/ಆಕೆ ತಮ್ಮ ಬಾಯಿ, ಮೂಗು ಅಥವಾ ಮುಖದ ಇತರ ಭಾಗವನ್ನು ಸ್ಪರ್ಶಿಸಿದಾಗ ಮತ್ತು ಪರೀಕ್ಷಿಸಬೇಕಾದ ಡಿಎನ್ಎ ಒಳಗೊಂಡಿರುವ ಭಾಗವನ್ನು ಸ್ಪರ್ಶಿಸಿದಾಗ ಇದು ಸಂಭವಿಸಬಹುದು. ನೊಂದವರ, ಶಂಕಿತರ, ಘಟನಾ ಸ್ಥಳದೊಂದಿಗೆ ಸಂಪರ್ಕವನ್ನು ಸಾಧಿಸುವ ಜೈವಿಕ ಮಾದರಿಯನ್ನು ಹೊಂದಿದ ನಿಶಾನೆಗಳನ್ನು, ಮೊಕದ್ದಮೆಯನ್ನು ಪರಿಹರಿಸಲು ಗುರುತಿಸಬೇಕು, ಸಂರಕ್ಷಿಸಬೇಕು, ಪ್ಯಾಕ್ ಮಾಡಬೇಕು ಮತ್ತು ಡಿಎನ್ಎ ಪ್ರೋಫೈಲಿಂಗ್‌ಗೆ ಕಳುಹಿಸಬೇಕು.

135. ಈ ಹಿಂದಿನ ತೀರ್ಪಿನಲ್ಲಿ, ಯು.ಕೆ. ಅಪೀಲು ನ್ಯಾಯಾಲಯವು *ಆರ್. ವಿರುದ್ದ ಡೊಹೂನಿ ಮತ್ತು ಅಡಮ್ಸ್*[41] ಮೊಕದ್ದಮೆಯಲ್ಲಿ, ಡಿಎನ್ಎ ಸಾಕ್ಷ್ಯವನ್ನು ಅಧಿವಿಚಾರಣೆಯಲ್ಲಿ ಪರಿಚರಿಸುವ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮಾರ್ಗಸೂಚಿಗಳನ್ನು ಒದಗಿಸಿರುತ್ತದೆ: (1) ವಿಜ್ಞಾನಿಯು, ಯಾದೃಚ್ಛಿಕ ಸಂಭವಿಸುವಿಕೆಯ ಅನುಪಾತದ (ರಾಂಡಮ್ ಅಕರೆನ್ಸ್ ರೇಷಿಯೋ) ತಮ್ಮ ಲೆಕ್ಕಾಚಾರದೊಂದಿಗೆ ಡಿಎನ್ಎಯನ್ನು ಹೋಲಿಕೆ ಮಾಡಿದ ಸಾಕ್ಷ್ಯವನ್ನು ಮಂಡಿಸಬೇಕು; (2) ಅಂತಹ ಸಾಕ್ಷ್ಯವನ್ನು ಮಂಡಿಸುವಾಗ, ಅಭಿಯೋಜನೆಯು ಲೆಕ್ಕಾಚಾರಗಳನ್ನು ಹೇಗೆ ಮಾಡಲಾಯಿತು ಎಂಬ ಪ್ರತಿರಕ್ಷೆಯ ವಿವರದ ಮೇಲೆ ಕಾರ್ಯನಿರ್ವಹಿಸಬೇಕು ಮತ್ತು ಇದು ಲೆಕ್ಕಾಚಾರದ ಆಧಾರಗಳನ್ನು ಪರಿಶೀಲಿಸಲು ಪ್ರತಿರಕ್ಷೆಗೆ ಅಗತ್ಯವಿರುವಷ್ಟು ಇರುತ್ತದೆ: (3) ವಿನಂತಿಸಿದರೆ, ವಿಧಿ ವಿಜ್ಞಾನ ಸೇವೆಯು ಲೆಕ್ಕಾಚಾರವನ್ನು ಆಧರಿಸಿದ ಡೇಟಾಬೇಸ್ಗಳು ಪ್ರತಿರಕ್ಷೆಯ ತಜ್ಞರಿಗೆ ಲಭ್ಯವಾಗುವಂತೆ ಮಾಡಬೇಕು.

136. ಭಾರತದ ಕಾನೂನು ಆಯೋಗವು ತನ್ನ *ವರದಿಯಲ್ಲಿ*[42] ಈ ಕೆಳಗಿನಂತೆ ಗಮನಿಸಿದೆ:

> "ಡಿಎನ್ಎ ಸಾಕ್ಷ್ಯವು ಅಸ್ಮಿತೆಯ ಸಮಸ್ಯೆಯಿರುವ ವ್ಯಕ್ತಿಯಿಂದ ಪಡೆದಿರುವ ಅನುವಂಶಿಕ ಅಂಶ ಮತ್ತು ತಿಳಿದಿರುವ ವ್ಯಕ್ತಿಯಿಂದ ಪಡೆದಿರುವ ಮಾದರಿ ಅನುವಂಶಿಕ ಅಂಶಗಳ ನಡುವೆ ಹೋಲಿಕೆಯನ್ನು ಒಳಗೊಂಡಿರುತ್ತದೆ. ಮಾದರಿಗಳು 'ಹೊಂದಾಣಿಕೆಯಾಗದಿದ್ದರೆ', ಪರಿಚಿತ ವ್ಯಕ್ತಿಗಳು ಮತ್ತು ಅಪರಿಚಿತ ಮಾದರಿಯನ್ನು ಪಡೆದ ವ್ಯಕ್ತಿಯ ನಡುವೆ ಅಸ್ಮಿತೆಯ ಕೊರತೆಯನ್ನು ಸಾಬೀತುಪಡಿಸುತ್ತದೆ. ಆದರೆ ಮಾದರಿಗಳು ಹೊಂದಾಣಿಕೆಯಾದರೆ, ಅಸ್ಮಿತೆಯನ್ನು ನಿರ್ಣಾಯಕವಾಗಿ ಸಾಬೀತುಪಡಿಸಲಾಗಿದೆ ಎಂದು ಅರ್ಥವಲ್ಲ. ಬದಲಿಗೆ, ಒಂದೇ ರೀತಿಯ ಡಿಎನ್ಎ 'ಪ್ರೋಫೈಲ್' ಅಥವಾ 'ಫಿಂಗರ್ಪ್ರಿಂಟ್' ಅಂದಾಜು ಎಷ್ಟು ಬಾರಿ ಕಂಡುಬರುತ್ತವೆ ಎಂಬುದನ್ನು ಡಿಎನ್ಎ ಮಾದರಿಗಳ ದತ್ತಸಂಚಯದಿಂದ ಪಡೆಯಲು ತಜ್ಞರು ಅರ್ಹರಿರುತ್ತಾರೆ. ಉದಾಹರಣೆಗೆ, ಪ್ರತಿ 1,00,000 ರಲ್ಲಿ 1 ವ್ಯಕ್ತಿಯಲ್ಲಿ ಸಂಬಂಧಿತ ಪ್ರೋಫೈಲ್ ಕಂಡುಬರಬಹುದು; ಇದನ್ನು 'ರಾಂಡಮ್ ಅಕರೆನ್ಸ್ ರೇಷಿಯೋ' ಎಂದು ವಿವರಿಸಲಾಗಿದೆ (ಫಿಪ್ಸನ್ 1999)

41. 1997 (1) ಕ್ರಿ.ಅ.ರೆಪ್.369.
42. ರಿವ್ಯೂ ಆಫ್ ಇಂಡಿಯನ್ ಎವಿಡೆನ್ಸ್ ಆಕ್ಟ, 2003 ರ 185 ನೇ ವರದಿ.

ಹೀಗಾಗಿ, ತನಿಖೆಯ ಉದ್ದೇಶಗಳಿಗಾಗಿ ಡಿಎನ್ಎ ಹೆಚ್ಚು ಉಪಯುಕ್ತವಾಗಬಹುದು ಆದರೆ ಕಾನೂನು ನ್ಯಾಯಾಲಯದಲ್ಲಿ ಅಸ್ಮಿತೆಯ ಯಾವುದೇ ಊಹೆಯನ್ನು ಉದ್ಭವಿಸಲು ಉಪಯುಕ್ತವಾದುದಲ್ಲ.

137. *ಧರಮ್ ದಿಯೋ ಯಾದವ್ ವಿರುದ್ಧ ಯು.ಪಿ ರಾಜ್ಯ*[43] ಮೊಕದ್ದಮೆಯಲ್ಲಿ, ಕ್ರಿಮಿನಲ್ ಅಧಿವಿಚಾರಣೆಯಲ್ಲಿ ನ್ಯಾಯಾಲಯವು ಡಿ.ಎನ್.ಎ ಸಾಕ್ಷ್ಯದ ವಿಶ್ವಾಸಾರ್ಹತೆಯನ್ನು ಚರ್ಚಿಸಿರುತ್ತದೆ ಮತ್ತು ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತದೆ;

> "ಡಿಎನ್ಎ ಎಂದರೆ ಡಿಆಕ್ಸಿರೈಬೊನ್ಯೂಕ್ಲಿಯಕ್ ಆಮ್ಲ, ಮತ್ತು ಇದು ಪ್ರತಿ ಜೀವನದ ಜೈವಿಕ ನೀಲಿನಕ್ಷೆಯಾಗಿರುತ್ತದೆ. ಡಿಎನ್ಎಯು ಡಿಆಕ್ಸಿರೈಬೋಸ್ ಸಕ್ಕರೆ ಮತ್ತು ಫಾಸ್ಫೇಟ್ ಆಧಾರವನ್ನು ಒಳಗೊಂಡಿರುವ ಡಬಲ್ ಸ್ಟ್ಯಾಂಡರ್ಡ್ ರಚನೆಯಿಂದ ಮಾಡಲ್ಪಟ್ಟಿರುತ್ತದೆ ಮತ್ತು ಅಡೆನಿನ್ ಮತ್ತು ಗ್ವಾನೈನ್, ಪ್ಯೂರಿನ್ಗಳು ಮತ್ತು ಥೈಮಿನ್ ಮತ್ತು ಸೈಟೋಸಿನ್ ಪಿರಮಿಡಿನ್ಗಳು ಎಂದು ಕರೆಯಲ್ಪಡುವ ಎರಡು ವಿವಿಧ ನ್ಯೂಕ್ಲಿಯಕ್ ಆಮ್ಲಗಳೊಂದಿಗೆ ಅಡ್ಡ ಜೋಡಣೆಯಾಗಿರುತ್ತದೆ..... ಯಾವುದೇ ಜೈವಿಕ ಅಂಶವಾದ ರಕ್ತ, ವೀರ್ಯ, ಲಾಲಾರಸ, ಕೂದಲು, ಚರ್ಮ, ಮೂಳೆ ಇತ್ಯಾದಿಗಳಿಂದ ಡಿಎನ್ಎಯನ್ನು ಸಾಮಾನ್ಯವಾಗಿ ಸಂಗ್ರಹಿಸಬಹುದಾಗಿದೆ. ಡಿಎನ್ಎ ಪರೀಕ್ಷೆಗಳು ವಾಸ್ತವವಾಗಿ ತಪ್ಪಾಗುವುದಿಲ್ಲದೇ ಎಂಬ ಪ್ರಶ್ನೆಯು ಒಂದು ಪ್ರಮುಖ ಪ್ರಶ್ನೆಯಾಗಿರಬಹುದು, ಆದರೆ ಅಂತಹ ಪರೀಕ್ಷೆಗಳು ಚಾಲ್ತಿಯಲ್ಲಿದ್ದು, ಅಪರಾಧಗಳ ತನಿಖೆಯಲ್ಲಿ ಇದನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ ಮತ್ತು ವಿಶೇಷವಾಗಿ ಮೊಕದ್ದಮೆಗಳು ಸಾಂಧರ್ಬಿಕ ಸಾಕ್ಷ್ಯದ ಮೇಲೆ ಅವಲಂಬಿಸಿದಾಗ ನ್ಯಾಯಾಲಯಗಳು ಹಲವುಬಾರಿ ತಜ್ಞರ ಅಭಿಪ್ರಾಯಗಳನ್ನು ಸ್ವೀಕರಿಸುತ್ತದೆ. ಅರ್ಧ ಶತಮಾನಕ್ಕೂ ಹೆಚ್ಚಿನ ಕಾಲದಿಂದ, ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಮಾನವನ ಡಿಎನ್ಎ ಮಾದರಿಗಳನ್ನು ಬಳಸಲಾರಂಭಿಸಿರುತ್ತದೆ. ಸಹಜವಾಗಿ, ಮಾದರಿಗಳನ್ನು ಪರೀಕ್ಷಿಸುವಲ್ಲಿ ಮತ್ತು ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಪ್ರಸ್ತುತಪಡಿಸುವಲ್ಲಿ ಅಗತ್ಯವಿರುವ ಸುರಕ್ಷತೆಗಳ ಬಗೆಗಿನ ಚರ್ಚೆಯು ಕಾಲಹರಣ ಮಾಡುತ್ತಿದೆ. ಆದಾಗ್ಯೂ, ಡಿಎನ್ಎ ಪ್ರೋಫೈಲನ್ನು ಸ್ಥಿರವಾಗಿ ಮಾನ್ಯ ಮತ್ತು ವಿಶ್ವಾಸಾರ್ಹವೆಂದು ಪರಿಗಣಿಸಲಾಗಿದೆ. ಆದರೆ ಸಹಜವಾಗಿ, ಪ್ರಯೋಗಾಲಯದಲ್ಲಿನ ಗುಣಮಟ್ಟದ ನಿಯಂತ್ರಣ ಮತ್ತು ಗುಣಮಟ್ಟದ ಭರವಸೆಯ ಕಾರ್ಯವಿಧಾನಗಳನ್ನು ಅವಲಂಬಿಸಿರುತ್ತದೆ".

43. (2015) 5 ಎಸ್ಸಿಸಿ 509.

138. *ಡಿಸ್ಟ್ರಿಕ್ ಅಟಾರ್ನಿ ಕಛೇರಿಯಲ್ಲಿನ ಮೂರನೇ ಜುಡಿಶಿಯಲ್ ಡಿಸ್ಟ್ರಿಕ್ಟ್ ವಿರುದ್ಧ ಆಸ್ಬೋರ್ನ್*[44] ಮೊಕದ್ದಮೆಯಲ್ಲಿ, ಯು.ಎಸ್.ನ ಸರ್ವೋಚ್ಚ ನ್ಯಾಯಾಲಯವು, ಹೊಸ ಡಿಎನ್ಎ ತಂತ್ರಗಳ ಮೂಲಕ ತನ್ನ ನಿರಪರಾಧಿತ್ವವನ್ನು ಸಾಬೀತುಪಡಿಸಲು ಬಯಸಿದ ಅಪರಾಧಿಯ ಆದೇಶದ ಮೇರೆಗೆ ಸಾಕ್ಷ್ಯವನ್ನು ಅಪರಾಧ ನಿರ್ಣಯದ ನಂತರದೊಂದಿಗೆ ಕ್ಲೇಮು ಮಾಡಿರುವುದನ್ನು ಗಮನಿಸಿರುತ್ತದೆ. ವಾಸ್ತವಾಂಶದ ಸಂದರ್ಭದಲ್ಲಿ, ಈ ಕೆಳಗಿನಂತೆ ಗಮನಿಸಿರುತ್ತದೆ;

> "ಆಧುನಿಕ ಡಿಎನ್ಎ ಪರೀಕ್ಷೆಯು ಈ ಹಿಂದೆ ತಿಳಿದಿರುವುದಕ್ಕಿಂತ ಭಿನ್ನವಾಗಿ ಪ್ರಬಲವಾದ ಹೊಸ ಸಾಕ್ಷ್ಯವನ್ನು ಒದಗಿಸುತ್ತದೆ. 1980 ರ ದಶಕದ ಮಧ್ಯಭಾಗದಲ್ಲಿ ಕ್ರಿಮಿನಲ್ ತನಿಖೆಗಳಲ್ಲಿ ಅದರ ಮೊದಲ ಬಳಕೆಯಿಂದ, ಡಿಎನ್ಎ ತಂತ್ರಜ್ಞಾನದಲ್ಲಿ ಹಲವಾರು ಪ್ರಮುಖ ಪ್ರಗತಿಗಳು ಕಂಡುಬಂದಿವೆ ಮತ್ತು ಇದು ಎಸ್.ಟಿ.ಆರ್ ತಂತ್ರಜ್ಞಾನವನ್ನು ಉತ್ತುಂಗಕ್ಕೇರಿಸಿದೆ. ಒಂದು ಜೈವಿಕ ಅಂಗಾಂಶವು ಶಂಕಿತ ವ್ಯಕ್ತಿಗೆ ಹೊಂದಿಕೆಯಾಗುತ್ತದೆಯೇ ಎಂಬುದನ್ನು ಖಚಿತವಾಗಿ ನಿರ್ಧರಿಸಲು ಈಗ ಸಾಮಾನ್ಯವಾಗಿ ಸಾಧ್ಯವಿದೆ. ಸಹಜವಾಗಿಯೇ, ಅನೇಕ ಕ್ರಿಮಿನಲ್ ಅಧಿವಿಚಾರಣೆಗಳು ಯಾವುದೇ ವಿಧಿ ವಿಜ್ಞಾನ ಮತ್ತು ವೈಜ್ಞಾನಿಕ ಪರೀಕ್ಷೆಗಳಲ್ಲದೆಯೇ ಮುಂದವರಿಯುತ್ತಿದ್ದು, ಅಂತಹ ಸಾಕ್ಷ್ಯದಲ್ಲಿ ಸಮಸ್ಯೆಯಿರುವಾಗ ಹೊಂದಾಣಿಕೆಯ ಅಂಗಾಂಶಗಳಿಗೆ ಡಿಎನ್ಎ ಪರೀಕ್ಷೆಯನ್ನು ಹೋಲಿಸಬಹುದಾದ ಯಾವುದೇ ತಂತ್ರಾಜ್ಞಾನವಿಲ್ಲ. ಡಿಎನ್ಎ ಪರೀಕ್ಷೆಯು, ತಪ್ಪಾಗಿ ಶಿಕ್ಷೆಗೊಳಗಾದ ಜನರನ್ನು ದೋಷಮುಕ್ತಗೊಳಿಸಿದೆ ಮತ್ತು ಇತರ ಅನೇಕ ಅಪರಾಧಗಳನ್ನು ದೃಢಪಡಿಸಿರುತ್ತದೆ.

139. ಈ ನ್ಯಾಯಾಲಯದ ಹಲವು ನಿರ್ಧಾರಗಳು ಅಂದರೆ *ಪಂತಂಗಿ ಬಲರಾಮ ವೆಂಕಟ್ ಗಣೇಶ್ ವಿರುದ್ಧ ಆಂಧ್ರ ಪ್ರದೇಶ ರಾಜ್ಯ*[45], *ಸಂತೋಷ ಕುಮಾರ್ ಸಿಂಗ್ ವಿರುದ್ಧ ಸಿಬಿಐನ ಮೂಲಕ ರಾಜ್ಯ*[46], *ಇನ್ಸ್ಪೆಕ್ಟರ್ ಆಫ್ ಪೊಲೀಸ್, ತಮಿಳುನಾಡು ವಿರುದ್ಧ ಜಾನ್ ಡೇವಿಡ್*[47], *ಕ್ರಿಶನ್ ಕುಮಾರ್ ಮಲಿಕ್ ವಿರುದ್ಧ ಹರಿಯಾಣ ರಾಜ್ಯ*[48], *ಸುರೇಂದ್ರ ಕೋಲಿ*

44. 557 ಯು.ಎಸ್. 52 (2009)
45. (2009) 14 ಎಸ್ಸಿಸಿ 607
46. (2010) 9 ಎಸ್ಸಿಸಿ 747
47. (2011) 5 ಎಸ್ಸಿಸಿ 509
48. (2011) 7 ಎಸ್ಸಿಸಿ 130

ವಿರುದ್ಧ ಉತ್ತರ ಪ್ರದೇಶ ಮತ್ತು ಇತರರು[49], ಮತ್ತು *ಸಂದೀಪ್ ವಿರುದ್ಧ ಉತ್ತರ ಪ್ರದೇಶ ರಾಜ್ಯ*[50], *ರಾಜ್‌ಕುಮಾರ್ ವಿರುದ್ಧ ಮಧ್ಯಪ್ರದೇಶ ರಾಜ್ಯ*[51], ಮತ್ತು *ಮುಖೇಶ್ ಮತ್ತು ಇತರರು ವಿರುದ್ಧ ದೆಹಲಿ ರಾಜ್ಯದ ಎನ್‌ಸಿಟಿ ಮತ್ತು ಇತರರು*[52] ಮೊಕದ್ದಮೆಗಳಲ್ಲಿ ಡಿಎನ್‌ಎ ಸಾಕ್ಷ್ಯಾಧಾರಗಳ ಹೆಚ್ಚುತ್ತಿರುವ ಪ್ರಾಮುಖ್ಯತೆಯೊಂದಿಗೆ ಚರ್ಚಿಸಿರುತ್ತದೆ. *ಅನಿಲ್ ವಿರುದ್ಧ ಮಹಾರಾಷ್ಟ್ರ ರಾಜ್ಯ*[53] ಮೊಕದ್ದಮೆಯಲ್ಲಿ ಮಾದರಿಗಳ ಬಗ್ಗೆ ಗುಣಮಟ್ಟದ ನಿಯಂತ್ರಣವನ್ನು ಮತ್ತು ಪರೀಕ್ಷೆಯ ತಂತ್ರದ ಬಗ್ಗೆ ಖಾತರಿಪಡಿಸುವ ಅಗತ್ಯವಿದೆ ಎಂಬುದನ್ನೂ ಸಹ ಈ ನ್ಯಾಯಾಲಯವು ಒತ್ತಿಹೇಳಿರುತ್ತದೆ.

> "7. ಡಿಆಕ್ಸಿರೈಬೋನ್ಯೂಕ್ಲಿಯಕ್ ಆಮ್ಲ ಅಥವಾ ಡಿಎನ್‌ಎ, ಎಲ್ಲಾ ಜೀವಿಗಳಲ್ಲಿನ ಅನುವಂಶಿಕ ಮಾಹಿತಿಯನ್ನು ಸಂಕೇತಿಸುವ ಅಣುವಾಗಿದೆ. ಮೂಳೆ, ರಕ್ತ, ವೀರ್ಯ, ಲಾಲಾರಸ, ಕೂದಲು, ಚರ್ಮ ಮುಂತಾದ ಯಾವುದೇ ಜೈವಿಕ ಅಂಶದಿಂದ ಡಿಎನ್‌ಎ ಜಿನೋಟೈಪ್ ಅನ್ನು ಸಂಗ್ರಹಿಸಬಹುದ. ಈಗ, ಹಲವಾರು ವರ್ಷಗಳಿಂದ, ಡಿಎನ್‌ಎ ಪ್ರೊಫೈಲ್ ಕೂಡ ವಿಧಿವಿಜ್ಞಾನದ ತನಿಖೆಯ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿರುತ್ತದೆ. ಸಾಮಾನ್ಯವಾಗಿ, ಅಪರಾಧದ ಸ್ಥಳದಲ್ಲಿ ಕಂಡುಬರುವ ಮಾದರಿ ಡಿಎನ್‌ಎ ಪ್ರೋಫೈಲ್‌ಗಳು ಶಂಕಿತ ವ್ಯಕ್ತಿಯ ಡಿಎನ್‌ಎ ಪ್ರೊಫೈಲ್‌ನೊಂದಿಗೆ ಹೊಂದಾಣಿಕೆಯಾದಾಗ, ಎರಡೂ ಮಾದರಿಗಳು ಒಂದೇ ಜೈವಿಕ ಮೂಲವನ್ನು ಹೊಂದಿವೆ ಎಂದು ಸಾಮಾನ್ಯವಾಗಿ ತೀರ್ಮಾನಿಸಬಹುದು. ಡಿಎನ್‌ಎ ಪ್ರೋಫೈಲ್ ಮಾನ್ಯ ಮತ್ತು ವಿಶ್ವಾಸಾರ್ಹವಾಗಿದೆ ಆದರೆ ನಿರ್ದಿಷ್ಟ ಫಲಿತಾಂಶದಲ್ಲಿನ ವ್ಯತ್ಯಾಸವು ಪ್ರಯೋಗಾಲಯದಲ್ಲಿನ ಗುಣಮಟ್ಟದ ನಿಯಂತ್ರಣ ಮತ್ತು ಗುಣಮಟ್ಟದ ಕಾರ್ಯವಿಧಾನವನ್ನು ಅವಲಂಬಿಸಿರುತ್ತದೆ.

140. ಈ ನ್ಯಾಯಾಲಯವು ಇತ್ತೀಚೆಗೆ ನೀಡಿದ ನಿರ್ಧಾರಗಳಲ್ಲಿ ಅಂದರೆ *ಪಟ್ಟು ರಾಜನ್ ವಿರುದ್ಧ ತಮಿಳುನಾಡು ರಾಜ್ಯ*[54] ಮೊಕದ್ದಮೆಯಲ್ಲಿ, ಡಿಎನ್‌ಎ ವರದಿಗೆ ನೀಡಬೇಕಾದ ಮೌಲ್ಯ ಮತ್ತು ಪ್ರಾಮುಖ್ಯವನ್ನು ಪರಿಗಣಿಸಲಾಗಿದೆ.

49. (2011) 4 ಎಸ್‌ಸಿಸಿ 80
50. (2012) 6 ಎಸ್‌ಸಿಸಿ 107
51. (2014) 5 ಎಸ್‌ಸಿಸಿ 353
52. (2017) 6 ಎಸ್‌ಸಿಸಿ 1
53. (2014) 4 ಎಸ್‌ಸಿಸಿ 69
54. (2019) 4 ಎಸ್‌ಸಿಸಿ 771

"33. ಇತರ ಎಲ್ಲಾ ಅಭಿಪ್ರಾಯ ಸಾಕ್ಷ್ಯಗಳಂತೆ, ಡಿಎನ್ಎ ಸಾಕ್ಷ್ಯಗಳಿಗೆ ನೀಡಲಾದ ಪ್ರಾಯೋಗಿಕ ಮೌಲ್ಯವು ಮೊಕದ್ದಮೆಯಿಂದ ಮೊಕದ್ದಮೆಗೆ ಬದಲಾಗುತ್ತದೆ ಮತ್ತು ಇದು ವಸ್ತುಸ್ಥಿತಿ ಮತ್ತು ಸಂದರ್ಭಗಳು ಮತ್ತು ದಾಖಲೆಯಲ್ಲಿರುವ ಇತರ ಸಾಕ್ಷ್ಯಗಳಿಗೆ, ವಿರುದ್ಧವಾಗಿ ಅಥವಾ ಸಮರ್ಥನೀಯವಾಗಿ, ಪ್ರಾಮುಖ್ಯವನ್ನು ನೀಡುವುದರ ಮೇಲೆ ಅವಲಂಬಿತವಾಗಿರುತ್ತದೆ. ದಿನದಿಂದ ದಿನಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯೊಂದಿಗೆ ಡಿಎನ್ಎ ಸಾಕ್ಷ್ಯಗಳ ನಿಖರತೆ ಹೆಚ್ಚಾಗುತ್ತಿದ್ದರೂ ಸಹ, ಮತ್ತು ಆ ಮೂಲಕ ಅದನ್ನು ಹೆಚ್ಚು ಹೆಚ್ಚು ವಿಶ್ವಾಸಾರ್ಹವಾಗಿಸಿದರೂ ಸಹ, ನಾವು ಇನ್ನೂ ಡಿಎನ್ಎ ದೋಷಪೂರಿತವಾಗದು ಎಂದು ಹೇಳಬಹುದಾದ ಹಂತವನ್ನು ತಲುಪಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಪ್ರಮುಖವಾಗಿದೆ. ಹೀಗಾಗಿ, ಡಿಎನ್ಎ ಸಾಕ್ಷ್ಯಗಳ ಅನುಪಸ್ಥಿತಿಯು ಪಾಕ್ಷಕಾರನ ವಿರುದ್ಧ ಪ್ರತಿಕೂಲವಾದ ನಿರ್ಣಯಕ್ಕೆ ಕಾರಣವಾಗುತ್ತದೆ ಎಂದು ಹೇಳಲಾಗುವುದಿಲ್ಲ; ವಿಶೇಷವಾಗಿ ಅಂತಹ ಪಕ್ಷಕಾರನ ಪರವಾಗಿ ದಾಖಲೆಯಲ್ಲಿರುವ ಇತರ ಸಮರ್ಪಕವಾದ ಮತ್ತು ವಿಶ್ವಾಸಾರ್ಹ ಸಾಕ್ಷ್ಯಗಳ ಉಪಸ್ಥಿತಿಯಲ್ಲಿ ಹಾಗೆ ಹೇಳಲು ಸಾಧ್ಯವಿರುವುದಿಲ್ಲ.

141. ಆದರಿಂದ, ಈ ಹಿಂದೆ, ಆರೋಪಿಯ ಅಪರಾಧವನ್ನು ಸಾಬೀತುಪಡಿಸಲು ಕೋರಿದಾಗ ಈ ನ್ಯಾಯಾಲಯವು ಡಿಎನ್ಎ ವರದಿಗಳ ಮೇಲೆ ಅವಲಂಬಿತವಾಗಿದೆ. ಗಮನಾರ್ಹವಾಗಿ, ಅವಲಂಬನೆಯನ್ನು ಪುಷ್ಟೀಕರಿಸಲು ಮಾಡಲಾಗಿರುತ್ತದೆ. ಪರೀಕ್ಷೆಯಲ್ಲಿನ ಗುಣಮಟ್ಟವನ್ನು ಖಾತ್ರಿಪಡಿಸುವ ಅಗತ್ಯವನ್ನು ಎತ್ತಿ ತೋರಿಸುವ ಮತ್ತು ಸಾಕ್ಷ್ಯದ ಮಾಲಿನ್ಯದ ಸಾಧ್ಯತೆಯನ್ನು ನಿರ್ಮೂಲನೆ ಮಾಡುವ ಅಗತ್ಯದ ಬಗ್ಗೆ ಈ ನ್ಯಾಯಾಲಯವು ಒತ್ತಿಹೇಳುತ್ತದೆ ಮತ್ತು ಒಂದು ಮೊಕದ್ದಮೆಯಿಂದ ಇನ್ನೊಂದು ಮೊಕದ್ದಮೆಗೆ ಅಂತಹ ಸಾಕ್ಷ್ಯದ ಪ್ರಾಯೋಗಿಕ ಮೌಲ್ಯವು ಬದಲಾಗುತ್ತಿರುತ್ತವೆ ಎಂದೂ ಸಹ ಅಭಿಪ್ರಾಯಪಟ್ಟಿರುತ್ತದೆ.

142. ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಾ.ಸಾ.35 ತಮ್ಮ ಮುಖ್ಯ ವಿಚಾರಣೆಯಲ್ಲಿ ಡಿಎನ್ಎ ವಿಶ್ಲೇಷಣೆಯನ್ನು ವಾಸ್ತವಿಕವಾಗಿ ಪ್ರತಿಧ್ವನಿಸಿರುವುದು ಮತ್ತು ಯಾದೃಚ್ಛಿಕ ಸಂಭವಿಸುವಿಕೆಯ ಅನುಪಾತವನ್ನು ಅಂದರೆ ಆರೋಪಿಗಳ ಮಾದರಿಗಳು ಘಟನಾ ಸ್ಥಳದಲ್ಲಿ ದೊರೆತವುಗಳು ಎಂದು ಹೇಳಲಾದೊಂದಿಗೆ ಹೊಂದಾಣಿಕೆಯಾಗುವ ಸಂಭವೀಯತೆಯನ್ನು ವಿವರಿಸಲು

ಆಯ್ಕೆಮಾಡಿಕೊಂಡಿಲ್ಲದಿರುವುದು ಸ್ಪಷ್ಟವಾಗಿರುತ್ತದೆ. ದಿನಾಂಕ 23.06.2011 ರಂದು ನೀಡಿದ ವಿವರಣಾ ಹೇಳಿಕೆಗಳ ಅನುಸಾರವಾಗಿ ಆ ದಿನ ವಶಪಡಿಸಿಕೊಂಡ ವಸ್ತುಗಳನ್ನು ಅಂಗೀಕರಿಸಬಹುದೇ ಎಂಬುದನ್ನು ಈ ನ್ಯಾಯಾಲಯವು ಈಗಾಗಲೇ ಚರ್ಚಿಸಿರುತ್ತದೆ ಮತ್ತು ಅವು ಅನುಮಾನಾಸ್ಪದವಾಗಿದೆ ಮತ್ತು ತಿರಸ್ಕರಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಡಲಾಗಿರುತ್ತದೆ. ಅಪರಾಧ ಸ್ಥಳದಲ್ಲಿ ಸಂಗ್ರಹಿಸಲಾದ ಮಾದರಿಗಳು, ದಿನಾಂಕ 22.06.2011 ರಂದು ಜಪ್ತಿಪಡಿಸಿಕೊಳ್ಳಲಾದ (ಚಾಕುಗಳು ಮತ್ತು ಇತರೆ ವಸ್ತುಗಳು) ವಸ್ತುಗಳೊಂದಿಗೆ ಹೊಂದಾಣಿಕೆಯಾಗುತ್ತದೆ ಎಂಬ ವರದಿಯು ಅನಿಶ್ಚಿತೆಯಿಂದ ಕೂಡಿರುತ್ತದೆ.

143. ನಿ.ಪಿ.27–ಜಪ್ತಿ ಮೆಮೊದ ಅನುಸಾರವಾಗಿ ಜಪ್ತಿಪಡಿಸಿಕೊಳ್ಳಲಾಯಿತು ಎಂದು ಹೇಳಲಾಗುವ ವಸ್ತು ಎ–9, <u>ವಾಸ್ತವವಾಗಿ ಒಂದು ಬೆಡ್‌ಶೀಟ್ ಅನ್ನು ಜಪ್ತಿಪಡಿಸಿಕೊಳ್ಳಲಾಗಿದೆ ಎಂದು ದಾಖಲಿಸುವುದಿಲ್ಲ</u> ಎಂಬುದು ಗಮನಾರ್ಹವಾಗಿರುತ್ತದೆ. ದಿನಾಂಕ 23.04.2011 ರಂದು ನೇಹಾರವರಿಗೆ ಸಂಬಂಧಿಸಿದಂತೆ ಮೂಲ ಎಚ್2 (ಐಡಿ 3078) ಅನ್ನು ಒಂದು ತೆರೆದ ಪ್ರದೇಶದಿಂದ ಸಂಗ್ರಹಿಸಲಾಯಿತು ಎಂದು ನೆನಪಿನಲ್ಲಿಟ್ಟುಕೊಂಡರೆ, ಅದರ ಮಾಲಿನ್ಯದ ಸಾಧ್ಯತೆ ಮತ್ತು ಅದನ್ನು ವಶಪಡಿಸಿಕೊಂಡ ನೈಜತೆಯ ಬಗ್ಗೆ ವಾದ ಮಂಡಿಸಿದರೂ ಸಹ, ಅದನ್ನು ಸ್ವೀಕರಿಸಬಹುದು ಎಂಬುದು ಕೆಲ ಪ್ರಮಾಣದ ಸಂಭಾವ್ಯತೆಯನ್ನು ಒಳಗೊಂಡಿರುತ್ತದೆ. ಈ ಎಲ್ಲ ಕಾರಣಗಳಿಗಾಗಿ, ಪ್ರಸ್ತುತ ಮೊಕದ್ದಮೆಯಲ್ಲಿ ಡಿಎನ್‌ಎ ವರದಿಯು ಯಾವುದೇ ಹಿಡಿದಿಡುವ ಅಥವಾ ಹೆಚ್ಚಿನ ಪ್ರಮಾಣದ ಪ್ರಾಯೋಗಿಕ ಮೌಲ್ಯವನ್ನು ಹೊಂದಿರುವುದಿಲ್ಲ ಎಂದು ಅಭಿಪ್ರಾಯಪಡಲಾಗಿದೆ.

XII. ಹೆಜ್ಜೆಗುರುತುಗಳಿಗೆ ಸಂಬಂಧಿಸಿದ ಸಾಕ್ಷ್ಯಗಳು:

144. ಪ್ರಾ.ಸಾ.21–ಡಾ. ಸುಧೀರ್ ಶರ್ಮಾ ಅವರು ಸಿದ್ದಪಡಿಸಿದ ತಪಾಸಣೆ ವರದಿಯು (ನಿ.ಪಿ.77) ಅಪರಾಧ ಸ್ಥಳವನ್ನು ವಿವರಿಸುತ್ತದೆ. ಈ ಕೆಳಗಿನ ಪ್ರದೇಶಗಳಲ್ಲಿ ಮೂರು ವಿವಿಧ ರಕ್ತಸಿಕ್ತ ಅಪೂರ್ಣ ಶೂ ಪ್ರಿಂಟ್‌ಗಳು ಕಂಡುಬಂದಿವೆ ಎಂದು ಅದು ಉಲ್ಲೇಖಿಸಿದೆ; (ಎ)

ಅಪರಾಧ ನಡೆದ ಸ್ಥಳದ ಮೇಜಿನ ಬಳಿ: (ಬಿ) ಆಶ್ಲೇಷಾ ಮೃತದೇಹದ ಬಳಿಯ ರಕ್ತದ ಮಡುವಿನಲ್ಲಿ; ಮತ್ತು (ಸಿ) ಅಲ್ಮೈರಾಗಳ ಬಳಿ ನೆಲದ ಮೇಲೆ.

145. ಪ್ರಾ.ಸಾ.21 ತಮ್ಮ ಪಾಟೀ–ಸವಾಲಿನಲ್ಲಿ, ಘಟನಾ ಸ್ಥಳದಲ್ಲಿ (ಇದು 2–3 ಸ್ಥಳಗಳಲ್ಲಿದೆ ಎಂದು ಅವರು ನಂತರ ಹೇಳುತ್ತಾರೆ) ಕಂಡುಬಂದ ಭಾಗಶಃ ಶೂ ಪ್ರಿಂಟ್‌ಗಳ ಸಂಖ್ಯೆಯ ಬಗ್ಗೆ ನೆನಪಾಗಿರುವುದಿಲ್ಲ ಎಂದು ನುಡಿದಿರುತ್ತಾರೆ, ಆದರೆ ಮೂರು ರೀತಿಯ ಗುರುತುಗಳಿದ್ದವು ಎಂದು ಹೇಳಿದರು. ಯಾವುದೇ ಧೂಳು ಇರುವುದಿಲ್ಲ ಮತ್ತು ಆದ್ದರಿಂದ ಬರಿಗಾಲಿನ ಗುರುತುಗಳು ಕಂಡುಬಂದಿರುವುದಿಲ್ಲ ಎಂದೂ ಸಹ ಅವರು ನುಡಿದಿರುತ್ತಾರೆ. ಪ್ರಾ.ಸಾ.21, ತಮ್ಮ ಮುಖ್ಯ–ವಿಚಾರಣೆಯಲ್ಲಿ, ಪ್ರಾ.ಸಾ.17 ರವರು (ಅಪರಾಧ ಸ್ಥಳದ ಛಾಯಾಗ್ರಾಹಕ) ತಮ್ಮ ಸೂಚನೆಯ ಮೇರೆಗೆ ಘಟನಾ ಸ್ಥಳದಲ್ಲಿ (ನಿ.ಪಿ.66 ರಿಂದ ನಿ.ಪಿ.74ರವರೆಗೆ) ಕಂಡುಬಂದ ರಕ್ತಸಿಕ್ತವಾದ ಭಾಗಶಃ ಶೂ ಪ್ರಿಂಟ್‌ಗಳ ಅಳತೆಯ ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಪ್ರಾ.ಸಾ.17 ರವರು ತಮ್ಮ ಮುಖ್ಯ–ವಿಚಾರಣೆಯಲ್ಲಿ ಇದರ ಬಗ್ಗೆ ಉಲ್ಲೇಖಿಸಿರುವುದಿಲ್ಲ; ಆದರೆ ನಂತರ ತಮ್ಮ ಪಾಟೀ–ಸವಾಲಿನಲ್ಲಿ, ಅವರು ಹೆಜ್ಜೆಗುರುತುಗಳು ಮತ್ತು ರಕ್ತದ ಕಲೆಗಳಿರುವ ಸ್ಥಳಗಳ 8x12 ಅಳತೆಯ ಛಾಯಾಚಿತ್ರಗಳನ್ನು ತೆಗೆದಿರುವುದಾಗಿ ನುಡಿದಿರುತ್ತಾರೆ ಮತ್ತು ಅವುಗಳು ನಿ.ಪಿ.66 ರಿಂದ ನಿ.ಪಿ.74 ರವರೆಗೆ ಗುರುತಿಸಲಾಗಿರುತ್ತದೆ.

146. ಮೊದಲೇ ವಿವರಿಸಿದಂತೆ, ಮನೋಜ್‌ರವರ ಆಣತಿಯಂತೆ ಅವರ ಶೂಗಳನ್ನು ಜಪ್ತಿಪಡಿಸಿಕೊಳ್ಳಲಾಯಿತು (ನಿ.ಪಿ.31, ನಿ.ಪಿ.32) ಮತ್ತು ದಿನಾಂಕ 23.06.2011 ರಂದು ನೇಹಾ ಅವರ ವಿವರಣಾ ಹೇಳಿಕೆಯ ಆಧಾರದ ಮೇಲೆ ಆಕೆಯ ಚಪ್ಪಲಿಯನ್ನು (ನಿ.ಪಿ.34, ನಿ.ಪಿ.35) ಜಪ್ತಿ ಪಡಿಸಿಕೊಳ್ಳಲಾಯಿತು. ದಿನಾಂಕ 22.06.2011 ರಂದು ಅನ್ನಪೂರ್ಣ ಪಿ.ಎಸ್.ನಿಂದ ರಾಹುಲ್‌ರವರ ಬಲಗಾಲಿನ ಶೂವನ್ನು ಜಪ್ತಿಮಾಡಿಕೊಳ್ಳಲಾಯಿತು ಮತ್ತು ಇದು ಪ್ರಾ.ಸಾ.20 ಹರ್ಭಜನ್ ಸಿಂಗ್ (ಪ್ರತ್ಯೇಕ ಸಾಕ್ಷಿ) ಅವರ ಸಾಕ್ಷ್ಯದಿಂದ ಪುಷ್ಟೀಕರಿಸಲ್ಪಟ್ಟಿದ್ದು; ಅವರು ಅಭಯ್ ತಿವಾರಿಯವರು (ವಿವಾಚಣೆಗೆ ಒಳಪಡಿಸದ) ತಮ್ಮ

ತೋಟದಲ್ಲಿ ರಕ್ತದ ಕಲೆಯುಳ್ಳ ಶೂ ಅನ್ನು ಗುರುತಿಸಿದ್ದಾರೆ ಮತ್ತು ಅದನ್ನು ಪೊಲೀಸರಿಗೆ ವರದಿ ಮಾಡಿರುತ್ತಾರೆ ಮತ್ತು ಅವರಿಬ್ಬರೂ ಕೂಡ ಜಪ್ತಿ ಮೆಮೊಗೆ (ನಿ.ಪಿ.75) ಸಾಕ್ಷಿಗಳಾಗಿದ್ದರೂ ಎಂದು ನುಡಿದಿರುತ್ತಾರೆ. ಐ.ಓ. ರವರ ಮುಂದೆ ರಾಹುಲ್‌ರವರು ನೀಡಿದ ವಿವರಣಾ ಹೇಳಿಕೆಯ ಅನುಸಾರವಾಗಿ ಎಡಗಾಲಿನ ಶೂವನ್ನು (ನಿ.ಪಿ.21) ಜಪ್ತಿ ಮಾಡಿಕೊಳ್ಳಲಾಯಿತು.

147. ಐ.ಓ. ರವರು ದಿನಾಂಕ 13.07.2011 ರಂದು ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ನಿ.ಪಿ.115 ಎಂದು ಗುರುತಿಸಲಾದ ಪತ್ರವನ್ನು ಕಳುಹಿಸಿದ್ದನ್ನು ಮುಂದುವರಿಸಿ, ದಿನಾಂಕ 13.09.2011 ರಂದು ಶೂ ಪ್ರಿಂಟ್‌ನ ಪರೀಕ್ಷಾ ವರದಿಯನ್ನು ಸಿದ್ದಪಡಿಸಲಾಗಿದೆ. ದಿನಾಂಕ 02.08.2011 ರಂದು ಬ್ಯಾಲಿಸ್ಟಿಕ್ ಶಾಖೆಯು ಮೊಹರು ಮಾಡಿದ ಸ್ಥಿತಿಯಲ್ಲಿ ನಿಶಾನೆಗಳನ್ನು ಸ್ವೀಕರಿಸಿರುವುದಾಗಿ ಈ ವರದಿಯು ತಿಳಿಸುತ್ತದೆ. ತುಲನಾತ್ಮಕ ಪರೀಕ್ಷೆಗಾಗಿ, ನಿ.ಎಫ್.2, ಎಫ್.6 ಮತ್ತು ಜಿ.4 ಮತ್ತು ನಿ.ಎಚ್.3 ರಲ್ಲಿನ ಚಪ್ಪಲಿಯ ಅಡಿಭಾಗದ ಮಾದರಿ ಮುದ್ರೆಗಳನ್ನು ತಯಾರಿಸಲಾಗಿದೆ (ಛಾಯಾಚಿತ್ರ 10, 11, 12, 13 ಮತ್ತು 14). ಕಂಡುಬಂದು ಶೂ ಪ್ರಿಂಟ್‌ಗಳನ್ನು ಕೇವಲ ಒಟ್ಟಾಗಿ ಉಲ್ಲೇಖಿಸಲಾಗಿದೆ ಆದರೆ ಯಾವ ಛಾಯಾಚಿತ್ರವು (#10, 11 ಇತ್ಯಾದಿ) ಯಾವ ಶೂನ ಮಾದರಿಯಾಗಿದೆ (ಎಫ್.2, ಎಫ್.5 ಇತ್ಯಾದಿ) ಎಂಬುದು ಅಸ್ಪಷ್ಟವಾಗಿದೆ.

148. ಈ ಮೊಕದ್ದಮೆಯಲ್ಲಿ ಶೂ ಪ್ರಿಂಟ್ ಸಾಕ್ಷ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುವುದಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಶೂ ಪ್ರಿಂಟ್‌ಗಳು ಅಪೂರ್ಣ ಮತ್ತು ಅಸ್ಪಷ್ಟವಾಗಿದೆ ಮತ್ತು ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ಅಭಿಪ್ರಾಯವನ್ನು ನೀಡಲು ಸಾಧ್ಯವಿಲ್ಲ ಎಂದು ವರದಿಯು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಆದರೂ, ತಜ್ಞರು ಮುದ್ರೆಗಳ ಹೊಂದಾಣಿಕೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ನೀಡಲು ಮುಂದಾಗಿರುತ್ತಾರೆ. *ಬಿಹಾರ್ ರಾಜ್ಯ*

ವಿರುದ್ಧ ಕಪಿಲ್ ಸಿಂಗ್[55] ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಹೆಜ್ಜೆಗುರುತು ಇರುವಿಕೆಗೆ ಸಂಬಂಧಿಸಿದ ತಜ್ಞರ ಸಾಕ್ಷ್ಯವು ದುರ್ಬಲ ಸ್ವರೂಪವನ್ನು ಹೊಂದಿದೆ ಎಂದು ಅಭಿಪ್ರಾಯಪಟ್ಟಿದೆ. *ಮೊಹಮದ್ ಅಮನ್ ವಿರುದ್ಧ ರಾಜಸ್ಥಾನ ರಾಜ್ಯ*[56] ಮತ್ತು *ಬಲ್ಬೀರ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ*[57] ಮೊಕದ್ದಮೆಯಲ್ಲಿಯೂ ಸಹ ಈ ದೃಷ್ಟಕೋನವನ್ನು ಹಂಚಿಕೊಂಡಿರುತ್ತಾರೆ. ಅಭಿಯೋಜನೆಯು ಈ ಸನ್ನಿವೇಶವನ್ನು ಸಾಬೀತುಪಡಿಸಿಲ್ಲ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

ಸಾಂದರ್ಭಿಕ ಸಾಕ್ಷ್ಯಗಳನ್ನು ಒಳಗೊಂಡಿರುವ ಮೊಕದ್ದಮೆಗಳಲ್ಲಿ ಸಾಕ್ಷ್ಯದ ಗುಣಾವಗುಣಗಳನ್ನು ಗಣನೆಗೆ ತೆಗೆದುಕೊಳ್ಳಲು ಅನ್ವಯವಾಗುವ ತತ್ವಗಳು:

149. *ಹನುಮಂತ್ ವಿರುದ್ಧ ಮಧ್ಯ ಪ್ರದೇಶ ರಾಜ್ಯ*[58] ಮೊಕದ್ದಮೆಯಲ್ಲಿ ಈ ನ್ಯಾಯಲಯವು ಈ ಹಿಂದೆ ತೆಗೆದುಕೊಂಡ ಒಂದು ನಿರ್ಧಾರಗಳಲ್ಲಿ, ಸಾಂದರ್ಭಿಕ ಸಾಕ್ಷ್ಯಗಳನ್ನು ಒಳಗೊಂಡಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆಗೆ ಒಳಪಡಿಸುವ ನ್ಯಾಯಾಲಯಗಳ ಸರಿಯಾದ ವಿಧಾನವು, ಹೇಳಲಾದ ಸಂದರ್ಭಗಳನ್ನು ಸಂಪೂರ್ಣವಾಗಿ ಸಾಬೀತುಗೊಳಿಸಬೇಕು ಎಂದು ಸೂಚಿಸಿರುತ್ತದೆ; ಹೀಗೆ ಸಾಬೀತುಪಡಿಸಲಾದ ಎಲ್ಲಾ ಸಂಗತಿಗಳು ಆರೋಪಿಯ ಅಪರಾಧದ ಪರಿಕಲ್ಪನೆಯೊಂದಿಗೆ ಮಾತ್ರ ಸಮಂಜಸವಾಗಿರಬೇಕು; ಸಂದರ್ಭಗಳು ನಿರ್ಣಾಯಕವಾಗಿರಬೇಕು ಮತ್ತು ಪ್ರತೀ ಪರಿಕಲ್ಪನೆಯನ್ನು ಪ್ರತ್ಯೇಕಿಸುವಂತಹ ಪ್ರವೃತ್ತಿಯನ್ನು ಹೊಂದಿರಬೇಕು ಆದರೆ ಪ್ರಸ್ತಾಪಿಸಲಾದದ್ದನ್ನು ಸಾಬೀತುಪಡಿಸಬೇಕು ಎಂದು ಸೂಚಿಸುತ್ತದೆ. *ತುಫೈಲ್ ವಿರುದ್ಧ ಉತ್ತರ ಪ್ರದೇಶ*[59] ಮತ್ತು *ರಾಮ್ ಗೋಪಾಲ್ ವಿರುದ್ಧ ಮಹಾರಾಷ್ಟ್ರ*

55. 1968 (3) ಎಸ್‌ಸಿಆರ್ 310
56. (1997) 10 ಎಸ್‌ಸಿಸಿ 44
57. 1996 (6) ಸ್ಕೇಲ್ 72
58. ಎಐಆರ್ 1953 ಎಸ್‌ಸಿ 343
59. (1969) 3 ಎಸ್‌ಸಿಸಿ 198

ರಾಜ್ಯ[60] ಮೊಕದ್ದಮೆಗಳಲ್ಲಿ ಈ ದೃಷ್ಟಿಕೋನವನ್ನು ನಂತರ ಅನುಸರಿಸಲಾಯಿತು. ಈ ಎಲ್ಲಾ ಮತ್ತು ಇತರ ನಿರ್ಧಾರಗಳನ್ನು *ಶರದ್ ಬಿರ್ದಿ ಚಂದ್ ಸರ್ದಾ ವಿರುದ್ಧ ಮಹಾರಾಷ್ಟ್ರ ರಾಜ್ಯ*[61] ಮೊಕದ್ದಮೆಯಲ್ಲಿ ತ್ರಿಸದಸ್ಯ ಪೀಠದ ತೀರ್ಪಿನಲ್ಲಿ ಮರು ಪರಿಶೀಲಿಸಲಾಯಿತು ಮತ್ತು ಸಂಪೂರ್ಣವಾಗಿ ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡುವ ಪ್ರತಿಯೊಂದು ನ್ಯಾಯಾಲಯವು ಅನುಸರಿಸಬೇಕಾದ ತತ್ವಗಳನ್ನು ಈ ನ್ಯಾಯಾಲಯವು ಪ್ರತಿಪಾದಿಸಿರುತ್ತದೆ.

150. ಸರ್ದಾ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳನ್ನು ಖಂಡಿಕೆ 152 ರಲ್ಲಿ ನೀಡಲಾಗಿದೆ ("ಐದು ಸುವರ್ಣ ತತ್ವಗಳು" ಎಂದು ಖಂಡಿಕೆ 153 ರಲ್ಲಿ ತಿಳಿಸಿರುವ). ಅವುಗಳನ್ನು ಈ ಕೆಳಗಿನಂತೆ ಉದ್ದರಿಸಲಾಗಿದೆ:

> "(1) ಅಪರಾಧದ ತೀರ್ಮಾನವನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳನ್ನು ಸಂಪೂರ್ಣವಾಗಿ ಸಾಬೀತುಪಡಿಸಬೇಕು. ಈ ನ್ಯಾಯಾಲಯವು, ಸಂಬಂಧಿಸಿದ ಸಂದರ್ಭಗಳನ್ನು 'ಸಾಬೀತು ಪಡಿಸಲೇಬೇಕು ಅಥವಾ ಸಾಬೀತುಪಡಿಸತಕ್ಕದ್ದು' ಎಂದಿರಬೇಕು ಮತ್ತು 'ಸಾಬೀತುಪಡಿಸಬಹುದು' ಎಂದಿರಬಾರದು ಎಂದು ಸೂಚಿಸಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಈ ನ್ಯಾಯಾಲಯವು *ಶಿವಾಜಿ ಸಹಬ್ರಾವ್ ಬೊಬಾಡೆ ಮತ್ತು ಮತ್ತೊಬ್ಬರು ವಿರುದ್ಧ ಮಹಾರಾಷ್ಟ್ರ ರಾಜ್ಯ* ಮೊಕದ್ದಮೆಯಲ್ಲಿ 'ಸಾಬೀತುಪಡಿಸಬಹುದು' ಮತ್ತು 'ಸಾಬೀತುಪಡಿಸಲೇಬೇಕು ಅಥವಾ ಸಾಬೀತುಪಡಿಸತಕ್ಕದ್ದು' ಎಂಬುದರ ನಡುವೆ ಕೇವಲ ವ್ಯಾಕರಣಾತ್ಮಕ ವ್ಯತ್ಯಾಸವಲ್ಲದೆ ಕಾನೂನು ವ್ಯತ್ಯಾಸವೂ ಇದೆ ಎಂದು ಅಭಿಪ್ರಾಯಪಟ್ಟಿರುತ್ತದೆ ಮತ್ತು ಈ ಕೆಳಗಿನ ಅಂಶಗಳನ್ನು ಗಮನಿಸಿರುತ್ತದೆ:
>
> "ನಿಸ್ಸಂಶಯವಾಗಿ, ನ್ಯಾಯಾಲಯವು ಅಪರಾಧಿಯೆಂದು ನಿರ್ಣಯಿಸುವ ಮೊದಲು ಆರೋಪಿಯು 'ತಪ್ಪಿತಸ್ಥನಾಗಿರಬೇಕು' ಮತ್ತು ಕೇವಲ 'ತಪ್ಪಿತಸ್ಥನಾಗಿರಬಹುದು' ಎಂಬುದಾಗಿರಬಾರದು ಎಂಬುದು ಪ್ರಾಥಮಿಕ ತತ್ವವಾಗಿರುತ್ತದೆ ಹಾಗು "ಇರಬಹುದು" ಮತ್ತು "ಇರಬೇಕು" ನಡುವಿನ ಮಾನಸಿಕ ಅಂತರವು ಅಧಿಕವಾಗಿದೆ ಮತ್ತು ಖಚಿತವಾದ ನಿರ್ಣಯಗಳಿಂದ ಅಸ್ಪಷ್ಟ ಊಹೆಗಳನ್ನು ವಿಭಜಿಸುತ್ತದೆ.

60. ಎಐಆರ್ 1972 ಎಸ್‌ಸಿ 656
61. (1984) 4 ಎಸ್‌ಸಿಸಿ 116

(2) ಹಾಗೆ ಸಾಬೀತಾದ ಸಂಗತಿಗಳು ಆರೋಪಿಯ ಅಪರಾಧದ ಪರಿಕಲ್ಪನೆಯೊಂದಿಗೆ ಮಾತ್ರ ಹೊಂದಿಕೆಯಾಗಬೇಕು, ಅಂದರೆ ಆರೋಪಿಯು ತಪ್ಪಿತಸ್ಥ ಎಂಬುದನ್ನು ಹೊರತುಪಡಿಸಿ ಬೇರೆ ಯಾವುದೇ ಪರಿಕಲ್ಪನೆಯ ಮೇಲೆ ಅವುಗಳನ್ನು ವಿವರಿಸಬಾರದು;

(3) ಸಂದರ್ಭಗಳು ನಿರ್ಣಾಯಕ ಸ್ವರೂಪ ಮತ್ತು ಪ್ರವೃತ್ತಿಯನ್ನು ಹೊಂದಿರಬೇಕು;

(4) ಸಾಬೀತುಪಡಿಸಬೇಕಾದ ಪರಿಕಲ್ಪನೆಯನ್ನು ಹೊರತುಪಡಿಸಿ ಪ್ರತಿಯೊಂದು ಸಂಭವನೀಯ ಪರಿಕಲ್ಪನೆಯನ್ನು ಹೊರಗಿಡಬೇಕು; ಮತ್ತು

(5) ಆರೋಪಿಯ ನಿರಪರಾಧಿತ್ವಕ್ಕೆ ಅನುಗುಣವಾದ ತೀರ್ಮಾನಕ್ಕೆ ಯಾವುದೇ ಸಮಂಜಸವಾದ ಆಧಾರವನ್ನು ಬಿಡದಂತೆ ಸಂಪೂರ್ಣವಾಗಿ ಸಾಕ್ಷ್ಯಗಳ ಸರಣಿಯನ್ನು ಹೊಂದಿರಬೇಕು ಮತ್ತು ಎಲ್ಲಾ ಮಾನವ ಸಂಭವನೀಯತೆಯಲ್ಲಿ ಕೃತ್ಯವನ್ನು ಆರೋಪಿಯೇ ಮಾಡಿರುವುದಾಗಿ ತೋರಿಸಬೇಕು.

ಈ ಐದು ಸುವರ್ಣ ತತ್ವಗಳು, ನಾವು ಹೀಗೆ ಹೇಳುವುದಾದರೆ, ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಮೊಕದ್ದಮೆಯ ಸಾಕ್ಷ್ಯಗಳ ಪಂಚಶೀಲವನ್ನು ರೂಪಿಸುತ್ತದೆ.''

151. ಈ ತತ್ವಗಳು ಬಹಳ ಕಾಲ ಉಳಿಯುವಷ್ಟು ಪ್ರಬಲ ಅಥವಾ ಪರಿಣಾಮಕಾರಿಯಾಗಿರುತ್ತದೆ ಮತ್ತು ಅದರ ಹಿನ್ನೆಲೆಯಲ್ಲಿ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳಲ್ಲಿನ ಸಾಕ್ಷ್ಯವನ್ನು ದೇಶದಾದ್ಯಂತ ಮೌಲ್ಯಮಾಪನ ಮಾಡಲಾಗಿರುತ್ತದೆ. ಈ ಬದ್ದಪಡಿಸಿದ ತತ್ವಗಳ ಹಿನ್ನೆಲೆಯಲ್ಲಿ, ಈಗ ಈ ನ್ಯಾಯಾಲಯವು, ಸಾಕ್ಷ್ಯದಿಂದ ಬೆಂಬಲಿತವಾದ ಸಂದರ್ಭಗಳು ಅಂದರೆ ಈ ನ್ಯಾಯಾಲಯವು ಹಿಂದಿನ ಭಾಗದ ತೀರ್ಪಿನಲ್ಲಿ ಅಂಗೀಕರಿಸಿದ ಸಾಕ್ಷ್ಯವು, ಸರ್ದಾ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಪ್ರತಿಪಾದಿಸಿದ ಐದು ಸುವರ್ಣ ತತ್ವಗಳು ಬಹಳಕಾಲ ಉಳಿಯುವಷ್ಟು ಪ್ರಬಲ ಅಥವಾ ಪರಿಣಾಮಕಾರಿಯಾಗುವಂತಹ ನಿರ್ಣಯಕ್ಕೆ ಬರುವುದೇ ಎಂಬುದನ್ನು ಪರೀಕ್ಷಿಸಬೇಕಿರುತ್ತದೆ.

ಸನ್ನಿವೇಶಗಳ ಸಾಕ್ಷ್ಯದ ಸಾರಾಂಶ:

152. ಕೆಳ ನ್ಯಾಯಾಲಯಗಳಿಂದ ಏಕಕಾಲದಲ್ಲಿ ಅಂಗೀಕರಿಸಲ್ಪಟ್ಟ ಹಲವಾರು ಸನ್ನಿವೇಶಗಳ ಮೇಲೆ ಅಭಿಯೋಜನೆಯು ಅವಲಂಬಿತವಾಗಿದೆ. ಅವುಗಳು ಪ್ರಾ.ಸಾ.10–ಆಕಸ್ಮಿಕ ಸಾಕ್ಷಿಯ

ಹೇಳಿಕೆಯಾಗಿದ್ದು, ಅವರು ಘಟನೆ ಸಂಭವಿಸಿದ ದಿನ ಸಾಯಂಕಾಲ 5.45 ಅಥವಾ 6.00 ಗಂಟೆ ಸುಮಾರಿಗೆ ಎಲ್ಲಾ ಮೂವರು ಆರೋಪಿಗಳು ಸ್ಥಳದಿಂದ ಪರಾರಿಯಾಗಿರುವುದನ್ನು ನೋಡಿರುವುದಾಗಿ ಹೇಳಿರುತ್ತಾರೆ ಮತ್ತು ಅಪರಾಧ ಸ್ಥಳದಿಂದ ವಸ್ತುಗಳನ್ನು (ಬಳಸಿದ ಕಾಟ್ರಿಡ್ಜ್, ಜೀವಂತ ಗುಂಡು, ಸನ್‌ಗ್ಲಾಸ್, ಕಪ್ಪು ಮಣಿಗಳು ಇತ್ಯಾದಿ) ವಶಪಡಿಸಕೊಂಡಿರುವುದಕ್ಕೆ ಮತ್ತು ಬೆರಳೊತ್ತುಗಳನ್ನು ಸಂಗ್ರಹಿಸಿರುವುದಕ್ಕೆ (ಪ್ರಾ.ಸಾ.24 ರಿಂದ ಪರೀಕ್ಷಿಸಲ್ಪಟ್ಟ ಮತ್ತು ಪ್ರಾ.ಸಾ.5 ಮತ್ತು ಪ್ರಾ.ಸಾ.9 ರಿಂದ ಪುಷ್ಟೀಕರಿಸಲ್ಪಟ್ಟ) ಮತ್ತು ಆರೋಪಿಗಳ ವಿವರಣಾ ಹೇಳಿಕೆಗೆ ಅನುಗುಣವಾಗಿ ದರೋಡೆ ಮಾಡಿದ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುವುದನ್ನು ನೋಡಿರುವುದಾಗಿ ಹೇಳಿರುತ್ತಾರೆ. ಘಟನೆ ಸಂಭವಿಸಿದ ಒಂದು ದಿನದ ನಂತರ (21.06.2011 ರಂದು) ಪ್ರಾ.ಸಾ.1 ರವರು ಅವರ ಹೇಳಿಕೆಯನ್ನು ನೀಡಿದ್ದು, ಅದರಲ್ಲಿ ನಾಲ್ಕು ಜೊತೆ ಬಳೆಗಳು, ಮಂಗಳಸೂತ್ರ, ಎ.ಟಿ.ಎಮ್ ಕಾರ್ಡ್, ಇತ್ಯಾದಿಗಳು ಕಳುವಾದ ಬಗ್ಗೆ ನಿರ್ದಿಷ್ಟವಾಗಿ ವರದಿ ಮಾಡಿರುತ್ತಾರೆ. ಆರೋಪಿಗಳ ನಿರ್ದೇಶನದ ಮೇರೆಗೆ ಅವುಗಳನ್ನು ನಂತರ ವಶಪಡಿಸಿಕೊಳ್ಳಲಾಯಿತು ಮತ್ತು ಅಭಿಯೋಜನೆಯು ಇದನ್ನು ಪ್ರಗತಿ ಎಂದು ಸಾಧಿಸಿರುತ್ತದೆ.

153. ಪ್ರಾ.ಸಾ.28 ರವರಿಂದ ಅನುಮಾನಾಸ್ಪದವಾಗಿ ಅಡ್ಡಾಡುತ್ತಿದ್ದ ನೇಹಾರ ಬಗ್ಗೆ ಮಾಹಿತಿ ಬಂದ ನಂತರ ಆಕೆಯನ್ನು ದಿನಾಂಕ 22.06.2011 ರ ಬೆಳಗ್ಗೆ ಬಂಧಿಸಲಾಯಿತು ಎಂಬುದನ್ನು ಕೆಳ ನ್ಯಾಯಾಲಯಗಳು ಕಂಡುಕೊಂಡಿರುತ್ತದೆ. ಆಕೆಗಾಗಿ ಶೋಧಿಸಿ, ಆಕೆಯನ್ನು ವಿಚಾರಣೆ ಮಾಡಿದ ನಂತರ ಬಂಧಿಸಲಾಯಿತು. ಪ್ರಾ.ಸಾ.3 ಮತ್ತು ಪ್ರಾ.ಸಾ.6 ರವರು ಈ ಬಂಧನವನ್ನು ಸಾಕ್ಷೀಕರಿಸಿದ್ದು, ಪೊಲೀಸರು ನೇಹಾರ ವಿವರಣಾ ಹೇಳಿಕೆಯನ್ನು ದಾಖಲು ಮಾಡಿದ್ದನ್ನೂ ಸಹ ಸಾಕ್ಷೀಕರಿಸಿದ್ದಾಗಿ ನುಡಿದಿರುತ್ತಾರೆ. ಇತರ ಬೆಲೆಬಾಳುವ ವಸ್ತುಗಳು ಮತ್ತು ಇನ್ನಿತರ ವಸ್ತುಗಳಾದ ಎರಡು ಜೊತೆ ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಭಾಗ, ಇತರ ಬೆಲೆಬಾಳುವ ವಸ್ತುಗಳು ಮತ್ತು ಮೇಘಾರಿಗೆ ಸೇರಿದ ಒಂದು ಎ.ಟಿ.ಎಮ್ ಕಾರ್ಡ್ ಅನ್ನು ಆಕೆಯ ಮನೆಯಿಂದ ವಶಪಡಿಸಿಕೊಳ್ಳಲಾಗಿರುತ್ತದೆ. ಇತರ ಆರೋಪಿಗಳು (ರಾಹುಲ್ ಮತ್ತು

ಮನೋಜ್) ಭಾಗಿಯಾಗಿರುವ ಬಗ್ಗೆ ನೇಹಾ ನೀಡಿದ ವಿವರಣಾ ಹೇಳಿಕೆಯು ಅವರುಗಳ ಬಂಧನಕ್ಕೆ ಕಾರಣವಾಗಿರುತ್ತದೆ ಮತ್ತು ಅದೇ ದಿನ ದಾಖಲಿಸಲಾದ ಅವರ ವಿವರಣಾ ಹೇಳಿಕೆಗೆ ಪ್ರಾ.ಸಾ.3 ಮತ್ತು ಪ್ರಾ.ಸಾ.4 ಸಾಕ್ಷಿಯಾಗಿರುತ್ತಾರೆ. ಮತ್ತೊಮ್ಮೆ, ರಾಹುಲ್‌ರವರಿಂದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಒಂದು ಕಾಡು ಪಿಸ್ತೂಲ್, ನಂತರ ಒಂದು ಚಾಕುವನ್ನು ಸಹ ಆತನಿಂದ ವಶಪಡಿಸಿಕೊಳ್ಳಲಾಯಿತು. ಜೊತೆಗೆ, ಸನ್‌ಗ್ಲಾಸ್ ಧರಿಸಿದ್ದ ಅವರ ಭಾವಚಿತ್ರವನ್ನು ಅವರ ಮನೆಯಿಂದ ಜಪ್ತಿಪಡಿಸಿಕೊಳ್ಳಲಾಯಿತು. ಮನೋಜ್ ಅವರನ್ನೂ ಸಹ ಅದೇ ರೀತಿ ಬಂಧಿಸಲಾಯಿತು ಮತ್ತು ಅವರು ನೀಡಿದ ವಿವರಣಾ ಹೇಳಿಕೆಯು; ಒಂದು ಚಾಕು, ಒಂದು ಜೊತೆ ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಒಂದು ಭಾಗ ಇತ್ಯಾದಿ ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಣವಾಗಿರುತ್ತದೆ. ನಂತರ, ಅದೇ ದಿನ ಅಂದರೆ ದಿನಾಂಕ 22.06.2011 ರಂದು ಮತ್ತೊಂದು ಪೊಲೀಸ್ ಠಾಣೆಯಿಂದ (ಅನ್ನಪೂರ್ಣ ಪಿ.ಎಸ್) ಒಂದು ಬಲಗಾಲಿನ ಶೂ ಅನ್ನು ವಶಪಡಿಸಿಕೊಳ್ಳಲಾಯಿತು. ನಂತರ ಅದನ್ನು ಜಪ್ತಿ ಮಾಡಿಕೊಳ್ಳಲಾಯಿತು ಮತ್ತು ಇದನ್ನು ಪ್ರಾ.ಸಾ.20 ಸಾಕ್ಷೀಕರಿಸಿರುತ್ತಾರೆ. ಆ ಸಮಯದಲ್ಲಿ, ಕೊಲೆಗಳೊಂದಿಗಿನ ಅದರ ಸಂಬಂಧವು ತಿಳಿದುಬಂದಿರುವುದಿಲ್ಲ. ದಿನಾಂಕ 23.06.2011 ರಂದು ದಾಖಲಿಸಿದ್ದಾಗಿ ಹೇಳಲಾದ ವಿವರಣಾ ಹೇಳಿಕೆಗಳ ಮೇಲೆ ಅಭಿಯೋಜನೆಯು ಅವಲಂಬಿತವಾಗಿದ್ದು, ಆ ಹೇಳಿಕೆಗಳು ನೇಹಾ, ರಾಹುಲ್ ಮತ್ತು ಮನೋಜ್‌ರವರ ಆಣತಿಯಂತೆ ಇತರ ತೆರೆದ ಪ್ರದೇಶಗಳಿಂದ ಬಟ್ಟೆಗಳನ್ನು ವಶಪಡಿಸಿಕೊಳ್ಳಲು ಕಾರಣವಾಗಿರುತ್ತದೆ. ಮುಂದುವರಿದು, ನೇಹಾರ ಆಣತಿಯಂತೆ ಒಂದು ಸ್ಕೂಟಿ ಮತ್ತು ಅದರೊಂದಿಗೆ ಸೇವಾ ಪುಸ್ತಕವನ್ನು ವಶಪಡಿಸಿ ಜಪ್ತಿಪಡಿಸಿಕೊಳ್ಳಲಾಯಿತು ಮತ್ತು ಮನೋಜ್‌ರ ಆಣತಿಯಂತೆ ಕಳ್ಳತನವಾಯಿತೆಂದು ವರದಿಯಾದ ಒಂದು ಮೋಟಾರ್ ಸೈಕಲ್ ಪತ್ತೆಯಾಗಿರುತ್ತದೆ. ಪ್ರತ್ಯೇಕ ಸಾಕ್ಷಿಯಾದ ಪ್ರಾ.ಸಾ.7 ಈ ಎಲ್ಲಾ ವಸ್ತುಗಳನ್ನು ವಶಪಡಿಸಿಕೊಂಡಿದ್ದನ್ನು ಸಾಕ್ಷೀಕರಿಸಿರುತ್ತಾರೆ. ಒಂದು ಕಡೆ ಮನೋಜ್ ಮತ್ತು ರಾಹುಲ್‌ರವರನ್ನು ಗುರುತಿಸಲು ಹಾಗೂ ಇನ್ನೊಂದು ಕಡೆ ನೇಹಾರನ್ನು ಗುರುತಿಸಲು ಸಾಧ್ಯವಾದ ಎರಡು ಟಿ.ಐ.ಪಿ ಪ್ರಕ್ರಿಯೆಗಳ ಮೇಲೆ ಅಭಿಯೋಜನೆಯು

ಅವಲಂಬಿತವಾಗಿರುತ್ತದೆ. ದಿನಾಂಕ 21.06.2011 ರಂದೇ ಕೆಲವೊಂದು ವಸ್ತುಗಳು ಕಾಣೆಯಾದ ಬಗ್ಗೆ ಪ್ರಾ.ಸಾ.1 ವರದಿ ಮಾಡಿದ್ದು, ಆ ವಸ್ತುಗಳನ್ನು ಟಿ.ಐ.ಪಿ ಪ್ರಕ್ರಿಯೆಯಲ್ಲಿ ಪ್ರಾ.ಸಾ.1 ರವರು ಗುರುತಿಸಿದರ ಮೇಲೂ ಸಹ ಅಭಿಯೋಜನೆಯು ಅವಲಂಬಿತವಾಗಿರುತ್ತದೆ. ಇತರ ಸಾಕ್ಷ್ಯಗಳಾದ ತಜ್ಞರ ವರದಿಯ (ಪ್ರಾ.ಸಾ.24 ರಿಂದ ತಯಾರಾದ ನಿ.ಪಿ.84) ಪ್ರಕಾರ ಹೊಂದಾಣಿಕೆಯಾದ ಬೆರಳೊತ್ತುಗಳು, ಬ್ಯಾಲಿಸ್ಟಿಕ್ ತಜ್ಞರ ವರದಿ (ಪ್ರಾ.ಸಾ.16) ಮತ್ತು ಡಿಎನ್ಎ ತಜ್ಞರ ವರದಿಯ (ಪ್ರಾ.ಸಾ.35) ಮೇಲೂ ಸಹ ಅಭಿಯೋಜನೆಯು ಅವಲಂಬಿಸಿರುತ್ತದೆ. ಶೂ ಪ್ರಿಂಟ್ ಹೊಂದಾಣಿಕೆಯ ಸಂಭವನೀಯತೆ ಬಗ್ಗೆ ಮಾತನಾಡಿದ ಇನ್ನೊಬ್ಬ ತಜ್ಞರ ವರದಿಯನ್ನು ಅವಲಂಬಿಸಲು ಇದು ಬಯಸಿರುತ್ತದೆ.

154. ಈ ನ್ಯಾಯಾಲಯವು, ಈ ತೀರ್ಪಿನ ಹಿಂದಿನ ಭಾಗದಲ್ಲಿ ಸಾಕ್ಷ್ಯದ ಮೇಲೆ ಪೂರ್ವದಲ್ಲಿ ನಡೆಸಲಾದ ಚರ್ಚೆಯಲ್ಲಿ, ನೇಹಾರನ್ನು ಹೇಗೆ ಬಂಧಿಸಲಾಯಿತು ಎಂಬುದರ ಕುರಿತು ಅಭಿಯೋಜನೆಯ ಆವೃತ್ತಿಯನ್ನು ನಂಬಲಾಗದಿದ್ದರೂ ಸಹ, ಅದು ಆಕೆಯು ತರುವಾಯ ನೀಡಿದ ವಿವರಣೆ ಹೇಳಿಕೆಯನ್ನು ದೋಷಗೊಳಿಸುವುದಿಲ್ಲ ಮತ್ತು ಅದು ಆಕೆಯಿಂದ ದರೋಡೆಯಾದ ವಸ್ತುಗಳಾದ ನಾಲ್ಕು ಕದ್ದ ಆಭರಣದ ತುಂಡುಗಳು, ಮೃತ ಮೇಘಾರಿಗೆ ಸೇರಿದ ಎ.ಟಿ.ಎಮ್ ಕಾರ್ಡ್ನ್ನು (ಪ್ರಾ.ಸಾ.27–ಬ್ಯಾಂಕ್ ಅಧಿಕಾರಿಯಿಂದ ಸಾಬೀತಾದ) ಜಪ್ತಿ ಮಾಡಿ ವಶಕ್ಕೆ ಪಡೆಯಲು ಕಾರಣವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ. ಇತರ ಆರೋಪಗಳಿಗೆ ಸಂಬಂಧಿಸಿದ ಸಾಕ್ಷ್ಯದ ಮೇಲೆ ನಡೆಸಲಾದ ಹಿಂದಿನ ಚರ್ಚೆಯು, ರಾಹುಲ್ ಮತ್ತು ಮನೋಜ್ರವರಿಂದ ದಿನಾಂಕ 22.06.2011 ರಂದು ಜಪ್ತಿಪಡಿಸಿಕೊಂಡ ವಸ್ತುಗಳ ಅಂದರೆ ತಲಾ ಒಂದು ಬಂಗಾರದ ಬಳೆಗಳು ಮತ್ತು ಮುರಿದ ಮಂಗಳಸೂತ್ರದ ಭಾಗವನ್ನು ಇಬ್ಬರು ಆರೋಪಿತರ ಮನೆಯಿಂದ ವಶಪಡಿಸಿಕೊಳ್ಳಲಾಯಿತು ಮತ್ತು ರಾಹುಲ್ರವರ ಆಣತಿಯಂತೆ ಅವರ ಮನೆಯಿಂದ ಒಂದು ಕಾಡು ಪಿಸ್ತೂಲನ್ನು ಮತ್ತು ಒಂದು ಚಾಕುವನ್ನು ವಶಪಡಿಸಿಕೊಳ್ಳಲಾಯಿತು ಎಂಬುದನ್ನು ಸಾಬೀತುಪಡಿಸಲು ಅಭಿಯೋಜನೆಯು ಸಮರ್ಥವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡಲು ಕಾರಣವಾಗಿರುತ್ತದೆ.

ದರೋಡೆಯಾದ ವಸ್ತುಗಳಿಗೆ ಸಂಬಂಧಿಸಿದಂತೆ ನಡೆಸಲಾದ ಟಿ.ಐ.ಪಿ ಪ್ರಕ್ರಿಯೆಯನ್ನು ಅಭಿಯೋಜನೆಯು ಸಮಂಜಸವಾಗಿ ಸಾಬೀತುಪಡಿಸಿದೆ ಎಂದೂ ಸಹ ಈ ನ್ಯಾಯಾಲಯವು ನಿರ್ಣಯಿಸಿರುತ್ತದೆ. ಜಪ್ತಿಪಡಿಸಿಕೊಂಡ ಗುಂಡುಗಳು (ಅಪರಾಧ ಸ್ಥಳದಿಂದ) ರಾಹುಲ್‌ರ ಆಣತಿಯಂತೆ ಅವರ ಮನೆಯಿಂದ ಜಪ್ತಿಪಡಿಸಲಾದ ಪಿಸ್ತೂಲಿನಿಂದ ಪರೀಕ್ಷೆಗಾಗಿ ಹಾರಿಸಲಾದ ಗುಂಡುಗಳೊಂದಿಗೆ ಹೊಂದಾಣಿಕೆಯಾಗುತ್ತದೆ ಎಂಬುದನ್ನು ಪ್ರಾ.ಸಾ.16–ಬ್ಯಾಲಿಸ್ಟಿಕ್ ತಜ್ಞರು ನೀಡಿದ ವರದಿಯು ಸಾಬೀತುಪಡಿಸುತ್ತದೆ. ಅಂತೆಯೇ, ದಿನಾಂಕ 22.06.2011 ರಂದು ಗುಂಡಿನ ರಂದ್ರವಿದ್ದ ಬಲಗಾಲಿನ ಶೂವನ್ನು ವಶಪಡಿಸಿಕೊಂಡಿರುವುದನ್ನು ಅಭಿಯೋಜನೆಯು ಸಾಬೀತುಪಡಿಸುತ್ತದೆ. ಪ್ರಾ.ಸಾ.32 ರಿಂದ ರಾಹುಲ್‌ರವರು ಚಿಕಿತ್ಸೆ ಪಡೆದಿರುವುದು ಅವರ ಒಳಗೊಳ್ಳುವಿಕೆಯನ್ನು ಸೂಚಿಸುತ್ತದೆ ಎಂಬುದು ಈ ಸಂದರ್ಭದಲ್ಲಿ ಅಭಿಯೋಜನೆಯು ಅವಲಂಬಿಸಿರುವ ಇತರ ಸಂದರ್ಭಗಳಾಗಿರುತ್ತದೆ. ದಿನಾಂಕ 19.06.2011 ರ ಸಾಯಂಕಾಲ, ರಾಹುಲ್‌ರವರು ತಮ್ಮ ಬಲ ಪಾದಕ್ಕೆ ಕೆಲವು ಅಪರಿಚಿತ ಆಕ್ರಮಣಕಾರರು ಗುಂಡು ಹಾರಿಸಿರುವುದಾಗಿ ಅನ್ನಪೂರ್ಣ ಪಿ.ಎಸ್‌ಗೆ ತಡವಾಗಿ ವರದಿ ಮಾಡಿದ್ದು, ಅದನ್ನು ಪ್ರಾ.ಸಾ.29 ದಾಖಲಿಸಿರುತ್ತಾರೆ ಮತ್ತು ಇವರು ರಾಹುಲ್‌ರನ್ನು ನ್ಯಾಯಾಲಯದಲ್ಲಿ ಗುರುತಿಸಿರುತ್ತಾರೆ. ರಾಹುಲ್‌ರವರು ಮೊದಲು ಜಿಲ್ಲಾ ಆಸ್ಪತ್ರೆಗೆ ಹೋಗಿ ಪ್ರಾ.ಸಾ.26 ರಿಂದ ಚಿಕಿತ್ಸೆಯನ್ನು ಪಡೆದರು, ನಂತರ ಅವರನ್ನು ಎಮ್.ವೈ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಪ್ರಾ.ಸಾ.29 ಮುಂದುವರಿದು ನುಡಿಯುತ್ತಾರೆ. ನಂತರ, ದಿನಾಂಕ 20.06.2011ರ ಮುಂಜಾನೆ ಪ್ರಾ.ಸಾ.32 ರಾಹುಲ್‌ರವರಿಗೆ ಶಸ್ತ್ರಚಿಕಿತ್ಸೆ ಮಾಡಿ ಗುಂಡನ್ನು ಹೊರತೆಗೆದರು ಮತ್ತು ಅದನ್ನು ಮೊಹರು ಮಾಡಿ ತಮ್ಮ ಎಮ್.ಎಲ್.ಸಿ ಸೆಲ್‌ನಲ್ಲಿ ಇರಿಸಿದರು. ಈ ಗುಂಡನ್ನು ಪೊಲೀಸರು ಜಪ್ತಿಪಡಿಸಿಕೊಂಡರು ಮತ್ತು ಅದನ್ನು ಬ್ಯಾಲಿಸ್ಟಿಕ್ ತಜ್ಞರಿಗೆ (ಪ್ರಾ.ಸಾ.24) ಕಳುಹಿಸಿದರು ಮತ್ತು ಅವರು ತಮ್ಮ ವರದಿಯಲ್ಲಿ, ಮೃತ ಮೇಘಾರ ದೇಹದಿಂದ ಹೊರತೆಗೆಯಲಾದ ಗುಂಡನ್ನು, ಅದೇ ಆಯುಧದಿಂದ ಹಾರಿಸಲಾಗಿದೆ ಎಂಬ ಅಭಿಯೋಜನೆಯ ಆವೃತ್ತಿಯನ್ನು ಬೆಂಬಲಿಸುತ್ತದೆ.

155. ಈ ನ್ಯಾಯಾಲಯವು ನೇಹಾರ ಬಂಧನದ ಸುತ್ತಲಿನ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಮುಖ್ಯವಾಗಿ ಪ್ರ.ಸಾ.1ರ ಸಾಕ್ಷ್ಯದ ಕಾರಣದಿಂದಾಗಿ ಅಭಿಯೋಜನೆಯ ಆಪಾದನೆಯನ್ನು ನಂಬಿರುವುದಿಲ್ಲ. ತನಿಖೆಯ ಆರಂಭಿಕ ಹಂತಗಳಲ್ಲಿ ಪ್ರ.ಸಾ.1–ದೀಪಿಕಾ ಶಿಂಧೆಯವರು ಸ್ವಲ್ಪಮಟ್ಟಿಗೆ ಭಾಗಿಯಾಗಿದ್ದರು ಎಂದು ಸ್ಪಷ್ಟವಾಗಿರುತ್ತದೆ ಮತ್ತು ಪೊಲೀಸ್ ದಾಖಲೆಗಳ ಪ್ರಕಾರ, ಈ ಭಾಗವಹಿಸುವಿಕೆಯು ತನಿಖೆಯಲ್ಲಿ ಪ್ರಗತಿ ಹೊಂದಲು ಕಾರಣವಾಗಿದ್ದು, ಇತರರ ಪೈಕಿ ಆಕೆಯು ಪಾಳಿಯಲ್ಲದ ಬಡ್ತಿಯನ್ನು ಶೀಘ್ರವಾಗಿ ಪಡೆಯಲು ಇದು ಕಾರಣವಾಗಿರುತ್ತದೆ. ಮುಖ್ಯವಾಗಿ ಅಧಿಕೃತ ಆವೃತ್ತಿಯ ಪ್ರಕಾರ ಆರೋಪಿಗಳನ್ನು ಬಂಧಿಸಿದಾಗ ಮತ್ತು ಹಿಂದಿನ ದಿನ ವಿವರಣಾ ಹೇಳಿಕೆಗಳನ್ನು ನೀಡಿದಾಗ, ಪೊಲೀಸರಿಗೆ ಅದನ್ನು ಸಂಪೂರ್ಣವಾಗಿ ದಾಖಲಿಸುವುದನ್ನು ಮತ್ತು ಬಹಿರಂಗ ಸ್ಥಳದಲ್ಲಿ ಬಚ್ಚಿಡಲಾಯಿತು ಎಂದು ಹೇಳಲಾದ ವಸ್ತುಗಳನ್ನು ವಶಪಡಿಸಿಕೊಳ್ಳಲು ಮುಂದುವರೆಯುವುದಕ್ಕೆ ಯಾವುದೇ ಅಡಚಣೆಯಿರುವುದಿಲ್ಲ ಎಂಬ ಆಧಾರದ ಮೇಲೆ ದಿನಾಂಕ 23.06.2011 ರಂದು ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ಹೇಳಿರುವುದಕ್ಕೆ ಸಂಬಂಧಿಸಿದಂತೆ ಅಭಿಯೋಜನೆಯ ಆವೃತ್ತಿಯನ್ನೂ ಸಹ ನಂಬಲು ಈ ನ್ಯಾಯಾಲಯಕ್ಕೆ ಸಾಧ್ಯವಿರುವುದಿಲ್ಲ. ಮುಂದುವರಿದು ಪ್ರಾ.ಸಾ.10–ಆಕಸ್ಮಿಕ ಸಾಕ್ಷಿಗೆ ಮತ್ತು ಟಿ.ಐ.ಪಿ ಪ್ರಕ್ರಿಯೆಯಲ್ಲಿ ಅವರು ಆರೋಪಿಗಳನ್ನು ಗುರುತಿಸಿದರು ಎಂಬುದಕ್ಕೆ ಸಂಬಂಧಿಸಿದಂತೆ ಅಭಿಯೋಜನೆ ಆವೃತ್ತಿಯನ್ನೂ ಸಹ ನ್ಯಾಯಾಲಯವು ಒಪ್ಪಿಕೊಂಡಿರುವುದಿಲ್ಲ.

156. ಸುನಾವಣೆಯ ಸಂದರ್ಭದಲ್ಲಿ, ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳು ಸಮರ್ಥನೀಯವಲ್ಲ ಎಂದು ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು ಬಲವಾಗಿ ವಾದ ಮಂಡಿಸಿದ್ದಾರೆ ಏಕೆಂದರೆ ವಿಚಾರಣಾ ನ್ಯಾಯಾಲಯವು ಅಭಿಯೋಜನೆಯ ವಾದವನ್ನು ದುರ್ಬಲಗೊಳಿಸುವ ಹಲವಾರು ಲೋಪಗಳನ್ನು ಕಡೆಗಣಿಸುತ್ತದೆ. ಕೆಲವು ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸದೆ ಬಿಟ್ಟಿರುವುದು (ಅಂದರೆ ಪ್ರಾ.ಸಾ.1–ಚಾಲಕ ನಂದಕುಮಾರ್, ಅಭಯ್ ತಿವಾರಿ, ಇವರು ಪ್ರಾ.ಸಾ.20 ರೊಂದಿಗೆ ಗುಂಡಿನ ರಂದ್ರವಿದ್ದ ಬಲಗಾಲಿನ ಶೂವನ್ನು

ಪತ್ತೆ ಮಾಡಿದವರಾಗಿರುತ್ತಾರೆ; ವಸ್ತುಗಳ ಟಿ.ಐ.ಪಿಯನ್ನು ನಡೆಸಿದಾಗ ಕೆಲವು ಆಭರಣಗಳೊಂದಿಗೆ ಅಲ್ಲಿಗೆ ಹೋದ ಅಮಿತ್ ಸೋನಿ; ದಿನಾಂಕ 23.06.2011 ರಂದು ವಶಪಡಿಸಿದ ಮತ್ತು ಜಪ್ತಿ ಮಾಡಿಕೊಂಡದ್ದನ್ನು ಸಾಕ್ಷೀಕರಿಸಿದ ಪ್ರಕಾಶ್ ಇಚ್ಕೆ; ರಾಹುಲ್‌ರವರೊಂದಿಗೆ ಎಮ್.ವೈ ಆಸ್ಪತ್ರೆಗೆ ಹೋದ ಪೇದೆ ದಿನೇಶ್ ಇತ್ಯಾದಿ). ಕೆಲವು ಸಾಕ್ಷಿಗಳ ಮೌನವು ಸಹ (ಅಂದರೆ ಪ್ರಾ.ಸಾ.4 ನೇಹಾರ ಶೋಧನೆ ಮತ್ತು ಆಕೆಯ ಬಂಧನವನ್ನು ಸಾಕ್ಷೀಕರಿಸಿದರೆ; ದಿನಾಂಕ 22.06.2011 ರ ಮುಂಜಾನೆ ನೇಹಾರ ಅನುಮಾನಸ್ಪದ ಚಟುವಟಿಕೆಯ ಬಗ್ಗೆ ಪ್ರಾ.ಸಾ.28 ರಿಂದ ಸ್ವೀಕರಿಸಿದ ಮಾಹಿತಿಯ ಬಗ್ಗೆ ಪ್ರಾ.ಸಾ.19 ರ ಮೌನ; ಮತ್ತು ಪ್ರ.ಸಾ.1ರ ಪಾತ್ರದ ಬಗ್ಗೆ ಅಭಿಯೋಜನೆ ಸಾಕ್ಷಿಗಳ ಮೌನ); ಅಭಿಯೋಜನೆಯ ಆವೃತ್ತಿಯ ಬಗ್ಗೆ ಗಂಭೀರವಾದ ಅನುಮಾನವನ್ನು ಉಂಟುಮಾಡುತ್ತದೆ. ಇದಲ್ಲದೆ, ಅಪರಾಧ ಸ್ಥಳದಲ್ಲಿ ಕಂಡುಬಂದ ವಸ್ತುಗಳನ್ನು ಜಪ್ತಿಮಾಡಿ, ಮೊಹರು ಮಾಡಿ, ರವಾನಿಸಿರುವುದು ಮತ್ತು ಆರೋಪಿಗಳಿಂದ ಮತ್ತು ತೆರೆದ ಪ್ರದೇಶಗಳಿಂದ ವಶಪಡಿಸಿಕೊಂಡ ವಸ್ತುಗಳನ್ನು ಮತ್ತು ಅವುಗಳನ್ನು ವಶಕ್ಕೆ ಪಡೆದ ಕ್ರಮವನ್ನೂ ಸಹ ಸಾಬೀತುಪಡಿಸಲಾಗಿಲ್ಲ ಎಂದು ಮಂಡಿಸಿದ್ದಾರೆ.

157. ಅಭಿಯೋಜನೆಯು ಅವಲಂಬಿಸಿದ ಸಾಕ್ಷ್ಯದ ಪ್ರಾಯೋಗಿಕ ಮೌಲ್ಯದ ಬಗ್ಗೆ ಈ ನ್ಯಾಯಾಲಯವು ಹಿಂದೆಯೇ ಚರ್ಚಿಸಿದ್ದು; ನೇಹಾರನ್ನು ಬಂಧಿಸಿದ ರೀತಿ, ದಿನಾಂಕ 23.06.2011 ರಂದು ವಶಪಡಿಸಿಕೊಂಡ ವಸ್ತುಗಳು, ಆರೋಪಿಗಳ ಗುರುತಿಸುವಿಕೆಗೆ ನಡೆಸಲಾದ ಟಿ.ಐ.ಪಿ, ಪ್ರಾ.ಸಾ.10 ಮತ್ತು ಪ್ರಾ.ಸಾ.8 ರ ಹೇಳಿಕೆ ಮತ್ತು ಡಿಎನ್‌ಎ ಮತ್ತು ಶೂ ಪ್ರಿಂಟ್‌ನ ವಿಶ್ಲೇಷಣೆಯನ್ನು ತಿರಸ್ಕರಿಸುತ್ತದೆ. ಕೆಲವು ಅಭಿಯೋಜನೆಯ ಸಾಕ್ಷ್ಯಗಳನ್ನು ತಿರಸ್ಕರಿಸಿರುವುದಕ್ಕೆ ಸಂಬಂಧಿಸಿದಂತೆ, ಆರೋಪಿಗಳ ವಿರುದ್ಧದ ಮೊಕದ್ದಮೆಯು ಒಟ್ಟಾರೆಯಾಗಿ ನಿರಾಕರಿಸಲಾಗಿದೆಯೇ ಎಂಬುದು ಮೊದಲ ಪ್ರಶ್ನೆಯಾಗಿರುತ್ತದೆ. ತನಿಖೆಯಲ್ಲಿನ ಲೋಪಗಳು ಅಥವಾ ಸಾಕ್ಷಿಗಳು ಸಾಕ್ಷ್ಯವನ್ನು ನೀಡುವ ಸಮಯದಲ್ಲಿನ ಲೋಪಗಳನ್ನು ಒಳಗೊಂಡ ಅಂಶದ ಬಗ್ಗೆ ನ್ಯಾಯಾಲಯವು ಹಿಂದಿನ ನಿರ್ಧಾರಗಳಲ್ಲಿ ಪರಿಗಣಿಸುತ್ತದೆ.

ಯು.ಪಿ ರಾಜ್ಯ ವಿರುದ್ಧ ಅನಿಲ್ ಸಿಂಗ್[62] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಈ ಕೆಳಗಿನಂತೆ ಗಮನಿಸುತ್ತದೆ:

> "17. ಬಹುಶಃ ನಂಬುವುದಿಲ್ಲ ಎಂಬ ಭಯದಿಂದ ಅಭಿಯೋಜನೆಯ ಆವೃತ್ತಿಗೆ ಸಾಕ್ಷಿಗಳು ಉತ್ಪ್ರೇಕ್ಷೆಯನ್ನು ತಪ್ಪದೆ ನೀಡುತ್ತವೆ ಎಂಬುದು ಸಹ ನಮ್ಮ ಅನುಭವವಾಗಿರುತ್ತದೆ. ಆದರೆ, ಅದು ನಿಜವಾಗಿದ್ದರೆ, ಮುಖ್ಯವಾದ ಮೊಕದ್ದಮೆಯನ್ನು ಅತಿರೇಕಕ್ಕೆ ನೂಕಲು ಅದು ಆಧಾರವಾಗುವುದಿಲ್ಲ. ಮುಖ್ಯವಾಗಿ ಸತ್ಯವೆಂದು ತೋರಿದರೆ, ಮೊಕದ್ದಮೆಯನ್ನು ತಿರಸ್ಕರಿಸುವಂತಿಲ್ಲ. ಅಸಂಗತತೆಗಳು ಅಥವಾ ಸುಳ್ಳುಗಳು ಸಾಕ್ಷಿಗಳ ಮೇಲಿನ ವಿಶ್ವಾಸವನ್ನು ಸಂಪೂರ್ಣವಾಗಿ ನಾಶಮಾಡುವಷ್ಟು ಸುಸ್ಪಷ್ಟವಾಗಿದೆ ಎಂದು ನಂಬಲು ಕಾರಣವಿಲ್ಲದ ಹೊರತು, ಸಾಕ್ಷ್ಯದಿಂದ ಉಪಯುಕ್ತ ಮಾಹಿತಿಯನ್ನು ಹೆಕ್ಕಿ ತೆಗೆಯುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಯಾವುದೇ ಮುಗ್ದ ವ್ಯಕ್ತಿಗೆ ಶಿಕ್ಷೆಯಾಗದಂತೆ ನೋಡಿಕೊಳ್ಳಲು ನ್ಯಾಯಾಧೀಶರು ಕ್ರಿಮಿನಲ್ ಅಧಿವಿಚಾರಣೆಯನ್ನು ನಡೆಸುವುದಿಲ್ಲ ಎಂಬುವುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯವಿದೆ. ಒಬ್ಬ ನ್ಯಾಯಾಧೀಶರು ತಪ್ಪಿತಸ್ಥನು ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಲೂ ಸಹ ಅಧಿವಿಚಾರಣೆಯನ್ನು ನಡೆಸುತ್ತಾರೆ. ಒಂದು ಇನ್ನೊಂದರಷ್ಟೇ ಮುಖ್ಯವಾಗಿರುತ್ತದೆ. ಇವೆರಡು ನ್ಯಾಯಾಧೀಶರು ನಿರ್ವಹಿಸಬೇಕಾದ ಸಾರ್ವಜನಿಕ ಕರ್ತವ್ಯಗಳಾಗಿರುತ್ತದೆ".

ಸಿ. ಮುನಿಯಪ್ಪನ್ ವಿರುದ್ಧ ತಮಿಳುನಾಡು ರಾಜ್ಯ[63] ಮೊಕದ್ದಮೆಯಲ್ಲಿ, ಈ ಕೆಳಗಿನಂತೆ ಅಭಿಪ್ರಾಯಪಡಲಾಗಿರುತ್ತದೆ:

> "ತನಿಖೆಯಲ್ಲಿನ ದೋಷವೇ ಖುಲಾಸೆಗೆ ಕಾರಣವಾಗುವುದಿಲ್ಲ. ಅಂತಹ ಉದ್ದೇಶಿತ ಅಥವಾ ನಿರ್ಲಕ್ಷ್ಯದ ತನಿಖೆಗಳಿಗೆ ಅಥವಾ ನಿಷ್ಪ್ರಯೋಜಕ ತನಿಖೆಯಿಂದಾದ ಲೋಪಗಳು ಅಥವಾ ದೋಷಗಳಿಗೆ ಪ್ರಾಮುಖ್ಯತೆಯನ್ನು ನೀಡಿದರೆ, ಅಪರಾಧ ನ್ಯಾಯದ ಆಡಳಿತದಲ್ಲಿ ಜನರ ನಂಬಿಕೆ ಮತ್ತು ವಿಶ್ವಾಸವು ನಾಶವಾಗುತ್ತದೆ. ದೋಷಪೂರಿತ ತನಿಖೆಗೆ ಕಾರಣವಾದ ತನಿಖಾ ಸಂಸ್ಥೆಯ ಕಡೆಯಿಂದ ನಿರ್ಲಕ್ಷ್ಯ ಅಥವಾ ಲೋಪಗಳು ಇತ್ಯಾದಿ ಕಂಡುಬಂದಲ್ಲಿ, ಅಭಿಯೋಜನೆಯ ಸಾಕ್ಷ್ಯಗಳ ಪೈಕಿ ಅಂತಹ ಲೋಪಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲು

62. (1988) ಸಪ್ ಎಸ್‌ಸಿಸಿ 686
63. (2010) 9 ಎಸ್‌ಸಿಸಿ 567

ನ್ಯಾಯಾಲಯಗಳಿಗೆ ಕಾನೂನಿನ ಬಾಧ್ಯತೆಯಿದ್ದು, ಸದರಿ ಸಾಕ್ಷ್ಯವು ವಿಶ್ವಾಸವಾಗಿದೆಯೇ ಅಥವಾ ಇಲ್ಲವೇ, ಅದು ಎಷ್ಟರಮಟ್ಟಿಗೆ ವಿಶ್ವಾಸಾರ್ಹವಾಗಿದೆ ಮತ್ತು ಅಂತಹ ಲೋಪಗಳು ಸತ್ಯವನ್ನು ಕಂಡು ಹಿಡಿಯುವ ಉದ್ದೇಶದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದನ್ನು ಕಂಡುಕೊಳ್ಳಲು ಎಚ್ಚರಿಕೆಯ ಪರಿಶೀಲನೆಯ ಅಗತ್ಯವಿರುತ್ತದೆ".

ಸುರ್ಜಿತ್ ಸರ್ಕಾರ್ ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ[64] ಮತ್ತು *ಶಂಕರ್ ಹಾಗೂ ಇತರರು ವಿರುದ್ಧ ಮಧ್ಯ ಪ್ರದೇಶ ರಾಜ್ಯ*[65] ಮೊಕದ್ದಮೆಯಲ್ಲಿ ಇದೇ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲಾಗಿದೆ. *ಹರಿಜನ ತಿರುಪಾಲ ಮತ್ತು ಇತರರ ವಿರುದ್ಧ ಸರ್ಕಾರಿ ಅಭಿಯೋಜಕರು, ಆಂಧ್ರಪ್ರದೇಶ ಉಚ್ಚ ನ್ಯಾಯಾಲಯ, ಹೈದರಾಬಾದ್*[66] ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿರುತ್ತದೆ:

"ಸಾಕ್ಷ್ಯಗಳ ಸಂಪೂರ್ಣತೆಗೆ ಸಂಬಂಧಿಸಿದಂತೆ ಅಭಿಯೋಜನೆಯ ವಾದವನ್ನು ನಿರ್ಣಯಿಸಬೇಕಾಗಿರುತ್ತದೆ.

ಸಾಕ್ಷ್ಯವನ್ನು ಪರಿಗಣಿಸುವಾಗ, ನ್ಯಾಯಾಲಯದ ದೃಷ್ಟಿಕೋನವು ಮೊಟಕಾಗಿ ಅಥವಾ ಪ್ರತ್ಯೇಕವಾಗಿರದೆ, ಸಮಗ್ರವಾಗಿರಬೇಕು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಆರೋಪಿಗಳು ತಪ್ಪಿತಸ್ಥರೇ ಅಥವಾ ಇಲ್ಲವೇ ಎಂಬ ನಿರ್ಣಯಕ್ಕೆ ಬರಲು, ಅಭಿಯೋಜನೆಯ ವಾದ ಅಥವಾ ಆರೋಪಿಗಳ ಮುಗ್ದತೆಯ ಮೇಲೆ ಸಂಪೂರ್ಣ ಸಾಕ್ಷ್ಯದ ಪ್ರಭಾವವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆರೋಪಿಯ ತಪ್ಪಿನ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವಾಗ, ನ್ಯಾಯಾಲಯವು ತಮ್ಮ ಮುಂದೆ ಹಾಜರುಪಡಿಸಲಾದ ಸಾಕ್ಷ್ಯವನ್ನು ಸಂಭವನೀಯತೆಗಳ ಮಾನದಂಡ, ಅದರ ಆಂತರಿಕ ಮೌಲ್ಯ ಮತ್ತು ಸಾಕ್ಷಿಗಳ ಅಭಿಪ್ರಾಯದ ಮೂಲಕ ಪರಿಗಣಿಸಬೇಕು, ವಿಶ್ಲೇಷಿಸಬೇಕು ಮತ್ತು ನಿರ್ಣಯಿಸಬೇಕು".

158. ಹೇಳಿಕೆಗಳಲ್ಲಿ ವ್ಯತ್ಯಾಸಗಳು ಕಡಿಮೆಯಿದ್ದರೆ ಅಥವಾ ಸಾಕ್ಷ್ಯ ನೀಡುವಾಗ ಸಾಕ್ಷಿಗಳು ತಮ್ಮನ್ನು ತಾವೇ ವಿರೋಧಿಸಿಕೊಂಡರೆ (ಹಿಂದೆ ಪೊಲೀಸರಿಗೆ ನೀಡಿದ ಹೇಳಿಕೆಗಳ ವಿರುದ್ಧವಾಗಿ) ಆ ವಿರೋಧಾಭಾಸದ ಸ್ವರೂಪವು ಪ್ರಮುಖವಾಗಿರುತ್ತದೆ ಎಂಬುದಕ್ಕೆ ಈ

64. (2013) 2 ಎಸ್‌ಸಿಸಿ 146
65. (2018) 15 ಎಸ್‌ಸಿಸಿ 725
66. (2002) 6 ಎಸ್‌ಸಿಸಿ 470

ನ್ಯಾಯಾಲಯವು ಮತ್ತಷ್ಟು ಒತ್ತುಕೊಡುತ್ತದೆ. *ರಮ್ಮಿ @ ರಾಮೇಶ್ವರ ವಿರುದ್ಧ ಮಧ್ಯಪ್ರದೇಶ ರಾಜ್ಯ*[67] ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತದೆ:

> "24. ... ಸಾಕ್ಷಿಯ ಸಾಕ್ಷ್ಯದ ವ್ಯತ್ಯಾಸಗಳು ಆತನ ಆವೃತ್ತಿಯ ವಿಶ್ವಾಸಾರ್ಹತೆಗೆ ಹೊಂದಿಕೆಯಾಗದಿದ್ದರೆ ಮಾತ್ರ ನ್ಯಾಯಾಲಯವು ಅವರ ಸಾಕ್ಷ್ಯವನ್ನು ತಿರಸ್ಕರಿಸುವಲ್ಲಿ ಸಮರ್ಥವಾಗಿರುತ್ತದೆ ಎಂಬುದನ್ನು ನ್ಯಾಯಾಲಯವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಒಂದು ಘಟನೆಯ ನಿರೂಪಣೆಯಲ್ಲಿ ಬರುವ ಕೇವಲ ವ್ಯತ್ಯಾಸಗಳ ಮೇಲೆ (ಇಬ್ಬರು ಸಾಕ್ಷಿಗಳ ಸಾಕ್ಷ್ಯದ ನಡುವೆ ಅಥವಾ ಒಂದೇ ಸಾಕ್ಷಿಯ ಎರಡು ಹೇಳಿಕೆಗಳ ನಡುವೆ) ಅಳವಡಿಸಿಕೊಳ್ಳಬೇಕಾದ ತುಂಬಾ ಗಂಭೀರವಾದ ದೃಷ್ಟಿಕೋನವು ನ್ಯಾಯಾಂಗ ಪರಿಶೀಲನೆಗೆ ಅವಾಸ್ತವಿಕ ವಿಧಾನವಾಗಿರುತ್ತದೆ".

ಅಪ್ಪಾಬಾಯಿ ಹಾಗು ಮತ್ತೊಬ್ಬರು ವಿರುದ್ಧ ಗುಜರಾತ್ ರಾಜ್ಯ[68] ಮೊಕದ್ದಮೆಯಲ್ಲಿ, *"ನ್ಯಾಯಾಲಯವು ಸಾಕ್ಷ್ಯಗಳನ್ನು ಪರಿಗಣಿಸುವಾಗ, ಸಣ್ಣ ಪುಟ್ಟ ವ್ಯತ್ಯಾಸಗಳಿಗೆ ಅನಗತ್ಯ ಪ್ರಾಮುಖ್ಯತೆಯನ್ನು ನೀಡಬಾರದು. ಅಭಿಯೋಜನೆಯ ವಾದದ ಮೂಲ ಆವೃತ್ತಿಯನ್ನು ಕದಲಿಸದ ವ್ಯತ್ಯಾಸವನ್ನು ತಿರಸ್ಕರಿಸಬಹುದು''* ಎಂದು ತೀರ್ಪು ನೀಡಲಾಯಿತು. ಇದೇ ರೀತಿಯಲ್ಲಿ *ವಿನೋದ್ ಕುಮಾರ್ ವಿರುದ್ಧ ಹರಿಯಾಣ ರಾಜ್ಯ*[69] ಮೊಕದ್ದಮೆಯಲ್ಲಿ, ಹೀಗೆ ಹೇಳುತ್ತದೆ:

> "ಸಾಕ್ಷಿಯ ಸಾಕ್ಷ್ಯದಲ್ಲಿನ ವ್ಯತ್ಯಾಸಗಳು ಅವರ ಆವೃತ್ತಿಯ ವಿಶ್ವಾಸಾರ್ಹತೆಗೆ ಹೊಂದಾಣಿಕೆಯಾಗದಿದ್ದಾಗ ಮಾತ್ರ ಅದು ಅವರ ಸಾಕ್ಷವನ್ನು ತಿರಸ್ಕರಿಸುವಲ್ಲಿ ಸಮರ್ಥವಾಗಿರುತ್ತದೆ".

159. ಒಂದು ನಿರ್ದಿಷ್ಟ ಅಂಶವನ್ನು ಉಲ್ಲೇಖಿಸಲು ಕೆಲವೊಂದು ಅಭಿಯೋಜನಾ ಸಾಕ್ಷಿಗಳು ಬಿಟ್ಟಿರುವುದು ಅಥವಾ ಇತರ ಸಾಕ್ಷಿಗಳು ನೀಡಿರುವ ಹೇಳಿಕೆಯನ್ನು ಪುಷ್ಟೀಕರಿಸದೆ ಇರುವುದು

67. (1999) 8 ಎಸ್‌ಸಿಸಿ 649
68. (1988) ಸಪ್ (1) ಎಸ್‌ಸಿಸಿ 241
69. (2015) 3 ಎಸ್‌ಸಿಸಿ 138

ತತ್ಸಂಗತವಾಗಿ ಆರೋಪಿಯನ್ನು ಬೆಂಬಲಿಸುವುದಿಲ್ಲ. ಆದಾಗ್ಯೂ, ಒಂದು ಸಂಗತಿ ಬಗ್ಗೆ ಹೇಳಿಕೆಯನ್ನು ಕೈಬಿಡುವುದು ಅಷ್ಟು ಮೂಲಭೂತವಾಗಿದ್ದು, ಅದು ಅಭಿಯೋಜನೆಯ ಆವೃತ್ತಿಯ ಅಸ್ಥಿರ ಮತ್ತು ಸಂಶಯಾತ್ಮಕವಾಗಿ ಮಾಡುತ್ತದೆಯೇ ಎಂಬುದು ಪ್ರಮುಖವಾಗಿರುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಾ.ಸಾ.4 ಅಥವಾ ಪ್ರಾ.ಸಾ.9 ಅಥವಾ ಇನ್ನಿತರ ಯಾವುದೇ ಸಾಕ್ಷಿಗಳು ಕೆಲವು ಅಂಶಗಳ ಬಗ್ಗೆ ಹೇಳುವುದನ್ನು ಕೈಬಿಟ್ಟಿರುವುದು ಆರೋಪಿಯ ಅನುಕೂಲಕ್ಕೆ ಬಳಕೆಯಾಗುವುದಿಲ್ಲ. ಅವರು ಕೈಬಿಟ್ಟ ಪ್ರತಿಯೊಂದು ಅಂಶವನ್ನು ಒಬ್ಬರು ಅಥವಾ ಹೆಚ್ಚಿನ ಸಾಕ್ಷಿಗಳು ಬೆಂಬಲಿಸುತ್ತಾರೆ. ಅಂತೆಯೇ, ಕೆಲವು ಸಾಕ್ಷಿಗಳಾದ ಅನಿಲ್ ಸೋನಿ, ಪ್ರಕಾಶ್ ಇಚ್ಕೆ, ಅಭಯ್ ತಿವಾರಿ ಅಥವಾ ನಂದಕುಮಾರ್‌ರವರನ್ನು ವಿಚಾರಣೆಗೊಳಪಡಿಸಲು ವಿಫಲವಾಗಿರುವುದು ಆರೋಪಿಯ ಅನುಕೂಲಕ್ಕೆ ಬಳಕೆಯಾಗುವುದಿಲ್ಲ. ಅನಿಲ್ ಸೋನಿಯವರು ಜಪ್ತಾದ ವಸ್ತುಗಳ ಬಗ್ಗೆ ನಡೆಸಲಾದ ಟಿ.ಐ.ಪಿ.ಯ ಸಮಯದಲ್ಲಿ ಉಪಸ್ಥಿತಿಯಿದ್ದು, ಪ್ರಾ.ಸಾ.1 ರಿಂದ ವಸ್ತುಗಳನ್ನು ಗುರುತಿಸಿ ಹೋಲಿಕೆ ಮಾಡಲು ಅವರು ಕೆಲವೊಂದು ಅಂತಹದೇ ವಸ್ತುಗಳನ್ನು ತಂದಿದ್ದರು. ನಂತರದ ಸಾಕ್ಷಿಯು ಆರೋಪಿಯಿಂದ ಜಪ್ತಿಪಡಿಸಿಕೊಂಡ ವಸ್ತುಗಳನ್ನು ಗುರುತಿಸಲು ಸಾಧ್ಯವಾಗಿರುತ್ತದೆ ಎಂದು ಪ್ರಾ.ಸಾ.12 ರವರು ಹೇಳಿರುತ್ತಾರೆ ಮತ್ತು ಇವರ ಸಾಕ್ಷ್ಯವನ್ನು ಅನುಮಾನಿಸಲಾಗುವುದಿಲ್ಲ. ಆದ್ದರಿಂದ ಟಿ.ಐ.ಪಿ.ಯನ್ನು ನಡೆಸಲಾಗಿದ್ದು; ಅನಿಲ್ ಸೋನಿಯವರನ್ನು ವಿಚಾರಣೆ ನಡೆಸಲು ವಿಫಲವಾಗಿರುವುದು ಒಂದು ಲೋಪವಾಗಿದೆ ಆದರೆ ಅದು ಮಾರಕವಲ್ಲ. ಅಂತೆಯೇ, ಪ್ರಕಾಶ್ ಇಚ್ಕೆಯವರನ್ನು ವಿಚಾರಿಸಲು ವಿಫಲವಾಗಿರುವುದು ಯಾವುದೇ ಪರಿಣಾಮವನ್ನು ಹೊಂದಿರುವುದಿಲ್ಲ, ಏಕೆಂದರೆ ದಿನಾಂಕ 23.06.2011 ರಂದು ವಶಪಡಿಸಿಕೊಂಡ ವಸ್ತುಗಳನ್ನು ಅಂಗೀಕರಿಸಿರುವುದಿಲ್ಲ. ಅಪರಾಧವನ್ನು ವರದಿ ಮಾಡಿದ ಅನುಕ್ರಮ ಮತ್ತು ಅದರ ನಂತರ ಬೆಳವಣಿಗೆಯಾದ ಘಟನೆಗಳ ವೇಗವನ್ನು ಗಮನಿಸಿದರೆ, ನಂದಕುಮಾರ್ ಅವರನ್ನು ವಿಚಾರಣೆಗೆ ಒಳಪಡಿಸಿದೆ ಕೈಬಿಟ್ಟಿರುವುದು ಅಸಮಂಜಸವಾಗಿದೆ. ನಿಸ್ಸಂದೇಹವಾಗಿ, ಅಭಯ ತಿವಾರಿಯವರು ಬುಲೆಟ್ ರಂಧ್ರವಿರುವ ಬಲಗಾಲಿನ ಶೂ ಅನ್ನು ಮೊದಲು ಗಮನಿಸಿದರು, ಆದಾಗ್ಯೂ ಪ್ರಾ.ಸಾ.20 ಸಹ ಅವರೊಂದಿಗೆ ಇದ್ದರೂ ಮತ್ತು

ಅವರು ಅದನ್ನು ಕಂಡುಹಿಡಿದ ಮತ್ತು ವಶಪಡಿಸಿಕೊಂಡ ಸಂಗತಿಯ ಬಗ್ಗೆ ಹೇಳಿರುತ್ತಾರೆ. ಅಂತೆಯೇ ಪ್ರಾ.ಸಾ.29 ಮತ್ತು ಪ್ರಾ.ಸಾ.30 ರ ಸಾಕ್ಷ್ಯವನ್ನು ಗಮನಿಸಿದರೆ, ಪೇದೆ ದಿನೇಶ್‌ನನ್ನು ವಿಚಾರಣೆಗೆ ಒಳಪಡಿಸಲು ವಿಫಲವಾಗಿರುವುದೂ ಸಹ ಮಾರಕವಲ್ಲ.

160. ಈ ನ್ಯಾಯಾಲಯವು, *ಶಿವಾಜಿ ಸಾಹೇಬರಾವ್ ಬೋಬಡೆ ವಿರುದ್ಧ ಮಹಾರಾಷ್ಟ್ರ ರಾಜ್ಯ*[70] ಮೊಕದ್ದಮೆಯಲ್ಲಿ, ಒಬ್ಬ ಪ್ರತ್ಯಕ್ಷ ಸಾಕ್ಷಿಯ ಸಾಕ್ಷ್ಯದ ಮೇಲೆ ಮೊಕದ್ದಮೆಯು ಅವಲಂಬಿತವಾಗಿದ್ದಾಗಲೂ ಸಹ, ಒಬ್ಬ ಸಮರ್ಥ, ಪ್ರಾಮಾಣಿಕ ವ್ಯಕ್ತಿಯು ನೀಡುವ ನಂಬತಕ್ಕ ಸಾಕ್ಷ್ಯವು ವಿಧಿಸಲಾದ ಶಿಕ್ಷೆಯನ್ನು ಉಳಿಸಿಕೊಳ್ಳಲು ಸಾಕಾಗುತ್ತದೆ; ಆದರೂ ನ್ಯಾಯಾಲಯವು ನಿಯಮದಂತೆ ದೃಢೀಕರಣಕ್ಕೆ ಕರೆ ನೀಡುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ ಮತ್ತು ಈ ಕೆಳಗಿನಂತೆ ಗಮನಿಸಿರುತ್ತದೆ:

> "ಮಾನವನ ವ್ಯವಹಾರಗಳಲ್ಲಿ ಪ್ರಮಾಣಕ್ಕಿಂತ ಗುಣಮಟ್ಟವು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ ಸಾಕ್ಷಿಗಳ ಪ್ರಾಮುಖ್ಯತೆಯನ್ನು ನೋಡಬೇಕು ಮತ್ತು ಎಣಿಸಬಾರದು ಎಂದು ಹೇಳುವುದು ಅತೀ ಸಾಮಾನ್ಯ ಅಂಶವಾಗಿದೆ".

ಕಾರ್ತಿಕೆ ಮಲ್ಹರ್ ವಿರುದ್ಧ ಬಿಹಾರ್ ರಾಜ್ಯ[71] ಮೊಕದ್ದಮೆಯಲ್ಲಿ ಹಿಂದಿನ ಚರ್ಚೆಗಳನ್ನು ಉಲ್ಲೇಖಿಸಿರುತ್ತದೆ ಮತ್ತು ಹೀಗೆ ಹೇಳುತ್ತದೆ:

> "ಈ ನಿರ್ಧಾರಗಳ ಸಾರಾಂಶದ ಮೇಲೆ ವಡೀವೇಲು ತೆವರ್ ಮೊಕದ್ದಮೆಯಲ್ಲಿ ರೂಪಿಸಲಾದ ತತ್ವಗಳಿಂದ ಹೊರಬರಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ ಮತ್ತು ಆದ್ದರಿಂದ, ಒಬ್ಬ ಪ್ರತ್ಯಕ್ಷದರ್ಶಿಯ ಹೇಳಿಕೆಯ ವಿರುದ್ಧ ಯಾವುದೇ ಪ್ರತಿಕೂಲ ಸನ್ನಿವೇಶವು ಆತನ ವಿಶ್ವಾಸಾರ್ಹತೆಯನ್ನು ಕದಲಿಸದಿದ್ದರೆ ಮಾತ್ರ ಅದರ ಆಧಾರದ ಮೇಲೆ ಅಪರಾಧವನ್ನು ದಾಖಲಿಸಬಹುದು; ಮತ್ತು ಅದೇ ಸಮಯದಲ್ಲಿ, ನ್ಯಾಯಾಲಯಕ್ಕೆ ಆತನು ಸತ್ಯವಾದ ಸಾಕ್ಷಿ ಎಂದು ಮನವರಿಕೆಯಾಗಬೇಕಿರುತ್ತದೆ".

70. (1973) 2 ಎಸ್‌ಸಿಸಿ 793
71. (1996) 1 ಎಸ್‌ಸಿಸಿ 614

161. ಆದ್ದರಿಂದ, ತನಿಖೆಯ ಸಮಯದಲ್ಲಿ ಹಿಂದೆ ಭಾಗವಹಿಸಿದಂತ ಮತ್ತು ಅವರ ಹೇಳಿಕೆಗಳನ್ನು ಪೊಲೀಸರು ದಾಖಲಿಸಿದ ಸಾಕ್ಷಿಯನ್ನು ವಿಚಾರಣೆಗೊಳಿಸಲು ಕೈಬಿಟ್ಟಿರುವುದು ಅಭಿಯೋಜನೆಯ ವಾದವನ್ನು ದುರ್ಬಲಗೊಳಿಸದ ಅಥವಾ ಅದರ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರದ ಹೊರತು, ಇತರೆ ಸಾಕ್ಷಿಗಳಿಂದ ಅಂದರೆ ಯಾರ ಸಾಕ್ಷ್ಯಗಳನ್ನು ಅವರ ಸ್ವಂತ ಪರಿಭಾಷೆಯಲ್ಲೇ ನೋಡಬೇಕು ಅಂತವರಿಂದ ಆ ಅಂಶದ ಬಗ್ಗೆ ಹೇಳಿರುವುದು ಅಥವಾ ಮಾತನಾಡಿರುವುದು ಸಾಬೀತುಪಡಿಸಬೇಕಾದ ಅಂಶ ಅಥವಾ ಅಂಶದ ಆಧಾರವನ್ನು ಕದಲದಂತೆ ಉಳಿಯುವಂತೆ ಮಾಡುತ್ತದೆ. ಆದ್ದರಿಂದ, ಅಭಿಯೋಜನೆಯು ತನಿಖೆಯ ಸಮಯದಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳುವ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸದೆ ಕೈಬಿಟ್ಟಿರುವುದು ಅಭಿಯೋಜನೆಯಿಂದ ಸಾಬೀತುಪಡಿಸಲಾದ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಅದರ ವಾದದ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ. ಆರೋಪಿಗಳ ವಾದಗಳನ್ನು ಗಮನಿಸಿದಾಗ ಮತ್ತು ಸಾಬೀತುಪಡಿಸಬಹುದಾದ ಸನ್ನಿವೇಶಗಳ ಬಗ್ಗೆ ಚರ್ಚಿಸಿದಾಗಲೂ ಸಹ (ಮತ್ತು ಯಾವುದನ್ನು ಸಾಬೀತುಪಡಿಸಲಾಗಿಲ್ಲ) ಈ ನ್ಯಾಯಾಲಯವು ಅದರ ನಿರ್ಣಯವನ್ನು ಸಂಕ್ಷಿಪ್ತವಾಗಿ ತಿಳಿಸಲು ಮಂದುವರಿಯುತ್ತದೆ.

162. ನೇಹಾರ ವಿರುದ್ಧವಾಗಿ ಕೆಲವು ಸನ್ನಿವೇಶಗಳು, ಅಂದರೆ ಮೊದಲನೆಯದಾಗಿ ದಿನಾಂಕ 22.06.2011 ರಂದು ಎರಡು ಬಂಗಾರದ ಬಳೆಗಳು, ಒಂದು ಮುರಿದ ಮಂಗಳಸೂತ್ರ, 3 ಗುರಿಯಾಗಳು, ಒಂದು ಬಂಗಾರದ ಪದಕ, ಮತ್ತು ಮೇಘಾರಿಗೆ ಸೇರಿದ ಒಂದು ಎ.ಟಿ.ಎಮ್ ಕಾರ್ಡ್ ಸೇರಿದಂತ ವಸ್ತುಗಳನ್ನು ವಶಪಡಿಸಿಕೊಂಡ ಸಂದರ್ಭಗಳು ಸಾಬೀತಾಗಿವೆ ಎಂದು ಈ ನ್ಯಾಯಲಯವು ಅಭಿಪ್ರಾಯಪಟ್ಟಿರುತ್ತದೆ. ಈ ವಸ್ತುಗಳು ಕಾಣೆಯಾದ ಬಗ್ಗೆ ಪ್ರಾ.ಸಾ.1 ರವರು ದಿನಾಂಕ 21.06.2011 ರಂದು ಅಂದರೆ ನೇಹಾರ ಬಂಧನಕ್ಕೆ ಒಂದು ದಿನದ ಮೊದಲು ವರದಿ ಮಾಡಿರುತ್ತಾರೆ. ಈ ವಸ್ತುಗಳ ಬಗ್ಗೆ ಟಿ.ಐ.ಪಿಯನ್ನು ನಡೆಸಿರುವುದು ಮತ್ತು ಪ್ರಾ.ಸಾ.1 ರವರು ಆ ವಸ್ತುಗಳನ್ನು ಸರಿಯಾಗಿ ಗುರುತಿಸಲು ಸಮರ್ಥವಾಗಿರುವುದು (ಅಧಿವಿಚಾರಣೆಯ ಸಮಯದಲ್ಲಿ ಪ್ರಾ.ಸಾ.12 ರಿಂದ ಪುಷ್ಟೀಕರಿಸಲ್ಪಟ್ಟಿದೆ) ಅಭಿಯೋಜನೆಯು ಸಾಬೀತುಪಡಿಸಿದ

ಎರಡನೆಯ ಸನ್ನಿವೇಶವಾಗಿರುತ್ತದೆ. ಈ ಸನ್ನಿವೇಶದೊಂದಿಗೆ ಕೊಂಡಿಯಾಗಿರುವುದು ಉಜ್ಜಯಿನಿಯ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಯಾದ ಪ್ರಾ.ಸಾ.27 ರ ಹೇಳಿಕೆ ಮತ್ತು ಅವರು ಎಸ್.ಎಚ್.ಓ ರವರಿಗೆ ಒಂದು ಪತ್ರವನ್ನು (ನಿ.ಪಿ.98) ನೀಡಿದ ಬಗ್ಗೆ ನುಡಿದಿರುತ್ತಾರೆ ಮತ್ತು ಆ ಪತ್ರವು ಎ.ಟಿ.ಎಮ್ ಕಾರ್ಡ್ ಸಂಖ್ಯೆಯನ್ನು ಹೊಂದಿರುತ್ತದೆ. ನೇಹಾರ ವಿವರಣಾ ಹೇಳಿಕೆಯ ಅನುಸಾರವಾಗಿ ಆಕೆಯ ಮನೆಯಿಂದ ದಿನಾಂಕ 22.06.2011 ರಂದು ವಶಪಡಿಸಿಕೊಂಡ ಮೇಘಾರಿಗೆ ಸೇರಿದ ಎ.ಟಿ.ಎಮ್ ಕಾರ್ಡ್‌ನ್ನು (5264959108034023) ಆ ಬ್ಯಾಂಕ್‌ನಿಂದ ನೀಡಲಾಗಿರುತ್ತದೆ. ನೇಹಾರ ವಿರುದ್ಧ ಅಭಿಯೋಜನೆಯು ಸಾಬೀತುಪಡಿಸಿದ ಮೂರನೇ ಸನ್ನಿವೇಶವೆಂದರೆ, ಅದು ಆಕೆಯ ಬೆರಳೊತ್ತುಗಳು. ಪ್ರಾ.ಸಾ.24–ಕೆ.ಕೆ. ದ್ವಿವೇದಿ, ಬೆರಳೊತ್ತು ತಜ್ಞರು, ಬೆರಳೊತ್ತುಗಳನ್ನು ಸಂಗ್ರಹಿಸುವ ಸಾಧ್ಯತೆಗಾಗಿ ಅಪರಾಧ ಸ್ಥಳವನ್ನು ಶೋಧಿಸಿದ ಬಗ್ಗೆ ನುಡಿಯುತ್ತಾರೆ. ಅವರು ನಾಲ್ಕು ಜೊತೆ ಬೆರಳೊತ್ತುಗಳನ್ನು (ಅಂದರೆ ನಿ.ಪಿ.80–ಆಕಸ್ಮಿಕ ಬೆರಳೊತ್ತುಗಳು) ಸಂಗ್ರಹಿಸಿದ್ದು, ಎರಡು ಸಾಕ್ಷಿಗಳು (ಪ್ರಾ.ಸಾ. 5 ಮತ್ತು 9) ಅದನ್ನು ಸಾಕ್ಷೀಕರಿಸಿರುತ್ತಾರೆ ಮತ್ತು ಆ ಅಂಶವನ್ನು ಪುಷ್ಟೀಕರಿಸಿರುತ್ತಾರೆ. ಈ ಎರಡು ಸಾಕ್ಷಿಗಳು ನೀಡಿರುವ ಹೇಳಿಕೆ ಮತ್ತು ಇತರ ಸಾಕ್ಷಿಗಳೂ ನೀಡಿರುವ ಹೇಳಿಕೆಯ ಕಾರಣದಿಂದ ಅಪರಾಧ ಸ್ಥಳದಲ್ಲಿ ಇತರರ ಉಪಸ್ಥಿತಿ ಮತ್ತು ಅದು ಮಾಲಿನ್ಯಗೊಂಡಿರುತ್ತದೆ ಎಂಬ ಸಾಧ್ಯತೆಯನ್ನು ತಳ್ಳಿಹಾಕಬಹುದು ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಪ್ರಾ.ಸಾ.17 ರವರು ನೇಹಾರ (ನಿ.ಪಿ.43) ಬೆರಳೊತ್ತಿನ ಮಾದರಿಯನ್ನು ಸಂಗ್ರಹಿಸಿದ್ದು, ಇದರ ಬಗ್ಗೆ ಅಧಿವಿಚಾರಣೆಯ ಸಂದರ್ಭದಲ್ಲಿ ನುಡಿದಿರುತ್ತಾರೆ. ಅಂತಹ ಸಾಕ್ಷ್ಯಗಳ ಸಂಗ್ರಹಣೆಯಲ್ಲಿನ ಕಾರ್ಯವಿಧಾನದ ಲೋಪಗಳ ಬಗ್ಗೆ ಅಪೀಲುದಾರರು ಹೇಳಿರುವುದು ಮನವರಿಕೆಯಾಗಿರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ತನಿಖೆಯ ಸಂದರ್ಭದಲ್ಲಿ ಪ್ರಾ.ಸಾ.17 ರವರು ಆಕೆಯಿಂದ ಸಂಗ್ರಹಿಸಿದ ಮಾದರಿಯ ಆಕಸ್ಮಿಕ ಬೆರಳೊತ್ತಿನೊಂದಿಗೆ (ಅಪರಾಧ ಸ್ಥಳದಿಂದ ಸಂಗ್ರಹಿಸಲಾದ ಮಾದರಿ ಇ) ಹೊಂದಾಣಿಕೆಯಾಗಿರುತ್ತದೆ ಎಂಬುದನ್ನು ಪ್ರಾ.ಸಾ.24 ರ ಸಾಕ್ಷ್ಯ ಮತ್ತು ಅವರ ವರದಿಯು (ನಿ.ಪಿ.84) ಸಾಬೀತುಪಡಿಸುತ್ತದೆ. ಅಧಿವಿಚಾರಣೆಯ ಸಮಯದಲ್ಲಿ ನೇಹರಿಗೆ ಅಪರಾಧದ

ಬಗ್ಗೆ ಇದ್ದ ಜ್ಞಾನವು ಪ್ರಮುಖವಾಗಿದ್ದು; ಇದು ನೇಹಾರವರ ವಿರುದ್ಧ ಸಾಬೀತುಪಡಿಸಲಾದ ನಾಲ್ಕನೆಯ ಸನ್ನಿವೇಶವಾಗಿರುತ್ತದೆ. ಆಕೆಯು ನೀಡಿದ ವಿವರಣಾ ಹೇಳಿಕೆಯು ರಾಹುಲ್ ಮತ್ತು ಮನೋಜ್‌ರವನ್ನು ಬಂಧಿಸಲು ಮತ್ತು ಅವರಿಂದ ದರೋಡೆಯಾದ ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲು ಕಾರಣವಾಗಿರುತ್ತದೆ. ನೇಹಾರವರ ಬಂಧನದ ವಿಧಾನದಲ್ಲಿ ಸುತ್ತುವರಿದಿರುವ ಸನ್ನಿವೇಶಗಳನ್ನು ಈ ನ್ಯಾಯಾಲಯವು ನಂಬಿರುವುದಿಲ್ಲ ಮತ್ತು ಪ್ರಾ.ಸಾ.10 ರ ಸಾಕ್ಷ್ಯ ಮತ್ತು ಆಕೆಯನ್ನು ಅವರು ಗುರುತಿಸಲಾದ ಟಿ.ಐ.ಪಿ ಪ್ರಕ್ರಿಯೆಯನ್ನು ಸಹ ಈ ನ್ಯಾಯಾಲಯವು ನಂಬಿರುವುದಿಲ್ಲ.

163. ರಾಹುಲ್ ವಿರುದ್ಧವಾಗಿ, ಮೊದಲನೆಯದಾಗಿ ದಿನಾಂಕ 22.06.2011 ರಂದು ಆತನನ್ನು ಬಂಧಿಸಲಾಯಿತು (ಪ್ರಾ.ಸಾ.3 ಮತ್ತು ಪ್ರಾ.ಸಾ.6 ರಿಂದ ಸಾಕ್ಷೀಕರಿಸಲಾದ) ಎಂಬುದಕ್ಕೆ ಸಂಬಂಧಿಸಿದಂತ ಸನ್ನಿವೇಶವನ್ನು ಅಭಿಯೋಜನೆಯು ಸಾಬೀತುಪಡಿಸಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಎರಡು ಬಾಗಿದ ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಭಾಗ, ಒಂದು ಕಾಡು ಪಿಸ್ತೂಲ್, 35.5 ಸೆ.ಮಿ ಅಳತೆಯುಳ್ಳ ಒಂದು ಚಾಕು, ಮತ್ತು ಒಂದು ಕಪ್ಪು ವಜ್ರದಂತ ಹರಳಿರುವ ಬ್ರೆಸ್‌ಲೆಟ್ಟನ್ನು ಧರಿಸಿದಂತೆ ತೋರಿಸುವ ರಾಹುಲ್‌ರ ಭಾವಚಿತ್ರವನ್ನು ಒಳಗೊಂಡಂತೆ ದರೋಡೆಯಾದ ವಸ್ತುಗಳನ್ನು ಮತ್ತು ಅಪರಾಧಕ್ಕೆ ಸಂಬಂಧಿಸಿದ ಇತರ ವಸ್ತುಗಳನ್ನು ವಶಪಡಿಸಿಕೊಂಡು ಜಪ್ತಿಪಡಿಸಿಕೊಳ್ಳಲು ಆತನು ನೀಡಿದ ವಿವರಣಾ ಹೇಳಿಕೆಯು ಕಾರಣವಾಗಿರುತ್ತದೆ ಎಂಬ ಎರಡನೆಯ ಸನ್ನಿವೇಶವನ್ನು ಸಾಬೀತುಗೊಳಿಸಿರುತ್ತದೆ. ನೇಹಾರವರಂತೆ, ಟಿ.ಐ.ಪಿಯನ್ನು (ಪ್ರಾ.ಸಾ.12 ರಿಂದ ಮತ್ತಷ್ಟು ಪುಷ್ಟೀಕರಿಸಲಾದ) ನಡೆಸಿದ ಸಂದರ್ಭದಲ್ಲಿ ರಾಹುಲ್‌ರವರಿಂದ ವಶಪಡಿಸಿಕೊಂಡ ಬಂಗಾರದ ಆಭರಣಗಳನ್ನು ಪ್ರಾ.ಸಾ.1 ರವರು ಗುರುತಿಸಿದರು ಎಂಬುದು ಸಾಬೀತುಪಡಿಸಲಾದ ಮೂರನೇ ಸನ್ನಿವೇಶವಾಗಿರುತ್ತದೆ. ಪ್ರಾ.ಸಾ.17 ರವರು ಸಂಗ್ರಹಿಸಿದ ರಾಹುಲ್‌ರವರ ಬಲಗೈಯಿನ ತೋರು ಬೆರಳು ಮತ್ತು ಮಧ್ಯದ ಬೆರಳಿನ ಬೆರಳೊತ್ತು ಮಾದರಿಯೊಂದಿಗೆ (ನಿ.ಪಿ.41) ಪ್ರಾ.ಸಾ.24–ಬೆರಳೊತ್ತು ತಜ್ಞರು ಅಪರಾಧ ಸ್ಥಳದಿಂದ ಸಂಗ್ರಹಿಸಲಾದ ಎ ಮತ್ತು

ಬಿ ಬೆರಳೊತ್ತುಗಳು ಹೊಂದಾಣಿಕೆಯಾಗಿರುತ್ತದೆ ಎಂಬುದು ಸಾಬೀತುಪಡಿಸಲಾದ ನಾಲ್ಕನೇ ಸನ್ನಿವೇಶವಾಗಿರುತ್ತದೆ. ದಿನಾಂಕ 19.06.2011 ರ ಸಾಯಂಕಾಲ ರಾಹುಲ್‌ರವರು ತಮ್ಮ ಬಲಗಾಲಿನ ಪಾದಕ್ಕೆ ಯಾರೋ ಅಪರಿಚಿತರು ಗುಂಡು ಹಾರಿಸಿರುವುದಾಗಿ ತಡವಾಗಿ ವರದಿ ಮಾಡಿರುವುದು ಅಧಿವಿಚಾರಣೆಯ ಸಮಯದಲ್ಲಿ ಸಾಬೀತಾದ ಐದನೇ ಸನ್ನಿವೇಶವಾಗಿರುತ್ತದೆ. ನಂತರ ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಥಮ ಮಾಹಿತಿಯ ರೀತಿಯಲ್ಲಿ ಇದನ್ನು ದಾಖಲಿಸಲಾಯಿತು; ನಂತರ ಭಾರತ ದಂಡ ಸಂಹಿತೆಯ 294, 307 ಮತ್ತು 34 ನೇ ಪ್ರಕರಣದ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಪ್ರಾ.ಸಾ.30 ರವರು ಒಂದು ಎಫ್.ಐ.ಆರ್ (ನಿ.ಪಿ.109) ಅನ್ನು ದಾಖಲು ಮಾಡಿರುತ್ತಾರೆ. ಮೊದಲಿಗೆ ರಾಹುಲ್‌ರವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು (ದಿನಾಂಕ 19.06.2011 ರಂದು ಚಿಕಿತ್ಸೆ ನೀಡಿದ ಬಗೆಗಿನ ಕಾರ್ಡ್ ನಿ.ಪಿ.97 ಇದನ್ನು ಸಾಬೀತುಪಡಿಸುತ್ತದೆ). ಆದಾಗ್ಯೂ, ರಾಹುಲ್‌ರವರನ್ನು ಎಮ್.ವೈ ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಲಾಯಿತು ಮತ್ತು ಆತನಿಗೆ ಶಸ್ತ್ರ ಚಿಕಿತ್ಸೆ ಮಾಡಿದ ಪ್ರಾ.ಸಾ.32 ರವರು ಆತನನ್ನು ಪರೀಕ್ಷಿಸಿದರು. ದಿನಾಂಕ 20.06.2011 ರಂದು ಪ್ರಾ.ಸಾ.32 ರವರು (ಅದರ ಬಗ್ಗೆ ನುಡಿದಿರುವ) ಸಹಿ ಮಾಡಿರುವ ಎಮ್.ವೈ ಆಸ್ಪತ್ರೆಯ ಡಿಸ್ಚಾರ್ಜ್ ಕಾರ್ಡ್‌ನ್ನು ನಿ.ಪಿ.113 ಎಂದು ಗುರುತು ಮಾಡಲಾಗಿರುತ್ತದೆ. ಪ್ರಾ.ಸಾ.29 ಮೊದಲಿಗೆ ಪ್ರಥಮ ವರ್ತಮಾನ ದಾಖಲಿಸಿದರಾಗಿದ್ದು; ರಾಹುಲ್‌ರವರನ್ನು ಘಟನೆಯ ಬಗ್ಗೆ ವರದಿ ಮಾಡಿದ ಹುಡುಗನೆಂದೂ ಸಹ ಗುರುತಿಸಿರುತ್ತಾರೆ. ಅವರ ಕಾಲಿನಿಂದ ಹೊರತೆಗೆದ ಗುಂಡನ್ನು ಆಸ್ಪತ್ರೆಯ ಮೆಡಿಕೋ ಲೀಗಲ್ ಸೆಲ್‌ನಲ್ಲಿ ಇರಿಸಲಾಗಿರುತ್ತದೆ (ನಿ.ಪಿ.113 ರ ಅಡಿಯಲ್ಲಿ) ಮತ್ತು ನಂತರ ಅದನ್ನು ದಿನಾಂಕ 23.06.2011 ರಂದು ಪಡಿಸಿಕೊಳ್ಳಲಾಯಿತು (ನಿ.ಪಿ.108 ರ ಅಡಿಯಲ್ಲಿ). ಇದಕ್ಕೆ ಸಂಬಂಧಿಸಿದ ಎಫ್.ಐ.ಆರ್ ಅನ್ನು ನಂತರ ಮುಕ್ತಾಯ ಮಾಡಲಾಯಿತು. ಅನ್ನಪೂರ್ಣ ಪಿ.ಎಸ್.ನ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವಲ್ಲಿ (ಪ್ರಾ.ಸಾ.20 ರಿಂದ ಸಾಬೀತಾದ) ಬಲಗಾಲಿನ ಶೂವನ್ನು (ನಿ.ಪಿ.75) ಜಪ್ತಿಪಡಿಸಿಕೊಂಡಿರುವುದು ಮತ್ತು ಅಧಿವಿಚಾರಣಾ ನ್ಯಾಯಾಲಯವು ಅದರ ಮೇಲೆ ಗುಂಡಿನ ರಂಧ್ರವಿರುವುದನ್ನು ಗಮನಿಸಿರುವುದು ಸಾಬೀತಾದ ಮತ್ತೊಂದು ಅಂಶವಾಗಿರುತ್ತದೆ. ರಾಹುಲ್ ವಿರುದ್ಧ ಪ್ರಮುಖವಾಗಿ ಸಾಬೀತುಪಡಿಸಲಾದ

ಆರನೇ ಸನ್ನಿವೇಶವೆಂದರೆ ಅದು ಬ್ಯಾಲಿಸ್ಟಿಕ್ ವರದಿಯಾಗಿರುತ್ತದೆ ಮತ್ತು ಆ ಎರಡು ಗುಂಡುಗಳೊಂದಿಗೆ (ಅಪರಾಧ ಸ್ಥಳದಲ್ಲಿ ಪತ್ತೆಯಾದ) ಹೊಂದಿಕೆಯಾದ 7.65 ಎಮ್.ಎಮ್ ಕ್ಯಾಲಿಬರ್ ಕಾಟ್ರಿಡ್ಜ್‌ನ ಪ್ರಮಾಣಿಕೃತ ಗುಂಡು; ಟಿಬಿ.ಎ1 ಗುಂಡು ಒಂದೇ ರೀತಿ ಕಂಡುಬಂದಿದೆ ಎಂದು ಬ್ಯಾಲಿಸ್ಟಿಕ್ ವರದಿಯು ತಿಳಿಸುತ್ತದೆ. ಚರ್ಮದ ಮೂರು ತುಂಡುಗಳಲ್ಲಿ ತಾಮ್ರವು ಧನಾತ್ಮಕವಾಗಿ ಕಂಡುಬಂದಿದೆ. ಪ್ರಮುಖವಾಗಿ, ವರದಿಯ ಪ್ರಕಾರ, ಇಬಿ.2 ಮತ್ತು ಇಬಿ.1 (ಮೃತ ಮೇಘಾರ ದೇಹದಿಂದ ಮತ್ತು ರಾಹುಲ್‌ರ ಬಲಗಾಲಿನ ಪಾದದಿಂದ ಕ್ರಮವಾಗಿ ವಶಪಡಿಸಿಕೊಂಡ) ಎಂಬ ಎರಡು ಗುಂಡುಗಳನ್ನು ನಿ.ಎ.1 ಎಂದು ಗುರುತಿಸಲಾದ ಪಿಸ್ತೂಲ್ ನಿಂದ ಹಾರಿಸಲಾಗಿದ್ದು, ಅದನ್ನು ರಾಹುಲ್‌ರವರ ಮನೆಯಿಂದ ಜಪ್ತಪಡಿಸಿಕೊಳ್ಳಲಾಗಿರುತ್ತದೆ. ಜಪ್ತಿಪಡಿಸಿಕೊಂಡ ಬಲಗಾಲಿನ ಶೂಗೆ (ಮೇಲೆ ಉಲ್ಲೇಖಿಸಲಾದ) ಬಂದೂಕಿನ ಗುಂಡು ತಾಮ್ರದ ಹೊದಿಕೆ ಹೊಂದಿದ ಗುಂಡಿನಿಂದ ಉಂಟಾಗಿರುತ್ತದೆ ಎಂದು ವರದಿ ತಿಳಿಸುತ್ತದೆ. ಎಲ್ಲಾ ವಸ್ತುಗಳನ್ನು ವಿಶ್ಲೇಷಿಸಿ ನೀಡಲಾದ ಬ್ಯಾಲಿಸ್ಟಿಕ್ ವರದಿಯು (ನಿ.ಪಿ.120) ಈ ಎಲ್ಲಾ ಅಂಶಗಳನ್ನು ಸಾಬೀತುಪಡಿಸುತ್ತದೆ. ಎಫ್.ಎಸ್.ಎಲ್‌ಗೆ ಕಳುಹಿಸಲಾದ ಪಿಸ್ತೂಲ್‌ನಿಂದ ಬ್ಯಾಲಿಸ್ಟಿಕ್ ತಜ್ಞರು ಪರೀಕ್ಷೆ ಮಾಡುವ ಉದ್ದೇಶದಿಂದ ಗುಂಡು ಹಾರಿಸಿರುತ್ತಾರೆ ಮತ್ತು ಪಿಸ್ತೂಲ್‌ನಲ್ಲಿ ಎರಡು ಬಳಕೆ ಮಾಡಿದ ಕಾಟ್ರಿಡ್ಜ್ ಗುಂಡು ಹಾರಿಸಲಾದ ಕುರುಹು ಇರುತ್ತದೆ ಎಂದೂ ಸಹ ವರದಿಯು ತಿಳಿಸುತ್ತದೆ.

164. ಮನೋಜ್‌ರವರ ವಿರುದ್ಧ ಹಲವಾರು ಸನ್ನಿವೇಶಗಳು ಸಾಬೀತಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ದಿನಾಂಕ 22.06.2011 ರ ಬೆಳಗ್ಗೆ ಸುಮಾರು 10.05 ಗಂಟೆಗೆ (ಪ್ರಾ.ಸಾ.3 ಮತ್ತು ಪ್ರಾ.ಸಾ.6 ರಿಂದ ಸಾಬೀತುಪಡಿಸಿದ) ಅವರನ್ನು ಬಂಧಿಸಿ ನಂತರ ಅವರ ವಿವರಣಾ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು ಎಂಬುದು ಆತನ ವಿರುದ್ಧ ಸಾಬೀತುಪಡಿಸಲಾದ ಮೊದಲನೆಯ ಸನ್ನಿವೇಶವಾಗಿರುತ್ತದೆ. ಎರಡು ಬಂಗಾರದ ಬಳೆಗಳು, ಮುರಿದ ಮಂಗಳಸೂತ್ರದ ಒಂದು ಭಾಗ, ಒಂದು ಚಾಕು ಮತ್ತು ಸನ್‌ಗ್ಲಾಸ್ (ನಿ.ಪಿ.17, ಅದೇ ಸಾಕ್ಷಿಯಿಂದ ಸಾಬೀತುಪಡಿಸಲಾದ) ಹಾಕಿಕೊಂಡಿರುವ ಮನೋಜ್‌ರವರ

ಭಾವಚಿತ್ರವನ್ನು ಒಳಗೊಂಡಂತೆ ಮನೋಜ್‌ರವರ ಆಣತಿಯಂತೆ ಅವರಿಂದ ವಶಪಡಿಸಿಕೊಂಡು ಜಪ್ತಿ ಮಾಡಿಕೊಂಡ ವಸ್ತುಗಳು ಸಾಬೀತುಪಡಿಸಲಾದ ಎರಡನೆಯ ಸನ್ನಿವೇಶವಾಗಿರುತ್ತದೆ. ಟಿ.ಐ.ಪಿ ಯನ್ನು ನಡೆಸಿದ ಸಂದರ್ಭದಲ್ಲಿ (ಪ್ರಾ.ಸಾ.12 ರಿಂದ ಪುಷ್ಟೀಕರಿಸಿದ) ಅವರಿಂದ ವಶಪಡಿಸಿಕೊಂಡ ಬಂಗಾರದ ಆಭರಣಗಳನ್ನು ಪ್ರಾ.ಸಾ.1 ರವರು ಗುರುತಿಸಿರುವುದು ಮನೋಜ್‌ರವರ ವಿರುದ್ಧ ಸಾಬೀತುಪಡಿಸಲಾದ ಮೂರನೇ ಸನ್ನಿವೇಶವಾಗಿರುತ್ತದೆ.

165. ಎಲ್ಲಾ ಸನ್ನಿವೇಶಗಳನ್ನು ಮತ್ತು ಅದರೊಂದಿಗಿನ ಸಂಬಂಧವನ್ನು ಅಭಿಯೋಜನೆಯು ಸಂದೇಹಾತೀತವಾಗಿ ಮತ್ತು ಸಮರ್ಥವಾಗಿ ಸಾಬೀತುಪಡಿಸಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಅಂತೆಯೇ, ಅಂತಹ ಸಾಕ್ಷ್ಯದಿಂದ ಆರೋಪಿಗಳು ತಪ್ಪಿತಸ್ಥರಲ್ಲ ಎಂದು ಸೂಚಿಸುವ ಪ್ರತೀ ಪರಿಕಲ್ಪನೆಯನ್ನು ತಳ್ಳಿಹಾಕುತ್ತದೆ ಮತ್ತು ಅದನ್ನು ಅನುಸರಿಸುವ ಅನಿವಾರ್ಯ ನಿರ್ಣಯವು ಅವರ ಅಪರಾಧವಾಗಿರುತ್ತದೆ.

166. ಆರೋಪಿಗಳ ವಿರುದ್ಧ ಸನ್ನಿವೇಶಗಳ ಸಾಕ್ಷ್ಯವು ಅವರ ಅಪರಾಧ ಮತ್ತು ಅಪರಾಧದಲ್ಲಿ ಭಾಗಿಯಾಗಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಅಪೀಲುದಾರರು ಮೃತರ ಬಗ್ಗೆ ಮತ್ತು ಅವರ ಚಲನವಲನದ ಬಗ್ಗೆ ತಮಗೆ ತಾವೇ ಮಾಹಿತಿ ನೀಡಿದ್ದರೆಂದು ತೋರುತ್ತದೆ. ಬಹುಶಃ ಅವರು ಆ ಪ್ರದೇಶದ ಮೇಲೆ ನಿಗಾ ಇಟ್ಟಿದ್ದರು. ದಿನಾಂಕ 19.06.2011 ರಂದು ಇಂದೋರ್ ಬಡಾವಣೆಗೆ ಮೃತರು ಹೊಸದಾಗಿ ಸ್ಥಳಾಂತರಗೊಂಡಿದ್ದು, ಅವರನ್ನು ದರೋಡೆ ಮಾಡುವುದು ಮಾತ್ರ ಅಪೀಲುದಾರರ ಸಾಮಾನ್ಯ ಉದ್ದೇಶವಾಗಿತ್ತು. ಘಟನೆ ಸಂಭವಿಸಿದ ನಿಖರವಾದ ಸಮಯ ತಿಳಿದಿಲ್ಲವಾದರೂ, ಮರಣೋತ್ತರ ಪರೀಕ್ಷೆಯ ವರದಿ ಪ್ರಕಾರ ದಿನಾಂಕ 20.06.2011 ರಂದು ಬೆಳಗ್ಗೆ 11 ಗಂಟೆಯ ನಂತರ ಮರಣೋತ್ತರ ಪರೀಕ್ಷೆಯನ್ನು ಪ್ರಾರಂಭಿಸಿದ ಸಮಯದಿಂದ 12 ರಿಂದ 36 ಗಂಟೆಗಳ ಒಳಗೆ ಸಾವು ಸಂಭವಿಸಿರಬಹುದು ಎಂಬುದಾಗಿದೆ. ಆದ್ದರಿಂದ ದಿನಾಂಕ 19.06.2011 ರಂದು ಹಗಲಿನ ವೇಳೆಯಲ್ಲಿ ಸಾವು ಸಂಭವಿಸಿದೆ ಎಂದು ಊಹಿಸಲು

ಸಮಂಜಸವಾಗಿದೆ. ಪ್ರಾ.ಸಾ.10 ರ ಸಾಕ್ಷ್ಯವು ನಂಬಲಾಗದಿದ್ದರೂ, ಪ್ರಾ.ಸಾ.5, ಪ್ರಾ.ಸಾ.9 ಮತ್ತು ಪ್ರಾ.ಸಾ.2 ರ ಸಾಕ್ಷ್ಯವು, ದಿನಾಂಕ 19.06.2011 ರ ಸಾಯಂಕಾಲ ಮೃತದೇಹಗಳನ್ನು ಪತ್ತೆಮಾಡಿದಾಗ ಮತ್ತು ಪೊಲೀಸರು ಘಟನಾ ಸ್ಥಳಕ್ಕೆ ಆಗಮಿಸಿದಾಗ ಅಪರಾಧವು ಗಮನಕ್ಕೆ ಬಂದಿರುವುದನ್ನು ತೋರಿಸುತ್ತದೆ.

167. ಮೃತರ ಮೈಮೇಲೆ ಕಂಡುಬಂದ ಗಾಯಗಳ ಸ್ವರೂಪ ಮತ್ತು ವಿವರಣೆಯು, ಅವರು ಆಕ್ರಮಣವನ್ನು ಪ್ರತಿರೋಧಿಸಲು ಪ್ರಯತ್ನಿಸಿರುತ್ತಾರೆ ಎಂಬುದನ್ನು ತೋರಿಸುತ್ತಿದ್ದು; ಬಹುಶಃ ಅಪೀಲುದಾರರು ಆ ರೀತಿಯ ಪ್ರತಿರೋಧವನ್ನು ನಿರೀಕ್ಷಿಸಿರಲಿಲ್ಲ. ಮೃತರನ್ನು ದರೋಡೆ ಮಾಡುವ ಉದ್ದೇಶ ಮತ್ತು ಬೆಲೆಬಾಳುವ ವಸ್ತುಗಳನ್ನು ಹಸ್ತಾಂತರಿಸುವಂತೆ ಅವರನ್ನು ಒತ್ತಾಯಿಸುವುದು; ಆರೋಪಿಗಳ ವಿರುದ್ಧದ ಅನಿರೀಕ್ಷಿತ ಹೋರಾಟದ ಕಾರಣದಿಂದಾಗಿ ಶೀಘ್ರದಲ್ಲೇ ಹಿಂಸಾಚಾರಕ್ಕೆ ತಿರುಗಿತು. ಹಲವಾರು ಚೂಪಾದ ಅಂಚಿನಿಂದಾದ ಗಾಯಗಳು ಮತ್ತು ಒಂದು ಗುಂಡಿನಿಂದಾದ ಗಾಯವು ಮೇಘಾರನ್ನು ಮಾರಣಾಂತಿಕವಾಗಿ ಗಾಯಗೊಳ್ಳುವಂತೆ ಮಾಡಿರುತ್ತದೆ. ಇದರ ಪರಿಣಾಮವಾಗಿ, ಮೂವರು ಮೃತ ಮಹಿಳೆಯರನ್ನು ನಿಗ್ರಹಿಸಲು ಆರೋಪಿಗಳು ಚಾಕುವಿನಿಂದ ತೀವ್ರತರವಾಗಿ ದಾಳಿಯನ್ನು ನಡೆಸಿರುವುದು ಸ್ಪಷ್ಟವಾಗಿರುತ್ತದೆ. ಮೃತರು ನೀಡಿದ ನಿರಂತರ ಪ್ರತಿರೋಧವು ಮತ್ತು ಚೂಪಾದ ಆಯುಧದಿಂದ (ಎರಡು ಚಾಕುಗಳು) ಸಂಭವಿಸಿದ ಗಾಯಗಳ ಸ್ವರೂಪವು ರೋಹಿಣಿ ಮತ್ತು ಆಶ್ಲೇಷಾರಿಗೆ ಮಾರಕವಾಗಿರುತ್ತದೆ. ಆರೋಪಿಗಳು ಅವರನ್ನು ಪದೇಪದೇ ಇರಿಯಬೇಕಾಗಿತ್ತು ಎಂಬ ಅಂಶವು ಸದರಿ ಅಪೀಲುದಾರರಿಗೆ ಅಂತಹ ಆಯುಧವನ್ನು ಬಳಸುವುದರ ಬಗ್ಗೆ ತಿಳಿದಿರುವುದಿಲ್ಲ ಎಂಬುದನ್ನು ಬಹಿರಂಗಪಡಿಸುತ್ತದೆ. ಮನೋಜ್ ಮತ್ತು ರಾಹುಲ್‌ರವರಿಂದ ಆಯುಧಗಳನ್ನು (ಎರಡು ಚಾಕು ಮತ್ತು ಒಂದು ಪಿಸ್ತೂಲ್) ನಿರ್ದಿಷ್ಟವಾಗಿ ವಶಪಡಿಸಿಕೊಳ್ಳಲಾಗಿದ್ದು; ಈ ಸಂದರ್ಭದಲ್ಲಿ ಅವರ ಮೇಲೆ ಹೊರಿಸಲಾದ ಅಪರಾಧಗಳಿಗೆ ಅವರ ಅಪರಾಧ ನಿರ್ಣಯವು ಸಮರ್ಥಿತವಾಗಿರುತ್ತದೆ.

168. ಮೃತರ ಮನೆಯೊಳಗೆ ಈ ದಾಳಿಗಳು ಹೇಗೆ ಸಂಭವಿಸಿದವು ಮತ್ತು ಆರೋಪಿಗಳು ನಿರ್ವಹಿಸಿದ ವಿಭಿನ್ನವಾದ ಪಾತ್ರದ ಬಗ್ಗೆ ಇರುವ ಮಾಹಿತಿಯು ಆರೋಪಿಗಳಿಗೆ ಮಾತ್ರ ತಿಳಿದಿರುತ್ತದೆ; ಆದರೆ ಅಂತಹ ಯಾವುದೇ ಮಾಹಿತಿಯನ್ನು ಅಧಿವಿಚಾರಣೆಯ ಅಥವಾ ಮೇಲ್ಮನವಿಯ ಹಂತದಲ್ಲಿ ಒದಗಿಸಿರುವುದಿಲ್ಲ. ಸಾಮಾನ್ಯ ಉದ್ದೇಶಕ್ಕೆ ಒಪ್ಪಂದದ ಅಗತ್ಯವಿರುತ್ತದೆ ಮತ್ತು ಒಂದು ಪೂರ್ವನಿಯೋಜಿತ ಒಪ್ಪಂದವಿದ್ದಾಗ ಅದು ಆ ಕ್ಷಣದಲ್ಲಿ ಪ್ರಚೋಧನೆಯಲ್ಲಿ ವಿಕಸಿತಗೊಳ್ಳಬಹುದು ಎಂದು ಈ ನ್ಯಾಯಾಲಯವು[72] ಅಭಿಪ್ರಾಯಪಟ್ಟಿರುತ್ತದೆ. ಮನೆಯನ್ನು ದರೋಡೆ ಮಾಡಲು; ಮತ್ತು ಪ್ರತಿರೋಧವನ್ನು ಎದುರಿಸಿದಾಗಲೂ ತಮ್ಮ ಕಾರ್ಯವನ್ನು ಮುಕ್ತಾಯಗೊಳಿಸಲು ಮತ್ತು ಯಾವುದೇ ವಿಧಾನಗಳಿಂದ ಅದನ್ನು ಪತ್ತೆಹಚ್ಚಲು ಸಾಧ್ಯವಾಗದಂತೆ ಮಾಡಲು ಮೂವರು ಆರೋಪಿಗಳ ಮಧ್ಯೆ ಒಂದು ಸ್ಪಷ್ಟವಾದ ಸಾಮಾನ್ಯ ಉದ್ದೇಶವಿರುತ್ತದೆ ಎಂಬುದನ್ನು ಸನ್ನಿವೇಶಗಳು ಪ್ರತಿಬಿಂಬಿಸುತ್ತದೆ. ನೇಹಾ ಅವರಿಂದ ಯಾವುದೇ ಆಯುಧವನ್ನು ವಶಪಡಿಸಿಕೊಳ್ಳದಿದ್ದರೂ ಸಹ, ಆಕೆಯು ಅಪರಾಧದಲ್ಲಿ ಭಾಗಿಯಾಗಿದ್ದರು ಮತ್ತು ಅಪರಾಧ ಸ್ಥಳದಲ್ಲಿ ಇದ್ದರು ಎಂಬುದು ಸ್ಪಷ್ಟವಾಗಿರುತ್ತದೆ. ಆಕೆಯ ಬೆರಳೊತ್ತುಗಳನ್ನು <u>ಅಪರಾಧ ಸ್ಥಳದಿಂದ</u> ಸಂಗ್ರಹಿಸಲಾಯಿತು ಎಂದು ಬೆರಳೊತ್ತು ತಜ್ಞರು ನೀಡಿರುವ ಸಾಕ್ಷ್ಯ ಮತ್ತು ವರದಿಯು *ಮೊದಲನೆಯದಾಗಿ* ಈ ಅಂಶವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ; *ಎರಡನೆಯದಾಗಿ* ಆಕೆಯಿಂದ ವಶಪಡಿಸಿಕೊಂಡ ದರೋಡೆಯಾದ ವಸ್ತುಗಳು (ಬಂಗಾರದ ಆಭರಣಗಳು, ಮೇಘಾರ ಎ.ಟಿ.ಎಂ ಇತ್ಯಾದಿ); ಮತ್ತು *ಮೂರನೆಯದಾಗಿ* ಮನೋಜ್ ಮತ್ತು ರಾಹುಲ್‌ರವರ ಭಾಗವಹಿಸುವಿಕೆಯ ಬಗ್ಗೆ ಆಕೆಯು ಬಹಿರಂಗಪಡಿಸಿದರ ಅನುಸಾರವಾಗಿ ಅವರನ್ನು ಬಂಧಿಸಿರುವುದು; ಇವೆಲ್ಲವೂ ಒಟ್ಟಾರೆಯಾಗಿ ಆಕೆಯ ಒಳಗೊಳ್ಳುವಿಕೆಯನ್ನು ಸ್ಪಷ್ಟವಾಗಿ ಸಾಬೀತುಪಡಿಸುತ್ತದೆ. ಒಂದು ಸಾಮಾನ್ಯ ಉದ್ದೇಶವಿತ್ತು ಮತ್ತು ನೇಹಾರವರು ಅಪರಾಧದಲ್ಲಿ

72. ರಾಮಶೀಷ್ ಯಾದವ್ ವಿರುದ್ಧ ಬಿಹಾರ್ ರಾಜ್ಯ (1999) 8 ಎಸ್‌ಸಿಸಿ 555

ಭಾಗಿಯಾಗಿದ್ದರು ಮತ್ತು ಅಪರಾಧ ಸ್ಥಳದಲ್ಲಿ ಉಪಸ್ಥಿತರಿದ್ದರು ಎಂಬುದನ್ನು ಸಾಬೀತುಪಡಿಸಲು ಅಭಿಯೋಜನೆಯು ಸಮರ್ಥವಾಗಿದ್ದು; ನೇಹಾರವರು ಅಪಾದಿತೆ ಎಂದು ಹೇಳುವ ಯಾವ ಬಹಿರಂಗ ಅಥವಾ ನಿರ್ದಿಷ್ಟ ದೃಶ್ಯತ್ಯದ ಕೊರತೆಯು ಆಕೆಯನ್ನು ದೋಷಮುಕ್ತಗೊಳಿಸುವುದಿಲ್ಲ.

169. ಮೇಲಿನ ಎಲ್ಲಾ ಕಾರಣಗಳಿಂದಾಗಿ, ಎಲ್ಲಾ ಮೂವರು ಆರೋಪಿಗಳು ಭಾರತ ದಂಡ ಸಂಹಿತೆಯ 397/34, 449/34 ಮತ್ತು 302/34ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಲ್ಲಿ ತಪ್ಪಿತಸ್ಥರೆಂದು ಅಭಿಪ್ರಾಯಪಡಲಾಗಿರುತ್ತದೆ. ಜೊತೆಗೆ, ಶಸ್ತ್ರಾಸ್ತ್ರ ಕಾಯಿದೆಯ 25(1–ಬಿ)(ಬಿ) ಪ್ರಕರಣದ ಅಡಿಯಲ್ಲಿ ಮನೋಜ್ ಮತ್ತು ರಾಹುಲ್‌ರವರವರಿಗೆ ಶಿಕ್ಷೆ ವಿಧಿಸಿರುವುದನ್ನು ಮತ್ತು ಶಸ್ತ್ರಾಸ್ತ್ರ ಕಾಯಿದೆಯ 27ನೇ ಪ್ರಕರಣದ ಅಡಿಯಲ್ಲಿ ರಾಹುಲ್‌ರವರಿಗೆ ಶಿಕ್ಷೆ ವಿಧಿಸಿರುವುದನ್ನು ಎತ್ತಿಹಿಡಿಯಲಾಗಿದೆ.

170. ಶಿಕ್ಷೆಯ ಬಗೆಗಿನ ಪ್ರಶ್ನೆಯನ್ನು ಪರಿಗಣಿಸಲು ಮುಂದುವರೆಯುವ ಮೊದಲು, ಆರೋಪಿಗಳ ಹಕ್ಕುಗಳನ್ನು ರಕ್ಷಿಸಲು ಕ್ರಿಮಿನಲ್ ಅಧಿವಿಚಾರಣೆಯಲ್ಲಿ ಸರ್ಕಾರಿ ಅಭಿಯೋಜಕರ ಮತ್ತು ಅಧಿವಿಚಾರಣಾ ನ್ಯಾಯಾಲಯದ ಪಾತ್ರವನ್ನು ಸಂಕ್ಷಿಪ್ತವಾಗಿ ಎತ್ತಿ ತೋರಿಸುವುದು ಅಗತ್ಯವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಈ ಮೊಕದ್ದಮೆಯ ತನಿಖೆಯಲ್ಲಿ ಪ್ರ.ಸಾ.1ರ ಪಾತ್ರವನ್ನು ಗುಪ್ತವಾಗಿಟ್ಟಿರುವುದು (ಮೃತರ ಮತ್ತು ನೇಹಾರಿಗೆ ಸಂಬಂಧಿಸಿದ ಕರೆಗಳ ವಿವರಗಳನ್ನು ವಿಶ್ಲೇಷಿಸಿರುವುದು ಮತ್ತು ಅವುಗಳನ್ನು ಅಧಿವಿಚಾರಣೆಯಲ್ಲಿ ಹಾಜರುಪಡಿಸದಿರುವುದು; ನೇಹಾರ ವಿಳಾಸ ಮತ್ತು ಆಕೆಯು ಯಾವ ಬಟ್ಟೆಯನ್ನು ಧರಿಸಿದ್ದರು ಎಂಬುದರ ಬಗ್ಗೆ ಸ್ವೀಕರಿಸಲಾದ ಸುಳಿವುಗಳು; ನೇಹಾರ ಬಂಧನದಲ್ಲಿ ಭಾಗವಹಿಸುವಿಕೆ ಮತ್ತು ತರುವಾಯ ದಿನಾಂಕ 23.06.2011 ರಂದು ವಸ್ತುಗಳನ್ನು ವಶಪಡಿಸಿಕೊಳ್ಳುವಾಗ ಪ್ರ.ಸಾ.1ರ ಭಾಗವಹಿಸುವಿಕೆ) ಆರಂಭಿಕ ಹಂತದಲ್ಲಿ ತನಿಖೆಯನ್ನು ನಡೆಸಲಾದ ವಿಧಾನದಲ್ಲಿನ ಅಂತರವನ್ನು ಸೂಚಿಸುತ್ತದೆ ಅಥವಾ ಕನಿಷ್ಟ

ಅಧಿವಿಚಾರಣೆಯ ಉದ್ದೇಶಕ್ಕಾಗಿ ಅದರ ಬಗ್ಗೆ ಅಪ್ರಾಮಾಣಿಕವಾಗಿ ನೆನಪಿಸಿಕೊಂಡಿರುವುದು ಮತ್ತು ಅದನ್ನು ಪ್ರಸ್ತುತಪಡಿಸಿರುವುದರಲ್ಲಿ ಅಂತರವನ್ನು ಸೂಚಿಸುತ್ತದೆ. ಈ ಹಿಂದೆಯೇ ವಿವರಿಸಿರುವಂತೆ, ನೇಹಾರ ಬಂಧನದ ಬಗ್ಗೆ ಅಭಿಯೋಜನೆ ಆವೃತ್ತಿಯ ವಿರುದ್ಧ ಪ್ರತಿಕೂಲ ತೀರ್ಮಾನಗಳನ್ನು ತೆಗೆದುಕೊಳ್ಳಲು ಈ ಎಲ್ಲಾ ಅಂಶಗಳು ನ್ಯಾಯಾಲಯವನ್ನು ಪ್ರೇರೇಪಿಸಿರುತ್ತದೆ. ತಪ್ಪಿತಸ್ಥರೆಂದು ತೀರ್ಮಾನಿಸಲು ಮತ್ತು ಪರಿಣಾಮವಾಗಿ ಶಿಕ್ಷೆ ವಿಧಿಸಲು ಇತರ ಸನ್ನಿವೇಶಗಳನ್ನು ಸಮರ್ಥವಾಗಿ ಸಾಬೀತುಪಡಿಸಿರುತ್ತದೆ. ಆದಾಗ್ಯೂ, ಇತರ ಸನ್ನಿವೇಶಗಳನ್ನು ಸಾಬೀತುಪಡಿಸದಿದ್ದರೆ, ಪ್ರ.ಸಾ.1ರ ಪಾತ್ರದ ಬಗ್ಗೆ ಗುಪ್ತವಾಗಿಟ್ಟಿರುವುದು ಮತ್ತು ಕರೆ ವಿವರಗಳ ದಾಖಲಾತಿಗಳನ್ನು ಸೇರಿಸಲು ವಿಫಲವಾಗಿರುವುದು ಆರೋಪಿಗಳಿಗೆ ಗಂಭೀರವಾಗಿ ಭಾದಕವಾಗಬಹುದು ಎಂಬುದನ್ನು ಸೂಚಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಈ ಹಂತದಲ್ಲಿ *ನಿಷ್ಪಕ್ಷಪಾತ ಬಹಿರಂಗಪಡಿಸುವಿಕೆ ಮತ್ತು ತನಿಖೆಯ* ಮೂಲಕ ಪರಿಶೀಲಿಸಿ ಸತ್ಯವನ್ನು ಕಂಡುಕೊಂಡಿರುವುದರಲ್ಲಿ ಸರ್ಕಾರಿ ಅಭಿಯೋಜಕ ಮತ್ತು ಅಧಿವಿಚಾರಣಾ ನ್ಯಾಯಾಲಯದ ಪಾತ್ರವನ್ನು ಗಮನಿಸುವುದು ಮತ್ತು ಪುನರುಚ್ಚರಿಸುವುದು ಸಮಂಜಸವಾಗಿರುತ್ತದೆ.

171. ಒಬ್ಬ ಸರ್ಕಾರಿ ಅಭಿಯೋಜಕರು (ದಂಡ ಪ್ರಕ್ರಿಯಾ ಸಂಹಿತೆಯ 24ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ) ಉನ್ನತ ಗೌರವದ ಶಾಸನಬದ್ಧ ಹುದ್ದೆಯನ್ನು ಹೊಂದಿರುತ್ತಾರೆ. ತನಿಖಾ ಸಂಸ್ಥೆಯ ಒಂದು ಭಾಗವಾಗುವ ಬದಲು, ಅವರು ಸ್ವತಂತ್ರ್ಯ ಶಾಸನಬದ್ಧ ಪ್ರಾಧಿಕಾರವಾಗಿದ್ದು[73] ನ್ಯಾಯಾಲಯಗಳಿಗೆ[74] ಅಧಿಕಾರಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಸರ್ಕಾರಿ ಅಭಿಯೋಜಕರ ಪಾತ್ರವು ಸ್ವಾಭಾವಿಕವಾಗಿ ನಿಷ್ಪಕ್ಷಪಾತ ಅಧಿವಿಚಾರಣೆಯನ್ನು ನಡೆಸಲು ಮೀಸಲಾಗಿರುತ್ತದೆಯೇ ಹೊರತು "ಮೊಕದ್ದಮೆಯ ದೋಷ ನಿರ್ಣಯವನ್ನು ತಲುಪುವ

73. ಹಿತೇಂದ್ರ ವಿಷ್ಣು ತಾಕುರ್ ವಿರುದ್ಧ ಮಹಾರಾಷ್ಟ್ರ ರಾಜ್ಯ (1994) 4 ಎಸ್‌ಸಿಸಿ 602
74. ದೀಪಕ್ ಅಗರ್ವಾಲ್ ವಿರುದ್ಧ ಕೇಶವ್ ಕೌಶಿಕ್, (2013) 5 ಎಸ್‌ಸಿಸಿ 277

ಹಂಬಲವು ಇರುವುದಿಲ್ಲ.'' *ಶಿವಕುಮಾರ್ ವಿರುದ್ಧ ಹುಕಮ್ ಚಂದ್*[75] ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಮುಂದುವರೆದು ಈ ಕೆಳಗಿನಂತೆ ಅಭಿಪ್ರಾಯಪಡುತ್ತದೆ:

> "…. ಅಧಿವಿಚಾರಣೆಯ ಸಂದರ್ಭದಲ್ಲಿ ಯಾವುದೇ ನ್ಯಾಯಸಮ್ಮತ ಪ್ರಯೋಜನವನ್ನು ಪಡೆಯಲು ಆರೋಪಿಯು ಅರ್ಹನಾಗಿದ್ದಾರೆ, ಸರ್ಕಾರಿ ಅಭಿಯೋಜಕರು ಅದನ್ನು ತಪ್ಪಿಸಬಾರದು/ ಮರೆಮಾಚಬಾರದು. ಇದಕ್ಕೆ ವಿರುದ್ಧವಾಗಿ ಗೆಲ್ಲುವ ಸಾಮರ್ಥ್ಯ ಮತ್ತು ಅದನ್ನು ಆರೋಪಿಗಳಿಗೆ ತಲುಪುವಂತೆ ಮಾಡುವುದು ಸರ್ಕಾರಿ ಅಭಿಯೋಜಕರ ಕರ್ತವ್ಯವಾಗಿರುತ್ತದೆ…".

ಸಿದ್ಧಾರ್ಥ್ ವಶಿಷ್ಟ @ ಮನು ಶರ್ಮಾ ವಿರುದ್ಧ ದೆಹಲಿ ರಾಜ್ಯದ ಎನ್.ಸಿ.ಟಿ[76] (ಇನ್ನು ಮುಂದೆ ಮನು ಶರ್ಮಾ) ಮೊಕದ್ದಮೆಯಲ್ಲಿ, ಹೀಗೆ ನಿರ್ಣಯಿಸಲಾಗಿರುತ್ತದೆ:

> "187. ಆದ್ದರಿಂದ, ಒಬ್ಬ ಸರ್ಕಾರಿ ಅಭಿಯೋಜಕರು ಕೇವಲ ಆರೋಪಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಿಕೊಳ್ಳುವುದಕ್ಕಿಂತ ವಿಶಾಲವಾದ ಕರ್ತವ್ಯಗಳನ್ನು ಹೊಂದಿರುತ್ತಾರೆ; ಅವುಗಳೆಂದರೆ ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಕರ್ತವ್ಯ ಮತ್ತು ನೊಂದವರನ್ನು ಒಳಗೊಂಡಂತೆ ಎಲ್ಲಾ ಪಕ್ಷಕಾರರಿಗೆ ಸತ್ಯವಾದ ನಿರ್ಣಯ ಮತ್ತು ನ್ಯಾಯವನ್ನು ಒದಗಿಸುವ ಸಲುವಾಗಿ ಎಲ್ಲಾ ಸಂಬಂಧಪಟ್ಟ ಸಂಗತಿಗಳನ್ನು, ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಒಬ್ಬ ಸರ್ಕಾರಿ ಅಭಿಯೋಜಕರ ಕರ್ತವ್ಯವಾಗಿರುತ್ತದೆ. ಆದರೆ ಈ ಎಲ್ಲಾ ಕರ್ತವ್ಯಗಳು ಸರ್ಕಾರಿ ಅಭಿಯೋಜಕರಿಗೆ ಆರೋಪಿಯ ವಿರುದ್ಧ ತನ್ನ ಯಾವುದೇ ಕರ್ತವ್ಯಗಳಲ್ಲಿ ಅಸಡ್ಡೆ ತೋರಿಸಲು ಅನುಮತಿಸುವುದಿಲ್ಲ ಎಂಬುದನ್ನು ಗಮನಿಸಬೇಕು".

172. *ಮನು ಶರ್ಮಾ* ಮೊಕದ್ದಮೆಯಲ್ಲಿ ನಿಷ್ಪಕ್ಷಪಾತ ಅಧಿವಿಚಾರಣೆಯ ಹಕ್ಕು ಸರ್ಕಾರಿ ಅಭಿಯೋಜಕರು ಬಹಿರಂಗಪಡಿಸುವ ವ್ಯಾಪಕ ಕರ್ತವ್ಯವನ್ನು ಒಳಗೊಂಡಿರುತ್ತದೆ ಎಂದು ಪ್ರಶ್ನಿತ ಅಪೀಲುದಾರರು ವಾದಿಸಿರುತ್ತಾರೆ, ಅಂದರೆ ಅಭಿಯೋಜನೆಯು ಬಹಿರಂಗಪಡಿಸದ

75. (1999) 7 ಎಸ್‌ಸಿಸಿ 467
76. (2010) 6 ಎಸ್‌ಸಿಸಿ 1

ಯಾವುದೇ ಸಾಕ್ಷ್ಯದ ಮೇಲೆ ಅವಲಂಬಿಸಿದ್ದರೂ ಅಥವಾ ಇಲ್ಲದಿದ್ದರೂ, ಅದನ್ನು ಪ್ರತಿರಕ್ಷೆಯವರಿಗೆ ಲಭ್ಯವಾಗುವಂತೆ ಮಾಡಬೇಕಾಗುತ್ತದೆ. ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 207 ಮತ್ತು 208 ನೇ ಪ್ರಕರಣ, ಬಾರ್ ಕೌನ್ಸಿಲ್ ಆಫ್ ಇಂಡಿಯಾ ನಿಯಮಗಳ ನಿಯಮ 16[77] (ಇದು ಅಭಿಯೋಜಕರು ಅವಲಂಬಿಸಲು ಪ್ರಸ್ತಾಪಿಸುವ ಸಾಕ್ಷ್ಯಕ್ಕೆ ಸೀಮಿತವಾಗಿದೆ) ಮತ್ತು ಇಂಗ್ಲಿಷ್ ಕಾನೂನನ್ನು ಪರಿಗಣಿಸುತ್ತದೆ. ಸೂಕ್ಷ್ಮ ಮಾಹಿತಿ ಮತ್ತು ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಗೆ ಒಳಪಟ್ಟಿದನ್ನು ಹೊರತುಪಡಿಸಿ ಪ್ರತಿರಕ್ಷಣೆಗೆ ವಿನಾಯಿತಿ ನೀಡಬಹುದಾದ ಯಾವುದೇ ವಸ್ತುವನ್ನು ಅಭಿಯೋಜನೆಯು ಬಹಿರಂಗಪಡಿಸತಕ್ಕದ್ದು ಎಂಬುದು ಹೊರತೆಗೆಯಲಾದ ಸಾಮಾನ್ಯ ಕಾನೂನಿನ ನಿಲುವಾಗಿರುತ್ತದೆ. ಆದಾಗ್ಯೂ, ಅಂತಹ ನಿಲುವನ್ನು ನ್ಯಾಯಾಲಯವು ಒಟ್ಟಾರೆಯಾಗಿ ಸ್ವೀಕರಿಸಿರುವುದಿಲ್ಲ. ಸಂವಿಧಾನದ 20 ಮತ್ತು 21ನೇ ಅನುಚ್ಛೇದದ ಮೇಲೆ ರೂಪಿಸಲಾದ ನಮ್ಮ ಕ್ರಿಮಿನಲ್ ನ್ಯಾಯ ಶಾಸ್ತ್ರದ ಮೂಲಭೂತ ನಿಯಮಗಳನ್ನು ಗಮದಲ್ಲಿಟ್ಟುಕೊಂಡು, ಭಾರತದಲ್ಲಿ ಅಂತಹ ಬಾದ್ಯತೆಗಳು ವಿವಿಧ ಹಂತದಲ್ಲಿವೆ ಎಂದು ಅಭಿಪ್ರಾಯಪಡಲಾಗಿರುತ್ತದೆ ಮತ್ತು ಇದು ಕೇವಲ ತನಿಖಾ ಸಂಸ್ಥೆ ಮಾತ್ರವಲ್ಲದೆ, ತಮ್ಮದೇ ಆದ ಸ್ವತಂತ್ರ ಕ್ಷೇತ್ರದಲ್ಲಿರುವ ನ್ಯಾಯಾಲಯಗಳೂ ಸಹ, ತನಿಖೆಯು ನ್ಯಾಯಯುತವಾಗಿದೆ ಮತ್ತು ಕಾನೂನಿನ ಅನುಸಾರವಾಗಿ ಅಂದರೆ ಕಾನೂನಿನ ನಿಯಮಕ್ಕೆ ಬದ್ಧತೆಯನ್ನು ಖಚಿತಪಡಿಸುವುದನ್ನು ಹೊರತುಪಡಿಸಿ, ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ ಎಂದು ಅಭಿಪ್ರಾಯಪಡಲಾಗಿರುತ್ತದೆ. ಪುನರಾವರ್ತನೆಗೆ ಯೋಗ್ಯವಾದ ಸಂಬಂಧಿತ ಉದ್ಧರಣಗಳು:

> "199. ತನಿಖೆಯು ನಿಷ್ಪಕ್ಷಪಾತವಾಗಿದೆ ಮತ್ತು ಕಾನೂನಿನ ಪ್ರಕಾರ ಹೊರತುಪಡಿಸಿ, ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿಯಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ತನಿಖಾ ಸಂಸ್ಥೆ ಮಾತ್ರವಲ್ಲದೆ ನ್ಯಾಯಾಲಯಗಳ ಜವಬ್ದಾರಿ

77. ವಕೀಲರ ಕಾಯಿದೆ 1961ರ ಅಡಿಯಲ್ಲಿ ಬಾರ್ ಕೌನ್ಸಿಲ್ ಆಫ್ ಇಂಡಿಯಾ ನಿಯಮಗಳ ಭಾಗ VI, ಅಧ್ಯಾಯ II, ನಿಯಮ 16: "ಕ್ರಿಮಿನಲ್ ಅಧಿವಿಚಾರಣೆಯಲ್ಲಿ ಅಭಿಯೋಜನೆಯ ಪರವಾಗಿ ಹಾಜರಾಗುವ ವಕೀಲರು, ಅಭಿಯೋಜನೆಯನ್ನು ನಿರಪರಾಧಿಗಳ ಶಿಕ್ಷೆಗೆ ಕಾರಣವಾಗದಂತೆ ನಡೆಸಬೇಕು. ಆರೋಪಿಯ ನಿರಪರಾಧಿತ್ವವನ್ನು ಸ್ಥಾಪಿಸುವ ಸಾಮರ್ಥ್ಯವಿರುವ ಸಾಕ್ಷ್ಯಗಳನ್ನು ನಿಗ್ರಹಿಸುವುದನ್ನು ಕಟ್ಟುನಿಟ್ಟಾಗಿ ತಪ್ಪಿಸಬೇಕು".

ಆಗಿರುತ್ತದೆ. ಕಳಂಕಿತ ಅಥವಾ ಅನ್ಯಾಯದ ರೀತಿಯಲ್ಲಿ ತನಿಖೆಯನ್ನು ನಡೆಸದಿರುವುದು ತನಿಖಾ ಸಂಸ್ಥೆ ಮೇಲಿರುವ ಹೆಚ್ಚಿನ ಜವಾಬ್ದಾರಿಯಾಗಿದೆ ಎಂಬುದು ಅಪರಾಧ ಕಾನೂನು ಸಮಾನವಾಗಿ ಜಾರಿಗೊಳಿಸಬಹುದಾದ ನಿಯಮವಾಗಿದೆ. ತನಿಖೆಯು ಮೇಲ್ನೋಟಕ್ಕೆ ಪಕ್ಷಪಾತದ ಮನೋಭಾವವನ್ನು ಸೂಚಿಸಬಾರದು ಮತ್ತು ಸಮಾಜದಲ್ಲಿ ಅವರ ಸ್ಥಾನ ಮತ್ತು ಪ್ರಭಾವವು ಕಾನೂನನ್ನು ಮೀರಿ ನಿಲ್ಲುವುದಿಲ್ಲವಾದ್ದರಿಂದ, ಕಾನೂನಿನಡಿಗೆ ತಪ್ಪಿತಸ್ಥರನ್ನು ತರಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು."

201. ಐತಿಹಾಸಿಕವಾಗಿ ಆದರೆ ಸ್ಥಿರವಾಗಿ ಈ ನ್ಯಾಯಾಲಯದ ದೃಷ್ಟಿಕೋನವು, ತನಿಖೆಯು ನಿಷ್ಪಕ್ಷಪಾತವಾಗಿರಬೇಕು ಮತ್ತು ಪರಿಣಾಮಕಾರಿಯಾಗಿರಬೇಕು, ಅಪರಾಧದ ಅಂಶಗಳಿಗೆ ಅನುಗುಣವಾಗಿ ಸರಿಯಾದ ದಿಕ್ಕಿನಲ್ಲಿ ಮುಂದುವರಿಯಬೇಕು ಮತ್ತು ಅವ್ಯವಸ್ಥಿತ ರೀತಿಯಿಂದಲ್ಲ ಎಂಬುದಾಗಿದೆ. ಕೆಲವು ಮೊಕದ್ದಮೆಗಳಲ್ಲಿ ತನಿಖೆಯು ಪರಿಣಾಮಕಾರಿಯಾಗಿರುವುದರ ಜೊತೆಗೆ ಆರೋಪಿಯು ನ್ಯಾಯದ ವಿಫಲತೆಯನ್ನು ಸಾಬೀತುಪಡಿಸಬೇಕಾಗಬಹುದು, ಆದರೆ ಒಮ್ಮೆ ಅದನ್ನು ತೋರಿಸಿದರೆ, ಆರೋಪಿಯು ಕಾನೂನಿನ ಪ್ರಕಾರ ನಿರ್ದಿಷ್ಟ ಪ್ರಯೋಜನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಅನುಚ್ಛೇದ 19 ಮತ್ತು 21 ರ ಅಡಿಯಲ್ಲಿ ನಾಗರಿಕ ಹಕ್ಕು ಮತ್ತು ತನಿಖೆ ನಡೆಸಲು ಪೊಲೀಸರ ವಿಸ್ತಾರವಾದ ಅಧಿಕಾರದ ನಡುವೆ ನ್ಯಾಯಯುತ ಸಮತೋಲನವನ್ನು ಸೆಳೆಯುವ ರೀತಿಯಲ್ಲಿ ತನಿಖೆಯನ್ನು ನಡೆಸಬೇಕು. ರುಜುವಾತುಪಡಿಸಲಾದ ಈ ಸುಸಜ್ಜಿತ ತತ್ವಗಳನ್ನು ಈ ನ್ಯಾಯಾಲಯವು, *ಸಸಿ ಥಾಮಸ್ ವಿರುದ್ಧ ರಾಜ್ಯ* [(2006) 12 ಎಸ್‌ಸಿಸಿ 421 : (2007) 2 ಎಸ್‌ಸಿಸಿ (ಕ್ರಿ) 72], *ರಾಜ್ಯ (ಪೊಲೀಸ್ ಇನ್ಸ್‌ಪೆಕ್ಟರ್) ವಿರುದ್ಧ ಸೂರ್ಯ ಸಂಕರಾಮ್ ಕರ್ಜಿ* [(2006) 7 ಎಸ್‌ಸಿಸಿ 172 : (2006) 3 ಎಸ್‌ಸಿಸಿ (ಕ್ರಿ) 225] ಮತ್ತು *ಟಿ.ಟಿ. ಆಂಟೋನಿ ವಿರುದ್ಧ ಕೇರಳ ರಾಜ್ಯ* [(2001) 6 ಎಸ್‌ಸಿಸಿ 181 : 2001 ಎಸ್‌ಸಿಸಿ (ಕ್ರ) 1048] ಮೊಕದ್ದಮೆಗಳಲ್ಲಿ ತಿಳಿಸಿರುತ್ತದೆ.

202. *ನಿರ್ಮಲ ಸಿಂಗ್ ಕಹ್ಲೋನ್ ವಿರುದ್ಧ ಪಂಜಾಬ್ ರಾಜ್ಯ* [(2009) 1 ಎಸ್‌ಸಿಸಿ 441 : (2009) 1 ಎಸ್‌ಸಿಸಿ (ಕ್ರಿ) 523] ಮೊಕದ್ದಮೆಯಲ್ಲಿ ನಿಷ್ಪಕ್ಷಪಾತ ತನಿಖೆ ಮತ್ತು ನಿಷ್ಪಕ್ಷಪಾತ ಅಧಿವಿಚಾರಣೆಯ ಪರಿಕಲ್ಪನೆಯು, ಭಾರತ ಸಂವಿಧಾನದ ಅನುಚ್ಛೇದ 21 ರ ಅಡಿಯಲ್ಲಿ ಆರೋಪಿಯ ಮೂಲಭೂತ ಹಕ್ಕನ್ನು ಸಂರಕ್ಷಿಸಲು ಅನುಷಂಗಿಕವಾಗಿರುತ್ತದೆ ಎಂದು ಈ ನ್ಯಾಯಾಲಯವು ವಿಶೇಷವಾಗಿ ತಿಳಿಸಿರುತ್ತದೆ. ಆರೋಪಿಯ ನಿಷ್ಪಕ್ಷಪಾತ ಪ್ರತಿರಕ್ಷಣೆಯ ಹಕ್ಕು

ಈ ಪರಿಕಲ್ಪನೆಯಿಂದಲೇ ಹೊರಹೊಮ್ಮುವುದರಿಂದ, ನಾವು ಈ ನ್ಯಾಯಸಮ್ಮತ ಮತ್ತು ನಿಷ್ಪಕ್ಷಪಾತ ತನಿಖೆಯ ಪರಿಕಲ್ಪನೆಯನ್ನು ಉಲ್ಲೇಖಿಸಿದ್ದೇವೆ. ಆರೋಪಿಯು ಕಿರುಕುಳಕ್ಕೆ ಒಳಗಾಗಿರುವುದಿಲ್ಲ, ಆತನ ಪ್ರತಿರಕ್ಷಣೆಯ ಹಕ್ಕನ್ನು ಅನಗತ್ಯವಾಗಿ ಅಡ್ಡಿಪಡಿಸಿರುವುದಿಲ್ಲ ಮತ್ತು ಕಾನೂನಿಗೆ ಅನುಸಾರವಾಗಿ ಸ್ವೀಕರಿಸಲು ಆತನು ಅರ್ಹನಾಗಿರುವುದನ್ನು ಕಾನೂನಿಗೆ ವಿರುದ್ಧವಾಗಿ ನಿರಾಕರಿಸಲಾಗುವುದಿಲ್ಲ".

173. ಅಧ್ಯಾಯ XII ಅಡಿಯಲ್ಲಿ ಸಿ.ಆರ್.ಪಿ.ಸಿ ಯ ಯೋಜನೆಯು (ಪೊಲೀಸರಿಗೆ ಮಾಹಿತಿ ಮತ್ತು ತನಿಖೆ ನಡೆಸಲು ಅಧಿಕಾರ) ಸ್ಪಷ್ಟವಾಗಿರುತ್ತದೆ– ಪೊಲೀಸರು ಮುಕ್ತವಾಗಿ ಮತ್ತು ನಿಷ್ಪಕ್ಷಪಾತವಾಗಿ ತನಿಖೆ ನಡೆಸುವ ಅಧಿಕಾರವನ್ನು ಹೊಂದಿರುತ್ತಾರೆ. ಈ ಸಂದರ್ಭದಲ್ಲಿ, ಒಂದು ದಿನಚರಿ ಪುಸ್ತಕವನ್ನು ಬಳಕೆ ಮಾಡುವುದು ಕಡ್ಡಾಯವಾಗಿದ್ದು, ಅದರಲ್ಲಿ ಘಟನೆಯ ಸಮಯ, ಭೇಟಿ ನೀಡಿದ ಸ್ಥಳಗಳು, ನಿರ್ಗಮನ ಮತ್ತು ಹಿಂದಿರುಗಿ ವರದಿ ಮಾಡಿಕೊಂಡ ಸಮಯ, ದಾಖಲಿಸಿಕೊಂಡ ಹೇಳಿಕೆಗಳು ಇತ್ಯಾದಿಗಳ ನಿರ್ದಿಷ್ಟ ಉಲ್ಲೇಖದೊಂದಿಗೆ ದಿನನಿತ್ಯದ ಪ್ರಕ್ರಿಯೆಗಳನ್ನು ದಾಖಲಿಸಬೇಕಿರುವುದು ಕಡ್ಡಾಯವಾಗಿರುತ್ತದೆ. ಅಧಿವಿಚಾರಣೆ ಅಥವಾ ತನಿಖೆಯ ಉದ್ದೇಶಕ್ಕಾಗಿ 172 (2) ನೇ ಪ್ರಕರಣದ ಅಡಿಯಲ್ಲಿ ಈ ಡೈರಿಗಳನ್ನು (ಸಾಕ್ಷ್ಯಗಳಾಗಿ ಅಲ್ಲ) ಕ್ರಿಮಿನಲ್ ನ್ಯಾಯಾಲಯಗಳು ಹಾಜರುಪಡಿಸಲು ಆದೇಶಿಸಲು ಅಧಿಕಾರವನ್ನು ಹೊಂದಿದ್ದು, ಪೊಲೀಸರು ಸ್ವತಃ ಅದರ ಮೇಲೆ ಅವಲಂಬಿತರಾಗದ ಹೊರತು (ಸರಿಯಾಗಿ ನೆನಪಿಸಿಕೊಳ್ಳಲು) ಅಥವಾ *ಪೊಲೀಸ್ ಅಧಿಕಾರಿಗಳ ಸಾಕ್ಷ್ಯಕ್ಕೆ*[78] ವಿರುದ್ಧವಾಗಿ ನ್ಯಾಯಾಲಯವು ಅದನ್ನು ಬಳಸಿದ ಹೊರತು, ಆರೋಪಿಗಳಿಗೆ ಅದನ್ನು ಪರಿಶೀಲಿಸಿ ಎಂದು ಹೇಳುವ ಯಾವುದೇ *ಅಧಿಕಾರ* ಇರುವುದಿಲ್ಲ ಎಂಬುದನ್ನು 173(3) ನೇ ಪ್ರಕರಣವು ಸ್ಪಷ್ಟಪಡಿಸುತ್ತದೆ.

78. ಮುಕುಂದ್ ಲಾಲ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ 1989 ಸಪ್ (1) ಎಸ್‌ಸಿಸಿ 622, ಮಲ್ಕಿಯಾತ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ (1991) 4 ಎಸ್‌ಸಿಸಿ 341

174. *ಮನು ಶರ್ಮಾ* ಮೊಕದ್ದಮೆಯಲ್ಲಿ, ಪೊಲೀಸ್ ಡೈರಿಗಳು, *"ತನಿಖೆಯಲ್ಲಿ ನಿಷ್ಪಕ್ಷಪಾತ, ಮತ್ತು ಪಾರದರ್ಶಕತೆಯಿರಬೇಕು ಹಾಗು ಸಮರ್ಥವಾದ ತನಿಖೆಯನ್ನು ಖಚಿತಪಡಿಸಿಕೊಳ್ಳಲು ದಾಖಲೆಯನ್ನು ನಿರ್ವಹಿಸಬೇಕು ಎಂಬ ಉದ್ದೇಶ ಮತ್ತು ಗುರಿಯನ್ನು ಸ್ಪಷ್ಟವಾಗಿ ತೋರಿಸುತ್ತದೆ"* ಎಂದು ಈ ನ್ಯಾಯಾಲಯವು ಗಮನಿಸಿರುತ್ತದೆ. ಪೊಲೀಸ್ ಡೈರಿಯನ್ನು ನಿಖರವಾಗಿ ನಿರ್ವಹಿಸಲು ಪೊಲೀಸರು ವಿಫಲವಾದರೆ ಈ ಗುರಿಯು ಸಂಪೂರ್ಣವಾಗಿ ಅರ್ಥಹೀನವಾಗುತ್ತದೆ. ತನಿಖೆಯ ಸಮಯದಲ್ಲಿ[79] ತೆಗೆದುಕೊಂಡ ಕ್ರಮಗಳ ಬಗ್ಗೆ ಸೂಕ್ಷ್ಮವಾಗಿ ಬರೆದಿಟ್ಟುಕೊಳ್ಳಲು ವಿಫಲವಾದರೆ, ಅದು ಪಾರದರ್ಶಕತೆಯ ಕೊರತೆಗೆ ಕಾರಣವಾಗುತ್ತದೆ ಮತ್ತು ಇದು ನಿಷ್ಪಕ್ಷಪಾತ ತನಿಖೆಗೆ ಆರೋಪಿಯ ಹಕ್ಕನ್ನು ದುರ್ಬಲಗೊಳಿಸುತ್ತದೆ ಮತ್ತು ಅಭಿಯೋಜನೆಯ ವಾದವನ್ನು ಸ್ವ–ಇಚ್ಛೆಯಿಂದ ಒಪ್ಪಿಕೊಳ್ಳುವ ಬದಲು, ತನಿಖೆಯ ಸಮಯದಲ್ಲಿ ತೆಗೆದುಕೊಳ್ಳಲಾದ ಅಂತಹ ಗೌಪ್ಯ ಅಥವಾ ಮರೆಮಾಚುವ ಕ್ರಮಗಳನ್ನು ಬಹಿರಂಗಪಡಿಸಲು ದಾಖಲೆಯನ್ನು ವ್ಯಾಪಕವಾಗಿ ಪರಿಶೀಲಿಸುವಲ್ಲಿ ಸಕ್ರಿಯ ಪಾತ್ರವನ್ನು ವಹಿಸಬೇಕಾಗಿದ್ದು, ಅದು ಅಧಿವಿಚಾರಣಾ ನ್ಯಾಯಾಲಯಕ್ಕೆ ಬಿಟ್ಟಿರುವ ವಿಷಯವಾಗಿರುತ್ತದೆ.

175. ಪ್ರಸ್ತುತ ಮೊಕದ್ದಮೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಪ್ರ.ಸಾ.10 ರ ಪಾತ್ರದ ಬಗ್ಗೆ ಹೆಚ್ಚು ಆಳವಾಗಿ ವಿಚಾರಣೆ ನಡೆಸಬೇಕಿತ್ತು ಏಕೆಂದರೆ ಅವರು ತಮ್ಮ ಹೇಳಿಕೆಯಲ್ಲಿ, ತಾವು ಕರೆ ವಿವರಗಳ ದಾಖಲೆಯನ್ನು ವಿಶ್ಲೇಷಿಸಿರುವುದಾಗಿ ಮತ್ತು ನೇಹಾರ ಬಂಧನದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿರುತ್ತಾರೆ ಆದರೆ ಇವೆಲ್ಲವನ್ನು ಅಭಿಯೋಜನೆಯು, ಅವರಿಗೆ ತಿಳಿದಿರುವ ಕಾರಣದಿಂದಾಗಿ, ಮರೆಮಾಚಿರುತ್ತದೆ. ಈ ಸಂದರ್ಭದಲ್ಲಿ, ಮನು ಶರ್ಮಾ ಮೊಕದ್ದಮೆಯಲ್ಲಿ ಮಾಡಿರುವಂತೆ ದಂಡ ಪ್ರಕ್ರಿಯಾ ಸಂಹಿತೆಯ 91 ಮತ್ತು 243 ನೇ ಪ್ರಕರಣವನ್ನು ಉಲ್ಲೇಖಿಸುವುದು ತುಂಬಾ ಮುಖ್ಯವಾಗಿರುತ್ತದೆ:

79. ಜಹೀರಾ ಹಬೀಬುಲ್ಲಾ ಹೆಚ್.ಶೇಖ್ ವಿರುದ್ಧ ಗುಜರಾತ್ ರಾಜ್ಯ (2004) 4 ಎಸ್‌ಸಿಸಿ 158 ರಲ್ಲಿ ಕ್ರಿಮಿನಲ್ ಅಧಿವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯಗಳ ಪಾತ್ರದ ಬಗ್ಗೆ ಚರ್ಚಿಸಲಾಗಿರುತ್ತದೆ.

"217. ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಯಾವುದೇ ತನಿಖೆ, ತಪಾಸಣೆ, ಅಧಿವಿಚಾರಣೆ ಅಥವಾ ಯಾವುದೇ ಇತರ ಪ್ರಕ್ರಿಯಗಳ ಉದ್ದೇಶಕ್ಕಾಗಿ ನ್ಯಾಯಾಲಯವು ಅಗತ್ಯ ಅಥವಾ ಅಪೇಕ್ಷಣೀಯವೆಂದು ಪರಿಗಣಿಸುವ ಯಾವುದೇ ದಾಖಲೆ ಅಥವಾ ಯಾವುದೇ ವಸ್ತುವನ್ನು ಹಾಜರುಪಡಿಸುವಂತೆ ಆದೇಶಿಸಲು 9 ನೇ ಪ್ರಕರಣವು ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡುತ್ತದೆ. ಆರೋಪಿತನು ತನ್ನನ್ನ ತಾನು ಪ್ರತಿರಕ್ಷಿಸಿಕೊಳ್ಳಲು ಮತ್ತು ತನ್ನ ಸಾಕ್ಷ್ಯವನ್ನು ಹಾಜರುಪಡಿಸಲು, ಯಾವುದೇ ಸಾಕ್ಷಿಯನ್ನು ಮುಖ್ಯ–ವಿಚಾರಣೆ ಅಥವಾ ಪಾಟೀ ಸವಾಲಿಗೊಳಿಸಲು ಹಾಜರಾಗಲು ಅಥವಾ ಯಾವುದೇ ದಾಖಲೆ ಅಥವಾ ಇನ್ನಿತರ ವಸ್ತುಗಳನ್ನು ಹಾಜರುಪಡಿಸಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಆತನಿಗೆ ಹಕ್ಕನ್ನೂ ಸಹ ನೀಡಬೇಕು ಮತ್ತು ಅದಕ್ಕೆ ನ್ಯಾಯಾಲಯವು ಒಂದು ತರ್ಕಬದ್ಧ ಆದೇಶವನ್ನು ನೀಡಬೇಕು ಎಂದು 91 ನೇ ಪ್ರಕರಣದ ಜೊತೆ ಓದಲಾದ 243 ನೇ ಪ್ರಕರಣವು ತಿಳಿಸುತ್ತದೆ".

176. ನ್ಯಾಯಾಲಯವು ಆರೋಪಿಗೆ ಒದಗಿಸುವ ಯುಕ್ತವಾದ ರಕ್ಷಣಾ ಪ್ರಕ್ರಿಯೆಯ ಬಗ್ಗೆ ಮತ್ತು ಸರ್ಕಾರಿ ಅಭಿಯೋಜಕರ ನಿಷ್ಪಕ್ಷಪಾತ ಬಹಿರಂಗಪಡಿಸುವಿಕೆಯ ಜವಾಬ್ದಾರಿಗಳ ಮೇಲೆ ಅದರ ಪರಿಣಾಮವನ್ನು ಈ ಕೆಳಗಿನಂತೆ ವಿವರಿಸುತ್ತದೆ:

"218. ಯುಕ್ತ ಕಾನೂನು ಪ್ರಕ್ರಿಯೆಯ ಹೊರತಾಗಿ ಆರೋಪಿಯ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡಲಾಗುವುದಿಲ್ಲ. "ಯುಕ್ತ ಕಾನೂನು ಪ್ರಕ್ರಿಯೆ" ಎಂಬ ಪದವಿನ್ಯಾಸವು ಅಧಿವಿಚಾರಣೆಯಲ್ಲಿ ನಿಷ್ಪಕ್ಷಪಾತವನ್ನು ಒಳಗೊಂಡಿರುತ್ತದೆ. ತನ್ನ ಮೊಕದ್ದಮೆಗೆ ಬೆಂಬಲ ನೀಡುವ ಎಲ್ಲಾ ದಸ್ತಾವೇಜು ಅಥವಾ ಹೇಳಿಕೆಗಳನ್ನು ಸ್ವೀಕರಿಸಲು ಮತ್ತು ಯಾವುದೇ ದಾಖಲೆ ಅಥವಾ ಸಾಕ್ಷಿಯನ್ನು ಹಾಜರುಪಡಿಸಲು ಅರ್ಜಿಯನ್ನು ಸಲ್ಲಿಸಲು ನ್ಯಾಯಾಲಯವು (ಸಿಕ್–ಸಂಹಿತೆಯು) ಆರೋಪಿಗೆ ಹಕ್ಕನ್ನು ಒದಗಿಸುತ್ತದೆ. ಆರೋಪಿಗೆ ನಿಡಲಾದ ಈ ಸಾಂವಿಧಾನಿಕ ಅಧಿಕಾರ ಅಥವಾ ಶಾಸನಬದ್ಧ ಹಕ್ಕು, ನಿಷ್ಪಕ್ಷಪಾತ ಬಹಿರಂಗಪಡಿಸುವಿಕೆಯನ್ನು ಮಾಡಲು ಅಭಿಯೋಜನೆಯ (ಅಭಿಯೋಜನೆ ಮತ್ತು ಅಭಿಯೋಜಕ) ಮೇಲೆ ಸೂಚಿತ ಬಾಧ್ಯತೆಯನ್ನು ಹೇರುತ್ತದೆ. ನ್ಯಾಯಾಲಯದಲ್ಲಿ ದಾಖಲಿಸಲಾಗಿದ್ದರೂ ಅಥವಾ ಇಲ್ಲದಿದ್ದರೂ ಅಭಿಯೋಜನೆಯು ಅವಲಂಬಿತವಾದ ದಸ್ತಾವೇಜನ್ನು ಒದಗಿಸುವುದರ ಮೇಲೆ ನಿಷ್ಪಕ್ಷಪಾತ ಬಹಿರಂಗಪಡಿಸುವಿಕೆಯ ಪರಿಕಲ್ಪನೆಯು ಅದರ ವ್ಯಾಪ್ತಿಯನ್ನು ತೆಗೆದುಕೊಳ್ಳುತ್ತದೆ. ಆ ದಸ್ತಾವೇಜನ್ನು ಖಂಡಿತವಾಗಿಯೂ ಆರೋಪಿಗೆ ಒದಗಿಸಬೇಕು ಮತ್ತು ಕೆಲವೊಂದು ಮೊಕದ್ದಮೆಯಲ್ಲಿ ತನಿಖಾ ಏಜೆನ್ಸಿಯು ವಿಚಾರಣೆಯ ಸಂದರ್ಭದಲ್ಲಿ ಸ್ವಾಭಾವಿಕವಾಗಿ

ಪಡೆದಂತಹ ದಸ್ತಾವೇಜನ್ನು ಮತ್ತು ಅಭಿಯೋಜಕರ ಪ್ರಕಾರವಾಗಿ ಆ ದಸ್ತಾವೇಜು ಸುಸಂಬದ್ಧವಾದ ಮತ್ತು ಸತ್ಯವನ್ನು ತಿಳಿಯಲು ಸಹಾಯಕವಾಗಿದ್ದಾಗ, ಆ ದಸ್ತಾವೇಜನ್ನೂ ಸಹ ಆರೋಪಿಗೆ ಬಹಿರಂಗಪಡಿಸತಕ್ಕದ್ದು.

219. ಮೇಲೆ ಉಲ್ಲೇಖಿಸಲಾದ ಇಂಗ್ಲೀಷ್ ವ್ಯವಸ್ಥೆಯಲ್ಲಿ ಪ್ರಚಲಿತದಲ್ಲಿರುವುದರೊಂದಿಗೆ, ನಮ್ಮ ಕಾನೂನಿನ ಅಡಿಯಲ್ಲಿರುವ ನಿರ್ದಿಷ್ಟ ಬಹಿರಂಗಪಡಿಸುವಿಕೆಗೆ ಸಂಬಂಧಿಸಿದಂತೆ ಅಭಿಯೋಜಕರ ಪಾತ್ರ ಮತ್ತು ಬಾಧ್ಯತೆಯನ್ನು ಸಮೀಕರಿಸಲಾಗುವುದಿಲ್ಲ. ಆದರೆ ಅದೇ ಸಮಯದಲ್ಲಿ, ನಿಷ್ಪಕ್ಷಪಾತ ಅಧಿವಿಚಾರಣೆಯ ಬೇಡಿಕೆಯನ್ನು ನಿರ್ಲಕ್ಷಿಸಲಾಗುವುದಿಲ್ಲ. ಅನುಮಾನಾಸ್ಪದವಾಗಿ, ವಂಚನೆಯಿಂದ ಅಥವಾ ತನಿಖೆಯ ಸಮಯದಲ್ಲಿ ಆರೋಪಿಗಳಿಗೆ ಪ್ರಯೋಜನವಿಲ್ಲದ ದಾಖಲೆಯನ್ನು ಸಂಗ್ರಹಿಸಿದ್ದು; ಅಂತಹ ದಾಖಲೆಗಳನ್ನು ಅಭಿಯೋಜನೆಯು ಅವಲಂಬಿಸಿರಲಿ ಅಥವಾ ಇಲ್ಲದಿರಲ್ಲಿ ಆರೋಪಿಗೆ ಒದಗಿಸುವುದನ್ನು ನಿರಾಕರಿಸುವುದು ಅಭಿಯೋಜನೆಯ ವಿವೇಚನೆಗೆ ಬಿಟ್ಟಿರುತ್ತದೆ, ಮತ್ತು ಇದು ವಿಭಿನ್ನ ಪರಿಣಾಮಗಳನ್ನು ಉಂಟುಮಾಡಬಹುದು, ಆದಾಗ್ಯೂ ಇತರ ಸಂದರ್ಭಗಳಲ್ಲಿ ಬಹಿರಂಗಪಡಿಸುವ ಬಾಧ್ಯತೆಯು ಬಹಳ ನಿಶ್ಚಿತವಾಗಿರುತ್ತದೆ. ಈಗಾಗಲೇ ಗಮನಿಸಿರುವಂತೆ, ಈ ವಿಷಯದ ಮೇಲೆ 207 ನೇ ಪ್ರಕರಣದ ನಿಬಂಧನೆಗಳು ಪ್ರಮುಖ ಅಂಶವನ್ನು ಹೊಂದಿರುತ್ತದೆ ಮತ್ತು ಆಸಕ್ತಿದಾಯಕವಾಗಿ ಮಾಡುತ್ತದೆ. ಈ ನಿಬಂಧನೆಯು ಆರೋಪಿಗಳಿಗೆ ಪೊಲೀಸ್ ವರದಿ, ಪ್ರಥಮ ಮಾಹಿತಿ ವರದಿ, ಹೇಳಿಕೆಗಳು ಮತ್ತು ಸಹಜವಾಗಿ, ಸಂಹಿತೆಯ 173 (6) ನೇ ಪ್ರಕರಣದ ಅಡಿಯಲ್ಲಿ ಅವಲೋಕಿಸಲಾದ ಯಾವುದೇ ಹೇಳಿಕೆ ಅಥವಾ ದಸ್ತಾವೇಜಿನ ಭಾಗ, 173 ನೇ ಪ್ರಕರಣದ ಉಪ–ಪ್ರಕರಣ (5) ರ ಅಡಿಯಲ್ಲಿ ಪೊಲೀಸರು ಮ್ಯಾಜಿಸ್ಟ್ರೇಟ್‌ಗೆ ಸಲ್ಲಿಸಿದ ಯಾವುದೇ ಇತರ ದಸ್ತಾವೇಜು ಅಥವಾ ಸಂಬಂಧಿತ ಸಾರವನ್ನು ಹೊರತುಪಡಿಸಿ, ಅಭಿಯೋಜನೆಯು ಸಾಕ್ಷಿಗಳಾಗಿ ವಿಚಾರಣೆ ನಡೆಸಲು ಬಯಸುವ ವ್ಯಕ್ತಿಗಳ ಹೇಳಿಕೆಗಳನ್ನು 161 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾಗಿರುವ ತಪ್ಪೊಪ್ಪಿಗೆ ಹೇಳಿಕೆಗಳ ಪ್ರತಿಗಳನ್ನು ಯಾವುದೇ ವಿಳಂಬವಿಲ್ಲದೆ ಮತ್ತು ಉಚಿತವಾಗಿ ನ್ಯಾಯಾಲಯವು ಆರೋಪಿಗೆ ಒದಗಿಸಬೇಕೆಂದು ಈ ನಿಬಂಧನೆಯು ಬಯಸುವುದಲ್ಲದೇ ಆದೇಶಿಸುತ್ತದೆ. "ಅಭಿಯೋಜೆನಯು ಅವಲಂಬಿಸಿರುವ ದಾಖಲಾತಿಗಳು" ಎಂಬ ಪದವಿನ್ಯಾಸವನ್ನು ಶಾಸಕಾಂಗವು 173 ನೇ ಪ್ರಕರಣದ ನಿಬಂಧನೆಯ ಅಡಿಯಲ್ಲಿ ಬಳಸಿರುವುದಕ್ಕೆ ವಿರುದ್ಧವಾಗಿ, ಸಂಹಿತೆಯ 207 ನೇ ಪ್ರಕರಣದಲ್ಲಿ ಬಳಸಲಾಗುವುದಿಲ್ಲ. ಆದ್ದರಿಂದ, ಸಂಹಿತೆಯ 207 ನೇ ಪ್ರಕರಣದ ನಿಬಂಧನೆಗಳು ಅದರ ಉದ್ದೇಶವನ್ನು ಸಾಧಿಸಲು ಸ್ವತಂತ್ರ್ಯ ಮತ್ತು ಸಂಬಂಧಿತ ಅರ್ಥವನ್ನು ಅದಕ್ಕೆ ನೀಡಬೇಕಾಗುತ್ತದೆ. ಇಷ್ಟು ಮಾತ್ರವಲ್ಲದೇ,

173 (5) ನೆ ಪ್ರಕರಣದ ಅಡಿಯಲ್ಲಿ ವರದಿಯೊಂದಿಗೆ ಮ್ಯಾಜಿಸ್ಟ್ರೇಟ್‌ಗೆ ಸಲ್ಲಿಸದ ದಾಖಲೆಗಳು, 170 (2) ನೇ ಪ್ರಕರಣದ ಅಡಿಯಲ್ಲಿನ ಅಗತ್ಯತೆಯ ಪ್ರಕಾರ ತನಿಖೆಯ ಸಮಯದಲ್ಲಿ ಮ್ಯಾಜಿಸ್ಟ್ರೇಟ್‌ಗೆ ಕಳುಹಿಸಬೇಕಾದ ದಾಖಲೆಗಳನ್ನು ಒಳಗೊಂಡಿರುತ್ತದೆ ಎಂದು ಭಾವಿಸತಕ್ಕದ್ದು.

220. ದಾಖಲೆಗಳ ಬಹಿರಂಗಪಡಿಸುವಿಕೆಗೆ ಸಂಬಂಧಿಸಿದಂತೆ ಆರೋಪಿಯ ಹಕ್ಕು ಸೀಮಿತವಾಗಿರುತ್ತದೆ ಆದರೆ ಅದು ಕ್ರೂಢೀಕರಿಸಲ್ಪಟ್ಟಿರುತ್ತದೆ ಮತ್ತು ನಿಷ್ಪಕ್ಷಪಾತ ತನಿಖೆ ಮತ್ತು ಅಧಿವಿಚಾರಣೆಗೆ ಅದು ಅಡಿಪಾಯವಾಗಿರುತ್ತದೆ. ಅಂತಹ ವಿಷಯಗಳ ಮೇಲೆ, ನ್ಯಾಯಾಲಯದ ಆದೇಶದ ಪ್ರಕಾರ ಪೊಲೀಸ್ ಫೈಲ್‌ನ ಪ್ರತಿಯೊಂದು ದಾಖಲೆಯನ್ನು ಅಥವಾ 173 (2) ನೇ ಪ್ರಕರಣದ ಅಡಿಯಲ್ಲಿ ವರದಿಗೆ ಲಗತ್ತಿಸಲಾದ ದಾಖಲೆಗಳಿಂದ ಹೊರಗಿಡಲು ಅನುಮತಿಸಲಾದ ಭಾಗಗಳನ್ನು ಪಡೆಯಲು ಆರೋಪಿಯು ಅಸಮರ್ಥನೀಯ ಕಾನೂನು ಹಕ್ಕನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಆರೋಪಿಯ ಕೆಲವು ಹಕ್ಕುಗಳು ಕ್ರೂಢೀಕರಿಸಿದ ಕಾನೂನಿನಿಂದ ಮತ್ತು ಸಾಂವಿಧಾನಿಕ ನ್ಯಾಯವ್ಯಾಪ್ತಿಯ ಸಮಾನ ಪರಿಕಲ್ಪನೆಗಳಿಂದ ಉದ್ಭವವಾಗುತ್ತದೆ; ಏಕೆಂದರೆ ಅಂತಹ ಕಾರ್ಯವಿಧಾನಕ್ಕೆ ಗಣನೀಯ ವ್ಯತ್ಯಾಸವು ನಿಷ್ಪಕ್ಷಪಾತ ಅಧಿವಿಚಾರಣೆಯ ಮೂಲವನ್ನು ನಿರಾಶೆಗೊಳಿಸುತ್ತದೆ. 207, 243ನೇ ಪ್ರಕರಣದೊಂದಿಗೆ ಓದಲಾದ 173 ನೇ ಪ್ರಕರಣದ ನಿಬಂಧನೆಗಳ ವ್ಯಾಪ್ತಿಯ ಅಡಿಯಲ್ಲಿ ದಾಖಲೆಗಳನ್ನು ಸಂಪೂರ್ಣವಾಗಿ ಕ್ಲೇಮು ಮಾಡಲು ಮತ್ತು ದಾಖಲೆಗಳನ್ನು ಹಾಜರುಪಡಿಸಲು ಸಂಹಿತೆಯ 91 ನೇ ಪ್ರಕರಣದ ಅಡಿಯಲ್ಲಿನ ನ್ಯಾಯಾಲಯದ ಅಧಿಕಾರವು, ಅಭಿಯೋಜನೆಯು ಅವಲಂಬಿಸಿದೆ ಎಂದು ಹೇಳಲಾದ ವಿಚಾರಣೆಯ ಸಮಯದಲ್ಲಿ ಸಂಗ್ರಹಿಸಿದ ಹೇಳಿಕೆ ಮತ್ತು ದಾಖಲೆಗಳ ಪ್ರತಿಗಳಿಗೆ ಕ್ಲೇಮು ಮಾಡಲು ಆರೋಪಿಗೆ ಹಕ್ಕಿರುವುದನ್ನು ಸೂಚಿಸುತ್ತದೆ ಮತ್ತು ಮಾರ್ಗದರ್ಶನ ನೀಡುತ್ತದೆ.

221. ಆರೋಪಿಗೆ ದಸ್ತಾವೇಜುಗಳ ಪ್ರತಿಗಳನ್ನು ಕ್ಲೇಮು ಮಾಡಲು ಯಾವುದೇ ಹಕ್ಕಿಲ್ಲ ಅಥವಾ ಅಲ್ಲಿ ಹೇಳಲಾಗಿರುವ ಕಾನೂನಿನ ಮೂಲಭೂತ ಅಂಶದ ಅಪ್ಯಾಯಮಾನಕ್ಕೆ ಒಳಪಟ್ಟು ಸಾಮಾನ್ಯ ಡೈರಿಯ ಭಾಗವಾಗಿರುವ ದಸ್ತಾವೇಜನ್ನು ಹಾಜರುಪಡಿಸಲು ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳುವ ಹಕ್ಕನ್ನು ಹೊಂದಿಲ್ಲ ಎಂದು ಹೇಳಲು ನ್ಯಾಯಾಲಯಕ್ಕೆ ಕಷ್ಟವಾಗಬಹುದು. <u>ಪ್ರಾಮಾಣಿಕವಾಗಿ ಪಡೆದಿರುವ ಮತ್ತು ಅಭಿಯೋಜನೆಯ ವಾದಕ್ಕೆ ಸಂಬಂಧಿಸಿರುವ ದಸ್ತಾವೇಜನ್ನು ಮತ್ತು ಸರ್ಕಾರಿ ಅಭಿಯೋಜಕರ ಅಭಿಪ್ರಾಯದಲ್ಲಿ ಅದನ್ನು</u>

ನ್ಯಾಯದ ದೃಷ್ಟಿಯಿಂದ ಮತ್ತು ನಿಷ್ಪಕ್ಷಪಾತ ತನಿಖೆಯ ದೃಷ್ಟಿಯಿಂದ ಆರೋಪಿಗೆ ಬಹಿರಂಗಪಡಿಸತಕ್ಕದ್ದು ಮತ್ತು ಅಧಿವಿಚಾರಣೆಯನ್ನು ಆರೋಪಿಗೆ ಒದಗಿಸತಕ್ಕದ್ದು. ವಿಶೇಷವಾಗಿ ಅಂತಹ ದಾಖಲೆಯನ್ನು ಹಾಜರುಪಡಿಸದಿರುವುದು ಅಥವಾ ಬಹಿರಂಗಪಡಿಸದಿರುವುದು ಕ್ರಿಮಿನಲ್ ನ್ಯಾಯದ ಆಡಳಿತ ಮತ್ತು ಆಪಾದಿತನ ಪ್ರತಿವಾದದ ಮೇಲೆ ಪ್ರತಿಕೂಲ ಪರಿಣಾಮ ಬೀರಿದಾಗ, ಆ ದಾಖಲೆಯನ್ನು ಆರೋಪಿಗೆ ನಿಷ್ಪಕ್ಷಪಾತ ಪ್ರತಿವಾದದ ಅವಕಾಶವನ್ನು ನೀಡುವ ಮೂಲಕ ಬಹಿರಂಗಪಡಿಸಬೇಕು.

222. ನಮ್ಮ ಅಭಿಪ್ರಾಯದಲ್ಲಿ, ಈ ಹಂತದಲ್ಲಿ ಇಂಗ್ಲೀಷ್ ವ್ಯವಸ್ಥೆಯ ಅಡಿಯಲ್ಲಿರುವ ಬಹಿರಂಗಪಡಿಸುವಿಕೆಯ ಪರಿಕಲ್ಪನೆ ಮತ್ತು ಅಭಿಯೋಜಕರ ಕರ್ತವ್ಯಗಳನ್ನು ಭಾರತೀಯ ಕ್ರಿಮಿನಲ್ ನ್ಯಾಯಶಾಸ್ತ್ರದೊಂದಿಗೆ ಕಟ್ಟುನಿಟ್ಟಾಗಿ ಹೊಂದಾಣಿಕೆ ಮಾಡಲು ಸಾಧ್ಯವಿಲ್ಲ. ಆದಾಗ್ಯೂ, ಬಹಿರಂಗಪಡಿಸುವಿಕೆಯ ಸಿದ್ಧಾಂತಕ್ಕೆ ಸ್ವಲ್ಪಮಟ್ಟಿಗೆ ವಿಸ್ತರಿಸಲಾದ ಅನುಲೇಪವನ್ನು ನೀಡಬೇಕೆಂಬುದು ನಮ್ಮ ವಿವೇಚನೆಯ ದೃಷ್ಟಿಕೋನವಾಗಿರುತ್ತದೆ. ಪ್ರಸ್ತುತ ಮೊಕದ್ದಮೆಗೆ ಸಂಬಂಧಿಸಿದಂತೆ, ನಿಷ್ಪಕ್ಷಪಾತ ಅಧಿವಿಚಾರಣೆಗೆ ಆರೋಪಿಗಿರುವ ಹಕ್ಕಿಗೆ ಯಾವುದೇ ಪಕ್ಷಪಾತ ಉಂಟಾಗಿರುವುದಿಲ್ಲ ಮತ್ತು ಬ್ಯಾಲಿಸ್ಟಿಕ್ ವರದಿಗಳಲ್ಲಿ ಒಂದರ ಪ್ರತಿಯನ್ನು ಒದಗಿಸದಿರುವುದು ನ್ಯಾಯದ ಉಲ್ಲಂಘನೆಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ದಸ್ತಾವೇಜಿನ ಸತ್ಯಾಸತ್ಯತೆಯ ಮೇಲೆ ಕೆಲವು ಅನುಮಾನದ ನೆರಳನ್ನು ಅಭಿಯೋಜನೆಯಿಂದ ರಚಿಸಲ್ಪಟ್ಟಿರುತ್ತದೆ ಮತ್ತು ಅಭಿಯೋಜನೆಯು ಈ ದಸ್ತಾವೇಜಿನ ಮೇಲೆ ಅವಲಂಬಿಸದಿರಲು ನಿರ್ಧರಿಸುತ್ತದೆ. ಈ ಸನ್ನಿವೇಶಗಳಲ್ಲಿ, ಆರೋಪಿಯ ಬಹಿರಂಗಪಡಿಸುವ ಹಕ್ಕು ಮೊಕದ್ದಮೆಯ ಸತ್ಯ ಮತ್ತು ಸನ್ನಿವೇಶಗಳಲ್ಲಿ ಯಾವುದೇ ಹಿನ್ನಡೆಯನ್ನು ಎದುರುಗೊಂಡಿರುವುದಿಲ್ಲ. ಆರೋಪಿಯೂ ಸಹ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಈ ವಿಷಯವನ್ನು ಗಂಭೀರವಾಗಿ ಪ್ರಸ್ತಾಪಿಸಿರುವುದಿಲ್ಲ.

(ಒತ್ತು ನೀಡಲಾಗಿದೆ)

177. ಈ ರೀತಿಯಲ್ಲಿ, ಸರ್ಕಾರಿ ಅಭಿಯೋಜಕರು ಮತ್ತು ನಂತರ ಅಧಿವಿಚಾರಣಾ ನ್ಯಾಯಾಲಯದ ಪರಿಶೀಲನೆಯು, ಆರೋಪಿಯು ರಾಜ್ಯದ ಪೊಲೀಸ್ ವ್ಯವಸ್ಥೆಯ ಬಲವನ್ನು ಎದುರಿಸಿದಾಗ, ಆತನ ನಿಷ್ಪಕ್ಷಪಾತ ತನಿಖೆಯ ಹಕ್ಕನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

178. *ರಿ ವಿರುದ್ಧ ಆಂಧ್ರ ಪ್ರದೇಶ ರಾಜ್ಯ*[80] ಮೊಕದ್ದಮೆಯಲ್ಲಿ, *ಅಸಮರ್ಪಕತೆಗಳು ಮತ್ತು ನ್ಯೂನತೆಗಳಿಗೆ ಸಂಬಂಧಿಸಿದಂತೆ, ಕ್ರಿಮಿನಲ್ ಅಧಿವಿಚಾರಣೆಯ ಮಾರ್ಗಸೂಚಿಗಳಲ್ಲಿ* ಈ ನ್ಯಾಯಾಲಯದ ಇತ್ತೀಚಿನ ಮೂವರು ನ್ಯಾಯಾಧೀಶರು ನೀಡಿದ ತೀರ್ಪಿನಲ್ಲಿ ಈ ದೃಷ್ಟಿಕೋನವನ್ನು ಅನುಮೋದಿಸಲಾಗಿದೆ. ನಿಷ್ಪಕ್ಷಪಾತ ಅಧಿವಿಚಾರಣೆಗೆ ಅಡ್ಡಿಯಾಗಬಹುದಾದ ಮೇಲೆ ತಿಳಿಸಲಾದ ಅಸಮಪರ್ಕತೆಯನ್ನು ಈ ನ್ಯಾಯಾಲಯವು ಎತ್ತಿ ತೋರಿಸಿರುತ್ತದೆ ಮತ್ತು *ಇತರ ವಿಷಯಗಳ ಜೊತೆಗೆ*, ಈ ನಿಟ್ಟಿನಲ್ಲಿ ಎಲ್ಲಾ ರಾಜ್ಯಗಳು ಮತ್ತು ಉಚ್ಚ ನ್ಯಾಯಾಲಯಗಳು ನಿಯಮಗಳನ್ನು ರೂಪಿಸುವುದು ಅಗತ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದು; ಈ ನಿಟ್ಟಿನಲ್ಲಿ ತನಿಖೆಯ ಸಮಯದಲ್ಲಿ ಜಪ್ತಿ ಮಾಡಿಕೊಂಡ ಮತ್ತು ವಶಕ್ಕೆ ಪಡೆದ ಎಲ್ಲಾ ವಸ್ತುಗಳನ್ನು ನಮೂದಿಸಿದ ಒಂದು ಪಟ್ಟಿಯನ್ನು ಆರೋಪಿಗೆ ಬಹಿರಂಗಪಡಿಸಬೇಕು ಎಂದು ಕಡ್ಡಾಯಗೊಳಿಸುತ್ತದೆ. ಎಲ್ಲಾ ರಾಜ್ಯಗಳು ಅಳವಡಿಸಿಕೊಳ್ಳಬೇಕಾದ, ಈ ನ್ಯಾಯಾಲಯದಿಂದ ಅನುಮೋದಿಸಿಲ್ಪಟ್ಟ ಸಂಬಂಧಿತ ಕರಡು ಮಾರ್ಗಸೂಚಿಯು ಈ ಕೆಳಗಿನಂತಿದೆ:

> "4. ದಂಡ ಪ್ರಕ್ರಿಯಾ ಸಂಹಿತೆಯ 173, 207 ಮತ್ತು 208 ರ ಅಡಿಯಲ್ಲಿ ದಸ್ತಾವೇಜುಗಳನ್ನು ಒದಗಿಸುವುದು:
>
> ದಂಡ ಪ್ರಕ್ರಿಯಾ ಸಂಹಿತೆಯ 161 ಮತ್ತು 164 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾದ ಸಾಕ್ಷಿಗಳ ಹೇಳಿಕೆಗಳನ್ನು ಮತ್ತು ತನಿಖೆಯ ಸಂದರ್ಭದಲ್ಲಿ ಜಪ್ತಿ ಮಾಡಿಕೊಳ್ಳಲಾದ ದಸ್ತಾವೇಜುಗಳ, ಮುದ್ದೆ ಮಾಲುಗಳ ಮತ್ತು ನಿಶಾನೆಗಳ ಪಟ್ಟಿ ಮತ್ತು ದಂಡ ಪ್ರಕ್ರಿಯಾ ಸಂಹಿತೆ 207 ಮತ್ತು 208ನೇ ಪ್ರಕರಣದ ಅನುಸಾರವಾಗಿ ತನಿಖಾಧಿಕಾರಿಯವರು (ಐ.ಓ) ಅವುಗಳ ಮೇಲೆ ಅವಲಂಬಿಸಿರುವುದನ್ನು ಪ್ರತೀ ಆರೋಪಿಗೆ ಒದಗಿಸತಕ್ಕದು.
>
> ವಿವರಣೆ: ಹೇಳಿಕೆಗಳ, ದಸ್ತಾವೇಜುಗಳ, ಮುದ್ದೆ ಮಾಲುಗಳ ಮತ್ತು ನಿಶಾನೆಗಳ ಪಟ್ಟಿಯು, ತನಿಖಾಧಿಕಾರಿಯಿಂದ ಅವಲಂಬಿತವಾಗಿಲ್ಲದೆ ಹೇಳಿಕೆಗಳು, ದಸ್ತಾವೇಜುಗಳು, ಮುದ್ದೆ ಮಾಲುಗಳು ಮತ್ತು ನಿಶಾನೆಗಳನ್ನು ನಿರ್ದಿಷ್ಟಪಡಿಸಬೇಕು".

80. (2021) 10 ಎಸ್‌ಸಿಸಿ 598

179. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಎಲ್ಲಾ ಕ್ರಿಮಿನಲ್ ಅಧಿವಿಚಾರಣೆಯಲ್ಲಿ, ನಿಯಮದಂತೆ, ನಿಷ್ಪಕ್ಷಪಾತದ ಹಿತಾಸಕ್ತಿಯಿಂದ, ಮೇಲಿನ ನಿಯಮವನ್ನು ಅನುಸರಿಸಬೇಕು ಮತ್ತು ತನಿಖಾಧಿಕಾರಿಯು ಅವಲಂಬಿಸಿರದ ಸಾಕ್ಷಿಗಳ, ದಸ್ತಾವೇಜುಗಳ, ಮುದ್ದೆಮಾಲುಗಳ ಮತ್ತು ನಿಶಾನೆಗಳ ಪಟ್ಟಿಯನ್ನು ಅಭಿಯೋಜನೆಯು ಒದಗಿಸಬೇಕು ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಕ್ರಿಮಿನಲ್ ಅಧಿವಿಚಾರಣೆಯಲ್ಲಿ ನ್ಯಾಯಾಲಯದ ಪೀಠಾಸೀನ ಅಧಿಕಾರಿಗಳು ಅಂತಹ ನಿಯಮಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳತಕ್ಕದು.

ಶಿಕ್ಷೆಯ ಬಗ್ಗೆ:

180. ಈ ಮೊಕದ್ದಮೆಯ ಸುನಾವಣೆಯನ್ನು ನಂತರದ ದಿನಾಂಕದಂದು ಶಿಕ್ಷೆ ವಿಧಿಸಲು ಮುಂದೂಡಲಾಯಿತು, ಆದರೆ ಅದಕ್ಕೂ ಮೊದಲು ಮಾನ್ಯ ವಕೀಲರು ಘಟನೆಯ ಮೊದಲು ಮತ್ತು ಅಧಿವಿಚಾರಣಾ ನ್ಯಾಯಾಲಯದಿಂದ ಶಿಕ್ಷೆ ವಿಧಿಸಿದ ನಂತರದ ಆರೋಪಿಗಳ ಜೀವನದ ಬಗ್ಗೆ ಸಾಕ್ಷ್ಯಗಳನ್ನು ಸಲ್ಲಿಸಿದ್ದು; ಈ ನ್ಯಾಯಾಲಯದಿಂದ ಕೇಳಲಾದ ಕಾರಗೃಹ ವರದಿಗಳು ಮತ್ತು ಇತರ ಸಾಕ್ಷ್ಯಗಳನ್ನು ಸರ್ಕಾರದಿಂದ ಸ್ವೀಕರಿಸಿದ್ದು; ಉಭಯತ್ರಯರು ಲಿಖಿತ ವಿನಂತಿಗಳನ್ನು ಸಲ್ಲಿಸಿರುತ್ತಾರೆ.

181. ವಾದಗಳ ಸಂದರ್ಭದಲ್ಲಿ, ಯಾವುದೇ ಉಪಶಮನಗೊಳಿಸಲಾದ ಸನ್ನಿವೇಶಗಳಿರುವುದಿಲ್ಲ ಮತ್ತು ಅಪರಾಧದ ಸ್ವರೂಪದಿಂದ ಸ್ಪಷ್ಟವಾದ ಕ್ರೌರ್ಯವು ಮರಣದಂಡನೆಗಿಂದ ಕಡಿಮೆ ಶಿಕ್ಷೆಯನ್ನು ವಿಧಿಸುವುದಿಲ್ಲ ಮತ್ತು ಅದರ ಪ್ರಕಾರವಾಗಿ ಏಕಕಾಲದಲ್ಲಿ ಅನುಭವಿಸಲು ವಿಧಿಸಲಾದ ಶಿಕ್ಷೆಯು ಸಮರ್ಪಕವಾಗಿರುತ್ತದೆ ಎಂದು ಮಾನ್ಯ ಎ.ಎ.ಜಿ ಯವರು ಸಮರ್ಥಿಸಿಕೊಂಡರು. ಪ್ರಸ್ತುತದಂತಹ ಮೊಕದ್ದಮೆಯಲ್ಲಿ, "ವಿರಳದಲ್ಲಿ ಅತ್ಯಂತ ವಿರಳವಾದದ್ದು" ಎಂಬ ಸಿದ್ಧಾಂತವನ್ನು ಪ್ರತಿಬಂಧಕವಾಗಿ ಅನ್ವಯಿಸಬೇಕಾಗಿದೆ ಎಂದು ಸಲ್ಲಿಸಲಾಯಿತು.

182. ಮತ್ತೊಂದೆಡೆ, ಯಾವುದೇ ಕೆಳ ನ್ಯಾಯಾಲಗಳು ಚಿಕ್ಕ ವಯಸ್ಸಿನವರಾದ ಆರೋಪಿಗಳ ಸುಧಾರಣೆಯ ಸಾಧ್ಯತೆಗಳನ್ನು ಪರಿಗಣಿಸಿರುವುದಿಲ್ಲ ಮತ್ತು ಮನೋಜ್‌ರನ್ನು ಹೊರತುಪಡಿಸಿ (ಹಿಂದೆ ಚಿಕ್ಕಪುಟ್ಟ ಅಪರಾಧಗಳಲ್ಲಿ ಭಾಗಿಯಾಗಿದ್ದ) ಇತರರಿಗೆ ಯಾವುದೇ ಪೂರ್ವ ಅಪರಾಧ ಇತಿಹಾಸವಿರುವುದಿಲ್ಲ ಎಂಬ ಅಂಶದ ಮೇಲೆ ಆರೋಪಿ ಪರ ಹಾಜರಾದ ಮಾನ್ಯ ವಕೀಲರು ಒತ್ತು ನೀಡಿರುತ್ತಾರೆ. ಸನ್ನಿವೇಶಗಳ ಒಟ್ಟಾರೆ ಅವಲೋಕನವು, ನೊಂದವರ ಪ್ರತಿರೋಧವನ್ನು ಎದುರಿಸಿದ ನಂತರ, ಆರೋಪಿಯ ಯೋಜನೆಯಗಳು ಅವ್ಯವಸ್ಥೆಗೆ ಒಳಗಾಗುವ ಸಂಭವನೀಯತೆಯ ಕಾರಣದಿಂದ ಮೃತರಿಗೆ ದೊಡ್ಡ ಪ್ರಮಾಣದ ಗಾಯಗಳು ಉಂಟಾಗಿರುತ್ತದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರಲು ಕಾರಣವಾಗಬಹುದು ಎಂದೂ ಸಹ ಮಾನ್ಯ ವಕೀಲರು ವಾದ ಮಂಡಿಸಿರುತ್ತಾರೆ. ಪ್ರತಿ ಅಪರಾಧಿಯ ಸುಧಾರಣೆಗೆ ಒಳಗಾಗುವ ಸಾಮರ್ಥ್ಯವನ್ನು ಅಂದರೆ ಅವರ ಹಿಂದಿನ ಹಿನ್ನಲೆಗಳು ಮತ್ತು ಅಧಿವಿಚಾರಣೆಯು ಬಾಕಿಯಿದ್ದ ಮತ್ತು ಸ್ಥಿರೀಕರಣದ ಸಮಯದಲ್ಲಿ ಜೈಲಿನಲ್ಲಿ ಅವರ ನಡವಳಿಕೆಗಳನ್ನು ಪರಿಗಣಿಸಲಾಗಿಲ್ಲ ಎಂದೂ ಸಹ ನಿವೇದಿಸಲಾಗಿರುತ್ತದೆ. *ಬಚನ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ*[81] ಮೊಕದ್ದಮೆಯಲ್ಲಿ ಈ ನಿಯಮದ ಉಲ್ಲಂಘನೆಗೆ ಕಾರಣವಾಗಿರುತ್ತದೆ. ಉಪಶಮನಗೊಳಿಸಲಾದ ಸನ್ನಿವೇಶಗಳನ್ನು, ಆರೋಪಯನ್ನು ಸಾಬೀತುಪಡಿಸುವಲ್ಲಿ ರಾಜ್ಯದ ಪಾತ್ರವು ಸುಧಾರಣೆಯನ್ನು ಮೀರಿದ್ದು ಎಂಬುದನ್ನು, ವಯಸ್ಸು ಮತ್ತು ಸಾಮಾಜಿಕ–ಆರ್ಥಿಕ ಹಿನ್ನಲೆಯಂತಹ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು, ಶಿಕ್ಷಾಪೂರ್ವ ಸುನಾವಣೆ–ಅದರ ವ್ಯಾಪ್ತಿ ಮತ್ತು ನ್ಯಾಯಾಲಯದ ಬಾಧ್ಯತೆ ಇತ್ಯಾದಿಗಳನ್ನು ಪರಿಗಣಿಸುವ ಮಹತ್ವಕ್ಕೆ ಸಂಬಂಧಿಸಿದಂತೆ ಹಲವಾರು ತೀರ್ಪುಗಳ ಮೇಲೆ ವಕೀಲರು ಅವಲಂಬಿಸಿರುತ್ತಾರೆ.

183. ಇತರ ಅಪರಾಧಗಳ ನಡುವೆ ಕೊಲೆ, ಸುಲಿಗೆಗಾಗಿ ಅಪಹರಣ, ಅತ್ಯಾಚಾರ ಮತ್ತು ಸಾವಿಗೆ ಕಾರಣವಾಗುವ ಗಾಯಗಳು ಅಥವಾ ಮಹಿಳೆಯನ್ನು ಎಚ್ಚರವಿಲ್ಲದ ಸ್ಥಿತಿಯಲ್ಲಿ

81. (1980) 2 ಎಸ್‌ಸಿಸಿ 684

ಬಿಡುವುದು, 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ಮೇಲೆ ಅತ್ಯಾಚಾರ ಅಥವಾ ಸಾಮೂಹಿಕ ಅತ್ಯಾಚಾರ, ಕೊಲೆಯೊಂದಿಗೆ ದರೋಡೆ ಸೇರಿದಂತೆ ಇತರ ಹಲವಾರು ಐ.ಪಿ.ಸಿ ಅಡಿಯಲ್ಲಿ ಮಾಡಲಾದ ಅಪರಾಧಗಳಿಗೆ ಮರಣದಂಡನೆಯನ್ನು ಸೂಚಿಸಲಾಗಿರುತ್ತದೆ. *ಬಚನ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ*[82] (ಇನ್ನು ಮುಂದೆ 'ಬಚನ್ ಸಿಂಗ್') ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಭಾರತೀಯ ಕಾನೂನು ಆಯೋಗದ (1967) 35 ನೇ ವರದಿಯ ಆಧಾರದ ಮೇಲೆ, ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಅಡಿಯಲ್ಲಿನ ಮರಣದಂಡನೆಯನ್ನು ಪರ್ಯಾಯ ಶಿಕ್ಷೆಯಾಗಿ ವಿಧಿಸುವುದನ್ನು ಎತ್ತಿ ಹಿಡಿದಿರುತ್ತದೆ; ಮತ್ತು *ಜಗ್ಮೋಹನ್ ಸಿಂಗ್ ವಿರುದ್ಧ ಉತ್ತರ ಪ್ರದೇಶ ರಾಜ್ಯ*[83] (35 ನೇ ವರದಿಯು ಹಿಡಿದಿಡುವ ಸಾಮರ್ಥ್ಯವನ್ನು ಪ್ರತಿಪಾದಿಸುತ್ತದೆ ಎಂದೂ ಸಹ ಇದು ಗಮನಿಸುತ್ತದೆ) ಮೊಕದ್ದಮೆಯ ತೀರ್ಪಿನಲ್ಲಿ ಮತ್ತು ಈ ನ್ಯಾಯಾಲಯವು ತೀರ್ಪು ನೀಡಿದ ಹಲವಾರು ನಂತರದ ಮೊಕದ್ದಮೆಗಳಲ್ಲಿ ಮರಣದಂಡನೆಯು ಘೋರ ಅಥವಾ ಭಯಂಕರ ಎಂದು ಗುರುತಿಸಿರುತ್ತದೆ. ಇದು ಇತ್ತೀಚೆಗೆ ಸೇರಿಸಲಾದ ದಂಡ ಪ್ರಕ್ರಿಯಾ ಸಂಹಿತೆಯ 253 (2) ಮತ್ತು 354 (3) ಪ್ರಕರಣದ ಮೇಲೆ ಒತ್ತು ನೀಡುತ್ತದೆ ಮತ್ತು ಇದು ಪೂರ್ವ ಶಿಕ್ಷೆಯ ಸುನಾವಣೆ ಮತ್ತು ಮರಣದಂಡನೆ ಅಪರಾಧಗಳ ಮೇಲೆ ವಿಧಿಸಲಾಗುವ ಶಿಕ್ಷೆಯ ಕಾರ್ಯವಿಧಾನವನ್ನು ವಿಭಜಿಸುತ್ತದೆ ಮತ್ತು ಈ ರೀತಿಯ ಶಿಕ್ಷೆಯು ಶಾಸಕಾಂಗ ಆಧಾರವನ್ನು ಹೊಂದಲು ಮುಂದುವರಿಯುತ್ತದೆ ಮತ್ತು ಆ ಮೂಲಕ ಜನರ ಇಚ್ಛೆಯನ್ನು ಪ್ರತಿನಿಧಿಸುತ್ತದೆ ಎಂದು ತೀರ್ಮಾನಿಸುತ್ತದೆ ಎಂಬುದನ್ನು ಒತ್ತಿ ಹೇಳುತ್ತದೆ.

184. ಮರಣದಂಡನೆಯ ಅಪರಾಧಗಳಲ್ಲಿ ಶಿಕ್ಷೆಯನ್ನು ಹೇಗೆ ವಿಧಿಸಲಾಗಿದೆ ಎಂಬುದರಲ್ಲಿ ಬದಲಾವಣೆಗಳಿವೆ ಎಂಬುದು ನಿರ್ವಿವಾದವಾಗಿದೆ. ಬೆಳವಣಿಗೆಗಳನ್ನು ಸಮಗ್ರವಾಗಿ ಅಥವ ದೊಡ್ಡ ಮಟ್ಟದಲ್ಲಿ ನೋಡಿದಾಗ ಇದು ಸ್ಪಷ್ಟವಾಗುತ್ತದೆ: ಸಂಸತ್ತಿನಿಂದ ದಂಡ ಪ್ರಕ್ರಿಯಾ

82. (1980) 2 ಎಸ್‌ಸಿಸಿ 684
83. (1973) 1 ಎಸ್‌ಸಿಸಿ 20

ಸಂಹಿತೆಗೆ ಆದ ತಿದ್ದುಪಡಿಗಳು, 30 ವರ್ಷಗಳ ಅಂತರದಲ್ಲಿ ಉಳಿದಿರುವ ಕಾನೂನು ಆಯೋಗದ 35 ಮತ್ತು 262 ನೇ ವರದಿಗಳು ಮತ್ತು ದಶಕಗಳಾದ್ಯಂತ ಈ ನ್ಯಾಯಾಲಯಗಳ ಪೂರ್ವನಿರ್ದೇಶನಗಳ ಮಟ್ಟದಲ್ಲಿ ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಆರಂಭದಲ್ಲಿ ಕಾನೂನು ಮರಣದಂಡನೆಯನ್ನು <u>ವಿಧಿಸದಿರಲು</u> ಲಿಖಿತ ಕಾರಣಗಳ ಅಗತ್ಯವನ್ನು ಹೇರಿದ್ದು, ಅದನ್ನು 1955 ರಲ್ಲಿ ತೆಗೆದುಹಾಕಲಾಗಿರುತ್ತದೆ. 1973 ರಲ್ಲಿ, ದಂಡ ಪ್ರಕ್ರಿಯಾ ಸಂಹಿತೆಗೆ ಮತ್ತಷ್ಟು ತಿದ್ದುಪಡಿ ಮಾಡುವ ಮೂಲಕ ಮತ್ತು 354 (3) ನೇ ಪ್ರಕರಣವನ್ನು ಸೇರಿಸುವ ಮೂಲಕ ಜೀವಾವಧಿ ಶಿಕ್ಷೆಯು ಒಂದು ರೂಢಿಯಾಗಿರುತ್ತದೆ ಮತ್ತು ಮರಣದಂಡನೆಯನ್ನು ವಿಧಿಸಲು ಒಂದು 'ವಿಶೇಷ ಕಾರಣ'ದ ಅಗತ್ಯವಿರುತ್ತದೆ ಮತ್ತು 253 (2) ನೇ ಪ್ರಕರಣದ ಮೂಲಕ ಅಪರಾಧ ನಿರ್ಣಯದ ಪ್ರಶ್ನೆಯಿಂದ ಶಿಕ್ಷೆಯ ಪ್ರತ್ಯೇಕ ಪರಿಗಣನೆಯ ಅಗತ್ಯವಿರುತ್ತದೆ. ಎರಡೂ ಹಂತದಲ್ಲಿ ಅಂದರೆ 1955 ರ ನಂತರ ಮತ್ತು 1973 ರ ನಂತರ, *ಜಗ್ಮೋಹನ್ ಸಿಂಗ್* ಮತ್ತು *ಬಚನ್‌ಸಿಂಗ್* ಮೊಕದ್ದಮೆಗಳಲ್ಲಿ ಈ ನ್ಯಾಯಾಲಯದ 5 ನ್ಯಾಯಾಧೀಶರ ಪೀಠವು ಮರಣದಂಡನೆಯನ್ನು ಸಾಂವಿಧಾನಿಕ ಎಂದು ಎತ್ತಿಹಿಡಿದಿರುತ್ತದೆ.

185. ಮರಣ ದಂಡನೆಯ ಬಗ್ಗೆ 262 ನೇ ಕಾನೂನು ಆಯೋಗದ ವರದಿಯು (2015), (ಇನ್ನುಮುಂದೆ 262ನೇ ವರದಿ), ಪ್ರಾಥಮಿಕವಾಗಿ ಎರಡು ಮೊಕದ್ದಮೆಗಳಲ್ಲಿ ಈ ನ್ಯಾಯಾಲಯವು ಮಾಡಿದ ಉಲ್ಲೇಖಗಳ ಫಲಿತಾಂಶವಾಗಿರುತ್ತದೆ. ಮೊದಲನೆಯದಾಗಿ, *ಸಂತೋಷ್ ಕುಮಾರ್ ಸತೀಶ್‌ಭೂಷಣ್ ಬಾರಿಯಾರ್ ವಿರುದ್ಧ ಮಹಾರಾಷ್ಟ್ರ ರಾಜ್ಯ*[84] (ಇನ್ನು ಮುಂದೆ, ಸಂತೋಷ್ ಬಾರಿಯರ್) ಮೊಕದ್ದಮೆಯಲ್ಲಿ, ಯು.ಎನ್ ಸಾಮಾನ್ಯ ಸಭೆಯ ಠರಾವು *62/149*[85] ನ್ನು ಗಮನಿಸಿದ ನಂತರ, ಮರಣದಂಡನೆಯೆಂಬ ವಿವಾದಾತ್ಮಕ ವಿಷಯದ ಬಗ್ಗೆ ಪರಸ್ಪರ ಚರ್ಚೆ ಮತ್ತು ವಾಗ್ವಾದವನ್ನು ರೂಪಿಸಲು ವಿಶ್ವಾಸಾರ್ಹ ಸಂಶೋಧನೆಯ

84. (2009) 6 ಎಸ್‌ಸಿಸಿ 498 (ಖಂಡಿಕೆ 112)
85. 18.12.2007 ರಂದು ಅಳವಡಿಸಿಕೆಳ್ಳಲಾಯಿತು.

ಅಗತ್ಯವಿದೆ ಎಂದು ಸೂಚಿಸಲಾಗಿರುತ್ತದೆ. ಎರಡನೆಯದಾಗಿ, *ಶಂಕರ್‌ರಾವ್ ಕೆಸನ್‌ರಾವ್ ಖಾಡೆ ವಿರುದ್ಧ ಮಹಾರಾಷ್ಟ್ರ ರಾಜ್ಯ*[86] ಮೊಕದ್ದಮೆಯ ತೀರ್ಪಿನಲ್ಲಿ, ಮರಣದಂಡನೆಯು ಘೋರವಾದ ಶಿಕ್ಷೆಯೇ, ಪ್ರತೀಕಾರದ ನ್ಯಾಯವೇ ಅಥವಾ ಅಸಮರ್ಥ ಗುರಿಯನ್ನು ಪೂರೈಸುತ್ತದೆಯೇ ಎಂಬ ಸಮಸ್ಯೆಯನ್ನು ಪರಿಹರಿಸಲು ಮತ್ತು ಶಿಕ್ಷೆಯನ್ನು ತಗ್ಗಿಸಲು ನ್ಯಾಯಂಗ (ವಿರಳದಲ್ಲಿ ಅತ್ಯಂತ ವಿರಳ) ಮತ್ತು ಕಾರ್ಯಾಂಗ (ಅಜ್ಞಾತ ಎಂದು ಕರೆಯಲ್ಪಟ್ಟಿರುವುದು) ಅಳವಡಿಸಿಕೊಂಡಿರುವ ವಿಧಾನದ ವ್ಯತ್ಯಾಸವನ್ನು ಅಧ್ಯಾಯನ ಮಾಡಲು ಕಾನೂನು ಆಯೋಗವನ್ನು ನಿಯೋಜಿಸಿರುತ್ತದೆ. ಈ ಆದೇಶವನ್ನು ಪೂರೈಸುವ ಪ್ರಯತ್ನದಲ್ಲಿ, 35 ನೇ ವರದಿಯು ಬಂದ ನಂತರದಿಂದ ದೇಶದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ತೀರ್ವವಾದ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಮರಣದಂಡನೆಯ ಬಗ್ಗೆ ತಮ್ಮದೇ ಆದ ಹಿಂದಿನ ಶಿಫಾರಸ್ಸುಗಳನ್ನು (ಅದರ 35 ನೇ ವರದಿಯಲ್ಲಿ, 1969) ಮರುಪರಿಶೀಲಿಸುವ ತುರ್ತು ಅಗತ್ಯವನ್ನು ಆಯೋಗವು ಗುರುತಿಸಿರುತ್ತದೆ ಮತ್ತು *ಬಚನ್ ಸಿಂಗ್* ಮೊಕದ್ದಮೆಯಲ್ಲಿ "ವಿರಳದಲ್ಲಿ ಅತ್ಯಂತ ವಿರಳ" ಎಂಬ ಮೂಲ ತತ್ವವನ್ನು ಮಂಡಿಸಿದಾಗಿನಿಂದ, ಮರಣದಂಡನೆಯ ಮೊಕದ್ದಮೆಗಳ ತೀರ್ಪಿನಲ್ಲಿ ಅನಿಯಂತ್ರಕತೆಯು ಪ್ರಮುಖ ಕಾಳಜಿಯಾಗಿ ಉಳಿದಿರುತ್ತದೆ.

186. ಬದಲಾದ ಸನ್ನಿವೇಶಗಳು ಮತ್ತು ವಿಕಸನಗೊಳ್ಳುತ್ತಿರುವ ಚರ್ಚೆಗಳನ್ನು ಪ್ರತಿಬಿಂಬಿಸುವ ವರದಿಯು ಭಾರತದಲ್ಲಿ ಮರಣದಂಡನೆಯ ಬಗೆಗಿನ ವಿಧಾನದಲ್ಲಿ ಬದಲಾವಣೆಯನ್ನು ಸೂಚಿಸುತ್ತಿದ್ದು; ಭಯೋತ್ಪಾದನೆಗೆ ಸಂಬಂಧಿಸಿದ ಅಪರಾಧಗಳನ್ನು ಹೊರತುಪಡಿಸಿ ಎಲ್ಲಾ ಅಪರಾಧಗಳನ್ನು ನಿರ್ಮೂಲನೆ ಮಾಡಲು ಶಿಫಾರಸು ಮಾಡುತ್ತದೆ. ಶಿಕ್ಷೆಯನ್ನು ವಿಧಿಸುವ ವಿಷಯಕ್ಕೆ ಬಂದಾಗ, ವರದಿಯ ಪ್ರಮುಖ ಭಾಗವು ನ್ಯಾಯಾಲಯಗಳ ವಿವೇಚನೆ ಮತ್ತು ನ್ಯಾಯಾಂಗ ತಾರ್ಕಿಕತೆಯ ಮೇಲೆ ಕೇಂದ್ರಿಕೃತವಾಗಿರುತ್ತದೆ. *ಬಚನ್ ಸಿಂಗ್* ಮೊಕದ್ದಮೆಯಲ್ಲಿ *ನಿರಂಕುಶವಾಗಿ* ಅನ್ವಯಿಸಲಾದ ತತ್ವಗಳ ಮೇಲೆ ಭಾರತದಲ್ಲಿ ಮರಣದಂಡನೆಯ ಶಿಕ್ಷೆಯು

86. (2013) 5 ಎಸ್‌ಸಿಸಿ 546 (ಖಂಡಿಕೆ 148–149)

ಆಧರಿಸಿದೆ ಮತ್ತು ನ್ಯಾಯಾಧೀಶರ ವೈಯಕ್ತಿಕ ಆಸಕ್ತಿಯ ಮೇಲೆ ಆಧಾರವಾಗಿ ನ್ಯಾಯಾಧೀಶ–ಕೇಂದ್ರಿತವಾಗಿದೆ ಎಂದು ಅದು ನಿರ್ಣಯಿಸಿರುತ್ತದೆ–ಈ ಕಾಳಜಿಯನ್ನು ಈ ನ್ಯಾಯಾಲಯವು *ಸ್ವಾಮಿ ಶ್ರದ್ಧಾನಂದ (2) @ ಮುರಲ್ ಮನೋಹರ್ ಮಿಶ್ರ ವಿರುದ್ಧ ಕರ್ನಾಟಕ ಸರ್ಕಾರ*[87] ಮೊಕದ್ದಮೆಯಲ್ಲಿ ಪ್ರಸ್ತಾಪಿಸಿರುತ್ತದೆ ಮತ್ತು *ಸಂತೋಷ್ ಬಾರಿಯಾರ್*, ನಂತರ *ಸಂಗೀತ್ ಮತ್ತು ಮತ್ತೊಬ್ಬರು ವಿರುದ್ಧ ಹರಿಯಾಣ ರಾಜ್ಯ*[88], *ಮೊಹಮದ್ ಫಾರೂಕ್ ಅಬ್ದುಲ್ ಗಫೂರ್ ಮತ್ತು ಮತ್ತೊಬ್ಬರು ವಿರುದ್ಧ ಮಹಾರಾಷ್ಟ್ರ ರಾಜ್ಯ*[89] ಮತ್ತು ಇತ್ತೀಚಿನ *ಚನ್ನು ಲಾಲ್ ವರ್ಮಾ ವಿರುದ್ಧ ಛತೀಸ್‌ಗಡ ರಾಜ್ಯ*[90] (ಇನ್ನುಮುಂದೆ "ಚನ್ನುಲಾಲ್ ವರ್ಮಾ) ಮೊಕದ್ದಮೆಗಳಲ್ಲಿ ಮತ್ತೊಮ್ಮೆ ವ್ಯಾಪಕವಾಗಿ ವಿಶ್ಲೇಷಿಸಿರುತ್ತದೆ.

ಮರಣದಂಡನೆಯ ಚೌಕಟ್ಟು ಮತ್ತು ಅದನ್ನು 'ತಾತ್ವಿಕ ಶಿಕ್ಷೆಗೆ' ಹೇಗೆ ಅನ್ವಯಿಸಬೇಕು.

187. ಈ ನ್ಯಾಯಾಲಯವು, *ಬಚನ್ ಸಿಂಗ್* ಮೊಕದ್ದಮೆಯಲ್ಲಿ, ಮರಣದಂಡನೆಯ ಸಾಂವಿಧಾನಿಕತೆಯನ್ನು ಎತ್ತಿಹಿಡಿಯುವಾಗ, 1973 ರ ಹೊಸ ದಂಡ ಪ್ರಕ್ರಿಯಾ ಸಂಹಿತೆಯು ಶಿಕ್ಷಾ–ಪೂರ್ವ ವಿಚಾರಣೆಯನ್ನು ಸೇರಿಸಲು ಕ್ರಿಮಿನಲ್ ಅಧಿವಿಚಾರಣೆಯನ್ನು ವಿಭಜಿಸಿರುವ ಬದಲಾವಣೆಯನ್ನು ಗುರುತಿಸಿರುವುದನ್ನು (235(2)ನೇ ಪ್ರಕರಣದ ಅಡಿಯಲ್ಲಿ) ನಿಸ್ಸಂದಿಗ್ಧವಾಗಿ ತೀರ್ಮಾನಿಸಿರುತ್ತದೆ ಮತ್ತು ಅಪರಾಧ ಮತ್ತು ಅಪರಾಧಿಯ ಎರಡೂ ಸನ್ನಿವೇಶಗಳನ್ನು ಪರಿಗಣಿಸುವ ಮೂಲಕ "ವಿಶೇಷ ಕಾರಣಗಳು" (354 (3) ನೇ ಪ್ರಕರಣದ ಅಡಿಯಲ್ಲಿ) ಅಥವಾ ಅವುಗಳ ಅನುಪಸ್ಥಿತಿಯನ್ನು ವಿವರಿಸಲು ಶಿಕ್ಷೆಯನ್ನು ವಿಧಿಸುವ ನ್ಯಾಯಾಲಯಗಳಿಗೆ ಮುಂದುವರಿದು ಕಡ್ಡಾಯಗೊಳಿಸಿರುತ್ತದೆ. ವಿಶಾಲವಾದ ಮಾರ್ಗಸೂಚಿಗಳು ಅಥವಾ

87. (2008) 13 ಎಸ್‌ಸಿಸಿ 767
88. (2013) 2 ಎಸ್‌ಸಿಸಿ 452
89. (2010) 14 ಎಸ್‌ಸಿಸಿ 641
90. (2019) 12 ಎಸ್‌ಸಿಸಿ 438

ಸೂಚಕಗಳನ್ನು ನೀಡಬಹುದಾದರೂ, ನಿರ್ದಿಷ್ಟ ವೈಯಕ್ತಿಕ ಮೊಕದ್ದಮೆಯಲ್ಲಿ ನ್ಯಾಯವನ್ನು ನೀಡಲು ಯಾವುದೇ ನ್ಯಾಯಾಧೀಶರು ವಿವೇಚನೆಯನ್ನು ನಿರ್ಬಂಧಿಸುವ ಕ್ಲಿಷ್ಟಕರ ವಿಭಾಗಗಳಲ್ಲಿ ಇರಿಸಲಾಗುವುದಿಲ್ಲ ಎಂದು ನ್ಯಾಯಾಲಯವು ಗಮನಿಸಿರುತ್ತದೆ:

> "163. ..... ಈಗ, 235 (2) ನೇ ಪ್ರಕರಣವು ವಿಭಜಿತ ಅಧಿವಿಚಾರಣೆಯನ್ನು ಮತ್ತು ವಿಶೇಷವಾಗಿ ಆರೋಪಿಗೆ ಶಿಕ್ಷಾ-ಪೂರ್ವ ವಿಚಾರಣೆಯ ಹಕ್ಕನ್ನು ಒದಗಿಸುತ್ತದೆ ಮತ್ತು ಆ ಹಂತದಲ್ಲಿ ವಿಚಾರಣೆಯಲ್ಲಿರುವ ನಿರ್ದಿಷ್ಟ ಅಪರಾಧದೊಂದಿಗೆ ಕಟ್ಟುನಿಟ್ಟಾದ ಸಂಬಂಧ ಅಥವಾ ಸಂಪರ್ಕವನ್ನು ಹೊಂದಿದ್ದರೂ ಆತನು ವಸ್ತು ಅಥವಾ ಸಾಕ್ಷ್ಯವನ್ನು ದಾಖಲೆಯಲ್ಲಿ ತರಬಹುದು; ಆದರೆ ಅದೇನೆ ಇದ್ದರೂ 354 (3) ನೇ ಪ್ರಕರಣದ ಅಡಿಯಲ್ಲಿ ಒತ್ತು ಕೊಡಲಾದ ನೀತಿಯೊಂದಿಗೆ ಸ್ಥಿರವಾಗಿರುತ್ತದೆ ಮತ್ತು ಶಿಕ್ಷೆಯ ಆಯ್ಕೆಗೆ ಸಂಬಂಧಿಸಿರುತ್ತದೆ. ದಂಡ ಸಂಹಿತೆಯ 302 ನೇ ಪ್ರಕರಣದಲ್ಲಿರುವುದನ್ನು ಒಳಗೊಂಡಂತೆ ವಿವಿಧ ಅಪರಾಧಗಳಿಗೆ ಶಿಕ್ಷೆಯ ಮಟ್ಟವನ್ನು ನಿಗದಿಪಡಿಸುವಾಗ ಅಥವಾ ಶಿಕ್ಷೆಯ ಆಯ್ಕೆಯನ್ನು ಮಾಡುವಾಗ ನ್ಯಾಯಾಲಯವು ತನ್ನ ಪರಿಗಣನೆಯನ್ನು "ಪ್ರಧಾನವಾಗಿ" ಅಥವಾ ಕೇವಲ ನಿರ್ದಿಷ್ಟ ಅಪರಾಧಕ್ಕೆ ಸಂಬಂಧಿಸಿದ ಸಂದರ್ಭಗಳಿಗೆ ಸೀಮಿತಗೊಳಿಸಬಾರದು ಆದರೆ ಅಪರಾಧಿಯ ಸಂದರ್ಭಗಳಿಗೂ ಸರಿಯಾದ ಪರಿಗಣನೆಯನ್ನು ನೀಡಬೇಕು ಎಂಬುದು 235 (2) ನೇ ಪ್ರಕರಣದ ಜೊತೆಗೆ ಓದಲಾದ 354 (3) ನೇ ಪ್ರಕರಣದಿಂದ ಗ್ರಹಿಸಬಹುದಾದ ಪ್ರಸ್ತುತ ಶಾಸಕಾಂಗ ನೀತಿಯಾಗಿರುತ್ತದೆ.
>
> 201. 354 (3) ಮತ್ತು 235 (2) ನೇ ಪ್ರಕರಣವ ಮತ್ತು 1973 ರ ಸಂಹಿತೆಯ ಇತರ ಸಂಬಂಧಿತ ನಿಬಂಧನೆಗಳ ಅಧ್ಯಯನದಿಂದ, ಶಿಕ್ಷೆಯನ್ನು ಆಯ್ಕೆಮಾಡಲು ಅಥವಾ ಆ ಸಂದರ್ಭದಲ್ಲಿ ''ವಿಶೇಷ ಕಾರಣಗಳ'' ಉಪಸ್ಥಿತಿ ಅಥವಾ ಅನುಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು, ನ್ಯಾಯಾಲಯವು ಅಪರಾಧ ಮತ್ತು ಅಪರಾಧಿ ಎರಡಕ್ಕೂ ಸಮಾನವಾದ ಗೌರವವನ್ನು ನೀಡಬೇಕು ಎಂಬುದು ನಮಗೆ ಸ್ಪಷ್ಟವಾಗಿರುತ್ತದೆ. ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಅಂಶಗಳಿಗೆ ಯಾವ ರೀತಿಯ ತುಲನಾತ್ಮಕ ಮೌಲ್ಯವನ್ನು ನೀಡಬೇಕು ಎಂಬುದು ನಿರ್ದಿಷ್ಟ ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳನ್ನು ಅವಲಂಬಿಸಿರುತ್ತದೆ. ಹೆಚ್ಚಿನ ಸಂದರ್ಭದಲ್ಲಿ, ಈ ಎರಡೂ ಅಂಶಗಳು ಒಂದಕ್ಕೊಂದು ಹೆಣೆದುಕೊಂಡಿದ್ದು, ಅವುಗಳಲ್ಲಿ ಪ್ರತಿಯೊಂದನ್ನೂ ಪ್ರತ್ಯೇಕವಾಗಿ ಪರಿಗಣಿಸಲು ಕಷ್ಟವಾಗುತ್ತದೆ. ಇದಕ್ಕೆ ಕಾರಣ "ಒಬ್ಬರ ಆಯ್ಕೆಯ ಶೈಲಿಯು ಒಬ್ಬರ ಅಗತ್ಯ

ಗುಣಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ". ಅನೇಕ ಸಂದರ್ಭಗಳಲ್ಲಿ ಕೊಲೆ ಮಾಡಿದಂತಹ ಅತ್ಯಂತ ಕ್ರೂರ ಅಥವಾ ಮೃಘೀಯ ವಿದಾನವು ಸ್ವತಃ ಅಪರಾಧಿಯ ಭ್ರಷ್ಟ ಸ್ವಭಾವದ ಪ್ರದರ್ಶಿತ ಸೂಚ್ಯಂಕವಾಗಿರುತ್ತದೆ. ಆದುದರಿಂದ ಎರಡು ಪ್ರತ್ಯೇಕ ಕ್ಲಿಷ್ಟಕರ ಸನ್ನಿವೇಶಗಳಲ್ಲಿ, ಅಪರಾಧದ ಸಂದರ್ಭಗಳು ಮತ್ತು ಅಪರಾಧೀಯ ಸಂದರ್ಭಗಳನ್ನು ಪರಿಗಣಿಸುವುದು ಅಪೇಕ್ಷಣೀಯವಲ್ಲ, ಒಂದರ್ಥದಲ್ಲಿ, ಕೊಲ್ಲುವುದು ಕ್ರೂರ ಮತ್ತು ಆದ್ದರಿಂದ ಎಲ್ಲಾ ಕೊಲೆಗಳು ಕ್ರೂರವಾಗಿರುತ್ತದೆ. ಆದರೆ ಅಂತಹ ಕ್ರೌರ್ಯವು ಅದರ ಅಪರಾಧದ ಮಟ್ಟದಲ್ಲಿ ಬದಲಾಗಬಹುದು. ಅಪರಾಧವು ತೀವ್ರ ದುರಾಚಾರದ ಪ್ರಮಾಣವನ್ನು ಊಹಿಸಿಕೊಂಡಾಗ ಮಾತ್ರ "ವಿಶೇಷ ಕಾರಣಗಳು" ಕಾನೂನು ಬದ್ದವಾಗಿ ಉಪಸ್ಥಿತಿಯಲ್ಲಿರುತ್ತದೆ ಎಂದು ಹೇಳಬಹುದು".

ಪರಿಸ್ಥಿತಿಯನ್ನು ಉಲ್ಬಣಗೊಳಿಸಲು ಮತ್ತು *ಉಪಶಮನಗೊಳಿಸಲು*[91] ಸಹಾಯಕವಾದ ಅಂಶಗಳ ಪಟ್ಟಿಯನ್ನೂ ಸಹ ನ್ಯಾಯಾಲಯವು ಅಂಗೀಕರಿಸಿರುತ್ತದೆ. ಆದಾಗ್ಯೂ, ಅವುಗಳನ್ನು ಸಮಗ್ರವಾಗಿ ಪರಿಗಣಿಸದಂತೆ ನ್ಯಾಯಾಲಯಕ್ಕೆ ಎಚ್ಚರಿಕೆ ನೀಡಿ, ನ್ಯಾಯಾಲಯವು ಅವು ಕೇವಲ ಸೂಚಕವಾಗಿವೆ ಮತ್ತು ಆ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು, ಮಾನವ ಜೀವನದ ಘನತೆಗೆ ಅನುಗುಣವಾಗಿ "ಉದಾರ ಮತ್ತು ವಿಸ್ತಾರವಾದ" ರೀತಿಯಲ್ಲಿ ಓದಬೇಕು ಎಂದು ಮತ್ತಷ್ಟು ಸ್ಪಷ್ಟಪಡಿಸುತ್ತದೆ.

"209. ಉಲ್ಬಣಗೊಳ್ಳುವಿಕೆಯ ಪ್ರತಿಕೂಲ ಸನ್ನಿವೇಶಗಳು ಇರುವುದರಿಂದ ಸಾದಾ ಶಿಕ್ಷೆ ನೀಡುವುದನ್ನು ಸಮರ್ಥಿಸುವ ಹಲವಾರು ಇತರೆ ಸಂದರ್ಭಗಳಿವೆ. ''ಅಂತಹ ಎಲ್ಲಾ ಸನ್ನಿವೇಶಗಳನ್ನು ನಾವು ನ್ಯಾಯಾಂಗ ಗಣಕಯಂತ್ರದಲ್ಲಿ ಅಳವಡಿಸಲು ಸಾಧ್ಯವಿಲ್ಲ ಏಕೆಂದರೆ ಅವು ಅಪೂರ್ಣ ಮತ್ತು ಏರಿಳಿತದ ಸಮಾಜದಲ್ಲಿ ಜ್ಯೋತಿಷ್ಯದಿಂದ ಅಳೆಯಲಾಗುವುದಿಲ್ಲ''. ಅದೇನೇ ಇದ್ದರೂ, ಮರಣದಂಡನೆಯ ವ್ಯಾಪ್ತಿಯಲ್ಲಿನ ಉಪಶಮನಗೊಳಿಸಲಾದ ಅಂಶಗಳ ವ್ಯಾಪ್ತಿ ಮತ್ತು ಪರಿಕಲ್ಪನೆಯು, 354 (3)ನೇ ಪ್ರಕರಣದ ಅಡಿಯಲ್ಲಿ ವ್ಯಾಪಕವಾಗಿ ನಮೂದಿಸಲಾಗಿರುವ ಶಿಕ್ಷೆಯ ನೀತಿಯೊಂದಿಗೆ ಅನುಗುಣವಾಗಿ ನ್ಯಾಯಾಲಯಗಳಿಂದ ಉದಾರವಾದ ಮತ್ತು ವಿಸ್ತಾರವಾದ ನಿರ್ಣಯವನ್ನು ಪಡೆಯಬೇಕು ಎಂಬುದಕ್ಕೆ ಹೆಚ್ಚಾಗಿ

91. ಬಚನ್ ಸಿಂಗ್ (ಖಂಡಿಕೆ 202 ಮತ್ತು 206)

ಒತ್ತು ನೀಡಲಾಗುವುದಿಲ್ಲ. ನ್ಯಾಯಾಧೀಶರು ಎಂದಿಗೂ ಘಾತಕರಾಗಿರತಕ್ಕದ್ದಲ್ಲ. ಕೊಲೆಗಾರರನ್ನು ನೇಣಿಗೇರಿಸುವುದು ಅವರಿಗೆ ಎಂದಿಗೂ ಒಳ್ಳೆಯದಲ್ಲ. ಭಾರತ ಒಕ್ಕೂಟದಿಂದ ಒದಗಿಸಲ್ಪಟ್ಟಿರುವ ಸಂಗತಿಗಳು ಮತ್ತು ಅಂಕಿ ಅಂಶಗಳು ಅಪೂರ್ಣವಾಗಿದ್ದರೂ, ಹಿಂದೆ ನ್ಯಾಯಾಲಯಗಳು ತೀವ್ರತರವಾದ ಘೋರ ದಂಡನೆಯನ್ನು ವಿಧಿಸಿದೆ ಎಂದು ತೋರಿಸುತ್ತದೆ. ಇದು ಗಂಭೀರವಾದ ವಿಷಯದಲ್ಲಿ ಶಿಕ್ಷೆಯನ್ನು ನೀಡುವಲ್ಲಿ ತಮ್ಮ ವಿವೇಚನೆಯನ್ನು ಬಳಸುವಾಗ ಅವರು ಯಾವಾಗಲೂ ಹೊಂದಿರುವ ಎಚ್ಚರಿಕೆ ಮತ್ತು ಸಹಾನುಭೂತಿಯನ್ನು ದೃಢೀಕರಿಸುತ್ತದೆ. ಆದ್ದರಿಂದ, ನಮ್ಮಿಂದ ಸೂಚಿಸಲಾದ ವಿಶಾಲವಾದ ವಿವರಣಾತ್ಮಕ ಮಾರ್ಗದರ್ಶನಗಳ ನೆರವಿನಿಂದ ನ್ಯಾಯಾಲಯಗಳು, 354(3)ನೇ ಪ್ರಕರಣದ ಅಡಿಯಲ್ಲಿ ವಿವರಿಸಿರುವ ಶಾಸಕಾಂಗ ನೀತಿಯ ಉನ್ನತವಾದ ವಿಧಾನದ ಜೊತೆ ನಿರ್ದೇಶಿತವಾದ ಕಠಿಣ ಜವಾಬ್ದಾರಿ ಮತ್ತು ಮಾನವೀಯ ಕಾಳಜಿಯೊಂದಿಗೆ ಕ್ಲಿಷ್ಟಕರವಾದ ಕಾರ್ಯವನ್ನು ನಿರ್ವಹಿಸುತ್ತದೆ ಎಂಬ ಕಾಳಜಿಯನ್ನು ವ್ಯಕ್ತಪಡಿಸುವುದು ಕಡ್ಡಾಯವಾಗಿರುತ್ತದೆ; ಅಂದರೆ ಕೊಲೆಯ ಅಪರಾಧಗಳಿಗೆ ಜೀವಾವಧಿ ಶಿಕ್ಷೆಯು ನಿಯಮವಾಗಿದೆ ಮತ್ತು ಮರಣದಂಡನೆಯು ಇದಕ್ಕೆ ಹೊರತಾಗಿರುತ್ತದೆ. ಮಾನವ ಜೀವನದ ಘನತೆಯ ಬಗ್ಗೆ ನಿಜವಾದ ಮತ್ತು ಶಾಶ್ವತವಾದ ಕಾಳಜಿಯು ಕಾನೂನಿನ ಸಾಧನದ ಮೂಲಕ ಜೀವನವನ್ನು ತೆಗೆದುಕೊಳ್ಳುವ ಪ್ರತಿರೋಧವನ್ನು ಪ್ರತಿಪಾದಿಸುತ್ತದೆ. ಪರ್ಯಾಯ ಆಯ್ಕೆಯನ್ನು ಪ್ರಶ್ನಾತೀತವಾಗಿ ಮುಂದೂಡಲ್ಪಟ್ಟಿರುವಾಗ ವಿರಳದಲ್ಲಿ ಅತ್ಯಂತ ವಿರಳ ಸಂದರ್ಭಗಳನ್ನು ಹೊರತುಪಡಿಸಿ, ಅದನ್ನು ಮಾಡಬಾರದು".

188. *ಮಚ್ಛಿ ಸಿಂಗ್* ಮೊಕದಮ್ಮೆಯಲ್ಲಿ, ಈ ನ್ಯಾಯಾಲಯವು *ಬಚನ್ ಸಿಂಗ್* ಮೊಕದ್ದಮೆಯಲ್ಲಿನ ತತ್ವಗಳನ್ನು ವಿವರಿಸಿದೆ ಮತ್ತು ಅದು ಪುನರಾವರ್ತನೆಗೆ ಅರ್ಹವಾಗಿದೆ:

"38. ಈ ಹಿನ್ನೆಲೆಯಲ್ಲಿ, *ಬಚನ್ ಸಿಂಗ್* ಮೊಕದ್ದಮೆಯಲ್ಲಿ [(1980) 2 ಎಸ್‌ಸಿಸಿ 684 : 1980 ಎಸ್‌ಸಿಸಿ (ಕ್ರಿ) 580: ಎಐಆರ್ 1980 ಎಸ್‌ಸಿ 898 : 1980 ಕ್ರಿ ಎಲ್.ಜೆ 636] ಸೂಚಿಸಲಾದ ಮಾರ್ಗಸೂಚಿಗಳನ್ನು ಹೊರತೆಗೆಯಬೇಕು ಮತ್ತು ಮರಣದಂಡನೆ ವಿಧಿಸುವ ಪ್ರಶ್ನೆ ಉದ್ಭವಿಸುವ ಪ್ರತಿ ವೈಯಕ್ತಿಕ ಮೊಕದ್ದಮೆಯ ಅಂಶಗಳಿಗೆ ಅನ್ವಯಿಸಬೇಕಾಗುತ್ತದೆ. *ಬಚನ್ ಸಿಂಗ್* ಮೊಕದ್ದಮೆಯಿಂದ ಈ ಕೆಳಗಿನ ಪ್ರತಿಪಾದನೆಗಳು ಹೊರಹೊಮ್ಮುತ್ತದೆ [(1980) 2 ಎಸ್‌ಸಿಸಿ 684 : 1980 ಎಸ್‌ಸಿಸಿ (ಕ್ರಿ) 580 : ಎಐಆರ್ 1980 ಎಸ್‌ಸಿ 898 : 1980 ಕ್ರಿ ಎಲ್.ಜೆ 636];

"(i) ತೀವ್ರ ಅಪರಾಧದ ಗಂಭೀರ ಮೊಕದ್ದಮೆಗಳ ಹೊರತು, ಮರಣದಂಡನೆಯನ್ನು ವಿಧಿಸುವ ಅಗತ್ಯವಿಲ್ಲ.

(ii) ಮರಣದಂಡನೆಯನ್ನು ಆಯ್ಕೆ ಮಾಡುವ ಮೊದಲು 'ಅಪರಾಧಿಯ' ಸಂದರ್ಭಗಳನ್ನೂ ಸಹ 'ಅಪರಾಧದ' ಸಂದರ್ಭಗಳೊಂದಿಗೆ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

(iii) ಜೀವಾವಧಿ ಶಿಕ್ಷೆಯು ಒಂದು ನಿಯಮವಾಗಿದೆ ಮತ್ತು ಮರಣದಂಡನೆಯು ಇದಕ್ಕೆ ಹೊರತಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅಪರಾಧ ಸಂಬಂಧಿತ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಜೀವಾವಧಿ ಶಿಕ್ಷೆಯೂ ಅಸಮರ್ಪಕ ಶಿಕ್ಷೆಯಾಗಿ ಕಂಡುಬಂದಾಗ ಮಾತ್ರ ಮರಣದಂಡನೆ ವಿಧಿಸಬೇಕು ಮತ್ತು ಅಪರಾಧ ಸ್ವರೂಪ ಮತ್ತು ಸನ್ನಿವೇಶಗಳನ್ನು ಮತ್ತು ಎಲ್ಲಾ ಸಂಬಂಧಿತ ಸನ್ನಿವೇಶಗಳ ಪರಿಗಣನೆಯಿಂದ ಜೀವಾವಧಿ ಶಿಕ್ಷೆಯನ್ನು ವಿಧಿಸುವ ಆಯ್ಕೆಯು ಆತ್ಮಸಾಕ್ಷಿಯಿಂದ ವಿಧಿಸಲಾಗುವುದಿಲ್ಲ.

(iv) ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳ ವಿವರಣಾ ಪಟ್ಟಿಯನ್ನು ರಚಿಸಬೇಕು ಮತ್ತು ಹಾಗೆ ಮಾಡುವಾಗ ಉಪಶಮನಗೊಳಿಸಲಾದ ಸನ್ನಿವೇಶಗಳಿಗೆ ಸಂಪೂರ್ಣ ಮಾನ್ಯತೆಯನ್ನು ನೀಡಬೇಕು ಮತ್ತು ಆಯ್ಕೆಯಾದದ್ದನ್ನು ವಿಧಿಸುವ ಮೊದಲು ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳ ನಡುವೆ ನ್ಯಾಯಯುತ ಸಮತೋಲನವನ್ನು ಮಾಡಬೇಕು.

39. ಇತರ ವಿಷಯಗಳ ಜೊತೆಗೆ ಈ ಮಾರ್ಗಸೂಚಿಗಳನ್ನು ಅನ್ವಯಿಸಲು ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು ಮತ್ತು ಉತ್ತರಿಸಬಹುದು:

(ಎ) ಜೀವಾವಧಿ ಶಿಕ್ಷೆಯನ್ನು ಅಸಮರ್ಪಕವಾಗಿಸುವ ಮತ್ತು ಮರಣದಂಡನೆಯನ್ನು ವಿಧಿಸಲು ಕೋರುವ ಅಪರಾಧದಲ್ಲಿ ಅಸಾಮಾನ್ಯವಾದದ್ದು ಏನಾದರೂ ಇದೆಯೇ?

(ಬಿ) ಅಪರಾಧದ ಸಂದರ್ಭಗಳು, ಅಪರಾಧಿಯ ಪರವಾಗಿರುವ ಉಪಶಮನಗೊಳಿಸಲಾದ ಸನ್ನಿವೇಶಗಳಿಗೆ ಪ್ರಮುಖವಾದ ಮೌಲ್ಯವನ್ನು ನೀಡಿದ ನಂತರವೂ, ಮರಣದಂಡನೆಯನ್ನು ವಿಧಿಸುವುದನ್ನು ಬಿಟ್ಟರೆ ಬೇರೆ ಯಾವುದೇ ಪರ್ಯಾಯವಿಲ್ಲವೇ?

40. ಮೇಲೆ ಹೇಳಲಾದ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಎಲ್ಲಾ ಸಂದರ್ಭಗಳ ಒಟ್ಟಾರೆ ಜಾಗತಿಕ ದೃಷ್ಟಿಕೋನವನ್ನು ತೆಗೆದುಕೊಂಡರೆ ಮತ್ತು ಇಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಗಳನ್ನು ಗಣನೆಗೆ ತೆಗೆದುಕೊಂಡರೆ, ಮೊಕದ್ದಮೆಯ ಸಂದರ್ಭಗಳು ಮರಣದಂಡನೆಯನ್ನು ಸಮರ್ಥಿಸುತ್ತಿದ್ದರೆ, ನ್ಯಾಯಾಲಯವು ಹಾಗೆ ಮಾಡಲು ಮುಂದುವರಿಯುತ್ತದೆ".

189. *ಮಚ್ಚಿ ಸಿಂಗ್*[92] ಮೊಕದ್ದಮೆಯಲ್ಲಿ, ಅಪರಾಧದ ಉಲ್ಬಣಗೊಳ್ಳುವ ಸನ್ನಿವೇಶವನ್ನು ಸಮರ್ಥವಾಗಿ ವಿಶ್ಲೇಷಿಸುವ ಮೂಲಕ ಈ ನ್ಯಾಯಾಲಯವು ಮೊಕದ್ದಮೆಗಳನ್ನು ಐದು ವಿಭಾಗವಾಗಿ ವರ್ಗೀಕರಿಸಲು (ಅಂದರೆ ಕೊಲೆ ಮಾಡಲಾದ ವಿಧಾನ, ಉದ್ದೇಶ, ಅಪರಾಧದ ಸಾಮಾಜಿಕ ವಿರೋಧಿ ಅಥವಾ ಸಾಮಾಜಿಕವಾಗಿ ತಿರಸ್ಕೃತವಾದ ಸ್ವರೂಪ, ಅಪರಾಧ ಪ್ರಮಾಣ ಮತ್ತು ನೊಂದವರ ವ್ಯಕ್ತಿತ್ವ) ಪ್ರಯತ್ನಿಸಿರುತ್ತದೆ. ಆದಾಗ್ಯೂ, ಈ ವರ್ಗಗಳ ಮೇಲೆ ಔಪಚಾರಿಕ ಅವಲಂಬನೆಯು ಯಾವುದೇ ನ್ಯಾಯಾಲಯವನ್ನು ಅಸ್ತವ್ಯಸ್ತಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ ಏಕೆಂದರೆ ಇದು ಅಪರಾಧಿಗಳಿಂದ ಗಮನವನ್ನು ಬೇರೆಡೆ ಸೆಳೆಯುವ ಮತ್ತು ಅಪರಾಧದ ಮೇಲೆ ಅಸಮಾನವಾಗಿ ಕೇಂದ್ರೀಕರಿಸುವ ಅನಪೇಕ್ಷಿತ ಪರಿಣಾಮವನ್ನು ಹೊಂದಿರುತ್ತದೆ ಮತ್ತು ಈ ನ್ಯಾಯಾಲಯವು *ಸ್ವಾಮಿ ಶ್ರದ್ಧಾನಂದ (2)*[93], *ಸಂಗೀತ್*[94] ಮತ್ತು ಇತ್ತೀಚಿನ *ಮನೋಹರನ್ ವಿರುದ್ಧ ಪೊಲೀಸ್ ಇನ್ಸ್‌ಪೆಕ್ಟರ್ ಮುಖಾಂತರ ರಾಜ್ಯ*[95] ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಸಂಜೀವ್ ಖನ್ನಾ ರವರ ಅಸಮ್ಮಿತವಾದ ಅಭಿಪ್ರಾಯದಲ್ಲಿ, ಈ ಪ್ರಮಾಣೀಕರಣದ ಅಪಾಯವನ್ನು ಗಮನಿಸಿರುತ್ತದೆ.

190. *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಪ್ರಕರಣಗಳ *ವರ್ಗೀಕರಣಗಳ*[96]

92. ಮಚ್ಚಿ ಸಿಂಗ್ (ಖಂಡಿಕೆ 32–37)
93. ಸ್ವಾಮಿ ಶ್ರದ್ಧಾನಂದ (2) @ ಮುರಳ್ ಮನೋಹರ್ ಮಿಶ್ರ ವಿರುದ್ಧ ಕರ್ನಾಟಕ ರಾಜ್ಯ (2008) 13 ಎಸ್‌ಸಿಸಿ 767
94. ಸಂಗೀತ್ ಹಾಗು ಮತ್ತೊಬ್ಬರು ವಿರುದ್ಧ ಹರಿಯಾಣ ರಾಜ್ಯ (2013) 2 ಎಸ್‌ಸಿಸಿ 452
95. ಮನೋಹರನ್ ವಿರುದ್ಧ ಪೊಲೀಸ್ ಇನ್ಸ್‌ಪೆಕ್ಟರ್ ಮುಖಾಂತರ ರಾಜ್ಯ, ವೆರೈಟಿ ಹಾಲ್ ಪೊಲೀಸ್ ಸ್ಟೇಷನ್
96. ಖಂಡಿಕೆ 169–175, 192–195

ವಿರುದ್ಧ ಎಚ್ಚರಿಕೆಯನ್ನು ನೀಡಿರುತ್ತದೆ. ಮಾನದಂಡಗಳು ಮತ್ತು ಮಾರ್ಗಸೂಚಿಗಳನ್ನು ಮಂಡಿಸಬೇಕು ಎಂಬ ವಾದವನ್ನು ತಿರಸ್ಕರಿಸಿ, ಅಪರಾಧದ ಮಟ್ಟವನ್ನು ಅಳೆಯಲಾಗುವುದಿಲ್ಲ ಎಂದು *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಗಮನಿಸಲಾಗಿರುತ್ತದೆ ಮತ್ತು *"ವಿವೇಚನೆಯ ಎಲ್ಲಾ ಸ್ವತಂತ್ರ್ಯ ವೈಖರಿಯನ್ನು"* ಹೊರಗಿಡಲು ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಅಷ್ಟು ಕಠಿಣವಾಗಿ ನಮೂದಿಸಲಾಗುವುದಿಲ್ಲ. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅನಂತ, ಅನಿರೀಕ್ಷಿತ ಮತ್ತು ಆಕಸ್ಮಿಕ ವ್ಯತ್ಯಾಸಗಳಿರುವುದರಿಂದ ಅವುಗಳನ್ನು ವರ್ಗೀಕರಿಸಲು ಸಾಧ್ಯವಿಲ್ಲ ಎಂಬುದನ್ನು ಪುನರುಚ್ಚರಿಸಿದರೂ, ಅಂತಹ ವರ್ಗೀಕರಣದಿಂದ, ಶಿಕ್ಷೆಯ ಪ್ರಕ್ರಿಯೆಯು ನ್ಯಾಯಾಂಗವಾಗಿ ಕೊನೆಗೊಳ್ಳುತ್ತದೆ ಮತ್ತು ಅಂತಹ ಪ್ರಮಾಣೀಕರಣ ಅಥವಾ ಶಿಕ್ಷೆಯ ವಿವೇಚನೆಯು ನ್ಯಾಯಾಲಯದ ಕಾರ್ಯವನ್ನು ಮೀರಿದ್ದಾಗಿರುತ್ತದೆ ಎಂದು ಅಭಿಪ್ರಾಯಪಡಲಾಗಿರುತ್ತದೆ. ಆದ್ದರಿಂದ, *ಮಚ್ಚಿ ಸಿಂಗ್* ಮೊಕದ್ದಮೆಯಲ್ಲಿ ನಮೂದಿಸಲಾದ ಆ ಐದು ಅಪರಾಧ ವರ್ಗಗಳ ಮೇಲೆ (ಇದು ಉಲ್ಬಣಗೊಳ್ಳುವ ಸಂದರ್ಭಗಳಿಗೆ ಅನಗತ್ಯ ಒತ್ತು ನೀಡುತ್ತದೆ) ಮಾತ್ರ ಅವಲಂಬಿಸದೆ, ಬದಲಿಗೆ ಎರಡು ಪ್ರಯೋಗದ ಪ್ರಶ್ನೆ ಮತ್ತು *ಮಚ್ಚಿ ಸಿಂಗ್* ಮೊಕದ್ದಮೆಯಲ್ಲಿ ಸಂಕ್ಷಿಪ್ತವಾಗಿ ಹೊರತೆಗೆದ *ಬಚನ್ ಸಿಂಗ್* ಮೊಕದ್ದಮೆಯ ನಾಲ್ಕು ಮಾರ್ಗಸೂಚಿ ನೀತಿಗಳ ಮೇಲೆ ಅವಲಂಬಿಸುವುದು ಯೋಗ್ಯವಾಗಿರುತ್ತದೆ.

191. ನಂತರದ ದಶಕಗಳಲ್ಲಿ, ಈ ನ್ಯಾಯಾಲಯವು ನೀಡಿದ ಹಲವಾರು ತೀರ್ಪಿನಲ್ಲಿ, *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಹೇಳಲಾದ 'ವಿರಳದಲ್ಲಿ ಅತ್ಯಂತ ವಿರಳ' ಪ್ರಯೋಗದ ಅನ್ವಯದಲ್ಲಿನ ಅಸಂಗತತೆಯ ಬಗ್ಗೆ ನ್ಯಾಯಾಂಗದ ಸೂಚನೆಯನ್ನು ನಿರಂತರವಾಗಿ ತೆಗೆದುಕೊಂಡಿರುತ್ತದೆ ಮತ್ತು ಆದ್ದರಿಂದ, ಅದೇ ನೀತಿಯನ್ನು ಉಪಯೋಗಿಸಿ ಬಲಪಡಿಸುವ ಪ್ರಯತ್ನದಲ್ಲಿ ಮರಣದಂಡನೆ ವಿಧಿಸುವುದನ್ನು ನಿರ್ಬಂಧಿಸಲು ಪ್ರಯತ್ನಿಸಿರುತ್ತದೆ.

192. ಈ ಅಂಶದ ಬಗ್ಗೆ *ಸಂತೋಷ್ ಬಾರಿಯಾರ್* ಮೊಕದ್ದಮೆಯಲ್ಲಿ ವ್ಯಾಪಕವಾಗಿ ವ್ಯವಹರಿಸಿದ್ದು; ಮೊಕದ್ದಮೆಯು ಮರಣದಂಡನೆಗೆ ಅರ್ಹವಾಗಿದೆ ಎಂದು ನಿರ್ಧರಿಸಲು ನ್ಯಾಯಾಲಯವು ಈ ಪ್ರಯೋಗದ ಎರಡು-ಹಂತದ ಪ್ರಕ್ರಿಯೆಯನ್ನು ಹೊಂದಿರಬೇಕು ಎಂದು ಸ್ಪಷ್ಟವಾಗಿ ಹೇಳುತ್ತದೆ ಮತ್ತು ಮೊದಲನೆಯದಾಗಿ, ಮೊಕದ್ದಮೆಯು 'ವಿರಳದಲ್ಲಿ ಅತ್ಯಂತ ವಿರಳ' ವರ್ಗಕ್ಕೆ ಸೇರಿದೆ ಮತ್ತು ಎರಡನೆಯದಾಗಿ, ಜೀವಾವಧಿ ಶಿಕ್ಷೆಯ ಆಯ್ಕೆಯು ಸಮರ್ಥವಾಗಿರುವುದಿಲ್ಲ ಎಂಬ ಎರಡು ಹಂತದ ಪ್ರಕ್ರಿಯೆಯನ್ನು ಹೊಂದಿರಬೇಕಿರುತ್ತದೆ. ಮೊದಲ ಪ್ರಯೋಗಕ್ಕಾಗಿ, ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಗುರುತಿಸಬೇಕು ಮತ್ತು ಸಮಾನವಾಗಿ ಪರಿಗಣಿಸಬೇಕು. ಎರಡನೆಯ ಪ್ರಯೋಗಕ್ಕಾಗಿ, ಸುಧಾರಣೆಗಾಗಿ ಶಿಕ್ಷೆಯನ್ನು ವಿಧಿಸಲಾಗಿದ್ದು ಅದರ ಗುರಿಯನ್ನು ಸಾಧಿಸಲಾಗದ ಕಾರಣ ಜೀವಾವಧಿ ಶಿಕ್ಷೆಯ ಪರ್ಯಾಯವನ್ನು ಪ್ರಶ್ನಾತೀತವಾಗಿ ಪ್ರತಿಬಂಧಿಸಲಾಗಿದೆಯೇ ಎಂದು ನ್ಯಾಯಾಲಯವು ಪರಿಗಣಿಸಬೇಕಾಗಿರುತ್ತದೆ ಮತ್ತು ಇದಕ್ಕಾಗಿ ರಾಜ್ಯವು ಸಾಕ್ಷ್ಯವನ್ನು ಒದಗಿಸಬೇಕು.

193. ಸುಮಾರು ನಾಲ್ಕು ವರ್ಷಗಳ ನಂತರ *ಸಂಗೀತ್*[97] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅಪರಾಧಿಯ ಸಂದರ್ಭಗಳಿಗೆ ನೀಡಲಾದ ಗಮನದ ಕೊರತೆಯ ಬಗ್ಗೆ ವಿಷಾದಿಸಿರುತ್ತದೆ ಹಾಗು ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳ ಸಮತೋಲನದ ಬಗ್ಗೆ ಪುನರುಚ್ಚರಿಸಿರುತ್ತದೆ ಮತ್ತು *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಶಿಕ್ಷೆಯ ಚೌಕಟ್ಟನ್ನು ಏಕರೂಪವಾಗಿ ಅನ್ವಯಿಸುವಲ್ಲಿನ ವಿಫಲತೆಯು ನ್ಯಾಯಾಧೀಶ-ಕೇಂದ್ರೀಕರಣಕ್ಕೆ ಮತ್ತು ಮರಣದಂಡನೆಯ ವಿಷಯಗಳಲ್ಲಿ ಅಸಮಂಜಸವಾದ ನ್ಯಾಯ ಶಾಸ್ತ್ರಕ್ಕೆ ಕಾರಣವಾಗಿರುತ್ತದೆ.

97. ಸಂಗೀತ್ ಹಾಗು ಮತ್ತೊಬ್ಬರು ವಿರುದ್ಧ ಹರಿಯಾಣ ರಾಜ್ಯ (2013) 2 ಎಸ್‌ಸಿಸಿ 452

194. *ಶಂಕರ್ ಕೃಷ್ಣರಾವ್* ಖಾಡೆ[98] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು 'ಅಪರಾಧ ಪರೀಕ್ಷೆ', 'ಅಪರಾಧಿಯ ಪರೀಕ್ಷೆ' ಮತ್ತು 'ವಿರಳದಲ್ಲಿ ಅತ್ಯಂತ ವಿರಳದ ಪರೀಕ್ಷೆ'ಯ ಮತ್ತೊಂದು ಚೌಕಟ್ಟನ್ನು ಅಭಿವೃದ್ಧಿಪಡಿಸಿರುತ್ತದೆ (ಇದು *ಸಂತೋಷ್ ಬಾರಿಯರ್* ಮೊಕದ್ದಮೆಯಲ್ಲಿ ಮತ್ತು ನಂತರದ *ಸಂಗೀತ್* ಮೊಕದ್ದಮೆಯಲ್ಲಿಯೂ ಸಹ ವಿರೋಧಿಸಲಾದ 'ಸಮತೋಲನ ಪರೀಕ್ಷೆ'ಗಿಂತ ಭಿನ್ನವಾಗಿದೆ):

> "52. ನನ್ನ ಅಭಿಪ್ರಾಯದಲ್ಲಿ, ಮರಣದಂಡನೆಯನ್ನು ವಿಧಿಸುವಾಗ ನಾವು 'ಅಪರಾಧ ಪರೀಕ್ಷೆ' 'ಅಪರಾಧಿಯ ಪರೀಕ್ಷೆ' ಮತ್ತು 'ವಿರಳದಲ್ಲಿ ಅತ್ಯಂತ ವಿರಳದ ಪರೀಕ್ಷೆ' ಗಳನ್ನು ಅನ್ವಯಿಸಬೇಕು ಮತ್ತು 'ಸಮತೋಲನ ಪರೀಕ್ಷೆ'ಯನ್ನು ಅಲ್ಲ. ಮರಣದಂಡನೆಯನ್ನು ವಿಧಿಸಲು 'ಅಪರಾಧ ಪರೀಕ್ಷೆಯು' ಸಂಪೂರ್ಣವಾಗಿ ತೃಪ್ತಿದಾಯಕವಾಗಿರಬೇಕು ಅಂದರೆ 100% ಮತ್ತು 'ಅಪರಾಧಿಯ ಪರೀಕ್ಷೆಯು' 0%, ಅಂದರೆ ಯಾವ ಉಪಶಮನಗೊಳಿಸಲಾದ ಸನ್ನಿವೇಶಗಳು ಆರೋಪಿಗೆ ಅನುಕೂಲವಾಗಿರಬಾರದು. ಅಪರಾಧ ಮಾಡುವ ಉದ್ದೇಶದ ಕೊರತೆ, ಸುಧಾರಣೆಯ ಸಾಧ್ಯತೆ, ಆರೋಪಿಯ ಚಿಕ್ಕ ವಯಸ್ಸು, ಸಮಾಜಕ್ಕೆ ಅಪಾಯವಾಗದಿರುವುದು, ಹಿಂದಿನ ಅಪರಾಧದ ಯಾವ ಇತಿಹಾಸವಿಲ್ಲದಿರುವುದು ಇತ್ಯಾದಿಯಂತಹ ಯಾವುದಾದರೂ ಸನ್ನಿವೇಶವು ಆರೋಪಿಗೆ ಅನುಕೂಲಕರವಾಗಿದ್ದರೆ, ಮರಣದಂಡನೆಯಿಂದ ಆರೋಪಿಯನ್ನು ತಪ್ಪಿಸಲು 'ಅಪರಾಧಿಯ ಪರೀಕ್ಷೆಯು' ಆತನಿಗೆ ಅನುಕೂಲಕರವಾಗಬಹುದು. ಎರಡೂ ಪರೀಕ್ಷೆಗಳು ತೃಪ್ತಿಕರವಾಗಿದ್ದರೂ ಸಹ, ಅಂದರೆ ಉಲ್ಬಣಗೊಳ್ಳುವ ಸನ್ನಿವೇಶಗಳು ಪೂರ್ಣ ಪ್ರಮಾಣದಲ್ಲಿ ಮತ್ತು ಯಾವುದೇ ಉಪಶಮನಗೊಳಿಸಬಹುದಾದ ಸನ್ನಿವೇಶಗಳು ಆರೋಪಿಗೆ ಅನುಕೂಲಕರವಾಗಿರದಿದ್ದರೆ, ನಾವು ಅಂತಿಮವಾಗಿ 'ವಿರಳದಲ್ಲಿ ಅತ್ಯಂತ ವಿರಳದ' (ಆರ್.ಆರ್, ಪರೀಕ್ಷೆ) ಪರೀಕ್ಷೆಯನ್ನು ಅನ್ವಯಿಸಬೇಕಿರುತ್ತದೆ. ಆರ್.ಆರ್ ಪರೀಕ್ಷೆಯು ಸಮಾಜದ ಅರಿವನ್ನು ಅವಲಂಬಿಸಿರುತ್ತದೆ ಅಂದರೆ ಅದು 'ಸಮಾಜ–ಕೇಂದ್ರಿತ'ವಾಗಿರುತ್ತದೆ ಮತ್ತು 'ನ್ಯಾಯಾಧೀಶ–ಕೇಂದ್ರಿತ'ವಾಗಿರುವುದಿಲ್ಲ ಅಂದರೆ ಸಮಾಜವು ಕೆಲವು ರೀತಿಯ ಅಪರಾಧಗಳಿಗೆ ಮರಣದಂಡನೆಯನ್ನು ವಿಧಿಸುವುದನ್ನು ಅನುಮೋದಿಸುತ್ತದೆಯೇ ಅಥವಾ ಇಲ್ಲವೇ

98. ಶಂಕರ್ ಕೃಷ್ಣರಾವ್ ಖಾಡೆ ವಿರುದ್ಧ ಮಹಾರಾಷ್ಟ್ರ (2013) 5 ಎಸ್‌ಸಿಸಿ 546

ಎಂಬುದನ್ನು ಅವಲಂಬಿಸಿರುತ್ತದೆ. ಈ ಪರೀಕ್ಷೆಯನ್ನು ಅನ್ವಯಿಸುವಾಗ, ನ್ಯಾಯಾಲಯವು ಸಮಾಜದ ಜಿಗುಪ್ಸೆ, ತೀವ್ರ ಆಕ್ರೋಶ ಮತ್ತು ವೈರತ್ವದಂತಹ ವಿವಿಧ ಅಂಶಗಳನ್ನು ಗಮನಿಸಬೇಕು ಮತ್ತು ಲೈಂಗಿಕ ದೌರ್ಜನ್ಯ, ದೈಹಿಕ ಅಸಾಮರ್ಥ್ಯದಿಂದ ಬಳಲುತ್ತಿರುವ ಬುದ್ಧಿಮಾಂದ್ಯ ಅಪ್ರಾಪ್ತ ಬಾಲಕಿಯರ ಹತ್ಯೆ ಮತ್ತು ಅಂತಹ ನ್ಯೂನ್ಯತೆಗಳನ್ನು ಹೊಂದಿರುವ ವೃದ್ಧರು ಮತ್ತು ಅಶಕ್ತ ಮಹಿಳೆಯರು ಇತ್ಯಾದಿಯಂತಹ ಹಲವು ರೀತಿಯ ಅಪರಾಧಗಳಿಗೆ ವಿರೋಧಾಭಾಸವನ್ನು ಹೊಂದಿರಬೇಕು. ಉದಾಹರಣೆಗಳು ವಿವರಾತ್ಮಕವಾಗಿದೆ ಮತ್ತು ಸಮಗ್ರವಾಗಿರುವುದಿಲ್ಲ. ಸಾಂವಿಧಾನಿಕ ಒತ್ತಾಯದ ಕಾರಣದಿಂದಾಗಿ ನ್ಯಾಯಾಲಯಗಳು ಮರಣದಂಡನೆಯನ್ನು ವಿಧಿಸುತ್ತದೆ ಏಕೆಂದರೆ ಇದು ಜನರ ಇಚ್ಛೆಯಿಂದ ಪ್ರತಿಫಲಿಸುತ್ತದೆಯೇ ಹೊರತು ನ್ಯಾಯಾಧೀಶರ ಇಚ್ಛೆಯಿಂದಲ್ಲ".

195. ಇತ್ತೀಚೆಗೆ ಮರುಪರಿಶೀಲನಾ ಅರ್ಜಿಯನ್ನು ಪರಿಗಣಿಸುವಾಗ, *ರಾಜೇಂದ್ರ ಪ್ರಲ್ಹಾದರಾವ್ ವಾಸ್ನಿಕ್ ವಿರುದ್ಧ ಮಹಾರಾಷ್ಟ್ರ ರಾಜ್ಯ*[99] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಪರೀಕ್ಷೆಯನ್ನು <u>'ಸಂಭವನೀಯತೆ'</u> ಮತ್ತು 'ಅಸಂಭವನೀಯತೆ', ಸುಧಾರಣೆ ಮತ್ತು ಪುರ್ನವಸತಿಯ ಸಾಧ್ಯತೆ ಅಥವಾ ಅಸಾಧ್ಯತೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ[100] 354 (4)ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯಗೊಳಿಸಲು ಉದ್ದೇಶಿಸಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ. ಹಿಂದೆ ಇಂತಹ ಹಲವಾರು ಪೂರ್ವನಿದರ್ಶನವನ್ನು ನ್ಯಾಯಾಲಯವು ವಿಶ್ಲೇಷಿಸಿದೆ ಮತ್ತು ಈ ಕುರಿತು ರಾಜ್ಯದಿಂದ ಒದಗಿಸಲಾದ ಸಾಕ್ಷಾಧಾರಗಳು ವಿರಳವಾಗಿ ಮತ್ತು ಸೀಮಿತವಾಗಿವೆ ಆದರೆ ನ್ಯಾಯಾಲಯಗಳಿಗೆ ಸುಧಾರಣೆ, ಪುರ್ನವಸತಿ ಮತ್ತು ಮರುಸಂಘಟನೆಯ ಸಂಭವನೀಯತೆಯನ್ನು ಅಳೆಯುವ ಅಗತ್ಯವಿರುತ್ತದೆ. ನ್ಯಾಯಾಲಯವು ಈ ಅಗತ್ಯವನ್ನು ಆರೋಪಿಯ ಹಕ್ಕಿನಲ್ಲಿ ನೆಲೆಗೊಳಿಸಿರುತ್ತದೆ, ಅವರು ನಿರ್ದಯರಾಗಿರುವುದನ್ನು ಲೆಕ್ಕಿಸದೆ, ಅವರ ಅಪರಾಧದ ಹೊರತಾಗಿಯೂ ಘನತೆಯ ಜೀವನವನ್ನು ನಡೆಸಲು ಅರ್ಹರಾಗಿರುತ್ತಾರೆ[101]. ಈ ಪ್ರಕ್ರಿಯೆಯು ಸುಲಭವಾಗಿರುವುದಿಲ್ಲ

99. (2019) 12 ಎಸ್‌ಸಿಸಿ 460
100. ಅದರಲ್ಲೇ (ಖಂಡಿಕೆ 45)
101. ಅದರಲ್ಲೇ (ಖಂಡಿಕೆ 47)

ಮತ್ತು ಸಮಾಜದೊಳಗೆ ಮರು ಸಂಘಟನೆಯನ್ನು ಒಳಗೊಂಡಿರುವುದರಿಂದ ಪುರ್ನವಸತಿ ಪ್ರಕ್ರಿಯೆಯು ಸುಲಭವಲ್ಲ ಎಂಬುದನ್ನು ಗಮನಿಸಬೇಕಾಗಿರುತ್ತದೆ. ಕೆಲವು ಮೊಕದ್ದಮೆಗಳಲ್ಲಿ ಇದು ಸಾಧ್ಯವಿಲ್ಲ ಎಂದು ಕಂಡುಬಂದಾಗ, ಅಧಿಕ ಅವಧಿಯ ಜೈಲು ಶಿಕ್ಷೆಯನ್ನು ಅನುಮತಿಸಲಾಗಿದೆ.

ಈ ಚೌಕಟ್ಟಿನ ಅಸಮಾನ ಅನ್ವಯ ಮತ್ತು ಶಿಕ್ಷೆಯಲ್ಲಿ (ಅ)ಸ್ಥಿರತೆ:

196. ಈ ನ್ಯಾಯಾಲಯವು ನಿರ್ಧರಿಸಿದ ಮರಣದಂಡನೆಯ ಮೊಕದ್ದಮೆಗಳ ಒಟ್ಟಾರೆ ವಿಶ್ಲೇಷಣೆಯು ಅದನ್ನು ವಿಧಿಸುವಾಗ ವಾಸ್ತವವಾಗಿ ಯಾವುದೇ ಮಾದರಿಯಿರುವುದಿಲ್ಲ ಎಂಬುದನ್ನು ಪ್ರತಿಬಿಂಬಿಸುತ್ತದೆ. *ಬಚನ್ ಸಿಂಗ್* ಮೊಕದ್ದಮೆಯಲ್ಲಿನ ಚೌಕಟ್ಟನ್ನು ಏಕರೂಪವಲ್ಲದ ಅನ್ವಯದಲ್ಲಿ ನೈಜ ಮತ್ತು ಮಾನ್ಯವಾದ ಕಾಳಜಿಯಿದ್ದರೂ, ಶಿಕ್ಷೆಯನ್ನು ವಿಧಿಸುವಲ್ಲಿನ ವಿವೇಚನೆಯು ಸ್ವತಃ ಆತಂಕಕಾರಿಯಲ್ಲ ಮತ್ತು ಕಾಳಜಿಯನ್ನು ಹೋಗಲಾಡಿಸಬೇಕಾದ ಅಗತ್ಯವಿರುತ್ತದೆ. ಸಾಮಾನ್ಯವಾಗಿ ನ್ಯಾಯಾಧೀಶರು ಅಂಕಿಗಳಿಗಾಗಿ ಪೂರ್ವನಿದರ್ಶನಗಳನ್ನು ನೋಡಬಹುದಾದರೂ, ಆ ಪ್ರಕ್ರಿಯೆ ಇದೇ ರೀತಿಯ ನಿದರ್ಶನಗಳನ್ನು ಹೇಗೆ ನಿಭಾಯಿಸಲಾಗಿದೆ ಎಂಬುದರ ಸೂಚನೆಯನ್ನು ಮಾತ್ರ ನೀಡುತ್ತದೆ ಮತ್ತು ಶಿಕ್ಷೆ ವಿಧಿಸುವುದರಲ್ಲಿ ಸೀಮಿತ ಪಾತ್ರವನ್ನು ಹೊಂದಿರುತ್ತದೆ ಎಂಬುದರ ಸೂಚನೆಯನ್ನು ನೀಡುತ್ತದೆ. ಶಿಕ್ಷೆ ವಿಧಿಸುವಲ್ಲಿ ನ್ಯಾಯಾಲಯಕ್ಕೆ ನೀಡಲಾದ ವಿವೇಚನೆಯು, ನ್ಯಾಯಾಧೀಶ–ಕೇಂದ್ರಿತವಾಗಿರುವುದಿಲ್ಲ ಅಥವಾ ವಿಭಿನ್ನ ತೀರ್ಪುಗಳಿಗೆ ಕಾರಣವಾಗುವುದಿಲ್ಲ, ಆದರೆ ವಾಸ್ತವವಾಗಿ ಪೂರ್ವನಿರ್ಧರಿತ ಮಾದರಿಗಳಿಗೆ ಒಳಗಾಗದೆ, ಅಪರಾಧ ಮತ್ತು ಅಪರಾಧಿಗೆ ಸಂಬಂಧಿಸಿದ ನಿರ್ದಿಷ್ಟ ಅಂಶಗಳ ಸನ್ನಿವೇಶಗಳನ್ನು ಪರಿಗಣಿಸುವ ನಮ್ಯತೆಯನ್ನು ಹೊಂದಲು ಅನುವು ಮಾಡಿಕೊಡುತ್ತದೆ. ಶಿಕ್ಷೆಯನ್ನು ವಿಧಿಸುವುದು ಒಂದು ಗಣಿತದ ಸಮೀಕರಣವಲ್ಲ ಮತ್ತು ಅದನ್ನು ಹಾಗೆ ನೋಡಬಾರದು. ಆರಂಭದಲ್ಲಿ *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಮತ್ತು ನಂತರದಲ್ಲಿ ಇನ್ನೂ ಹಲವಾರು ಮೊಕದ್ದಮೆಗಳಲ್ಲಿ ಇದನ್ನು

ಗುರುತಿಸಲಾಗಿದೆ. *ಸಂತೋಷ್ ಬಾರಿಯರ್* ಮೊಕದ್ದಮೆಯಲ್ಲಿ ಮರಣದಂಡನೆಯನ್ನು ವಿಧಿಸುವಲ್ಲಿ ಸಮಾನತೆಯ ನೀತಿ, ಸರಿಯಾದ ಪ್ರಕ್ರಿಯೆ ಮತ್ತು ಪ್ರಮಾಣಾನುಗುಣತೆಯ ಅವಶ್ಯಕತೆಗಳನ್ನು ವಿಶ್ಲೇಷಿಸುತ್ತಾ, ಮರಣದಂಡನೆಯನ್ನು ಸಮರ್ಥಿಸುವ ಅಪರಾಧ ಮೊಕದ್ದಮೆಗಳ ವರ್ಗೀಕರಣವನ್ನು ಅನ್ವಯಿಸುವ ಬದಲು, ನ್ಯಾಯಾಲಯವು ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು (ಪ್ರಕರಣಾದ್ಯಂತ ಸಮಾನತೆಯನ್ನು ತೆಗೆಯಬೇಕು) ಸಮಾನವಾಗಿ ಪರಿಗಣಿಸಬೇಕಾದ ಅಂಶದ ಮೇಲೆ ಗಮನಹರಿಸಬೇಕು ಮತ್ತು <u>ಮೊಕದ್ದಮೆಯಿಂದ ಮೊಕದ್ದಮೆಗೆ</u>[102] ಆಧಾರದ ಮೇಲೆ ವೈಯಕ್ತಿಕ ಶಿಕ್ಷೆಯನ್ನು ವಿಧಿಸುವ ಹಂತ ತಲುಪಬೇಕು ಎಂದು ಅಭಿಪ್ರಾಯಪಟ್ಟಿರುತ್ತಾರೆ. ಇದನ್ನು ಗಮನಿಸಲಾಗಿದೆ:

> "132. .....ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳ ಗುರುತಿಸುವಿಕೆಯ ನಿಖರತೆಯನ್ನು ಕಡಿಮೆಗೊಳಿಸಬೇಕು. ಸಮಾನತೆ ಕರಾರಿನ ಅಧಿಕಾರವು ಫಲಿತಾಂಶಕ್ಕಿಂತ ಹೆಚ್ಚಾಗಿ ಶಿಕ್ಷೆಯನ್ನು ವಿಧಿಸುವ ಪ್ರಕ್ರಿಯೆಗೆ ಅನ್ವಯಿಸುತ್ತದೆ ಎಂದು ಗಮನಿಸಬೇಕು. <u>ತುಲನಾತ್ಮಕ ಸಮೀಕ್ಷೆಯನ್ನು, ನ್ಯಾಯಾಲಯಗಳಿಗೆ ಲಭ್ಯವಿರುವ ಶಿಕ್ಷೆಯನ್ನು ವಿಧಿಸುವ ವಿವೇಚನೆಯನ್ನು ನಿರ್ದೇಶಿಸಲು ಅಲ್ಲ, ಆದರೆ ವಿವಿಧ ಸಂಬಂಧಿತ ಸಂದರ್ಭಗಳ ಗುರುತಿಸುವಿಕೆಯಲ್ಲಿ ಸ್ಥಿರತೆಯನ್ನು ತರಲು ಕೈಗೊಳ್ಳಬೇಕಾಗುತ್ತದೆ. ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಕಠಿಣ ಕ್ರಮದ ಅಡಿಯಲ್ಲಿ ಪ್ರತ್ಯೇಕವಾಗಿ ಗುರುತಿಸಬೇಕು.</u>
>
> 133. *ಬಚನ್ ಸಿಂಗ್* [(1980)2 ಎಸ್‌ಸಿಸಿ 684 : 1980 ಎಸ್‌ಸಿಸಿ (ಕ್ರಿ) 580] ಮೊಕದ್ದಮೆಯಲ್ಲಿ, ತಾತ್ವಿಕ ಪೂರ್ವನಿದರ್ಶನ ಆಧಾರಿತ ಶಿಕ್ಷೆಯನ್ನು ಕಡ್ಡಾಯಗೊಳಿಸಿದಾಗ, ಉಲ್ಬಣಗೊಳ್ಳುವ ಸನ್ನಿವೇಶಗಳನ್ನು ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲು ಒತ್ತಾಯಿಸುತ್ತದೆ ಮತ್ತು ನಂತರ ಹೋಲಿಸಬಹುದಾದ ಮೊಕದ್ದಮೆಗಳ ರಾಶಿಯಿಂದ ಕಂಡುಬರುವ ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಹೋಲಿಸಬಹುದಾದ ಪ್ರಕ್ರಿಯೆಯು ಅಪವರ್ತನವಾಗುತ್ತದೆ. ನಿರ್ದಿಷ್ಟವಾಗಿ ಉಲ್ಬಣಗೊಳ್ಳದ ಅಥವಾ ಉಪಶಮನಗೊಳಿಸಲಾದ

102. ಸಂತೋಷ್ ಬಾರಿಯಾರ್ (ಖಂಡಿಕೆ 172)

ಸನ್ನಿವೇಶಗಳಿಗೆ ನ್ಯಾಯಾಲಯವು ನೀಡುವ ಮಾನ್ಯತೆಯು ವೈಯಕ್ತಿಕ ಶಿಕ್ಷೆಯ ಹೆಸರಿನಲ್ಲಿ ಮೊಕದ್ದಮೆಯಿಂದ ಮೊಕದ್ದಮೆಗೆ ಬದಲಾಗಬಹುದು, ಆದರೆ ಅದೇ ಸಮಯದಲ್ಲಿ ಮಾನ್ಯತೆಯನ್ನು ಹಂಚಿಕೆ ಮಾಡಲು ಕಾರಣಗಳು ಸಹಾಯಕವಾಗಬಹುದು. ಅಂತಹ ಹೋಲಿಕೆಯು ಅತಿರೇಕವನ್ನು ಸೂಚಿಸಬಹುದು ಮತ್ತು ಭವಿಷ್ಯದಲ್ಲಿ ಅನಿಯಂತ್ರಿತ ಆಕ್ಷೇಪಣೆಗಳನ್ನು ನಿವಾರಿಸಲು ಸಹಕಾರಿಯಾಗಬಹುದು. ಶಿಕ್ಷೆ ವಿಧಿಸುವ ನ್ಯಾಯಾಲಯವು ಜೀವಾವಧಿ ಶಿಕ್ಷೆಯನ್ನು ಆರಿಸಿಕೊಂಡರೆ ಮಾತ್ರ, ಶಿಕ್ಷೆಯ ವಿಚಾರಣೆ, ಮೊಕದ್ದಮೆಗಳ ತುಲನಾತ್ಮಕ ಸಮೀಕ್ಷೆ ಮತ್ತು ಅಂತೆಯೇ ಉಲ್ಬಣಗೊಳ್ಳುವ ಮತ್ತು ಉಪಶಮನಗೊಳಿಸಲಾದ ಸನ್ನಿವೇಶಗಳ ವಿಶ್ಲೇಷಣೆಯನ್ನು ನಿರಾಕರಿಸಬಹುದು.

(ಒತ್ತು ನೀಡಲಾಗಿದೆ)

197. ಪ್ರಾಯಶಃ 'ಪೂರ್ವನಿದರ್ಶನ" ಮತ್ತು 'ಸ್ಥಿರತೆ'ಯ ಸಾಮರ್ಥ್ಯವು, ಶಿಕ್ಷೆಯನ್ನು ವಿಧಿಸುವ ವಿಷಯಕ್ಕೆ ಸಂಬಂಧಿಸಿದಂತೆ, ಅತ್ಯಂತ <u>ಕಡಿಮೆಯಿರುತ್ತದೆ</u> ಮತ್ತು ಅದು ಕಾನೂನು ಬದ್ಧತೆಯ ಮಿತಿಯಲ್ಲಿರುತ್ತದೆ ಮತ್ತು 'ತಾತ್ವಿಕ ಶಿಕ್ಷೆಗೆ' ಕಾರಣವಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಶಿಕ್ಷೆಯನ್ನು ವಿಧಿಸುವುದಕ್ಕೆ ನ್ಯಾಯಾಂಗದ ಅಸಂಗತತೆಯು ಸಂಬಂಧಿಸಿದಾಗ, ಅದು ವಾಸ್ತವಿಕವಾಗಿ ನಕಾರಾತ್ಮಕ್ಕಿಂತ ಹೆಚ್ಚಾಗಿ ಧನಾತ್ಮಕ ಸೂಚಕವಾಗಿರುತ್ತದೆ ಮತ್ತು ಅದು <u>ಇನ್ನೂ 'ತಾತ್ವಿಕ' ಶಿಕ್ಷೆಯನ್ನು ಉತ್ತಮವಾಗಿ ವ್ಯಾಖ್ಯಾನಿಸಲಾದ ಬಾಹ್ಯರೇಖೆಗಳೊಳಗೆ ಇರುತ್ತದೆ.</u> ಮರಣದಂಡನೆಯ ಅಪರಾಧಗಳಲ್ಲಿ ಶಿಕ್ಷೆ ವಿಧಿಸಲು, ವೈಯಕ್ತಿಕವಾಗಿ ಶಿಕ್ಷೆ ವಿಧಿಸಲು ವಿವೇಚನೆಯನ್ನು ಪ್ರೋತ್ಸಾಹಿಸಲಾಗುತ್ತದೆ, ಆದರೆ 'ವಿರಳದಲ್ಲಿ ಅತ್ಯಂತ ವಿರಳ' ತತ್ವದಿಂದ ನಿರ್ಬಂಧಿಸಬೇಕು, ಇದರಲ್ಲಿ ನ್ಯಾಯಾಲಯವು ಅಪರಾಧದ ಉಲ್ಬಣಗೊಳ್ಳುವ ಸನ್ನಿವೇಶ ಮತ್ತು ಅಪರಾಧಿಯ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸುತ್ತದೆ (ಆನಂತರದ 'ಉದಾರವಾದ ಮತ್ತು ವಿಸ್ತಾರವಾದ' ರಚನೆ), ಮತ್ತು ಇದು ಸುಧಾರಣೆಗೆ ಅಸಾಧ್ಯವಾದ[103] ಕಾರಣದಿಂದಾಗಿ ಜೀವಾವಧಿ ಶಿಕ್ಷೆಯ ಆಯ್ಕೆಯನ್ನು ಪ್ರಶ್ನಾತೀತವಾಗಿ ಮುಂದೂಡಲಾಗಿದೆಯೇ ಎಂಬ ಬಗ್ಗೆ ಅವರ ಪರಿಗಣನೆಯನ್ನು ತಿಳಿಸಬೇಕು.

103. ರಾಜೇಂದ್ರ ಪ್ರಹ್ಲಾದ್‌ರಾವ್ ವಾಸ್ನಿಕ್ ವಿರುದ್ಧ ಮಹಾರಾಷ್ಟ್ರ ರಾಜ್ಯ (2019) 12 ಎಸ್‌ಸಿಸಿ 460 ಮೊಕದ್ದೆಮೆಯಲ್ಲಿ 'ಅಸಾಧ್ಯತೆಯ' ಬಗ್ಗೆಯಲ್ಲದೆ 'ಸಂಭವನೀಯತೆ' ಬಗ್ಗೆ ಅಭಿಪ್ರಾಯಪಡಲಾಗಿರುತ್ತದೆ.

198. ಮತ್ತೊಂದೆಡೆ, ಈ ತತ್ವದಿಂದ ವಿಚಲನವು ಅಂದರೆ ಮಾರ್ಗದರ್ಶನವಿಲ್ಲದ ವಿವೇಚನೆಯು ಸ್ಪಷ್ಟವಾಗಿ ಕಳಪೆ ಕಾನೂನಿಗೆ ಕಾರಣವಾಗುತ್ತದೆ. ಉದಾಹರಣೆಗೆ, *ರಾಜೀವ್ ವಿರುದ್ಧ ಹರಿಯಾಣ ರಾಜ್ಯ*[104] (ಇನ್ನುಮುಂದೆ 'ರಾಜೀವ್') ಮೊಕದ್ದಮೆಯಲ್ಲಿ, *ಬಚನ್ ಸಿಂಗ್* ಮೊಕದ್ದಮೆಯಲ್ಲಿ (ಅಪರಾಧ ಮತ್ತು ಅಪರಾಧಿ ಎರಡನ್ನು ಕೇಂದ್ರೀಕರಿಸಿದ) ಈ ಹಿಂದಿನ ಸಾಂವಿಧಾನಿಕ ಪೀಠದ ತೀರ್ಪಿನ ಸಂಪೂರ್ಣ ವಿರುದ್ಧವಾಗಿ ಅಭಿಪ್ರಾಯಪಟ್ಟಿರುತ್ತದೆ; ಅದುವೇ "..... *ಇದು ಅಪರಾಧದ ಸ್ವರೂಪ ಮತ್ತು ಗಂಭೀರತೆ ಆದರೆ ಅಪರಾಧಿಯದ್ದಲ್ಲ, ಮತ್ತು ಕ್ರಿಮಿನಲ್ ಅಧಿವಿಚಾರಣೆಯಲ್ಲಿ ಸೂಕ್ತವಾದ ಶಿಕ್ಷೆಯನ್ನು ಪರಿಗಣಿಸಲು ಪ್ರಸಕ್ತವಾಗಿರುತ್ತದೆ".* ಮುಂದುವರಿದು, ಮೊಕದ್ದಮೆಗಳ ಸರಣಿಗಳು[105] *ರಾಜೀವ* ಮೊಕದ್ದಮೆಯಲ್ಲಿನ ತೀರ್ಪಿನ ಮೇಲೆ ಅವಲಂಬಿಸಿರುತ್ತದೆ (ಈ ನ್ಯಾಯಾಲಯದ ವಿವೇಚನೆಯ ಅಭಿಪ್ರಾಯದಲ್ಲಿ ದೋಷಯುಕ್ತವಾಗಿರುತ್ತದೆ) ಮತ್ತು ಅಪರಾಧಿಯ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸದೆ, ಮರಣದಂಡನೆಯನ್ನು ವಿಧಿಸಲು ಅಪರಾಧ ಸ್ವರೂಪ ಮತ್ತು ಗಂಭೀರತೆಯು ಸಮರ್ಥವಾಗಿರುತ್ತದೆ ಎಂದು ತೀರ್ಮಾನಿಸಲಾಗಿದೆ. ತರುವಾಯ, ಅಪರಾಧಿಯ ಸನ್ನಿವೇಶಗಳನ್ನು ಪರಿಗಣಿಸದಿದ್ದಕ್ಕಾಗಿ *ಸಂತೋಷ್ ಬಾರಿಯರ್* ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮತ್ತೊಂದು ಪೀಠವು *ರಾಜೀವ್* ಮೊಕದ್ದಮೆಯಲ್ಲಿನ ನಿರ್ಧಾರವನ್ನು ಸ್ಪಷ್ಟವಾಗಿ ಅಜಾಗರೂಕತೆಯ ನಿರ್ಧಾರವೆಂದು ಘೋಷಿಸಿರುತ್ತದೆ. ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸುವ ಅಗತ್ಯವನ್ನು ನಿರಾಕರಿಸುವುದರಿಂದ ಅಥವಾ ತೆಗೆದುಹಾಕುವುದರಿಂದ ಅಪರಾಧದ ಕೃತ್ಯದ ಮೇಲೆ ಕೇಂದ್ರೀಕರಿಸಿದ ಇತರ ಮೊಕದ್ದಮೆಗಳು ಅದೇ ರೀತಿಯ ಕೆಟ್ಟ ಪೂರ್ವನಿದರ್ಶನವನ್ನು ನೀಡುತ್ತದೆ.

104. (1996) ಎಸ್‌ಸಿಸಿ 2 175.

105. ಸೂರಜ್ ರಾಮ್ ವಿರುದ್ಧ ರಾಜಸ್ಥಾನ ರಾಜ್ಯ (1996) 6 ಎಸ್‌ಸಿಸಿ 271; ದಯಾನಿಧಿ ಬಿಸೋಯಿ ವಿರುದ್ಧ ಒರಿಸ್ಸಾ ರಾಜ್ಯ (2003) 9 ಎಸ್‌ಸಿಸಿ 310; ಮೋಹನ್ ಅಣ್ಣ ಚವನ್ ವಿರುದ್ಧ ಮಹಾರಾಷ್ಟ್ರ ರಾಜ್ಯ, (2008) 7 ಎಸ್‌ಸಿಸಿ 561; ಬಂಟು ವಿರುದ್ಧ ಉತ್ತರ ಪ್ರದೇಶ ರಾಜ್ಯ, (2008) 11 ಎಸ್‌ಸಿಸಿ 113; ಶಿವಾಜಿ ವಿರುದ್ಧ ಮಹಾರಾಷ್ಟ್ರ ರಾಜ್ಯ, (2008) 15 ಎಸ್‌ಸಿಸಿ 268; ಉತ್ತರ ಪ್ರದೇಶ ರಾಜ್ಯ ವಿರುದ್ಧ ಸತ್ತಾನ್ @ ಸತ್ಯೇಂದ್ರ ಮತ್ತು ಇತರರು, (2009) 4 ಎಸ್‌ಸಿಸಿ 736; ಇತ್ಯಾದಿ.

199. ಈ ನ್ಯಾಯಾಲಯವು *ರಾಜೇಶ್ ಕುಮಾರ್ ವಿರುದ್ಧ ರಾಜ್ಯ*[106] ಮೊಕದ್ದಮೆಯಲ್ಲಿ, ಮರಣದಂಡನೆಯನ್ನು ವಿಧಿಸಲು ಕ್ರೌರ್ಯವು ಮಾತ್ರವೇ ಸಮರ್ಥವಾಗಿರುವುದಿಲ್ಲ ಎಂಬುದನ್ನು ಮತ್ತೊಮ್ಮೆ ಪುನರುಚ್ಚರಿಸಲಾಗಿದ್ದು– ಆರೋಪಿಯು ಎರಡು ಮಕ್ಕಳ ಹತ್ಯೆ ಮಾಡಿದ್ದಕ್ಕಾಗಿ ಶಿಕ್ಷಿಸಲಾಗಿದ್ದು, ಆತನು ಮಾಡಿದ ಕ್ರೂರ ಮತ್ತು ಅಮಾನವೀಯ ಶೈಲಿಗೆ ಯಾವುದೇ ಪ್ರಚೋದನೆ ಅಥವಾ ಪ್ರತಿರೋಧವನ್ನು ಇಬ್ಬರು ಮಕ್ಕಳು ನೀಡಿರುವುದಿಲ್ಲ, ಆದಾಗ್ಯೂ ಅಪರಾಧಿಯ ಉಪಶಮನಗೊಳಿಸಲಾದ ಸನ್ನಿವೇಶಗಳಿಗೆ ಯೋಗ್ಯವಾದ ಪರಿಗಣನೆಯನ್ನು ನೀಡಬೇಕು ಎಂದು ಅಭಿಪ್ರಾಯಪಟ್ಟಿರುತ್ತದೆ. ಸರ್ಕಾರವು, ಆತನು ಸುಧಾರಣೆ ಅಥವಾ ಪುನರ್ವಸತಿಯನ್ನು ಮೀರಿದವನು ಎಂದು ತೋರಿಸುವ ಸಾಕ್ಷ್ಯವನ್ನು ದಾಖಲೆಯಲ್ಲಿ ಇರಿಸಬೇಕಿದ್ದು, ಅದರ ಅನುಪಸ್ಥಿತಿಯೇ ಉಪಶಮನಗೊಳಿಸಲಾದ ಸನ್ನಿವೇಶವಾಗಿರುತ್ತದೆ. ಆತನು ಮೊದಲ ಬಾರಿಗೆ ಅಪರಾಧಿಯಾಗಿರುತ್ತಾನೆ ಮತ್ತು ಆತನಿಗೆ ಕುಟುಂಬವಿದ್ದು ಅದರ ಕಾಳಜಿ ಮಾಡಬೇಕಿರುತ್ತದೆ ಎಂದು ಮಾತ್ರ ಉಚ್ಚ ನ್ಯಾಯಾಲಯವು ಗಮನಿಸಿರುತ್ತದೆ ಆದರೆ ಈ ನ್ಯಾಯಾಲಯವು ಉಪಶಮನಗೊಳಿಸಲಾದ ಸನ್ನಿವೇಶಗಳ ಬಗ್ಗೆ ಬಹಳ ಸಂಕುಚಿತ ಮತ್ತು ಸಮೀಪದೃಷ್ಟಿಯ ದೃಷ್ಟಿಕೋನ ಇರುವುದನ್ನು ಗಮನಿಸಿರುತ್ತದೆ.

200. ಆದ್ದರಿಂದ, ಸುಧಾರಣೆ ಅಥವಾ ಪುನರ್ವಸತಿಯನ್ನು ಸಾಧಿಸಬಹುದೇ (*ರಾಜೇಂದ್ರ ಪ್ರಲ್ಹಾದ್‌ರಾವ್ ವಾಸ್ನಿಕ್* ಮೊಕದ್ದಮೆಯಲ್ಲಿ *'ಸಂಭವನೀಯ'* ಎಂದು ಪರಿಗಣಿಸಲಾಗಿದೆ) ಎಂಬುವುದನ್ನು ಪರಿಗಣಿಸುವುದರೊಂದಿಗೆ 'ವೈಯಕ್ತಿಕವಾದ ತಾತ್ವಿಕ ಶಿಕ್ಷೆಯು' ಅಪರಾಧ ಮತ್ತು ಅಪರಾಧಿಯ ಮೇಲೆ ಆಧರಿಸಿರುತ್ತದೆ ಮತ್ತು ಪರಿಣಾಮವಾಗಿ, ಜೀವಾವಧಿ ಶಿಕ್ಷೆಯ ಆಯ್ಕೆಯು ಪ್ರಶ್ನಾತೀತವಾಗಿ ಪ್ರತಿಬಂಧಿಸಲಾಗಿದೆಯೇ ಎಂಬುದು ಮರಣದಂಡನೆ ಅಪರಾಧಗಳಿಗೆ ಸಂಬಂಧಿಸಿದ ನಿರ್ಧಾರಗಳಿಂದ ಗ್ರಹಿಸಬಹುದಾದ 'ಸಾಮಾನ್ಯತೆಯ' ಏಕೈಕ ಅಂಶವಾಗಿರಬೇಕು. *ಸ್ವಾಮಿ ಶ್ರದ್ಧಾನಂದ (2)*[107] ಮೊಕದ್ದಮೆಯಲ್ಲಿ ಹೊಸ ಶಿಕ್ಷೆಯ ಮಿತಿಯನ್ನು

106. ರಾಜೇಶ್ ಕುಮಾರ್ ವಿರುದ್ಧ ರಾಜ್ಯ, (2011) 13 ಎಸ್‌ಸಿಸಿ 706 (ಖಂಡಿಕೆ 74)
107. ಸ್ವಾಮಿ ಶ್ರದ್ಧಾನಂದ (2) ವಿರುದ್ಧ ಕರ್ನಾಟಕ ರಾಜ್ಯ (2008) 13 ಎಸ್‌ಸಿಸಿ 767

ರಚಿಸುವುದರೊಂದಿಗೆ ಮತ್ತು ಶಾಸನಬದ್ಧ ವಿನಾಯಿತಿ ಇಲ್ಲದ ಜೀವಾವಧಿ ಶಿಕ್ಷೆಯನ್ನು (ಅಂದರೆ ಸಂವಿಧಾನದ ಅನುಚ್ಛೇದ 72 ಮತ್ತು 161 ಇನ್ನೂ ಅನ್ವಯಿಸುತ್ತದೆ) *ಯೂನಿಯನ್ ಆಫ್ ಇಂಡಿಯಾ ವಿರುದ್ಧ ವಿ.ಶ್ರೀಹರನ್*[108] ಮೊಕದ್ದಮೆಯಲ್ಲಿ ಸಂವಿಧಾನ ಪೀಠವು ನಂತರ ದೃಢೀಕರಿಸಿದ್ದು, ಮರಣದಂಡನೆಯನ್ನು ವಿಧಿಸುವ ಮೊದಲು ಮತ್ತೊಂದು ಆಯ್ಕೆಯು ಅಸ್ತಿತ್ವದಲ್ಲಿರುತ್ತದೆ. ಆದಾಗ್ಯೂ, ಈ ಪರಿಕಲ್ಪನೆಯ ವಿರುದ್ಧ ಗಂಭೀರ ಕಳವಳವನ್ನು ವ್ಯಕ್ತಪಡಿಸಲಾಗಿದೆ ಏಕೆಂದರೆ ಇದು ಸಂಕುಚಿತ ಬಹುಮತದಿಂದ ಸಮರ್ಥಿಸಲ್ಪಟ್ಟಿದೆ ಮತ್ತು ಸೂಕ್ತ ಸಮಯದಲ್ಲಿ ಪರಿಗಣಿಸುವುದನ್ನು ಬಿಡಲಾಗಿದೆ.

ಶಿಕ್ಷೆಯ ಸಿದ್ಧಾಂತಗಳು:

201. 262ನೇ ವರದಿಯು, ಮರಣದಂಡನೆಯ ದಂಡನಶಾಸ್ತ್ರದ ಸಮರ್ಥನೆಯ ಬಗ್ಗೆ ವ್ಯಾಪಕವಾಗಿ ತಿಳಿಸುತ್ತದೆ. ಜೀವಾವಧಿ ಶಿಕ್ಷೆಗೆ ಹೋಲಿಸಿದರೆ ಈ ರೀತಿಯ ಶಿಕ್ಷೆಯು ಹೆಚ್ಚು ಘೋರವಾದ ಪರಿಣಾಮವನ್ನು ಹೊಂದಿದೆ ಎಂಬುದಕ್ಕೆ ಅನಿರ್ದಿಷ್ಟ ಸಾಕ್ಷ್ಯಗಳಿವೆ ಎಂಬುದನ್ನು ಅದು ಕಂಡುಕೊಳ್ಳುತ್ತದೆ. ಸೂಕ್ತವಾದ ಶಿಕ್ಷೆಯನ್ನು ಪ್ರಮಾಣೀಕರಿಸುವಲ್ಲಿ ಮಾರ್ಗದರ್ಶನದ ಕೊರತೆಯಿಂದ ಬಳಲುತ್ತಿದೆ ಎಂಬ ಆಧಾರದ ಮೇಲೆ ಶಿಕ್ಷೆಯ ಪ್ರತೀಕಾರದ ಸಿದ್ಧಾಂತವನ್ನು ತಳ್ಳಿಹಾಕುತ್ತಾ ಅದು ಸ್ಪಷ್ಟವಾಗಿ ಈ ಕೆಳಗಿನಂತೆ ಹೇಳುತ್ತದೆ:

> "ಮರಣದಂಡನೆಯು ಯಾವುದೇ ಸಾಂವಿಧಾನಿಕವಾಗಿ ಮಾನ್ಯವಾದ ದಂಡನೆಯ ಗುರಿಗಳನ್ನು ಸಾಧಿಸಲು ವಿಫಲವಾಗಿರುತ್ತದೆ..... ನೊಂದವರಿಗೆ ನ್ಯಾಯ ಒದಗಿಸುವ ಅಂತಿಮ ಮಾನದಂಡವಾಗಿ ಮರಣದಂಡನೆಯ ಮೇಲೆ ಕೇಂದ್ರೀಕರಿಸುವಾಗ, ನ್ಯಾಯದ ಪುನಶ್ಚೈತನ್ಯಕಾರಿ ಮತ್ತು ಪುನರ್ವಸತಿ ಅಂಶಗಳನ್ನು ಪರಿಗಣಿಸುವುದರಲ್ಲಿ ವಿಫಲವಾಗಿರುತ್ತದೆ. ಮರಣದಂಡನೆಯ ಮೇಲೆ ಅವಲಂಬನೆಯು, ಕಳಪೆ ತನಿಖೆ, ಅಪರಾಧ ತಡೆಗಟ್ಟುವಿಕೆ ಮತ್ತು ಅಪರಾಧದಿಂದ ನೊಂದವರ ಹಕ್ಕುಗಳಂತಹ ಇತರೆ ಸಮಸ್ಯೆಗಳಿಂದ ಬಾಧಿಸುತ್ತಿರುವ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಿಂದ ಗಮನವನ್ನು ಬೇರೆಡೆಗೆ ತಿರುಗಿಸುತ್ತದೆ".

108. (2016) 7 ಎಸ್‌ಸಿಸಿ 1

202. 262ನೇ ವರದಿಯು ಈ ಆಧಾರದ ಮೇಲೆ ಮರಣದಂಡನೆಯನ್ನು ರದ್ದುಗೊಳಿಸುವಂತೆ ಶಿಫಾರಸ್ಸು ಮಾಡುವಾಗ, ಶಿಕ್ಷೆ ವಿಧಿಸುವುದು ನ್ಯಾಯಾಧೀಶ–ಕೇಂದ್ರಿತ ಅಥವಾ ನಿರಂಕುಶವಾಗುವುದರ ಜೊತೆಗೆ, ಇದು ಸಂಸತ್ತಿನ ಹಸ್ತಕ್ಷೇಪವನ್ನು ಪ್ರೇರೇಪಿಸಿರುವುದಿಲ್ಲ. ನ್ಯಾಯಶಾಸ್ತ್ರ, ಸಾರ್ವಜನಿಕ ಚರ್ಚೆ ಮತ್ತು ಮಾನವ ಹಕ್ಕುಗಳ ಅಂತರಾಷ್ಟ್ರೀಯ ಮಾನದಂಡಗಳಿಂದ ರೂಪುಗೊಂಡ 262 ನೇ ಕಾನೂನು ಆಯೋಗದ ವರದಿಯ ಹಿನ್ನೆಲೆಯಲ್ಲಿ ಮರಣದಂಡನೆಯು ಮರುಪರಿಶೀಲನೆಗೆ ಅರ್ಹವಾಗಿದೆಯೇ (*ಚನ್ನು ಲಾಲ್ ವರ್ಮಾ* ಮೊಕದ್ದಮೆಯಲ್ಲಿ ಜೆ. ಕುರಿಯನ್ ಜೋಸೆಫ್‌ರವರು (ಅಸಮ್ಮತಿ) ಶಿಫಾರಸು ಮಾಡಿದಂತೆ) ಎಂಬ ಪ್ರಶ್ನೆಯು, *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಸಂವಿಧಾನಿಕ ಪೀಠವು ನೀಡಿದ ತೀರ್ಪಿನ ಕಾರಣದಿಂದ, ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಹೊರಗಿದೆ ಮತ್ತು ಈ ಪ್ರಶ್ನೆಯನ್ನು ವಿಮರ್ಶಾತ್ಮಕವಾಗಿ ಪರಿಗಣಿಸಲು ಶಾಸಕಾಂಗಕ್ಕೆ ಬಿಡಲಾಗಿದೆ. ಈ ಹಿನ್ನೆಲೆಯಲ್ಲಿ, ನ್ಯಾಯಾಲಯವು ಏನು ಮಾಡಬಹುದೆಂದರೆ, ಪ್ರಸ್ತುತ ಅಸ್ತಿತ್ವದಲ್ಲಿರುವ ಶಿಕ್ಷೆಯ ಚೌಕಟ್ಟನ್ನು ಪರೀಕ್ಷಿಸಬೇಕು ಮತ್ತು ಅದನ್ನು ಬಲಪಡಿಸಬೇಕು. ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳಿಗೆ ನಿಜವಾದ ಅರ್ಥವನ್ನು ನೀಡುವ ಮೂಲಕ ಮಾತ್ರ ಇದು ಸಾಧ್ಯವಾಗುತ್ತದೆ (*ಸ್ವಯಂಪ್ರೇರಿತವಾಗಿ* ಮರಣದಂಡನೆಯನ್ನು ವಿಧಿಸುವ ಅಪರಾಧಗಳ 'ವರ್ಗೀಕರಣದ' ಜಾಲಕ್ಕೆ ಬೀಳದೆ). ಹಾಗೆ ಮಾಡಲು, *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಗುರುತಿಸಲಾದ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸಲು ಅನುಕೂಲವಾಗುವಂತ ಹಲವು ಪ್ರಾಯೋಗಿಕ ಮಾರ್ಗಸೂಚಿಗಳನ್ನು (ಕೆಳಗೆ ವಿವರಿಸಲಾಗಿದೆ) ರೂಪಿಸುವುದು ಅಗತ್ಯವೆಂದು ಈ ನ್ಯಾಯಾಲಯವು ಕಂಡುಕೊಳ್ಳುತ್ತದೆ ಮತ್ತು ಪರಿಣಾಮವಾಗಿ, ಈ ಚೌಕಟ್ಟಿನ ಏಕರೂಪ ಅನ್ವಯವನ್ನು ಖಚಿತಪಡಿಸುತ್ತದೆ.

203. 262 ನೇ ವರದಿಯು, ಅಪರಾಧಕ್ಕೆ ಸುಧಾರಣೆ ಮತ್ತು ಪುನರ್ವಸತಿ ಪ್ರಕ್ರಿಯೆಯ ಕಡೆಗಿರುವ ನೀತಿ ಮತ್ತು ಚರ್ಚೆಯಲ್ಲಿನ ಬದಲಾವಣೆಯನ್ನು ಗಮನಿಸಿರುತ್ತದೆ ಮತ್ತು ನ್ಯಾಯಶಾಸ್ತ್ರ ಅಭಿವೃದ್ಧಿಯು ಒಂದು ಮೊಕದ್ದಮೆಯನ್ನು 'ವಿರಳದಲ್ಲಿ ಅತ್ಯಂತ ವಿರಳ'

ಎಂದು ನಿರ್ಣಯಿಸುವುದರಲ್ಲಿ ಸಮರ್ಥವಾಗಿರುವುದಿಲ್ಲ ಮತ್ತು ಅಪರಾಧಿಯು ಸುಧಾರಣೆಗೆ ಒಳಪಡಲು ಯೋಗ್ಯರೇ ಎಂದು ಪರಿಗಣಿಸಲು ವಿಶೇಷ ಒತ್ತು ನೀಡಬೇಕಾಗಿರುತ್ತದೆ. ಅಪರಾಧಿಯು ತನ್ನ ಸ್ವಂತ ನಿರ್ಧಾರಗಳಿಂದ ಅಪರಾಧಿಯಾಗಿರುವುದಿಲ್ಲ ಆದರೆ ರಾಜ್ಯ ಮತ್ತು ಸಮಾಜದ ವೈಫಲ್ಯದ ಫಲಿತಾಂಶದಿಂದಲೂ ಅಪರಾಧಿಯಾಗಿರುತ್ತಾರೆ ಮತ್ತು ಇದುವೇ ಆರೋಪಿಗೆ ಸುಧಾರಣೆಯ ಅವಕಾಶವನ್ನು ನೀಡುತ್ತದೆ ಎಂಬುದು ಈ ಬದಲಾವಣೆಯಲ್ಲಿ ಅಡಗಿರುತ್ತದೆ. ಆದ್ದರಿಂದ, ಜೀವಾವಧಿ ಶಿಕ್ಷೆಯನ್ನು ವಿಧಿಸುವುದು ರೂಢಿಯಾಗಿದ್ದು, ಮರಣದಂಡನೆಯು ಇದಕ್ಕೆ ಹೊರತಾದದ್ದಾಗಿರುತ್ತದೆ. *ಲೆಹ್ನಾ ವಿರುದ್ಧ ಹರಿಯಾಣ ರಾಜ್ಯ*[109] ಮೊಕದ್ದಮೆಯಲ್ಲಿ ಮರಣದಂಡನೆಯನ್ನು ವಿಧಿಸಲು ಆ ಮೊಕದ್ದಮೆಯ ವಾಸ್ತವಾಂಶವು ಸೂಕ್ತವೇ ಎಂದು ನಿರ್ಧರಿಸುವಾಗ, ಈ ವಿಧಾನದಲ್ಲಿನ ಬದಾಲವಣೆಯನ್ನು ಗುರುತಿಸಲಾಗಿದೆ:

> "14. ಹತ್ಯೆ ಮಾಡಿರುವುದಕ್ಕೆ ಶಿಕ್ಷೆಯಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ಭಾರತ ದಂಡ ಸಂಹಿತೆಯ 302 ನೇ ಪ್ರಕರಣವು ಸೂಚಿಸುತ್ತದೆ. ಹಾಗೆ ಮಾಡುವಾಗ, ಸಂಹಿತೆಯು ಅದರ ಅನ್ವಯದ ಬಗ್ಗೆ ನ್ಯಾಯಾಲಯಕ್ಕೆ ಸೂಚನೆ ನೀಡುತ್ತದೆ. ಕಳೆದ ಮೂರು ದಶಕಗಳಲ್ಲಿ ಸಂಹಿತೆಯಲ್ಲಿ ಆಗಿರುವ ಬದಲಾವಣೆಗಳು, ಸಂಸತ್ತು ಸಮಕಾಲೀನ ಅಪರಾಧ ಶಾಸ್ತ್ರದ ಚಿಂತನೆ ಮತ್ತು ಬೆಳವಣಿಗೆಯನ್ನು ಗಮನಿಸಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಸಂಹಿತೆಯಲ್ಲಿ ಅದನ್ನು ಬೇರ್ಪಡಿಸಿರುವುದು ಕಷ್ಟವೇನಲ್ಲ, ಜೀವಾವಧಿ ಶಿಕ್ಷೆಯತ್ತ ಒಂದು ನಿಶ್ಚಿತವಾದ ತಿರವು ಇರುತ್ತದೆ. ಮರಣದಂಡನೆಯನ್ನು ಸಾಮಾನ್ಯವಾಗಿ ತಳ್ಳಿಹಾಕಲಾಗಿದೆ ಮತ್ತು 354 (3) ನೇ ಪ್ರಕರಣದಲ್ಲಿ ಒದಗಿಸಿದಂತೆ "ವಿಶೇಷ ಕಾರಣಗಳಿಗಾಗಿ" ಮಾತ್ರ ವಿಧಿಸಬಹುದಾಗಿದೆ. "ವಿಶೇಷ ಕಾರಣಗಳು" ಎಂಬ ಗಮನಾರ್ಹ ಪದವಿನ್ಯಾಸವನ್ನು ಸಂಹಿತೆಯ ಮತ್ತೊಂದು ಉಪಬಂಧವು ಉಪಯೋಗಿಸುತ್ತದೆ. ಅದು 361ನೇ ಪ್ರಕರಣವಾಗಿರುತ್ತದೆ. 1973ರ ಸಂಹಿತೆಯ 360ನೇ ಪ್ರಕರಣವು, 1898 ರ ದಂಡ ಪ್ರಕ್ರಿಯಾ ಸಂಹಿತೆಯ 562ನೇ ಪ್ರಕರಣವನ್ನು (ಸಂಕ್ಷಿಪ್ತವಾಗಿ ಹಳೆಯ ಸಂಹಿತೆ) ಪುನಃ ಅಧಿನಿಯಮಗೊಳಿಸಿರುತ್ತದೆ. ಸಂಹಿತೆಯಲ್ಲಿ ಹೊಸ ಉಪಬಂಧವಾಗಿರುವ 361ನೇ ಪ್ರಕರಣವು, 360ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸದೆ ಇರಲು "ವಿಶೇಷ ಕಾರಣಗಳನ್ನು" ದಾಖಲಿಸಲು ನ್ಯಾಯಾಲಯಗಳಿಗೆ ಕಡ್ಡಾಯಗೊಳಿಸಿರುತ್ತದೆ. ಆದ್ದರಿಂದ 360 ನೇ ಪ್ರಕರಣದ ಉಪಬಂಧಗಳನ್ನು ಎಲ್ಲಿ ಅನ್ವಯಿಸಲು ಸಾಧ್ಯವೂ ಅಲ್ಲಿ ಅನ್ವಯಿಸಲು 361ನೇ ಪ್ರಕರಣವು

109. (2002) 3 ಎಸ್‌ಸಿಸಿ 76

ನ್ಯಾಯಾಲಯದ ಮೇಲೆ ಕರ್ತವ್ಯವನ್ನು ವಿಧಿಸಿರುತ್ತದೆ ಮತ್ತು ಎಲ್ಲಿ ಅನ್ವಯಿಸಲು ಸಾಧ್ಯವಿಲ್ಲವೊ ಅಲ್ಲಿ "ವಿಶೇಷ ಕಾರಣಗಳನ್ನು" ನೀಡಲು ತಿಳಿಸುತ್ತದೆ. 360 ನೇ ಪ್ರಕರಣದ ಸಂದರ್ಭದಲ್ಲಿ, ಅಪರಾಧಿಯ ವಯಸ್ಸು, ನಡತೆ ಮತ್ತು ಪೂರ್ವ ಇತಿಹಾಸ ಮತ್ತು ಅಪರಾಧವೆಸಗಿದ ಸನ್ನಿವೇಶಕ್ಕೆ ಸೂಕ್ತ ಮನ್ನಣೆಯನ್ನು ನೀಡಿ ಪರಿಶೀಲಿಸಿದ ನಂತರ ಅಪರಾಧಿಯನ್ನು ಸುಧಾರಣೆ ಮತ್ತು ಪುನರ್ವಸತಿ ಮಾಡಲು ಅಸಾಧ್ಯವೆಂದು ನ್ಯಾಯಾಲಯವು ಅಭಿಪ್ರಾಯಪಡಲು ಅನುಚ್ಛೇಧ 361 ರ ಮೂಲಕ ಉದ್ದೇಶಿತವಾದ "ವಿಶೇಷ ಕಾರಣಗಳು" ಒತ್ತಾಯಿಸುವಂತಿರಬೇಕು. ಇದು ಕೇವಲ ನಿರ್ಬಂಧಿಸುವುದು ಮಾತ್ರವಲ್ಲ, ಅಪರಾಧಿಗಳ ಸುಧಾರಣೆ ಮತ್ತು ಪುನರ್ವಸತಿ ಈಗ ನಮ್ಮ ದೇಶದಲ್ಲಿ ಕ್ರಿಮಿನಲ್ ನ್ಯಾಯದ ಆಡಳಿತದ ಪ್ರಮುಖ ಉದ್ಧೇಶಗಳಲ್ಲಿ ಒಂದಾಗಿದೆ ಎಂದು ಶಾಸಕಾಂಗವು ಸೂಚಿಸುತ್ತದೆ. 361 ನೇ ಪ್ರಕರಣ ಮತ್ತು 354 (3) ನೇ ಪ್ರಕರಣವು ಏಕಕಾಲದಲ್ಲಿ ಕಾನೂನು ಪುಸ್ತಕವನ್ನು ಸೇರಿರುತ್ತವೆ ಮತ್ತು ಅಪರಾಧಶಾಸ್ತ್ರದಲ್ಲಿನ ಹೊಸ ಆವೃತ್ತಿಗಳನ್ನು ಶಾಸಕಾಂಗವು ಸ್ವೀಕರಿಸುವ ಚಿತ್ರಣದ ಭಾಗವಾಗಿರುತ್ತವೆ. ಆದ್ದರಿಂದ, ಅಪರಾಧಿಯ ವಯಸ್ಸು, ನಡತೆ, ಪೂರ್ವವೃತ್ತಾಂತಗಳು ಮತ್ತು ಇತರ ಸಂದರ್ಭಗಳಿಂದ ಬಹಿರಂಗವಾದ ಆತನ ವ್ಯಕ್ತಿತ್ವ ಮತ್ತು ಸುಧಾರಿಸಲು ಅಪರಾಧಿಯ ಸಮರ್ಥನೀಯತೆಯು ಶಿಕ್ಷೆಯನ್ನು ವಿಧಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಭಾವಿಸುವುದು ತಪ್ಪಲ್ಲ. ವಿಶೇಷ ಕಾರಣಗಳು ಈ ಅಂಶಗಳೊಂದಿಗೆ ಕೆಲವು ಸಂಬಂಧವನ್ನು ಹೊಂದಿರಬೇಕು. ಕ್ರಿಮಿನಲ್ ನ್ಯಾಯವು ಮಾನವನ ಸಂಕೀರ್ಣ ಸಮಸ್ಯೆಗಳು ಮತ್ತು ವೈವಿಧ್ಯಮಯ ಮಾನವನೊಂದಿಗೆ ವ್ಯವಹರಿಸುತ್ತದೆ. ನ್ಯಾಯಾಧೀಶರು ಅಪರಾಧಿಯ ವ್ಯಕ್ತಿತ್ವವನ್ನು, ಸಂದರ್ಭಗಳು, ಸನ್ನಿವೇಶಗಳು ಮತ್ತು ಪ್ರತಿಕ್ರಿಯೆಗಳೊಂದಿಗೆ ಸಮತೋಲನಗೊಳಿಸಬೇಕು ಮತ್ತು ವಿಧಿಸಲು ಸೂಕ್ತವಾದ ಶಿಕ್ಷೆಯನ್ನು ಆರಿಸಬೇಕಿರುತ್ತದೆ.

(ಒತ್ತು ನೀಡಲಾಗಿದೆ)

204. ಸಾಮಾನ್ಯವಾಗಿ ಉಪಶಮನಗೊಳಿಸಲಾದ ಅಂಶಗಳು ಅಪರಾಧವನ್ನು ಸಮರ್ಥಿಸುವ ಅಥವಾ ಮಾನ್ಯ ಮಾಡುವ ಬದಲು, ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯ ನಡುವೆ ನ್ಯಾಯಾಧೀಶರು ನಿರ್ಧರಿಸಲು ಸಾಧ್ಯವಾಗುವಂತೆ ಅಪರಾಧಿಯ ಸುತ್ತಮುತ್ತಲಿನ ಸಂದರ್ಭಗಳನ್ನು ವಿವರಿಸಲು ಪ್ರಯತ್ನಿಸಿರುತ್ತದೆ. *ಬಚನ್ ಸಿಂಗ್*[110] ಮೊಕದ್ದಮೆಯಲ್ಲಿಯೇ ಮೊದಲು ಗುರುತಿಸಲಾದ ಸೂಚಕಗಳ ವಿವರಣಾತ್ಮಕ ಪಟ್ಟಿಯು:

110. ಖಂಡಿಕೆ 206

"ಉಪಶಮನಗೊಳಿಸಲಾದ ಸನ್ನಿವೇಶಗಳು: ಮೇಲಿನ ಮೊಕದ್ದಮೆಗಳಲ್ಲಿ ತಮ್ಮ ವಿವೇಚನೆಯನ್ನು ಬಳಕೆ ಮಾಡುವಾಗ, ನ್ಯಾಯಾಲಯವು ಈ ಕೆಳಗಿನ ಸಂದರ್ಭಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು:

(1) ತೀವ್ರವಾದ ಮಾನಸಿಕ ಅಥವಾ ಭಾವನಾತ್ಮಕ ಗೊಂದಲದ ಪ್ರಭಾವದ ಅಡಿಯಲ್ಲಿ ಅಪರಾಧವನ್ನು ಮಾಡಿದಾಗ.

(2) ಆರೋಪಿಯ ವಯಸ್ಸು. ಆರೋಪಿಯು ಚಿಕ್ಕವಯಸ್ಸಿನವನಾಗಲಿ ಅಥವಾ ಪ್ರೌಢನಾಗಿದ್ದರೂ ಸಹ, ಅತನಿಗೆ ಮರಣದಂಡನೆ ವಿಧಿಸತಕ್ಕದಲ್ಲ.

(3) ಆರೋಪಿಯು ಸಮಾಜಕ್ಕೆ ನಿರಂತರ ಬೆದರಿಕೆಯನ್ನು ಉಂಟುಮಾಡುವ ಹಿಂಸಾತ್ಮಕವಾದ ಕ್ರಿಮಿನಲ್ ಕೃತ್ಯಗಳನ್ನು ಮಾಡದಿರುವ ಸಂಭವನೀಯತೆಯು ಇರುವಾಗ.

(4) ಆರೋಪಿಯನ್ನು ಸುಧಾರಣೆ ಮತ್ತು ಪುನರ್ವಸತಿಗೆ ಒಳಪಡಿಸುವ ಸಂಭವನೀಯತೆಯು ಇದ್ದಾಗ. ಸರ್ಕಾರವು ಮೇಲಿನ (3) ಮತ್ತು (4) ಷರತ್ತುಗಳನ್ನು ಆರೋಪಿಯು ಪೂರೈಸುವುದಿಲ್ಲ ಎಂದು ಸಾಕ್ಷ್ಯದ ಮೂಲಕ ಸಾಬೀತುಪಡಿಸತಕ್ಕದು.

(5) ಮೊಕದ್ದಮೆಯ ವಾಸ್ತವಾಂಶ ಮತ್ತು ಸನ್ನಿವೇಶದಲ್ಲಿ, ಆರೋಪಿಯು ಅಪರಾಧ ಮಾಡುವಲ್ಲಿ ನೈತಿಕವಾದ ಸಮರ್ಥನೆ ಹೊಂದಿದ್ದನು ಎಂದು ನಂಬಿರುವಾಗ.

(6) ಆರೋಪಿಯು ಇನ್ನೊಬ್ಬ ವ್ಯಕ್ತಿಯ ಒತ್ತಾಯ ಅಥವಾ ಪ್ರಾಬಲ್ಯದ ಅಡಿಯಲ್ಲಿ ವರ್ತಿಸಿದಾಗ.

(7) ಆರೋಪಿಯ ಸ್ಥಿತಿಯು ಆತನು ಮಾನಸಿಕವಾಗಿ ಕುಗ್ಗಿರುವುದನ್ನು ತೋರಿಸಿದಾಗ ಮತ್ತು ಆ ಸದರಿ ನ್ಯೂನ್ಯತೆಯು ಆತನ ನಡತೆಯ ದೋಷವನ್ನು ಪರಿಗಣಿಸುವ ಸಾಮರ್ಥ್ಯವನ್ನು ಕುಂಠಿತಗೊಳಿಸಿದಾಗ".

ಇವುಗಳು ಅಷ್ಟೇನೂ ಸಮಗ್ರವಾಗಿರುವುದಿಲ್ಲ; ತರುವಾಯ, ಈ ನ್ಯಾಯಾಲಯವು ತನ್ನ ಹಲವಾರು ತೀರ್ಪುಗಳಲ್ಲಿ, ಚಿಕ್ಕವಯಸ್ಸು[111], ಸಾಮಾಜಿಕ–ಆರ್ಥಿಕ ಸ್ಥಿತಿ[112], ಮಾನಸಿಕ ಅಸ್ವಸ್ಥತೆ[113], ಅಪರಾಧದ ಪೂರ್ವಾಪರಗಳು[114] ಮುಂತಾದವುಗಳ ಆಧಾರದ ಮೇಲೆ

111. ಮಹೇಶ್ ಧನಾಜಿ ಶಿಂಧೆ ವಿರುದ್ಧ ಮಹಾರಾಷ್ಟ್ರ ರಾಜ್ಯ (2014) 4 ಎಸ್‌ಸಿಸಿ 292; ಗುರ್ವಾಲಿ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ (2013) 2 ಎಸ್‌ಸಿಸಿ 713, ಇತ್ಯಾದಿ.

112. ಮುಲ್ಲಾ ಹಾಗು ಮತ್ತೊಬ್ಬರು ವಿರುದ್ಧ ಉ.ಪಿ ರಾಜ್ಯ (2010) 3 ಎಸ್‌ಸಿಸಿ 508; ಕಮಲೇಶ್ವರ್ ಪಾಸ್ವಾನ್ ವಿರುದ್ಧ ಯು.ಟಿ ಛಂಡೀಗಡ್ (2011) 11 ಎಸ್‌ಸಿಸಿ 564; ಸುನಿಲ್ ಗಾಯಕ್ವಾಡ್ ವಿರುದ್ಧ ಮಹಾರಾಷ್ಟ್ರ (2014) 1 ಎಸ್‌ಸಿಸಿ 129.

113. ಶತ್ರುಘ್ನ್ ಚೌಹಾನ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ (2014) 3 ಎಸ್‌ಸಿಸಿ 1

114. ದಿಲೀಪ್ ಪ್ರೇಮ್‌ನಾರಾಯಣ್ ತಿವಾರಿ ವಿರುದ್ಧ ಮಹಾರಾಷ್ಟ್ರ ರಾಜ್ಯ, (2010) 1 ಎಸ್‌ಸಿಸಿ 775

ಜೀವಾವಧಿ ಶಿಕ್ಷೆಗೆ ಪರಿವರ್ತನೆಯನ್ನು ಶಿಕ್ಷೆಯ ಸಂಬಂಧಿತ ಸೂಚಕಗಳಾಗಿ ಗುರುತಿಸಿದೆ ಮತ್ತು ಪರಿಗಣಿಸಿದೆ. ಈ ಅನೇಕ ಅಂಶಗಳು ಪ್ರದರ್ಶಿಸಬಹುದಾದ ಸಾಮರ್ಥ್ಯವನ್ನು ಅಥವಾ ಕೇವಲ ಆರೋಪಿಯ ಸುಧಾರಣೆಯ *ಸಾಧ್ಯತೆಯನ್ನು* ಪ್ರತಿಬಿಂಬಿಸುತ್ತವೆ (ಅಂದರೆ *ಬಚನ್ ಸಿಂಗ್* ಮೊಕದ್ದಮೆಯಲ್ಲಿನ (3) ಮತ್ತು (4) ನೇ ಪಟ್ಟಿ), ಮತ್ತು ಇದು ಶಿಕ್ಷೆಯನ್ನು ವಿಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಅವುಗಳನ್ನು ಪ್ರಮುಖ ಸೂಚಕಗಳನ್ನಾಗಿ ಮಾಡುತ್ತದೆ.

ಶಿಕ್ಷಾ–ಪೂರ್ವ ಸುನಾವಣೆ–ಆರೋಪಿಯ ವಿರುದ್ಧ ಸಾಕ್ಷ್ಯಗಳನ್ನು ಒದಗಿಸಲು ಅವಕಾಶ ಮತ್ತು ಬಾಧ್ಯತೆ.

205. ದಂಡ ಪ್ರಕ್ರಿಯಾ ಸಂಹಿತೆಯ 235(2)ನೇ ಪ್ರಕರಣದ ಮೂಲಕ 1973ರಲ್ಲಿ ಆರೋಪಿಗೆ ಶಿಕ್ಷಾ–ಪೂರ್ವ ಸುನಾವಣೆಯನ್ನು ಪರಿಚಯಿಸಿರುವುದು, *ಜಗ್ಮೋಹನ್ ಸಿಂಗ್* ಮೊಕದ್ದಮೆಯಲ್ಲಿನ ತತ್ವವಾದ 'ನ್ಯಾಯಾಲಯವು *ಪ್ರಾಥಮಿಕವಾಗಿ* ಅಪರಾಧಕ್ಕೆ ಸಂಬಂಧಿಸಿದಂತಹ ಸನ್ನಿವೇಶಗಳಿಗೆ ಸಂಬಂಧಿಸಿರಯತ್ತದೆ' ಎಂಬುದನ್ನು ಬದಲಾಯಿಸಿರುತ್ತದೆ ಎಂದು ಈ ನ್ಯಾಯಾಲಯವು *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ಮೊಕದ್ದಮೆಯು 'ವಿರಳದಲ್ಲಿ ಅತ್ಯಂತ ವಿರಳ' ವ್ಯಾಪ್ತಿಗೆ ಬರುತ್ತದೆಯೇ ಎಂದು ತೀರ್ಮಾನಿಸುವಾಗ ಮತ್ತು ಪರ್ಯಾಯವಾಗಿ ಜೀವಾವಧಿ ಶಿಕ್ಷೆಯ ಆಯ್ಕೆಯನ್ನು ಪ್ರಶ್ನಾತೀತವಾಗಿ ಪ್ರತಿಬಂಧಿಸಿದಾಗ, ಅಪರಾಧಿಯ ಸಂದರ್ಭಗಳಿಗೂ ಸಹ ಸೂಕ್ತವಾದ ಪರಿಗಣನೆಯನ್ನು ನೀಡಬೇಕಿರುತ್ತದೆ. *ಬಚನ್ ಸಿಂಗ್* ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, "ಸಮಾಜಕ್ಕೆ ನಿರಂತರ ಬೆದರಿಕೆಯನ್ನು ಉಂಟುಮಾಡುವ ಯಾವುದೇ ಹಿಂಸಾತ್ಮಕವಾದ ಕ್ರಿಮಿನಲ್ ಕೃತ್ಯಗಳನ್ನು ಆರೋಪಿಯು ಮಾಡದಿರುವ ಸಂಭವನೀಯತೆಯು" ಸಂಬಂಧಿತ ಸನ್ನಿವೇಶವಾಗಿರುತ್ತದೆ ಮತ್ತು ಶಿಕ್ಷೆಯನ್ನು ನಿರ್ಣಯಿಸುವ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ಮಾನ್ಯತೆ ನೀಡಬೇಕು ಎಂದು ಸ್ಪಷ್ಟವಾಗಿ ಹೇಳಿರುತ್ತದೆ. 235(2)ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದ ಶಿಕ್ಷೆಯನ್ನು ವಿಧಿಸಲು ನಡೆಸಲಾದ ಸುನಾವಣೆಯು ಕೇವಲ ಮೌಖಿಕ

ಸುನಾವಣೆಗೆ ಸೀಮಿತವಾಗಿರುವುದಿಲ್ಲ ಆದರೆ ಶಿಕ್ಷೆಯ ಪ್ರಶ್ನೆಯಲ್ಲಿ ಮೇಲೆ ವಿವಿಧ ಅಂಶಗಳಿಗೆ ಸಂಬಂಧಿಸಿದ ವಾಸ್ತವಾಂಶಗಳನ್ನು ಮತ್ತು ಸಾಕ್ಷ್ಯಗಳನ್ನು ದಾಖಲೆಯಲ್ಲಿ ತರಲು ನಿಜವಾದ ಅವಕಾಶವನ್ನು ಅಭಿಯೋಜನೆಗೆ ಮತ್ತು ಆರೋಪಿಗೂ ಸಹ ಒದಗಿಸಲು ಉದ್ದೇಶಿಸಿರುತ್ತದೆ ಮತ್ತು ಎರಡೂ ಕಡೆಯವರು ಆಸಕ್ತಿ ಹೊಂದಿದ್ದರೆ, ಕಡಿಮೆ ಶಿಕ್ಷೆ ವಿಧಿಸಲು ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಅಥವಾ ಮರಣದಂಡನೆ ವಿಧಿಸಲು ಉಲ್ಬಣಗೊಳ್ಳುವ ಆಧಾರಗಳನ್ನು ತೋರಿಸಲು ಸಾಕ್ಷ್ಯಗಳನ್ನು ಮಂಡಿಸಲು ಉದ್ದೇಶಿಸಿರುತ್ತದೆ[115].

206. ಉಪಶಮನಗೊಳಿಸಲಾದ ಅಂಶಗಳನ್ನು ಪರಿಣಾಮಕಾರಿಯಾಗಿ ಹೊರತರುವ ವ್ಯಕ್ತಿಯ ಸಾಮರ್ಥ್ಯದ ಅನುಪಸ್ಥಿತಿಯಲ್ಲಿ, ಈ ನ್ಯಾಯಾಲಯವು *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಹೊರತರುವ ಹೊರೆಯನ್ನು ನ್ಯಾಯಾಲಯಗಳ ಮೇಲೆ ಹೊರಿಸಿರುತ್ತದೆ ಮತ್ತು ನ್ಯಾಯಾಲಯವು ಅವುಗಳನ್ನು ಧಾರಾಳವಾಗಿ ಮತ್ತು ವಿಸ್ತಾರವಾಗಿ ಪರಿಗಣಿಸಬೇಕು, ಆದರೆ ಆರೋಪಿಯು ಸುಧಾರಣೆ ಅಥವಾ ಪುನರ್ವಸತಿ ವ್ಯಾಪ್ತಿಯನ್ನು ಮೀರಿದ್ದು, ಇದರಿಂದಾಗಿ ಜೀವಾವಧಿ ಶಿಕ್ಷೆಯ ಆಯ್ಕೆಯನ್ನು ಪ್ರಶ್ನಾತೀತವಾಗಿ ಪ್ರತಿಬಂಧಿಸಿ, ಮೊಕದ್ದಮೆಯನ್ನು ಮರಣದಂಡನೆ ವಿಧಿಸಲು ಸೂಕ್ತವೆಂದು ತೋರಿಸಲು ಸಾಕ್ಷ್ಯವನ್ನು ಒದಗಿಸುವ ಜವಬ್ದಾರಿಯು ರಾಜ್ಯದ ಮೇಲೆ ನೇರವಾಗಿ ಬೀಳುತ್ತದೆ. *ಸಂತೋಷ್ ಬಾರಿಯಾರ್, ರಾಜೇಶ್ ಕುಮಾರ್, ಚನ್ನು ಲಾಲ್ ವರ್ಮಾ* ಮತ್ತು ಇನ್ನಿತರ ಮೊಕದ್ದಮೆಗಳ ನಿರ್ಧಾರಗಳಲ್ಲಿ[116] ಈ ನ್ಯಾಯಾಲಯವು ಇದನ್ನು ಪುನರುಚ್ಚರಿಸಿದೆ ಮತ್ತು ಮತ್ತಷ್ಟು ವಿವರಿಸಿದೆ. *ಸಂತೋಷ್ ಬಾರಿಯಾರ್* ಮೊಕದ್ದಮೆಯಲ್ಲಿ ಶಿಕ್ಷಾ–ಪೂರ್ವ ಹಂತದಲ್ಲಿ ಸಂಗ್ರಸಹಿಸಬೇಕಾದ ಮಾಹಿತಿಯ ಸ್ವರೂಪದ ಬಗ್ಗೆ ಅವಲೋಕಿಸಿದಾಗ, ಈ ನ್ಯಾಯಾಲಯವು ಮುಂದುವರಿದು ಈ ಕೆಳಗಿನಂತೆ ಗಮನಿಸಿರುತ್ತದೆ:

115. ಮಲ್ಕಿಯಾತ್ ಸಿಂಗ್ ಮತ್ತು ಇತರರು ವಿರುದ್ಧ ಪಂಜಾಬ್ ರಾಜ್ಯ (1991) 4 ಎಸ್‌ಸಿಸಿ 341
116. ಮುನಿಯಪ್ಪನ್ ವಿರುದ್ಧ ಟಿ.ಎನ್. ರಾಜ್ಯ (1981) 3 ಎಸ್‌ಸಿಸಿ 11; ಅನಿಲ್ @ ಆಂಟೋನಿ ಅರಿಕ್ಸ್ವಾಮಿ ಜೋಸೆಫ್ ವಿರುದ್ಧ ಮಹಾರಾಷ್ಟ್ರ ರಾಜ್ಯ, (2014) 4 ಎಸ್‌ಸಿಸಿ 69, ಇತ್ಯಾದಿ.

"56. ಈ ಹಂತದಲ್ಲಿ, *ಬಚನ್ ಸಿಂಗ್* [(1980)2 ಎಸ್‌ಸಿಸಿ 684 : 1980 ಎಸ್‌ಸಿಸಿ (ಕ್ರಿ) 580] ಮೊಕದ್ದಮೆಯಲ್ಲಿ ಶಿಕ್ಷೆಯ ವಿಚಾರಣೆಯ ವಿಷಯವನ್ನು ತಿಳಿಸುತ್ತದೆ. ಈ ಹಂತದಲ್ಲಿ ಎಲ್ಲಾ ಸಂಬಂಧಿತ ಮಾಹಿತಿಯನ್ನು ದಾಖಲು ಮಾಡಲು ನ್ಯಾಯಾಲಯವು ಸಕ್ರಿಯ ಪಾತ್ರವನ್ನು ನಿರ್ವಹಿಸಬೇಕು. ಶಿಕ್ಷೆಯ ವಿಚಾರಣೆಯನ್ನು ನಡೆಸುವ ಮೊದಲು ಅಪರಾಧಕ್ಕೆ ಸಂಬಂಧಿಸಿದ ಕೆಲವೊಂದು ಮಾಹಿತಿಯನ್ನು ಆ ಅವಧಿಯಲ್ಲಿ ತೆಗೆಯಬೇಕು. ಈ ಮಾಹಿತಿಯು ಅಪರಾಧದ ಸ್ವರೂಪ, ಉದ್ದೇಶ ಮತ್ತು ಪರಿಣಾಮ ಮತ್ತು ಅಪರಾಧಿಗಳ ಅಪರಾಧಾಭಾವ ಇತ್ಯಾದಿಗಳಿಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಸಾಂದರ್ಭಿಕ ಪುರಾವೆ ಅಥವಾ ಮಕ್ಕಳ ಸಾಕ್ಷಿಗಳ ಮೇಲಿನ ಅವಲಂಬನೆಯು ಶಿಕ್ಷೆಯನ್ನು ವಿಧಿಸುವಲ್ಲಿನ ವಿಶ್ಲೇಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದರೆ ಬಹಳಷ್ಟು ಮರಣದಂಡನೆಯ ಮೊಕದ್ದಮೆಗಳಲ್ಲಿ ಅಪರಾಧಿಯ ಗುಣಲಕ್ಷಣಗಳಿಗೆ ಮತ್ತು ಸಾಮಾಜಿ–ಆರ್ಥಿಕ ಹಿನ್ನೆಲೆಗೆ ಸಂಬಂಧಿಸಿದ ಮಾಹಿತಿಯ ಕೊರತೆಯಿರುತ್ತದೆ. ಈ ವಿಷಯವನ್ನು ಕಾನೂನು ಆಯೋಗದ 48 ನೇ ವರದಿಯಲ್ಲಿಯೂ ಪ್ರಸ್ತಾಪಿಸಲಾಗಿರುತ್ತದೆ".

(ಒತ್ತು ನೀಡಲಾಗಿದೆ)

207. ಬಹುಪಾಲು ಆರೋಪಿಗಳು ಕಳಪೆ ಅಥವಾ ಮೂಲಭೂತ ಮಟ್ಟದ ಕಾನೂನು ಪ್ರಾತಿನಿಧ್ಯವನ್ನು ಹೊಂದಿರುವ ಭಾರತೀಯ ಸನ್ನಿವೇಷದಲ್ಲಿ, ರಾಜ್ಯದ ಕರ್ತವ್ಯವು ಇನ್ನಷ್ಟು ಮಹತ್ವದಾಯಕವಾಗಿರುತ್ತದೆ. ನಮ್ಮ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಸಾಮಾಜಿಕ–ಆರ್ಥಿಕ ಅಂಶಗಳನ್ನು ಸಂಗ್ರಹಿಸುವ ಪ್ರಾಮುಖ್ಯತೆಯನ್ನು 262 ನೇ ವರದಿಯು ಈ ಕೆಳಗಿನಂತೆ ವಿಮರ್ಶಾತ್ಮಕವಾಗಿ ಗಮನಿಸಿರುತ್ತದೆ:

"7.1.6 ಹಲವಾರು ಸಮಿತಿಯ ವರದಿಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು, ದೇಶದಲ್ಲಿ ಕ್ರಿಮಿನಲ್ ನ್ಯಾಯದ ಆಡಳಿತವು ತೀವ್ರ ಬಿಕ್ಕಟ್ಟಿನಲ್ಲಿದೆ ಎಂಬುದನ್ನು ಗಮನಿಸಿರುತ್ತದೆ. ಸಂಪನ್ಮೂಲಗಳ ಕೊರತೆ, ಹಳೆಯಕಾಲದ ತನಿಖಾ ವಿಧಾನಗಳು, ಮಿತಿಮೀರಿದ ಪೊಲೀಸ್ ಪಡೆ, ಪರಿಣಾಮಕಾರಿಯಲ್ಲದ ಅಭಿಯೋಜನೆ ಮತ್ತು ಕಳಪೆ ಕಾನೂನು ನೆರವು, ವ್ಯವಸ್ಥೆಯನ್ನು ಸುತ್ತುವರಿದಿರುವ ಕೆಲವು ಸಮಸ್ಯೆಗಳಾಗಿರುತ್ತದೆ. ಮರಣದಂಡನೆಯು ಈ ಸನ್ನಿವೇಶದಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಆದ್ದರಿಂದ, ಅದೇ ರಚನಾತ್ಮಕ ಮತ್ತು ವ್ಯವಸ್ಥಿತ ತೊಡಕುಗಳಿಂದ ಬಳಲುತ್ತಿದೆ. ಆದ್ದರಿಂದ ಮರಣದಂಡನೆ ವಿಧಿಸುವುದು ಅಪಪ್ರಯೋಗಕ್ಕೆ ದೋಷಾಸ್ಪದವಾಗಿ ಮತ್ತು ದುರ್ಬಲವಾಗಿ ಉಳಿದಿರುತ್ತದೆ.

ಪ್ರತಿಕೂಲವಾದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ತಮ್ಮ ಹಕ್ಕುಗಳನ್ನು ಸಮರ್ಥವಾಗಿ ಬೆಂಬಲಿಸಲು ಸಂಪನ್ಮೂಲಗಳ ಕೊರತೆಯಿರುವ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಂಚಿನಲ್ಲಿರುವವರ ವಿರುದ್ಧ ವ್ಯವಸ್ಥೆಯ ಬದಲಾವಣೆಗಳು ಅಸಮಾನವಾಗಿ ಕಾರ್ಯನಿರ್ವಹಿಸುತ್ತದೆ.

208. ಆದಾಗ್ಯೂ, *ಬಚನ್ ಸಿಂಗ್* ಮೊಕದ್ದಮೆ ಮುಗಿದು ನಾಲ್ಕು ದಶಕಗಳ ನಂತರವೂ ನ್ಯಾಯಾಲಯದ ಪರಿಗಣನೆಗೆ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಹೇಗೆ ಸಂಗ್ರಹಿಸಬೇಕು ಎಂದು ವಿವರಿಸುವ ಯಾವುದೇ ಯೋಜನೆ ಅಥವಾ ವ್ಯವಸ್ಥೆಯನ್ನು ರೂಪಿಸುವ ನಿಟ್ಟಿನಲ್ಲಿ ಯಾವುದೇ ಮಹತ್ವದ ಬದಲಾವಣೆಯಾಗಿರುವುದಿಲ್ಲ. ಶಿಕ್ಷೆಯನ್ನು ವಿಧಿಸುವ ಸಮಯದಲ್ಲಿ ಆರೋಪಿಯ ಬಗ್ಗೆ ಕಡಿಮೆ ಮಾಹಿತಿಯು, ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸುವ ಪ್ರಕ್ರಿಯೆಗೆ ತ್ರೀವವಾಗಿ ಪ್ರತಿಕೂಲಗೊಳಿಸುತ್ತದೆ. ಮಾನ್ಯ ವಕೀಲರಿಂದ ಕೇವಲ ಈ ಸಂದರ್ಭಗಳ ಉಲ್ಲೇಖವು ಯಾವುದೇ ಉದ್ದೇಶವನ್ನು ಹೊಂದಿರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ; ಬದಲಿಗೆ, ಅವು ಸುಧಾರಣೆಯ ಸಾಧ್ಯತೆಯೊಂದಿಗೆ ಸಂಪರ್ಕ ಹೊಂದಿರಬೇಕು ಮತ್ತು ತಾತ್ವಿಕ ನ್ಯಾಯಾಂಗ ತರ್ಕಕ್ಕೆ ಸಹಾಯ ಮಾಡಬೇಕು (ದಂಡ ಪ್ರಕ್ರಿಯಾ ಸಂಹಿತೆಯ 235(2)ರ ಅಡಿಯಲ್ಲಿ ಅಗತ್ಯವಿರುವಂತೆ). ಈ ನೆರವಿನ ಕೊರತೆಯಿಂದ ನಿರ್ಬಂಧಿತವಾಗಿ, *ರಾಜೇಶ್ ಕುಮಾರ್* ಮೊಕದ್ದಮೆಯಲ್ಲಿ (ಮೇಲೆ ಹೇಳಿದಂತೆ) ಈ ನ್ಯಾಯಾಲಯವು, ಅಪರಾಧಿಯು ಸುಧಾರಣೆ ಮತ್ತು ಪುನರ್ವಸತಿಗೆ ಮೀರಿದ್ದನೆಂದು ತೋರಿಸಲು ರಾಜ್ಯವು ಯಾವುದೇ ಸಾಕ್ಷ್ಯವನ್ನು ನೀಡಿರುವುದಿಲ್ಲ ಎಂಬ ಅಂಶವೇ ಸ್ವತಃ ಒಂದು ಉಪಸಮನಗೊಳಿಸಲಾದ ಸನ್ನಿವೇಶದಾಗಿರುತ್ತದೆ ಎಂದು ನಿರ್ಣಯಿಸುವಷ್ಟರ ಮಟ್ಟಿಗೆ ಅಭಿಪ್ರಾಯಪಟ್ಟಿರುತ್ತದೆ.

209. ಮುಂಬರುವ ಮಾಹಿತಿಯ ಕೊರತೆಯು ನ್ಯಾಯಾಲಯಗಳು ಮೌಲ್ಯಮಾಪನ ಮಾಡಲು ಹಿಂದಿನ ಮೊಕದ್ದಮೆಗಳನ್ನು ನೋಡಲು ಪ್ರಯತ್ನಿಸುವುದಕ್ಕೆ ಕಾರಣವಾಗಿದ್ದು; ಒಂದು ಕಡೆ ಅಪರಾಧ ನಡೆದ ಹಲವು ವರ್ಷಗಳ ನಂತರ ಸನ್ನಿವೇಶಗಳಿಗೆ ತಾತ್ಕಾಲಿಕವಾಗಿ ತಡೆ

ನೀಡಿದ್ದನ್ನು ಮತ್ತು ಮತ್ತೊಂದು ಕಡೆಯಲ್ಲಿ ಗ್ರಹಿಸಬಹುದಾದ ಇತರ ಸಂದರ್ಭಗಳನ್ನು ವಿಶ್ಲೇಷಿಸಲು ಪ್ರಯತ್ನಿಸಬಹುದು, ಆದರೆ ಹೋಲಿಕೆ ಮಾಡಲು ಹಿಂದಿನ ಯಾವುದೇ ಉಲ್ಲೇಖದ ಚೌಕಟ್ಟು ಅಸ್ತಿತ್ವದಲ್ಲಿರುವುದಿಲ್ಲ. ದಾಖಲೆಗಳನ್ನು ಹಾಜರುಪಡಿಸಲು ಕರೆಯುವಲ್ಲಿ ಕೆಲವು ನ್ಯಾಯಾಲಯಗಳ ಅಸಂಗತತೆಯು ಮತ್ತು ಕೆಲವೊಂದು ನ್ಯಾಯಾಲಯಗಳ ವಿಫಲತೆಯು, ಮರಣದಂಡನೆ ಶಿಕ್ಷೆಯ ಕುರಿತಾದ ನಮ್ಮ ಶ್ರದ್ಧೆಯಿಲ್ಲದ ಕೆಲಸವು ಮತ್ತಷ್ಟು ಕೊಡುಗೆ ನೀಡುತ್ತದೆ ಮತ್ತು ಪ್ರತಿಯಾಗಿ ಮರಣದಂಡನೆಯ ಅಪರಾಧಿಗಳ ಪರವಾಗಿ *ಸಂತೋಷ್ ಬಾರಿಯಾರ್* ಮೊಕದ್ದಮೆಯಲ್ಲಿ ಅಸ್ತಿತ್ವದಲ್ಲಿರುವಂತೆ ಗುರುತಿಸುವ ಸಮಾನತೆಯ ತತ್ವ ಮತ್ತು ಸೂಕ್ತವಾದ ಪ್ರಕ್ರಿಯೆಯ ರಕ್ಷಣೆಯನ್ನು ದುರ್ಬಲಗೊಳಿಸುತ್ತದೆ.

210. ಪರಿವೀಕ್ಷಣಾ ಅಧಿಕಾರಿಯ ವರದಿಯನ್ನು[117] (ಈ ಮೊಕದ್ದಮೆಯಲ್ಲಿಯೂ ಈ ನ್ಯಾಯಾಲಯವು ಮಾಡಿದಂತೆ) ತರಿಸಿಕೊಳ್ಳುವ ಕ್ರಮವು, ವಾಸ್ತವವಾಗಿ ಮೇಲ್ಮನವಿ ಹಂತದಲ್ಲಿ ನ್ಯಾಯಾಲಯಗಳು ಪ್ರಸ್ತುತ ಆರೋಪಿಯ ಬಗ್ಗೆ ಮಾಹಿತಿಯನ್ನು ಪಡೆಯಲು ಹತಾಶ ಪ್ರಯತ್ನವಾಗಿರುತ್ತದೆ. ಜೈಲಿನಲ್ಲಿ ಶಿಕ್ಷೆಯ ನಂತರದ ಹಂತದಲ್ಲಿ ಆರೋಪಿಯ ಉತ್ತಮ ನಡತೆ (ಜೈಲು ವರದಿಯ ಮೂಲಕ) ಮತ್ತು ಸುಧಾರಣೆಯ ಸಾಧ್ಯತೆಯನ್ನು ಮೌಲ್ಯಮಾಪನ ಮಾಡಲು ಮನೋವೈದ್ಯಕೀಯ ಮೌಲ್ಯಮಾಪನವನ್ನು (ಮೇಲ್ಮನವಿ ಶಿಕ್ಷೆಯ ಹಂತದಲ್ಲಿದ್ದರೂ) ಇತ್ತೀಚೆಗೆ *ಚನ್ನು ಲಾಲ್ ವರ್ಮಾ* ಮೊಕದ್ದಮೆಯಲ್ಲಿ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸಲು ಅಗತ್ಯವಾದ ಸೂಚಕಗಳಂತೆ ಪರಿಗಣಿಸಲಾಗಿರುತ್ತದೆ:

> "15.....ಅಪೀಲುದಾರರು ಜೈಲಿನಲ್ಲಿರುವುದರಿಂದ, ಸುಧಾರಣೆಗಾಗಿ ಅವರ ಕಡೆಯಿಂದ ಯಾವುದಾದರೂ ಪ್ರಯತ್ನವಿದೆಯೇ ಎಂದು ತಿಳಿಯಲು ನಾವು ಬಯಸಿದ್ದೇವೆ. ಜೈಲಿನಲ್ಲಿ ಅವರ ನಡತೆಯು ಚೆನ್ನಾಗಿದೆ ಎಂದು ಜೈಲು ಅಧೀಕ್ಷಕರು ಪ್ರಮಾಣಪತ್ರವನ್ನು ನೀಡಿರುತ್ತಾರೆ. ಆದ್ದರಿಂದ, ಎಲ್ಲಾ ಭರವಸೆಯನ್ನು ಕಳೆದುಕೊಂಡಿದ್ದರೂ, ಅಪೀಲುದಾರರಿಗೆ ಯಾವುದೇ ಹತಾಶೆ ಉಂಟಾಗಿಲ್ಲ ಎಂಬುದಕ್ಕೆ ಸ್ಪಷ್ಟ ಸೂಚನೆಯಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಉಳಿದ

117. ಬಿಚ್ಚು ವಿರುದ್ಧ ಎಮ್.ಪಿ. ರಾಜ್ಯ, (2014) 3 ಎಸ್‌ಸಿಸಿ 421; ಅನಿಲ್ @ ಆಂಟೋನಿ ಅರಿಕ್ಸ್ವಾಮಿ ಜೋಸೆಫ್ ವಿರುದ್ಧ ಮಹಾರಾಷ್ಟ್ರ ರಾಜ್ಯ, (2014) 4 ಎಸ್‌ಸಿಸಿ 69; ಭರತ್ ಸಿಂಗ್ ವಿರುದ್ಧ ರಾಜ್ಯ (ಎನ್.ಸಿ.ಟಿ, ದೆಹಲಿ), ಆದೇಶ ದಿನಾಂಕ 17.04.2014, ಡಿಎಸ್‌ಆರ್ ಸಂಖ್ಯೆ.1/2014.

ಅವಧಿಯಲ್ಲಿ ಉತ್ತಮ ಜೀವನ ನಡೆಸಲು ಅವರ ಕಡೆಯಿಂದ ಪ್ರಜ್ಞಾಪೂರ್ವಕ ಪ್ರಯತ್ನವಿರುತ್ತದೆ. ಒಬ್ಬ ಅಪರಾಧಿಯನ್ನು ಜೈಲಿಗೆ ಕಳುಹಿಸುವುದು, ಆತನು ತನ್ನ ತಪ್ಪನ್ನು ತಿದ್ದುಕೊಂಡು ಸುಧಾರಣೆಯಾಗುತ್ತಾನೆ ಎಂಬ ಭರವಸೆ ಮತ್ತು ನಿರಿಕ್ಷೆಯೊಂದಿಗೆ. ನಮ್ಮ ಅಭಿಪ್ರಾಯದಲ್ಲಿ ಪರ್ಯಾಯ ಆಯ್ಕೆಯನ್ನು ಪ್ರಶ್ನಾತೀತವಾಗಿ ಪ್ರತಿಬಂಧಿಸಬೇಕೆ ಎಂಬ ನಿರ್ಧಾರವನ್ನು ತೆಗೆದುಕೊಳ್ಳುವಾಗ, ನ್ಯಾಯಾಲಯವು, ಮರಣದಂಡನೆ ಶಿಕ್ಷೆಗೆ ಗುರಿಯಾಗಿರುವ ಅಪರಾಧಿಯ ಮೇಲೆ ಅಂತಹ ಸಕಾರಾತ್ಮಕ ಬದಲಾವಣೆಯಿದೆ ಎಂಬುದಕ್ಕೂ ಸಹ ಮಾನ್ಯತೆ ನೀಡಬೇಕು. *ಬಚನ್ ಸಿಂಗ್* ಮೊಕದ್ದಮೆಯಲ್ಲಿ [ಬಚನ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ, (1980) 2 ಎಸ್‌ಸಿಸಿ 684 : 1980 ಎಸ್‌ಸಿಸಿ (ಕ್ರಿ) 580] ಸಾಂವಿಧಾನಿಕ ಪೀಠವು ಅಭಿಪ್ರಾಯ ಪಡುವುದೇನೆಂದರೆ, ಅಪರಾಧಿಯನ್ನು ಸುಧಾರಣೆ ಮಾಡಲು ಅಥವಾ ಪುನರ್ವಸತಿ ಮಾಡಲು ಸಾಧ್ಯವಿಲ್ಲ ಎಂದು ಸಾಕ್ಷ್ಯದ ಮೂಲಕ ಸಾಬೀತುಪಡಿಸುವುದು ರಾಜ್ಯದ ಕರ್ತವ್ಯವಾಗಿತ್ತು. ಆ ಮಾಹಿತಿಯನ್ನು ಸರಿಯಾದ ಸಮಯದಲ್ಲಿ ರಾಜ್ಯವು ಒದಗಿಸಿರುವುದಿಲ್ಲ, ಮತ್ತು ರಾಜ್ಯವು ಈಗ ಒದಗಿಸಿರುವ ಮಾಹಿತಿಯು ಸುಸಂಬದ್ಧವಾಗಿರುತ್ತದೆ. *ಬಚನ್ ಸಿಂಗ್* ಮೊಕದ್ದಮೆಯಲ್ಲಿ [ಬಚನ್ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ (1980) 2 ಎಸ್‌ಸಿಸಿ 684 : 1980 ಎಸ್‌ಸಿಸಿ (ಕ್ರಿ) 580) "ವಿರಳದಲ್ಲಿ ಅತ್ಯಂತ ವಿರಳ" ಪ್ರಯೋಗದಿಂದ ನಿಗದಿಪಡಿಸಲಾದ ಮಾನದಂಡವು ಉನ್ನತ ಮಾನದಂಡವಾಗಿರುತ್ತದೆ. ಜೈಲಿನಲ್ಲಿ ಅಪರಾಧಿಯ ನಡುವಳಿಕೆಯನ್ನು ನಿರ್ಲಕ್ಷಿಸಲಾಗುವುದಿಲ್ಲ. ಖೈದಿಯು ಜೈಲಿನಲ್ಲಿ ಉತ್ತಮ ನಡವಳಿಕೆಯನ್ನು ಪ್ರದರ್ಶಿಸಿದ್ದಾನೆ ಎಂಬ ಅಂಶವು ಖಂಡಿತವಾಗಿಯೂ ಅವನು ಸುಧಾರಣೆಗೆ ಮೀರಿದವನಲ್ಲ ಎಂಬುದನ್ನು ತೋರಿಸುತ್ತದೆ.

16. ಅಪರಾಧಿಯ ಸುಧಾರಣೆಯ ಸಂಭವನೀಯತೆ ಮತ್ತು ಸಾಧ್ಯತೆಯ ವಿಷಯದಲ್ಲಿ, ಸೂಕ್ತವಾದ ಮಾನಸಿಕ/ಮನೋವೈದ್ಯಕೀಯ ಮೌಲ್ಯಮಾಪನವನ್ನು ಮಾಡಲಾಗಿದೆ ಎಂಬುದನ್ನು ನಾವು ಕಂಡಿರುವುದಿಲ್ಲ. ಅಂತಹ ಮಾನಸಿಕ/ಮನೋವೈದ್ಯಕೀಯ ಮೌಲ್ಯಮಾಪನದ ಸಹಾಯವಿಲ್ಲದೆ ಯಾವುದೇ ಸುಧಾರಣೆಯ ಸಾಧ್ಯತೆ ಅಥವಾ ಸಂಭವನೀಯತೆ ಇರುವುದಿಲ್ಲ ಎಂದು ಅಭಿಪ್ರಾಯಪಡುವುದು ಸೂಕ್ತವಲ್ಲ. ಅಪರಾಧಿಯನ್ನು ಸುಧಾರಿಸಲು ಅಥವಾ ಪುನರ್ವಸತಿ ಮಾಡಲು ಸಾಧ್ಯವಿಲ್ಲ ಎಂದು ಸಾಕ್ಷ್ಯದ ಮೂಲಕ ಸಾಬೀತುಪಡಿಸುವಾಗ ರಾಜ್ಯವು ಈ ಪ್ರಮುಖ ಅಂಶವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

(ಒತ್ತು ನೀಡಲಾಗಿದೆ)

211. ಆದಾಗ್ಯೂ, ಇದು ತುಂಬಾ ಚಿಕ್ಕದಾದ ಮತ್ತು ತುಂಬಾ ತಡವಾದ ಅಂಶವಾಗಿದ್ದು, ಇದು ಅಪರಾಧಿಗೆ ಶಿಕ್ಷೆಯನ್ನು ವಿಧಿಸಿದ ನಂತರ ಆತನ ಪರಿಸ್ಥಿತಿಗಳ ಬಗ್ಗೆ ಒಂದು ಕಿರುನೋಟವನ್ನು ಮಾತ್ರ ನೀಡುತ್ತದೆ. ಅಧಿವಿಚಾರಣೆಯ ಹಂತದಲ್ಲಿ ಉತ್ತಮವಾಗಿ ದಾಖಲಿಸಲಾದ ಉಪಶಮನಗೊಳಿಸಲಾದ ಸನ್ನಿವೇಶಗಳ ಅನುಪಸ್ಥಿತಿಯಲ್ಲಿ, ಉಲ್ಬಣಗೊಳ್ಳುವ ಸನ್ನಿವೇಶಗಳು ಹೆಚ್ಚು ಆಕರ್ಷಕವಾಗಿ ಮತ್ತು ಅಗಾದವಾಗಿ ತೋರುತ್ತವೆ ಮತ್ತು ಇದು ಅಪೂರ್ಣವಾದ ಆಧಾರದ ಮೇಲೆ ನ್ಯಾಯಾಲಯಗಳು ಮರಣದಂಡನೆ ವಿಧಿಸುವ ಸಾಧ್ಯತೆಯನ್ನು ಉಂಟುಮಾಡುತ್ತದೆ ಮತ್ತು ಆದ್ದರಿಂದ *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಮಾಡಲಾದ ಪ್ರಯೋಗವು ತಪ್ಪಾಗಿ ಅನ್ವಯಿಸಿದಂತಾಗುತ್ತದೆ.

212. ಸುಧಾರಣೆಯ ಗುರಿಯು ಆದರ್ಶವಾಗಿದೆ ಮತ್ತು ಸಮಾಜವು ಯಾವುದರ ಕಡೆಗೆ ಶ್ರಮಿಸಬೇಕು ಎಂಬುದರ ಬಗ್ಗೆ ದಶಕಗಳಾದ್ಯಂತ ಈ ನ್ಯಾಯಾಲಯದ ನ್ಯಾಯಶಾಸ್ತ್ರದಲ್ಲಿ ಅನೇಕ ಉಲ್ಲೇಖಗಳಿವೆ; ಆದರೆ ಅದನ್ನು ಅಳೆಯುವ ಮತ್ತು ಮೌಲ್ಯಮಾಪನ ಮಾಡುವ ನಿರ್ದಿಷ್ಟ ಚೌಕಟ್ಟಿನ ಕೊರತೆಯಿದೆ. ದುರದೃಷ್ಟವಶಾತ್, ಇದು ಅರ್ಥಪೂರ್ಣ ರೀತಿಯ ಜೈಲು ಸುಧಾರಣೆಯನ್ನು ಕಾರ್ಯಗತಗೊಳಿಸುವಲ್ಲಿನ ವೈಫಲ್ಯದಿಂದ ಪ್ರತಿಬಿಂಬಿತವಾಗಿದ್ದು, ಇದು ಸಾಮಾನ್ಯವಾಗಿ ಸೆರೆವಾಸ ಮತ್ತು ಜೈಲುಗಳ ಪ್ರಕ್ರಿಯೆಯ ವ್ಯವಸ್ಥಿತ ಸುಧಾರಣೆಗೆ <u>ಸೀಮಿತ ಸಾಮರ್ಥ್ಯದ</u> ಅವಕಾಶ ನೀಡುತ್ತದೆ. ಸುಧಾರಣಾತ್ಮಕ ಶಿಕ್ಷೆಯ ಗುರಿಯು ಸೂಕ್ಷ್ಮವಾದ ನೀತಿ ರಚನೆಯ ಪರಿಣಾಮವಾಗಿ ಸುಧಾರಣೆ ಮತ್ತು ಪುನರ್ವಸತಿಯನ್ನು ಸಕ್ರಿಯವಾಗಿ ಅನುವು ಮಾಡಿಕೊಡುವ ವ್ಯವಸ್ಥೆಯ ಅಗತ್ಯವಿರುತ್ತದೆ. ಈ ಅಸಮ ಫಲಿತಾಂಶಗಳನ್ನು ಸರಿಪಡಿಸಲು ಮತ್ತು ಆರೋಪಿಯನ್ನು ಸುಧಾರಿಸುವ ಸಾಧ್ಯತೆಯಿದೆಯೇ ಎಂಬುದರ ಬಗ್ಗೆ ಉತ್ತಮ ಮೌಲ್ಯಮಾಪನಕ್ಕೆ ಅನುಕೂಲವಾಗುವಂತೆ ಒಂದು ಸಣ್ಣ ಹೆಜ್ಜೆಯಾಗಿ (ನಡತೆ, ಕುಟುಂಬದ ಹಿನ್ನಲೆ ಇತ್ಯಾದಿಗಳ ಅಸ್ಪಷ್ಟ ಉಲ್ಲೇಖಗಳನ್ನು ಮೀರಿ) ಶಾಸಕಾಂಗ ಮತ್ತು ಕಾರ್ಯಾಂಗವು ಶಾಸನದ ಮೂಲಕ ಸುಸಂಬದ್ಧ ಚೌಕಟ್ಟನ್ನು ರೂಪಿಸುವವರೆಗೆ, ನ್ಯಾಯಾಲಯಗಳು ಅಳವಡಿಸಿಕೊಳ್ಳಲು ಮತ್ತು ಕಾರ್ಯಗತಗೊಳಿಸಲು ಪ್ರಾಯೋಗಿಕ ಮಾರ್ಗಸೂಚಿಗಳನ್ನು

ರೂಪಿಸುವುದು ಅಗತ್ಯವೆಂದು ಈ ನ್ಯಾಯಾಲಯವು ಪರಿಗಣಿಸಿರುತ್ತದೆ. ಉಪಶಮನಗೊಳಿಸಲಾದ ಸನ್ನಿವೇಶಗಳ ಮಾಹಿತಿಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಲು ಮತ್ತು ಮೌಲ್ಯಮಾನ ಮಾಡಲು ಅಂತಹ ಶಾಸಕಾಂಗ ಚೌಕಟ್ಟಿನಿಂದ ಪ್ರಯೋಜನವನ್ನು ಪಡೆಯಬಹುದು ಎಂಬ ಮಾರ್ಗದರ್ಶನ ಅಥವಾ ಯೋಚನೆಯನ್ನು ಸಹ ಈ ಮಾರ್ಗಸೂಚಿಗಳಿಂದ ಪಡೆಯಬಹುದು.

ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಸಂಗ್ರಹಿಸಲು ಪ್ರಾಯೋಗಿಕ ಮಾರ್ಗಸೂಚಿಗಳು:

213. ಮೇಲ್ಮನವಿ ಹಂತವನ್ನು ತಲುಪುವ ಹೆಚ್ಚಿನ ಮೊಕ್ಕದಮೆಯಲ್ಲಿನ ಪರಿಸ್ಥಿತಿಯು ಗಮನಾರ್ಹವಾಗಿರುವುದರಿಂದ ಅಪರಾಧದ ಕ್ರೌರ್ಯಕ್ಕೆ ಪ್ರತೀಕಾರದ ಪ್ರತಿಕ್ರಿಯೆ ತೆಗೆದುಕೊಳ್ಳುವುದನ್ನು ತಪ್ಪಿಸಲು, ಅಧಿವಿಚಾರಣೆಯ ಹಂತದಲ್ಲಿಯೇ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ತುರ್ತು ಅಗತ್ಯವಿರುತ್ತದೆ.

214. ಇದನ್ನು ಮಾಡಲು, ಅಧಿವಿಚಾರಣಾ ನ್ಯಾಯಾಲಯವು ಆರೋಪಿ ಮತ್ತು ರಾಜ್ಯದಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕು. ಮರಣದಂಡನೆಯನ್ನು ಹೊಂದಿರುವ ಅಪರಾಧಕ್ಕಾಗಿ, ಆರೋಪಿಯ ಮನೋವೈದ್ಯಕೀಯ ಮತ್ತು ಮಾನಸಿಕ ಮೌಲ್ಯಮಾಪನವನ್ನು ಸೆಷನ್ಸ್ ನ್ಯಾಯಾಲಯವು ಬಹಿರಂಗಪಡಿಸುವ ಮೊದಲು, ರಾಜ್ಯವು ಮುಂಚಿತವಾಗಿ ಸಂಗ್ರಹಿಸಿದ ಸಾಕ್ಷ್ಯವನ್ನು ಸೂಕ್ತ ಹಂತದಲ್ಲಿ ಸಲ್ಲಿಸಬೇಕು. ಇದು ಅಪರಾಧವನ್ನು ಮಾಡುವ ಸಮಯದಲ್ಲಿ ಆಪಾದಿತ ವ್ಯಕ್ತಿಯ ಮನಸ್ಸಿನ ಚೌಕಟ್ಟಿಗೆ (ಅಥವಾ ಮಾನಸಿಕ ಅಸ್ವಸ್ಥತೆ, ಯಾವುದಾದರೂ ಇದ್ದರೆ) ಸಾಮಿಪ್ಯವನ್ನು (ಸಮಯದ ದೃಷ್ಟಿಯಿಂದ) ಸಾಧಿಸಲು ಸಹಾಯ ಮಾಡುತ್ತದೆ ಮತ್ತು *ಬಚನ್ ಸಿಂಗ್* ಮೊಕದ್ದಮೆಯಲ್ಲಿ ಹೇಳಲಾದ (1), (5), (6) ಮತ್ತು (7) ರಲ್ಲಿನ ಉಪಶಮನಗೊಳಿಸಲಾದ ಅಂಶಗಳಿಗೆ ಮಾರ್ಗದರ್ಶನ ನೀಡಿತ್ತದೆ. ಇತರ ಅಂಶಗಳಾದ (3)

ಮತ್ತು (4) ಕ್ಕೂ ಸಹ, ಅಪರಾಧವನ್ನು ಮಾಡಿದ ನಂತರವೇ ಈ ರೀತಿಯ ಮನೋವೈದ್ಯಕೀಯ ಮತ್ತು ಮಾನಸಿಕ ಮೌಲ್ಯಮಾಪನವನ್ನು ನಿರ್ದಿಷ್ಟವಾಗಿ ನಡೆಸುವ ಜವಬ್ದಾರಿಯು ರಾಜ್ಯದ ಮೇಲೆ ಇರುತ್ತದೆ ಮತ್ತು ಇದು ಸೆರೆವಾಸದ ಅವಧಿಯಲ್ಲಿ ಆರೋಪಿಯು ಸಾಧಿಸಿದ ಸುಧಾರಣೆಯ ಪ್ರಗತಿಯ ಮೌಲ್ಯಮಾಪನ ಮಾಡಲು ಅಂದರೆ ಹೋಲಿಕೆ ಮಾಡಲು ಬಳಸಲು ಒಂದು ಆರಂಭಿಕ ಹಂತವನ್ನು ಮೇಲ್ಮನವಿ ನ್ಯಾಯಾಲಯಗಳಿಗೆ ಒದಗಿಸುತ್ತದೆ.

215. ಮುಂದುವರಿದು, ಆರೋಪಿಗೆ ಸಂಬಂಧಿಸಿದ <u>ಹೆಚ್ಚುವರಿ</u> ಮಾಹಿತಿಯನ್ನು <u>ಒಂದು ಕಾಲಮಿತಿಯಲ್ಲಿ</u> ರಾಜ್ಯವು ಸಂಗ್ರಹಿಸಬೇಕು. ವಿವರಣಾತ್ಮಕ, ಆದರೆ ಸಮಗ್ರವಲ್ಲದ ಪಟ್ಟಿಯು ಈ ಕೆಳಗಿನಂತಿದೆ:

ಎ) ವಯಸ್ಸು

ಬಿ) ಆರಂಭಿಕ ಕುಟುಂಬ ಹಿನ್ನೆಲೆ (ಒಡಹುಟ್ಟಿದವರು, ಪೋಷಕರ ರಕ್ಷಣೆ, ಯಾವುದೇ ಹಿಂಸೆ ಅಥವಾ ನಿರ್ಲಕ್ಷ್ಯದ ಇತಿಹಾಸ)

ಸಿ) ಪ್ರಸ್ತುತ ಕುಟುಂಬದ ಹಿನ್ನೆಲೆ (ಬದುಕಿರುವ ಕುಟುಂಬ ಸದಸ್ಯರು, ವಿವಾಹಿತರೇ, ಮಕ್ಕಳಿರುವರೇ ಇತ್ಯಾದಿ)

ಡಿ) ಶಿಕ್ಷಣದ ಮಾದರಿ ಮತ್ತು ಮಟ್ಟ

ಇ) ಸಾಮಾಜಿಕ–ಆರ್ಥಿಕ ಹಿನ್ನಲೆ (ಯಾವುದಾದರೂ ಬಡತನ ಅಥವಾ ಅಭಾವದ ಪರಿಸ್ಥಿತಿಗಳು)

ಎಫ್) ಕ್ರಿಮಿನಲ್ ಪೂರ್ವನಿದರ್ಶನಗಳು (ಅಪರಾಧದ ವಿವರಗಳು ಮತ್ತು ಅಪರಾಧಿಯಾಗಿದ್ದರೆ, ಶಿಕ್ಷೆ ವಿಧಿಸಲಾಗಿದೆಯೇ)

ಜಿ) ಆದಾಯ ಮತ್ತು ಉದ್ಯೋಗದ ಪ್ರಕಾರ (ಯಾವುದೂ ಇಲ್ಲವೇ ಅಥವಾ ತಾತ್ಕಾಲಿಕಾ ಅಥವಾ ಶಾಶ್ವತ ಇತ್ಯಾದಿ)

ಹೆಚ್) ಅಸ್ಥಿರ ಸಾಮಾಜಿಕ ನಡವಳಿಕೆಯ ಇತಿಹಾಸ, ಅಥವಾ ಮಾನಸಿಕ ಅಥವಾ ಮನೋವೈಜ್ಞಾನಿಕ ಅಸ್ಪಷ್ಟತೆ (ಗಳು), ವ್ಯಕ್ತಿಯ ಪರಕೀಯತೆ (ಕಾರಣಗಳು, ಯಾವುದಾದರು ಇದ್ದಲ್ಲಿ), ಇತ್ಯಾದಿ.

ಈ ಮಾಹಿತಿಯು ಶಿಕ್ಷೆಯನ್ನು ವಿಧಿಸುವ ಹಂತದಲ್ಲಿ ಅಧಿವಿಚಾರಣಾ ನ್ಯಾಯಾಲಯಕ್ಕೆ ಕಡ್ಡಾಯವಾಗಿ ಲಭ್ಯವಿರಬೇಕು. ಎಲ್ಲಾ ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಮರುಕಳಿಸುವಲ್ಲಿನ ಸಾಕ್ಷ್ಯವನ್ನು ಹಾಜರುಪಡಿಸಲು ಸಹ ಆರೋಪಿಗೆ ಅದೇ ಅವಕಾಶವನ್ನು ನೀಡಬೇಕು.

216. ಕೊನೆಯದಾಗಿ, ಆರೋಪಿಯ ಜೈಲಿನ ವರ್ತನೆ ಮತ್ತು ನಡವಳಿಕೆ, ಮಾಡಿದ ಕೆಲಸ (ಯಾವುದಾದರು ಇದ್ದರೆ), ಆರೋಪಿಯು ತಮ್ಮನ್ನು ತಾವು ತೊಡಗಿಸಿಕೊಂಡಿರುವ ಚಟುವಟಿಕೆಗಳು ಮತ್ತು ಇತರ ಸಂಬಂಧಿತ ವಿವರಗಳ ಬಗ್ಗೆ ಮಾಹಿತಿಯನ್ನು ವರದಿಯ ರೂಪದಲ್ಲಿ ಸಂಬಂಧಿತ ಜೈಲು ಅಧಿಕಾರಿಗಳಿಂದ (ಅಂದರೆ ಪರಿವೀಕ್ಷಣಾ ಮತ್ತು ಕಲ್ಯಾಣ ಅಧಿಕಾರಿ, ಜೈಲು ಅಧೀಕ್ಷಕರು, ಇತ್ಯಾದಿ) ತರಿಸಿಕೊಳ್ಳತಕ್ಕದ್ದು. ಅಧಿವಿಚಾರಣಾ ನ್ಯಾಯಾಲಯವು ಶಿಕ್ಷೆ ವಿಧಿಸಿದ ಬಹಳ ಸಮಯದ ನಂತರ ಅಥವಾ ಉಚ್ಚ ನ್ಯಾಯಾಲಯವು ಅದನ್ನು ಸ್ಥಿರೀಕರಿಸಿದ ನಂತರ ಮೇಲ್ಮನವಿಯನ್ನು ಸುನಾವಣೆ ಮಾಡಿದರೆ, ಹಿಂದಿನ ಸಮಯದಲ್ಲಿ ಆರೋಪಿಯಿಂದ ಆದ ಸಮಕಾಲೀನ ಪ್ರಗತಿಯ ಬಗ್ಗೆ ಹೆಚ್ಚು ನಿಖರವಾದ ಮತ್ತು ಸಂಪೂರ್ಣ ತಿಳುವಳಿಕೆಗಾಗಿ ಜೈಲು ಅಧಿಕಾರಿಗಳಿಂದ <u>ಹೊಸ ವರದಿಯನ್ನು</u> (ಹಿಂದಿನ ನ್ಯಾಯಾಲಯವು ಉಪಯೋಗಿಸಿದ ವರದಿಯ ಬದಲು) ತರಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿರುತ್ತದೆ. ಜೈಲು ಅಧಿಕಾರಿಗಳು ಹೊಸ ಮನೋವೈದ್ಯಕೀಯ ಮತ್ತು ಮಾನಸಿಕ ವರದಿಯನ್ನು ಸೇರಿಸಬೇಕು ಮತ್ತು ಇದು ಸುಧಾರಣೆಯ ಪ್ರಗತಿಗೆ <u>ಮತ್ತಷ್ಟು</u> ಪುರಾವೆಯನ್ನು ಒದಗಿಸುತ್ತದೆ ಮತ್ತು ಅಪರಾಧದ ನಂತರದಲ್ಲಿ ಯಾವುದಾದರೂ ಮಾನಸಿಕ ಅಸ್ವಸ್ಥತೆಯಿದ್ದಲ್ಲಿ ಅದನ್ನು ಬಹಿರಂಗಪಡಿಸುತ್ತದೆ.

217. *ಅನಿಲ್ ವಿರುದ್ಧ ಮಹಾರಾಷ್ಟ್ರ ರಾಜ್ಯ*[118] ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ವಾಸ್ತವವಾಗಿ ಕ್ರಿಮಿನಲ್ ನ್ಯಾಯಾಲಯಗಳಿಗೆ ಹೆಚ್ಚುವರಿ ಸಾಕ್ಷ್ಯಗಳನ್ನು ತರಿಸಿಕೊಳ್ಳಲು ನಿರ್ದೇಶಿಸಿರುವುದನ್ನು ಗಮನಿಸುವುದು ಸೂಕ್ತವಾಗಿರುತ್ತದೆ:

> "ಅನೇಕ ಬಾರಿ, ನಿರ್ದಿಷ್ಟ ಮೊಕದ್ದಮೆಯ ವಾಸ್ತವಾಂಶಗಳನ್ನು ಗಮನಿಸಿ ಶಿಕ್ಷೆಯನ್ನು ನಿರ್ಧರಿಸುವಾಗ, ಆರೋಪಿಯು ಸಮಾಜಕ್ಕೆ ಅಪಾಯವನ್ನುಂಟುಮಾಡುತ್ತಾರೆ ಮತ್ತು ಸುಧಾರಣೆ ಹಾಗೂ ಪುನರ್ವಸತಿಗೆ ಯಾವುದೇ ಸಾಧ್ಯತೆಗಳಿರುವುದಿಲ್ಲ ಎಂಬ ಅಂಶಗಳನ್ನು ತೀರ ಲಘುವಾಗಿ ಪರಿಗಣಿಸಿರುತ್ತದೆ ಆದರೆ ಆ ಅಂಶಗಳನ್ನು ಖಚಿತಪಡಿಸಿಕೊಳ್ಳುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ ಮತ್ತು ಆರೋಪಿಯ ಸುಧಾರಣೆ ಮತ್ತು ಪುನರ್ವಸತಿ ಸಾಧ್ಯತೆಗಾಗಿ ಮತ್ತು ವಿರುದ್ಧವಾಗಿ ಸಾಕ್ಷ್ಯವನ್ನು ಒದಗಿಸುವುದು ರಾಜ್ಯಕ್ಕೆ ಅನಿವಾರ್ಯವಾಗಿರುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ ನ್ಯಾಯಾಲಯಗಳು ಚರ್ಚಿಸುವ ವಾಸ್ತವಾಂಶಗಳು ಅಂತಹ ತೀರ್ಮಾನವನ್ನು ತೆಗೆದುಕೊಳ್ಳಲು ಅಡಿಪಾಯವಾಗುವುದಿಲ್ಲ ಮತ್ತು ಇದು, ಈಗಾಗಲೇ ಹೇಳಿದಂತೆ, ಹೆಚ್ಚುವರಿ ಸಾಕ್ಷ್ಯಗಳನ್ನು ಹಾಜರುಪಡಿಸಲು ಕರೆ ನೀಡುತ್ತದೆ. ಆದ್ದರಿಂದ, ಕ್ರಿಮಿನಲ್ ನ್ಯಾಯಾಲಯಗಳು ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಅಡಿಯಲ್ಲಿ ಎಸಗಲಾದ ಅಪರಾಧಗಳ ಬಗ್ಗೆ ವ್ಯವಹರಿಸುವಾಗ, ಶಿಕ್ಷೆಯನ್ನು ವಿಧಿಸಿದ ನಂತರ, ಸೂಕ್ತವಾದ ಮೊಕದ್ದಮೆಗಳಲ್ಲಿ, ಆರೋಪಿಯನ್ನು ಸುಧಾರಣೆ ಅಥವಾ ಪುನರ್ವಸತಿ ಮಾಡಬಹುದೇ ಎಂಬುದನ್ನು ನಿರ್ಧರಿಸಲು ವರದಿಯನ್ನು ತರಿಸಿಕೊಳ್ಳಬೇಕು ಎಂದು ನಾವು ನಿರ್ದೇಶನ ನೀಡಿರುತ್ತೇವೆ, ಇದು ಪ್ರತೀ ಮೊಕದ್ದಮೆಯ ವಾಸ್ತವಾಂಶ ಮತ್ತು ಸನ್ನಿವೇಶದ ಮೇಲೆ ಅವಲಂಬಿತವಾಗಿರುತ್ತದೆ.

> (ಒತ್ತು ನೀಡಲಾಗಿದೆ)

ಮೇಲೆ ಮತ್ತಷ್ಟು ವಿವರಿಸಿದಂತೆ, ಮರಣದಂಡನೆಯ ಸಾಧ್ಯತೆಯನ್ನು ಹೊಂದಿರುವ ಅಪರಾಧಗಳ ನಿರ್ಣಯಕ್ಕಾಗಿ, ಇದನ್ನು ಏಕರೂಪವಾಗಿ ಜಾರಿಗೆ ತರತಕ್ಕದ್ದು ಎಂದು ನಾವು ಈ ಮೂಲಕ ಸಂಪೂರ್ಣವಾಗಿ ಅನುಮೋದಿಸುತ್ತೇವೆ ಮತ್ತು ನಿರ್ದೇಶಿಸಿರುತ್ತೇವೆ.

118. (2014) 4 ಎಸ್‌ಸಿಸಿ 69

ಪ್ರಸ್ತುತ ಆರೋಪಿಗೆ ಶಿಕ್ಷೆ ವಿಧಿಸುವುದು:

218. ಮೂವರು ಆರೋಪಿಗಳು ಎಸಗಿರುವ ಅಪರಾಧವು ಕ್ರೂರ ಮತ್ತು ಅಸ್ವಾಭಾವಿಕವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಮೂವರು ರಕ್ಷಣೆಯಿಲ್ಲದ ನೊಂದ ವ್ಯಕ್ತಿಗಳು ವಿವಿಧ ವಯೋಮಾನದ ಮಹಿಳೆಯರಾಗಿದ್ದು (22, 46, 76 ವರ್ಷಗಳು) ಆ ಮಹಿಳೆಯರು ಯಾವುದೇ ರೀತಿಯ ತೊಂದರೆಗೆ ಸಿದ್ದವಾಗಿಲ್ಲದಾಗ ಅವರನ್ನು ಹಿಡಿದು, ತೀವ್ರವಾಗಿ ದೈಹಿಕವಾಗಿ ಹಲ್ಲೆ ಮಾಡಲಾಗಿದ್ದು, ಪರಿಣಾಮವಾಗಿ ಇದು ಅವರ ಸ್ವಂತ ಮನೆಯ ಸುರಕ್ಷತೆ ಮತ್ತು ಸೌಕರ್ಯದಲ್ಲೇ ಅವರ ಸಾವಿಗೆ ಕಾರಣವಾಗಿರುತ್ತದೆ. ಪ್ರಾ.ಸಾ.1 ರ ಕುಟುಂಬದ ಮೂರು ತಲೆಮಾರುಗಳ ಮಹಿಳೆಯನ್ನು ಕೊಂದಿರುವುದು ನಿಸ್ಸಂದೇಹವಾಗಿ ಅಸ್ವಾಭಾವಿಕವಾಗಿರುತ್ತದೆ. ಅಪರಾಧದ ವಿಧಾನವೂ ಸಹ ಕ್ರೂರ ಮತ್ತು ಕರುಣೆರಹಿತವಾಗಿರುತ್ತದೆ– ಆಶ್ಲೇಷಾ ಮತ್ತು ರೋಹಿಣಿಯವರನ್ನು ಪದೇ ಪದೇ ಇರಿದು ಸಾಯಿಸಲಾಗಿದ್ದು, ಮೇಘಾ ಅವರ ಮುಖದ ಮೇಲೆ ಗುಂಡಿಕ್ಕಿ ಕೊಲ್ಲಲಾಗಿರುತ್ತದೆ. ಮರಣೋತ್ತರ ಪರೀಕ್ಷೆಯು (ನಿ.ಪಿ.44) ಇರಿತದ ಗಾಯಗಳು ನೊಂದವರ ದೇಹದಾದ್ಯಂತ ವ್ಯಾಪಕವಾಗಿದ್ದವು ಎಂದು ಪ್ರತಿಬಿಂಬಿಸುತ್ತದೆ. ಅಪರಾಧದ ಸ್ಥಳದಲ್ಲಿದ್ದ ವ್ಯಾಪಕ ರಕ್ತಸ್ರಾವವು ಮೂವರು ಮಹಿಳೆಯರ ವಿರುದ್ಧದ ಕ್ರೂರ ಮತ್ತು ಅಮಾನವೀಯ ದಾಳಿಯನ್ನು ಪ್ರತಿಬಿಂಬಿಸುತ್ತದೆ. *ಮಚ್ಚಿ ಸಿಂಗ್* ಮೊಕದ್ದಮೆಯಲ್ಲಿ ವಿವರಿಸಿದಂತೆ ಅಪರಾಧವನ್ನು ಸ್ವತಃ ನಿಸ್ಸಂದೇಹವಾಗಿ "ಅತ್ಯಂತ ಕ್ರೂರ, ಅಸ್ವಾಭಾವಿಕ, ಪೈಶಾಚಿಕ, ಭಯಾನಕ ಅಥವಾ ದುಷ್ಟ ವಿಧಾನವಾಗಿದ್ದು, ಸಮುದಾಯದ ತೀವ್ರ ಮತ್ತು ಅತೀವ ಆಕ್ರೋಶವನ್ನು ಹುಟ್ಟುಹಾಕುವ ರೀತಿಯಲ್ಲಿದೆ[119]" ಎಂದು ನಿರೂಪಿಸಲಾಗಿರುತ್ತದೆ. ಇವುಗಳು ಉಲ್ಬಣಗೊಳ್ಳುವ ಸನ್ನಿವೇಶಗಳಾಗಿರುತ್ತವೆ.

119. ಮಚ್ಚಿ ಸಿಂಗ್ (ಖಂಡಿಕೆ 32)

219. ಆದಾಗ್ಯೂ, *ಬಚನ್ ಸಿಂಗ್* ಮೊಕದ್ದಮೆಯಲ್ಲಿನ ಪ್ರಯೋಗದ ಅನ್ವಯದ ಮೇಲೆ (ಮೇಲೆ ವಿವರಿಸಲಾದ ಹಲವಾರು ನಿರ್ಧಾರಗಳಲ್ಲಿ ಸ್ಪಷ್ಟಪಡಿಸಿದಂತೆ ಮತ್ತು ವಿವರಿಸಿದಂತೆ), ಉಪಶಮನಗೊಳಿಸಲಾದ ಸನ್ನಿವೇಶಗಳನ್ನು ಪರಿಗಣಿಸಬೇಕು (ಅದುವೇ ಧಾರಾಳವಾಗಿ ಮತ್ತು ವಿಸ್ತಾರವಾಗಿ). ಈ ನ್ಯಾಯಾಲಯದ ಮುಂದೆ ಶಿಕ್ಷೆಯ ಮೇಲಿನ ಸುನಾವಣೆಗೂ ಮೊದಲು, ಪ್ರತೀ ಆರೋಪಿಯ–ಒಂದು ಮಾನಸಿಕ ಮೌಲ್ಯಮಾಪನ ವರದಿ, ಪರಿವೀಕ್ಷಣಾ ಅಧಿಕಾರಿಯ ವರದಿ ಮತ್ತು ಆರೋಪಿಯ ನಡತೆ ಮತ್ತು ಅತನು ಮಾಡಿದ ಕೆಲಸಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ಒಳಗೊಂಡಂತ ಜೈಲು ವರದಿಯನ್ನು ಸಲ್ಲಿಸಲು ರಾಜ್ಯಕ್ಕೆ ನಿರ್ದೇಶನವನ್ನು ನೀಡಲಾಗಿರುತ್ತದೆ (ವೈಯಕ್ತಿಕ ಸಂದರ್ಶನಗಳು ಮತ್ತು ಜೈಲು ದಾಖಲೆಗಳ ಆಧಾರದ ಮೇಲೆ). ಮುಂದುವರಿದು, ಅಪರಾಧಿಯ ಸನ್ನಿವೇಶಗಳನ್ನು ತೋರಿಸಲು ಪ್ರತಿಯೊಬ್ಬ ಆರೋಪಿಯು ನ್ಯಾಯಾಲಯದ ಮುಂದೆ ಸಾಕ್ಷ್ಯಗಳನ್ನು ದಾಖಲೆಯಲ್ಲಿ ಹಾಜರುಪಡಿಸಿರುತ್ತಾರೆ. ಈ ಮೊಕದ್ದಮೆಯಲ್ಲಿ ಮೂವರು ಆರೋಪಿಗಳಿದ್ದು, ಈ ನ್ಯಾಯಾಲಯವು ಅವರ ಸಂದರ್ಭಗಳನ್ನು ಒಟ್ಟಾರೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಮತ್ತು ಬದಲಿಗೆ ವೈಯಕ್ತಿಕ ದೃಷ್ಟಿಕೋನದ ಅಗತ್ಯವಿರುವುದನ್ನು ಕಂಡುಕೊಳ್ಳುತ್ತದೆ.

(i) ಮನೋಜ್

220. ಹಿಂದಿನ ಸೆರೆವಾಸದ ಅವಧಿಯಲ್ಲಿನ ಒಂದು ದೈಹಿಕ ವ್ಯಾಜ್ಯವನ್ನು ಹೊರತುಪಡಿಸಿ, ಮನೋಜ್ ಅವರ ನಡವಳಿಕೆಯು ಶಿಸ್ತುಬದ್ದವಾಗಿದ್ದು, ಸುಧಾರಣೆಗೊಳ್ಳುವ ಸ್ವರೂಪದಾಗಿರುತ್ತದೆ ಮತ್ತು ಒಟ್ಟಾರೆಯಾಗಿ ಹೇಳುವುದಾದರೆ ತೃಪ್ತಿಕರವಾಗಿ ಕಾಣುತ್ತದೆ ಎಂದು ಸಾಕ್ಷ್ಯಗಳು ತಿಳಿಸುತ್ತವೆ. ಅವರಿಗೆ ಪತ್ನಿ ಮತ್ತು ಇಬ್ಬರು ಚಿಕ್ಕ ಮಕ್ಕಳಿದ್ದು, ಅವರೊಂದಿಗೆ ಇವರು ಸಂಬಂಧವನ್ನು ಸುಧಾರಿಸಿಕೊಂಡಿದ್ದಾರೆ ಮತ್ತು ನಿಯಮಿತವಾಗಿ ಸಂಪರ್ಕದಲ್ಲಿದ್ದಾರೆ. ಸಮರ್ಥವಾದ ಮುಂದುವರಿದ ಕುಟುಂಬ ಸಂಬಂಧಗಳನ್ನು ಪ್ರದರ್ಶಿಸುತ್ತಾ ತನ್ನ ಬೆಳೆಯುತ್ತಿರುವ ಮಕ್ಕಳ ಜೀವನದ ಭಾಗವಾಗಲು ವಿಶೇಷ ಪ್ರಯತ್ನವನ್ನು ಮಾಡಿರುತ್ತಾನೆ. ಕ್ರಿಕೆಟ್‌ನಲ್ಲಿನ ಆಸಕ್ತಿಯಿಂದಾಗಿ, ಅವರು ಜೈಲಿನಲ್ಲಿದ್ದಾಗ

ಜೈಲ್ ಬ್ಲಾಕ್ ತಂಡದ ನಾಯಕತ್ವದ ಜವಬ್ದಾರಿಯನ್ನು ಸಹ ವಹಿಸಿಕೊಂಡಿರುತ್ತಾರೆ. ಅವರು ಪಶ್ಚಾತ್ತಾಪ ಪಡುತ್ತಿರುವಂತೆ ತೋರುತ್ತಾರೆ ಮತ್ತು ಅವರ ಕುಟುಂಬದೊಂದಿಗೆ ಸಮಾಜದಲ್ಲಿ ಮರುಸೇರ್ಪಡೆಗೊಳ್ಳಲು ಉತ್ಸುಕರಾಗಿರುತ್ತಾರೆಂದು ಪರಿವೀಕ್ಷಣಾ ಅಧಿಕಾರಿಯು ನಿರ್ಣಯಕ್ಕೆ ಬಂದಿರುತ್ತಾರೆ.

(ii) ರಾಹುಲ್

221. ಜೈಲಿನ ಅಧೀಕ್ಷಕರಿಂದ ಸ್ವೀಕರಿಸಿದ ವರದಿಯು, ಅವರೂ ಸಹ ತಮ್ಮ ಹಿಂದಿನ ಸೆರೆವಾಸದ ಅವಧಿಯಲ್ಲಿ ಮತ್ತೊಬ್ಬ ಖೈದಿಯೊಂದಿಗೆ ವಾಗ್ವಾದದಲ್ಲಿ ಭಾಗಿಯಾಗಿದ್ದರೆಂದು ಸೂಚಿಸುತ್ತದೆ ಆದರೆ ಅವರ ಒಟ್ಟಾರೆ ನಡವಳಿಕೆಯು ಸಹಜವಾದ ಮತ್ತು ಸುಧಾರಣೆಯ ಸ್ವರೂಪದ ರೀತಿ ಕಂಡುಬಂದಿರುತ್ತದೆ. ಅವರು ದಿನಾಂಕ 05.01.2021 ರಿಂದ ಆರೋಗ್ಯ ಕಾರ್ಯಕರ್ತರಾಗಿ (ಆತನ ಕೋರಿಕೆಯ ಆಧಾರದ ಮೇಲೆ) ಸ್ವಯಂ ಪ್ರೇರಣೆಯಿಂದ ಕೆಲಸ ಮಾಡುತ್ತಿರುತ್ತಾರೆ ಮತ್ತು ಈ ಕೆಲಸದಲ್ಲಿ ಅವರು ಅನಾರೋಗ್ಯಕ್ಕೀಡಾದ ಖೈದಿಗಳನ್ನು ಜೈಲು ಆಸ್ಪತ್ರೆಗೆ ಸಾಗಿಸಲು ಸಹಾಯ ಮಾಡುತ್ತಾರೆ. ಜೈಲಿನಲ್ಲಿದ್ದಾಗ, ಅವರು 12 ನೇ ತರಗತಿ ಶಿಕ್ಷಣವನ್ನು ಪೂರ್ಣಗೊಳಿಸಿ, ನವದೆಹಲಿಯ ಐ.ಜಿ.ಎನ್.ಓ.ಯು ನಲ್ಲಿ ಬಿ.ಕಾಂ ಪದವಿಯನ್ನು ಮುಂದುವರಿಸಿರುತ್ತಾರೆ (ಅಂತಿಮ ವರ್ಷದಲ್ಲಿರುತ್ತಾರೆ). ಜೈಲಿನಲ್ಲಿ ನಡೆಸಲಾಗುವ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅವರ ಕುಟುಂಬವು ಅನಾರೋಗ್ಯದ ತಂದೆ, ತಾಯಿ ಮತ್ತು ಮೂವರು ವಿವಾಹಿತ ಸಹೋದರಿಯರನ್ನು ಒಳಗೊಂಡಿದೆ. ಅವರು ತಮ್ಮ ವೃದ್ಧ ತಂದೆ ತಾಯಿಯ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿ, ಸಮಾಜಕ್ಕೆ ಮರುಸೇರ್ಪಡೆಯ ಮೂಲಕ ಅವರಿಗೆ ಆರ್ಥಿಕ ಸಹಾಯ ನೀಡಲು ಬಯಸಿರುತ್ತಾರೆ.

(iii) ನೇಹಾ

222. ಆಕೆಯ ಸೆರೆಮನೆಯ ದಾಖಲೆಗಳು, ಆಕೆಯು ಕೆಲವು ಸಂದರ್ಭಗಳಲ್ಲಿ ಇತರ ಮಹಿಳಾ ಖೈದಿಗಳು ಮತ್ತು ಜೈಲಿನಲ್ಲಿರುವ ಮಹಿಳಾ ಸುರಕ್ಷತಾ ಅಧಿಕಾರಿಗಳೊಂದಿಗೆ ಜಗಳವಾಡಿದರು ಮತ್ತು ಒಬ್ಬರಿಗೊಬ್ಬರು ನಿಂದಿಸಿಕೊಂಡರು ಎಂಬುದನ್ನು ಪ್ರತಿಬಿಂಬಿಸುತ್ತದೆ. ಆದಾಗ್ಯೂ, ಸಮಾಲೋಚನೆಯ ನಂತರ ಆಕೆಯ ನಡವಳಿಕೆಯು ಸುಧಾರಿಸಿದೆ ಮತ್ತು ಆಕೆಯು ಶಿಸ್ತುಬದ್ಧ ಮತ್ತು ಸುಧಾರಣೆಯ ಸ್ವಭಾವವನ್ನು ಹೊಂದಿರುವುದು ಕಂಡುಬಂದಿರುತ್ತದೆ. ಜೈಲಿನಲ್ಲಿರುವಾಗ ಆಕೆಯು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ ಮತ್ತು ಕಸೂತಿ, ಹೆಣಿಗೆ ಮತ್ತು ಲ್ಯಾಮಿನೇಷನ್ ಮಾಡುವುದರಲ್ಲಿ ತರಬೇತಿಯನ್ನು ಪಡೆದಿರುತ್ತಾರೆ. 2017 ರಲ್ಲಿ, ಇಂದೋರ್ ಜಿಲ್ಲಾ ನ್ಯಾಯಾಲಯದಲ್ಲಿ ಆಕೆಯು ಜದ್ರೋಸಿ ಕೆಲಸಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುತ್ತಾರೆ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸಿದ್ದಕ್ಕಾಗಿ ಹಲವಾರು ಇತರ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ. ಜೈಲಿನಲ್ಲಿ ಆಕೆಯು ಇತರ ಮಹಿಳಾ ಖೈದಿಗಳ ಮಕ್ಕಳಿಗೆ ಪಾಠ ಹೇಳಿಕೊಡುತ್ತಾರೆ. ಬಂಧನಕ್ಕೂ ಮೊದಲು, ಆಕೆಯು ಬಿ.ಕಾಂ ಪದವಿಯನ್ನು ಓದುತ್ತಿದ್ದರು ಮತ್ತು ಅದನ್ನು ಆಕೆಯು ಜೈಲಿನಲ್ಲಿ ಪೂರ್ಣಗೊಳಿಸಿರುತ್ತಾರೆ. ಆಕೆಯ ಕುಟುಂಬವು ಆಕೆಯ ಪೋಷಕರು ಮತ್ತು ಇಬ್ಬರೂ ವಿವಾಹಿತ ಸಹೋದರರನ್ನು (ಅವರಲ್ಲಿ ಒಬ್ಬರು ಪಾರ್ಶ್ವವಾಯುವಿಗೆ ಒಳಗಾಗಿದ್ದಾರೆ) ಒಳಗೊಂಡಿದ್ದು, ಅವರೊಂದಿಗೆ ಆಕೆಯು ನಿಯಮಿತವಾಗಿ ಸಂಪರ್ಕದಲ್ಲಿದ್ದಾರೆ.

ಮೂವರು ಆರೋಪಿಗಳ ಶಿಕ್ಷೆಯ ಬಗ್ಗೆ ಅಂತಿಮ ನಿರ್ಣಯ:

223. ಅಧಿವಿಚಾರಣಾ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳೆರಡೂ, ಸೂಕ್ತ ಹಂತದಲ್ಲಿ ಆರೋಪಿಗೆ ಶಿಕ್ಷೆಯನ್ನು ವಿಧಿಸುವ ಮೊದಲು ಶಿಕ್ಷೆಯ ಬಗ್ಗೆ ಪರಿಣಾಮಕಾರಿಯಾದ ವಿಚಾರಣೆಯನ್ನು ಒದಗಿಸಲು ವಿಫಲವಾಗಿದೆ ಎಂಬುದನ್ನು ಗಮನಿಸುವುದು ದುರದೃಷ್ಟಕರವಾಗಿದ್ದು, ಇದು ದಂಡ ಪ್ರಕ್ರಿಯಾ ಸಂಹಿತೆಯ 235(2) ನೇ ಪ್ರಕರಣದ

ಅಡಿಯಲ್ಲಿ ಅವರ ಹಕ್ಕಾಗಿರುತ್ತದೆ ಮತ್ತು ಇದನ್ನು ಈ ನ್ಯಾಯಾಲಯವು ಹಲವಾರು ಮೊಕದ್ದಮೆಗಳಲ್ಲಿ ಪರಿಗಣಿಸಿರುತ್ತದೆ[120]. ವಾಸ್ತವವಾಗಿ ಈ ನ್ಯಾಯಾಲಯದ ತೀರ್ಪುಗಳಿಗೆ[121] ವಿರುದ್ಧವಾಗಿ ಅಧಿವಿಚಾರಣಾ ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಲು ಸುನಾವಣೆ ನಡೆಸಲು ತಕ್ಷಣವೇ ಮುಂದುವರಿದಿದ್ದು, ಕಡಿಮೆ ಶಿಕ್ಷೆಯನ್ನು ವಿಧಿಸಲು ತಮ್ಮ ಮೊಕದ್ದಮೆಯನ್ನು ಮಂಡಿಸುವ ಅವಕಾಶವನ್ನು ಆರೋಪಿಗಳಿಂದ ಕಸಿದುಕೊಳ್ಳಲಾಗಿದೆ ಎಂದು ಆರೋಪಿಗಳು ವಾದಿಸಿರುತ್ತಾರೆ. ಶಿಕ್ಷೆಯ ಕುರಿತು ಅಧಿವಿಚಾರಣಾ ನ್ಯಾಯಾಲಯದ ಆದೇಶವು, "ಚಿಕ್ಕ ವಯಸ್ಸು" ಮತ್ತು "ಸಾಮಾಜಿಕ ಆರ್ಥಿಕ ಅಂಶಗಳನ್ನು" ಉಪಶಮನಗೊಳಿಸಲಾದ ಸನ್ನಿವೇಶಗಳೆಂದು ಮಾಡಿದ ಮನವಿಯನ್ನು ದಾಖಲಿಸುತ್ತದೆ, ಆದರೆ ಅದು ಯಾಂತ್ರಿಕ ಪರಿಗಣನೆಯೆಂದು ಪ್ರತಿಬಿಂಬಿಸುತ್ತದೆ. ಅಪರಾಧದ ಕ್ರೂರತೆ ಮತ್ತು "ಸಾಮೂಹಿಕ ಮತ್ತು ನ್ಯಾಯಾಂಗ ಆತ್ಮಸಾಕ್ಷಿಯ ಆಘಾತ" ದ ಪ್ರಭಾವದಿಂದ, ಅಪರಾಧದ ಉಲ್ಬಣಗೊಳ್ಳುವ ಸನ್ನಿವೇಶಗಳ ಆಧಾರದ ಮೇಲೆ ಮತ್ತು ಅಪರಾಧಿಯ ಉಪಶಮನಗೊಳಿಸಲಾದ ಸನ್ನಿವೇಶಗಳ ಅಪ್ರಧಾನ ಪರಿಗಣನೆಯೊಂದಿಗೆ, ನ್ಯಾಯಾಲಯವು ಮರಣದಂಡನೆ ವಿಧಿಸಿರುವುದನ್ನು ದೃಢಪಡಿಸಿರುತ್ತದೆ. ಇದು *ಬಚನ್ ಸಿಂಗ್* ಮೊಕದ್ದಮೆಗೆ ನೇರವಾಗಿ ವಿರುದ್ಧವಾಗಿರುತ್ತದೆ.

224. ಅಪೀಲುದಾರರನ್ನು ತಪ್ಪಿತಸ್ಥರೆಂದು ಪರಿಗಣಿಸಲ್ಪಟ್ಟಿರುವ ಅಪರಾಧವು ಘೋರವಾಗಿದೆ ಮತ್ತು ಯಾವುದೇ ಕಲ್ಪನೆಯ ಮೂಲಕ ನೋಡಿದರೂ ಅದನ್ನು ಮಾಡಿರುವ ರೀತಿಯು

120. ಬಚನ್ ಸಿಂಗ್ (ಖಂಡಿಕೆ 152), ಮೊಹಮದ್ದ್ ಮನ್ನನ್ @ ಅಬ್ದುಲ್ ಮನ್ನಮ್ ವಿರುದ್ಧ ಬಿಹಾರ್ ರಾಜ್ಯ (2019) 16 ಎಸ್‌ಸಿಸಿ 584 (ಖಂಡಿಕೆ 39), ಅಲ್ಲಾವುದ್ದಿನ್ ಮಿಯಾನ್ ವಿರುದ್ಧ ಬಿಹಾರ್ ರಾಜ್ಯ (1989) 3 ಎಸ್‌ಸಿಸಿ 5 (ಖಂಡಿಕೆ 10), ರಮೇಶ್‌ಭಾಯ್ ಚಂದುಭಾಯ್ ರಾತೋಡ್ ವಿರುದ್ಧ ಗುಜರಾತ್ ರಾಜ್ಯ (2009) 5 ಎಸ್‌ಸಿಸಿ (ಖಂಡಿಕೆ 106), ರಾಜೇಶ ಕುಮಾರ್ ವಿರುದ್ಧ ರಾಜ್ಯ (ದೆಹಲಿಯ ಎನ್‌ಸಿಟಿ) (2011) 13 ಎಸ್‌ಸಿಸಿ 706 (ಖಂಡಿಕೆ 52), ಮುಖೇಶ್ ವಿರುದ್ಧ ರಾಜ್ಯ (ದೆಹಲಿಯ ಎನ್‌ಸಿಟಿ) (2017) 13 ಎಸ್‌ಸಿಸಿ 717 (ಖಂಡಿಕೆ 9), ಚನ್ನು ಲಾಲ್ ವರ್ಮ ವಿರುದ್ಧ ಛತ್ತೀಸ್‌ಗಢ್ ರಾಜ್ಯ (2019) 12 ಎಸ್‌ಸಿಸಿ 438 (ಖಂಡಿಕೆ 17).

121. ಸಂತಾ ಸಿಂಗ್ ವಿರುದ್ಧ ಪಂಜಾಬ್ ರಾಜ್ಯ (1967) 4 ಎಸ್‌ಸಿಸಿ 190 (ಖಂಡಿಕೆ 3, 4, 5, 7); ಅಲ್ಲವುದಿನ್ ಮಿಯಾನ್ ವಿರುದ್ಧ ಬಿಹಾರ್ ರಾಜ್ಯ (1989) 3 ಎಸ್‌ಸಿಸಿ 5 (ಖಂಡಿಕೆ 10); ರಾಜೇಶ ಕುಮಾರ್ ವಿರುದ್ಧ ರಾಜ್ಯ (2011) 13 ಎಸ್‌ಸಿಸಿ 706 (ಖಂಡಿಕೆ 52); ಅಜಯ್ ಪಂಡಿತ್ @ ಜಗದೀಶ್ ವಿರುದ್ಧ ಮಹಾರಾಷ್ಟ್ರ ರಾಜ್ಯ (2012) 8 ಎಸ್‌ಸಿಸಿ (ಖಂಡಿಕೆ 38, 47)

ಹಿಂಸಾತ್ಮಕ ಮತ್ತು ಕ್ರೂರವಾಗಿರುತ್ತದೆ. ಅಪೀಲುದಾರರು ಫ್ಲಾಟ್‌ಗೆ ಪ್ರವೇಶಿಸುವಾಗ ಮತ್ತು ಪ್ರತಿರೋಧವನ್ನು ಎದುರಿಸಿದಾಗ ಮತ್ತು ಮೂವರು ಮಹಿಳೆಯರ ಮೇಲೆ ದಾಳಿ ಮಾಡುವಾಗ ಉಪಯೋಗಿಸಿದ ತಂತ್ರವನ್ನು ಪರಿಗಣಿಸಲಾಗಿದ್ದು; ಅದು ನಿರ್ದಯವಾಗಿರುತ್ತದೆ. ಒಂದು ಕಡೆಯಲ್ಲಿ, ಸತ್ತವರಲ್ಲಿ ಇಬ್ಬರನ್ನು ಬಹುತೇಕ ಉನ್ಮಾದದ ಸ್ಥಿತಿಯಲ್ಲಿ ಪದೇ ಪದೇ ಇರಿದಿರುವುದು, ಮತ್ತೊಂದೆಡೆ ನೊಂದವರ ರಕ್ಷಣೆಯಿಲ್ಲದ ಪರಿಸ್ಥಿತಿಯು ಮೂರು ತಲೆಮಾರುಗಳ ಮಹಿಳೆಯರನ್ನು ಕೊಂದ ನಂತರ ಅವರ ಯೋಜನೆಯೊಂದಿಗೆ (ದರೋಡೆ ಮಾಡುವ) ಮುಂದುವರಿಯಲು ಆರೋಪಿಗಳು ಸಿದ್ಧರಿದ್ದರು ಎಂಬುದನ್ನು ಎತ್ತಿ ತೋರಿಸುತ್ತದೆ. ನಿಸ್ಸಂದೇಹವಾಗಿ, ಕೊಲೆಯಾದವರಲ್ಲಿ ಇಬ್ಬರು, ಅವರ ತೋಳು ಮತ್ತು ಮುಖಗಳು ಸೇರಿದಂತೆ ದೇಹದಾದ್ಯಂತ ಆದ ಇರಿತದ ಗಾಯಗಳನ್ನು ನೋಡಿದಾಗ, ಪ್ರತಿರೋಧವನ್ನು ತೋರಿರುತ್ತಾರೆ ಎಂದು ಕಂಡುಬರುತ್ತದೆ. ಆದರೂ ಸಹ ಅವರು ನಿರಾಯುಧರಾಗಿದ್ದರು ಮತ್ತು ದುರ್ಬಲರಾಗಿದ್ದರು.

225. ಅದೇ ಸಮಯದಲ್ಲಿ, ಘಟನೆಯ ಸಂದರ್ಭದಲ್ಲಿ ಆರೋಪಿಗಳ ಚಿಕ್ಕ ವಯಸ್ಸು (ಕ್ರಮವಾಗಿ 35, 20, 22) ಮತ್ತು ಅಪರಾಧದ ಪೂರ್ವಪರಗಳ ಕೊರತೆಯನ್ನು (ಸಣ್ಣ ಕಳ್ಳತನದ ಮೊಕದ್ದಮೆಯಲ್ಲಿ ಭಾಗಿಯಾಗಿರುವ ಮನೋಜ್ ಮೊಕದ್ದಮೆಯನ್ನು ಹೊರತುಪಡಿಸಿ) ಕಡೆಗಣಿಸುವಂತಿಲ್ಲ. ಮುಂದುವರಿದು, ದರೋಡೆಯನ್ನು ಹೊರತುಪಡಿಸಿ, ಕೊಲೆ ಮಾಡಲು ಮೂವರು ಆರೋಪಿಗಳು ಪೂರ್ವ ಯೋಜನೆಯನ್ನು ಮಾಡಿಕೊಳ್ಳಲು ಪ್ರಚೋದನೆ ನೀಡಿದ ಯಾವುದೇ ನೈಜ ಉದ್ದೇಶದ ಬಗ್ಗೆ ಅಭಿಯೋಜನೆಯ ವಾದವು ಮೌನವಾಗಿರುತ್ತದೆ. ಅಪರಾಧದ ಸಮಯದಲ್ಲಿ ರಾಹುಲ್‌ರವರ ಕಾಲಿಗೆ ಗುಂಡು ತಗುಲಿದ ಸಂಗತಿಯು ದರೋಡೆಯು ಅವರು ಅಂದುಕೊಂದಂತೆ ಆಗದ ಪರಿಸ್ಥಿತಿಯಲ್ಲಿ ಅವರುಗಳು ಅದನ್ನು ನಿಭಾಯಿಸಲು ಅಸಮರ್ಥರಾಗಿದ್ದರು ಮತ್ತು ಆ ಮೂವರು ಮಹಿಳೆಯರ ಜೀವಗಳನ್ನು ತೆಗೆಯುವ ಉದ್ದೇಶವನ್ನು ಹೊಂದಿರಲಿಲ್ಲ ಎಂದು ಭಾವಿಸುವುದು ಸಮಂಜಸವೆಂದು ಸೂಚಿಸುತ್ತದೆ. ಒಟ್ಟಾರೆಯಾಗಿ, ದರೋಡೆಯನ್ನು ಮಾಡಲು ಮುಂದಾದಾಗ,

ನೊಂದವರು ಒಡ್ಡಿದ ರೀತಿಯ ಪ್ರತಿರೋಧವನ್ನು ಅವರು ನಿರೀಕ್ಷಿಸಿರಲ್ಲಿಲ್ಲ ಮತ್ತು ಇದು ಅವರು ಮಾಡಿದ ರೀತಿಯಲ್ಲಿ ತಮ್ಮ ಕಾರ್ಯವನ್ನು ಮುಂದುವರಿಸಲು ಮತ್ತು ಬಲಿಯಾದವರು ಏನು ನಡೆಯಿತು ಎಂದು ಹೇಳಲು ಬದುಕುಳಿಯದಂತೆ ನೋಡಿಕೊಳ್ಳಲು ಕಾರಣವಾಯಿತು ಎಂದು ಊಹಿಸಬಹುದು.

226. ಜೈಲಿನ ಅಧೀಕ್ಷಕರಿಂದ ಸ್ವೀಕರಿಸಲಾದ ವರದಿಗಳು, ಪ್ರತಿಯೊಬ್ಬ ಅಪರಾಧಿಯು ಜೈಲಿನಲ್ಲಿ ಒಟ್ಟಾರೆಯಾಗಿ ಉತ್ತಮ ನಡವಳಿಕೆಯ ದಾಖಲೆಯನ್ನು ಹೊಂದಿದ್ದಾರೆ ಮತ್ತು ಸುಧಾರಣೆಗೆ ಒಲವನ್ನು ತೋರಿದ್ದಾರೆ ಎಂದು ಪ್ರತಿಬಿಂಬಿಸುತ್ತದೆ. ಜೈಲಿನಲ್ಲಿರುವಾಗಲೇ, ಅವರು ತಮ್ಮ ಹಾಗೂ ಸುತ್ತಮುತ್ತಲಿನವರ ಜೀವನವನ್ನು ಉತ್ತಮಗೊಳಿಸುವಲ್ಲೊಂದು ಹೆಜ್ಜೆಯನ್ನು ತೆಗೆದುಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿದೆ ಮತ್ತು ಇದು ಅವರ ಚಿಕ್ಕ ವಯಸ್ಸಿನ[122] ಅಂಶದೊಂದಿಗೆ ಸೇರಿಕೊಂಡಿದ್ದು, ವಾಸ್ತವವಾಗಿ ಸುಧಾರಣೆಯ *ಸಂಭವನೀಯತೆ* ಇದೆ ಎಂದು ನಿಸ್ಸಂದಿಗ್ಧವಾಗಿ ತೋರಿಸುತ್ತದೆ. ಒಟ್ಟಾರೆಯಾಗಿ ಎಲ್ಲಾ ಸಂದರ್ಭಗಳನ್ನು ಪರಿಗಣಿಸಿದಾಗ, ಜೀವಾವಧಿ ಶಿಕ್ಷೆಯ ಆಯ್ಕೆಯನ್ನು ಖಂಡಿತವಾಗಿ ಪ್ರತಿಬಂಧಿಸಿರುವುದಿಲ್ಲ ಎಂದು ನಾವು ಕಂಡುಕೊಳ್ಳುತ್ತೇವೆ.

227. ಸಮುದಾಯದೊಳಗೆ ಸುರಕ್ಷತೆಯ ಬಗ್ಗೆ ಎಚ್ಚರಿಕೆಯನ್ನು ಮೂಡಿಸಿದ ಕ್ರೂರ ಅಪರಾಧವಾಗಿ ಈ ಮೊಕದ್ದಮೆಯು, ಇಂದೋರ್ ಮತ್ತು ಪ್ರಾಯಶಃ ಮಧ್ಯಪ್ರದೇಶ ರಾಜ್ಯದಲ್ಲಿ, ಸಮಾಜದ ಗಮನ ಮತ್ತು ಆಕ್ರೋಶವನ್ನು ಸೆಳೆದಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಸಾರ್ವಜನಿಕ ಅಭಿಪ್ರಾಯವು ಅಪರಾಧ ಅಥವಾ ಅಪರಾಧಿಗೆ ಸಂಬಂಧಿಸಿದ

122. ಗುರ್ವೀಲ್ ಸಿಂಗ್ ಹಾಗು ಮತ್ತೊಬ್ಬರು ವಿರುದ್ಧ ಪಂಜಾಬ್ ರಾಜ್ಯ (2013) 2 ಎಸ್‌ಸಿಸಿ 713 (ಖಂಡಿಕೆ 13, 19); ಅಮಿತ್ ವಿರುದ್ಧ ಉತ್ತರ ಪ್ರದೇಶ ರಾಜ್ಯ (2012) 4 ಎಸ್‌ಸಿಸಿ 107 (ಖಂಡಿಕೆ 22); ಶ್ಯಾಮ್ ಸಿಂಗ್ @ ಭೀಮ ವಿರುದ್ಧ ಮಹಾರಾಷ್ಟ್ರ ರಾಜ್ಯ (2017) 11 ಎಸ್‌ಸಿಸಿ 265 (ಖಂಡಿಕೆ 8) ಮತ್ತು ರಾಮ್‌ನರೇಶ್ ಮತ್ತು ಇತರರು ವಿರುದ್ಧ ಛತ್ತೀಸ್‌ಗಢ್ ರಾಜ್ಯ (2012) 4 ಎಸ್‌ಸಿಸಿ 257 (ಖಂಡಿಕೆ 88).

ವಸ್ತುನಿಷ್ಠ ಸನ್ನಿವೇಶವಲ್ಲ ಎಂದು ವರ್ಗೀಕರಿಸಲಾಗಿದೆ ಎಂದು ನೆನಪಿನಲ್ಲಿಡಬೇಕು ಮತ್ತು ನ್ಯಾಯಾಲಯಗಳು ನ್ಯಾಯಾಂಗ ಸಂಯಮವನ್ನು ನಿರ್ವಹಿಸಬೇಕು ಮತ್ತು ಸಮತೋಲನದ ಪಾತ್ರವನ್ನು ವಹಿಸಬೇಕು[123].

228. ವಾಸ್ತವಾಂಶಗಳು ಮತ್ತು ಸನ್ನಿವೇಶಗಳ ಸಮಗ್ರತೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಮೇಲೆ ತಿಳಿಸಲಾದ ಕಾರಣಗಳಿಗಾಗಿ, ಪ್ರಸ್ತುತ ಮೊಕದ್ದಮೆಯಲ್ಲಿ ಮರಣದಂಡನೆಯನ್ನು ವಿಧಿಸಿರುವುದು ಅನಾವಶ್ಯಕ ಎಂದು ಈ ನ್ಯಾಯಾಲಯವು ಕಂಡುಕೊಳ್ಳುತ್ತದೆ. ಎಲ್ಲಾ ಮೂವರು ಆರೋಪಿಗಳ ಮರಣದಂಡನೆಯನ್ನು ಕನಿಷ್ಟ 25 ವರ್ಷಗಳವರೆಗೆ ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸುವುದು ಒಟ್ಟಾರೆ ನ್ಯಾಯದ ಹಿತಾಸಕ್ತಿಯಲ್ಲಿ ಸೂಕ್ತವಾಗಿರುತ್ತದೆ. ಮೇಲಿನ ಷರತ್ತುಗಳೊಂದಿಗೆ ಈ ಮೇಲ್ಮನವಿಯನ್ನು ಭಾಗಶಃ ಅನುಮತಿಸಲಾಗಿದೆ.

.....ನ್ಯಾ.
[ಉದಯ್ ಉಮೇಶ್ ಲಲಿತ್]

.....ನ್ಯಾ.
[ಎಸ್. ರವೀಂದ್ರ ಭಟ್]

.....ನ್ಯಾ.
[ಬೆಲಾ. ಎಂ. ತ್ರಿವೇದಿ]

ನವದೆಹಲಿ;
ಮೇ 20, 2022

123. ಚನ್ನು ಲಾಲ್ ವರ್ಮ (ಖಂಡಿಕೆ 25), ಸಂತೋಷ್ ಬಾರಿಯಾರ್ (ಖಂಡಿಕೆ 80–89), ಎಂ.ಎ.ಆಂಟೊನಿ @ ಅಂತಪ್ಪನ್ ವಿರುದ್ಧ ಕೇರಳ ರಾಜ್ಯ, (2020) 17 ಎಸ್‌ಸಿಸಿ 751, ಬಚನ್ ಸಿಂಗ್ (ಖಂಡಿಕೆ 126).

ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರು ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."